ವಿಶ್ವವಾಣಿ
ವಿಶ್ವಾಸವೇ ವಿಶ್ವ

ಶಿರಸಿ ಚೆಲುವೆ ವಿಶ್ವ ಸುಂದರಿ

ಡಾ.ಶ್ರುತಿ ಹೆಗಡೆಗೆ ವಿಶ್ವ ಸುಂದರಿ ಕಿರೀಟ ಶಿರಸಿ ಮುಂಡಿಗೇಸರದ ಮೂಲದ ವೈದ್ಯೆಗೆ ಒಲಿದ ಸೌಂದರ್ಯ ಪ್ರಶಸ್ತಿ

10 ವಿಕೆಟ್ ಕಬಳಿಸಿದ ಸ್ನೇಹಾ ರಾಣಾ

ಚೆನ್ನೈನಲ್ಲಿ ನಡೆದ ದಕ್ಷಿಣ ಭಾರತ-ಆಫ್ರಿಕಾ ಮಹಿಳಾ ಟೆಸ್ಟ್ ಕ್ರಿಕೆಟ್‌ನಲ್ಲಿ 3ನೇ ದಿನವೇ ಭಾರತ ವಿಜಯ ಸಾಧಿಸಿದ್ದು, ಸ್ನೇಹಾ ರಾಣಾ 10 ವಿಕೆಟ್ ಕಬಳಿಸಿ ದಾಖಲೆ ಬರೆದಿದ್ದಾರೆ.

ಮೊದಲ ಭಾಷಣದಲ್ಲೇ ಸರಕಾರವನ್ನು ಕೆಣಕಿದ ರಾಗಾ, ಲೋಕಸಭೆಯಲ್ಲಿ ಕೋಲಾಹಲ

ಹಿಂದೂ ಹಿಂಸಾಚಾರ ಹೇಳಿಕೆಗೆ ಮೋದಿ ಆಕ್ಷೇಪ, ವಾಕ್ಸಮರದ ನಡುವೆ ಸದನ ಮುಂದಕ್ಕೆ

ರಾಹುಲ್ ವಾಗ್ದಾಳಿ: ಬಿಜೆಪಿ ತಬ್ಬಿಬ್ಬು

ದೆಹಲಿ: 18ನೇ ಲೋಕಸಭೆಯ ಪ್ರತಿಪಕ್ಷ ನಾಯಕನಾಗಿ ಆಯ್ಕೆಯಾದ ಬಳಿಕ ಸೋಮವಾರ ಸದನದಲ್ಲಿ ಸುದೀರ್ಘವಾಗಿ ಮಾತನಾಡಿದ ರಾಹುಲ್ ಗಾಂಧಿ, ಸರಕಾರ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು. ರಾಹುಲ್ ಅವರ ಹಿಂದೂ ಹಿಂಸಾಚಾರ ಹೇಳಿಕೆ, ಈಶ್ವರನ ಫೋಟೋ ಪ್ರದರ್ಶನ, ನೀಟ್ ಚರ್ಚೆ ಇವೆಲ್ಲವೂ ಭಾರೀ ಗದ್ದಲವನ್ನೇ ಸೃಷ್ಟಿಸಿತ್ತು. ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ವಿರುದ್ಧ ವಾಕ್ಸಮರಕ್ಕೆ ಸಜ್ಜಾಗಿಯೇ ಬಂದಿದ್ದ ರಾಹುಲ್ ಗಾಂಧಿ, ಹಲವು ವಿಚಾರಗಳನ್ನು ಪ್ರಸ್ತಾಪಿಸಿ ಆಡಳಿತ ಪಕ್ಷವನ್ನು ತಬ್ಬಿಬ್ಬುಗೊಳಿಸಿದರು. ನೀಟ್ ಕುರಿತ ಪ್ರಸ್ತಾಪ ಕೋಲಾಹಲಕ್ಕೆ ಕಾರಣವಾಗಿ ದಿನದ ಮಟ್ಟಿಗೆ ಸದನವನ್ನು ಮುಂದೂಡಲಾಯಿತು.

ಹಿಂದೆ ಚುನಾವಣೆ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾಧ್ಯಮ ಸಂದರ್ಶನದಲ್ಲಿ ಮಾತನಾಡುತ್ತಾ ತಾವು ದೇವರ ಇಚ್ಛೆಯ ಮೇರೆಗೆ ಭೂಮಿಗೆ ಬಂದಿರುವುದಾಗಿ ಹೇಳಿ ಸುದ್ದಿಯಾಗಿದ್ದರು. ಇದೇ ವಿಚಾರವನ್ನು ಪ್ರಸ್ತಾಪಿಸಿದ ರಾಹುಲ್, ''ಮೋದಿ ಸಾಮಾನ್ಯ ವ್ಯಕ್ತಿಯಲ್ಲ. ದೇವರ ಆದೇಶದ ಮೇರೆಗೆ ಕೆಲಸ ಮಾಡುವವರು. ಅವರ ಆತ್ಮದ ಜತೆ ಪರಮಾತ್ಮ ಸಂವಹನ ನಡೆಸುತ್ತಾನೆ. ಪರಮಾತ್ಮನ ಸೂಚನೆಯ ಮೇರೆಗೆ ಅವರು ನೋಟು ಅಮಾನ್ಯೀಕರಣದಂತಹ ಮಹತ್ವದ ನಿರ್ಧಾರವನ್ನು ದಿಢೀರ್ ಅಂತ ಘೋಷಿಸುತ್ತಾರೆ. ದೇವರ ಆದೇಶದ ಮೇರೆಗೇ ಬಡವರ ಬದಲಿಗೆ ಅಂಬಾನಿ, ಅದಾನಿಯಂತಹ ಉದ್ಯಮಿಗಳ ಏಳಿಗೆಗೆ ಶ್ರಮಿಸುತ್ತಿದ್ದಾರೆ'' ಎಂದು ಕುಟುಕಿದರು. → 4

ರಾಹುಲ್ ವಾಗ್ದಾಳಿ ವೈಖರಿ

- ಹಿಂದೂಗಳಲ್ಲಿ ಕೆಲವರು ಸಮಾಜದಲ್ಲಿ ಹಿಂಸಾಚಾರ, ದ್ವೇಷ ಹರಡುವ ಗುತ್ತಿಗೆ ತೆಗೆದುಕೊಂಡಿದ್ದಾರೆ
- ಆದರೆ ದಿನದ 24 ಗಂಟೆ ಹಿಂದೂಗಳೆಂದು ಹೇಳುತ್ತಾ ತಿರುಗಾಡುವವರು ಹಿಂಸೆ, ಶತ್ರುತ್ವ ಪ್ರಚೋದಿಸುತ್ತಾರೆ
- ಅಗ್ನಿವೀರ್ ಯೋಜನೆ ಋಣಾತ್ಮಕ; ಯುವಕರನ್ನು ಬಳಸಿಕೊಂಡು ಎಸೆಯುವ ರೀತಿಯ ಯೋಜನೆ
- ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ, ಆರ್‌ಎಸ್‌ಎಸ್ ಸಂಘ ಮಾತ್ರವೇ ಹಿಂದೂ ಸಮುದಾಯವಲ್ಲ
- 'ನೀಟ್' ಪರೀಕ್ಷಾ ಕ್ರಮವೇ ಸರಿಯಿಲ್ಲ: ಸಿರಿವಂತರ ಮಕ್ಕಳಿಗಾಗಿ ರೂಪಿಸಿದ ವ್ಯಾಪಾರಿ ಪದ್ಧತಿಯಂತೆ
- ಹಿಂದೂ ಧರ್ಮ, ಮಹಾಪುರುಷರು, ತ್ರಿಶೂಲ ಹಿಡಿದಿರುವ ಮಹಾಶಿವನೂ ಅಹಿಂಸೆಯನ್ನೇ ಹೇಳುತ್ತಾನೆ.
- ಮೋದಿ ಸಾಮಾನ್ಯರಲ್ಲ, ದೇವರ ಆದೇಶದಂತೆ ಕೆಲಸ ಮಾಡುವವರು. ಆತ್ಮ, ಪರಮಾತ್ಮನ ಜತೆ ಸಂವಹನ ನಡೆಸುತ್ತಾರೆ.
- ಪರಮಾತ್ಮನ ಸೂಚನೆ ಮೇರೆಗೇ ಮೋದಿ ನೋಟು ಅಮಾನ್ಯೀಕರಣದಂತಹ ಮಹತ್ವದ ನಿರ್ಧಾರ ಪ್ರಕಟಿಸುತ್ತಾರೆ.
- ಪ್ರಧಾನಿ ಮೋದಿ ಆದೇಶದ ಮೇರೆಗೆ ನನ್ನ ಮೇಲೆ ದಾಳಿ ನಡೆದಿದೆ. ನನ್ನ ವಿರುದ್ಧ 20ಕ್ಕೂ ಹೆಚ್ಚು ಪ್ರಕರಣ ದಾಖಲಾಗಿವೆ.
- ಮೋದಿ ಸೂಚನೆ ಮೇರೆಗೇ ಸಂಸದನಾಗಿದ್ದ ನನಗೆ ನೀಡಿದ್ದ ಮನೆ ಕಿತ್ತುಕೊಳ್ಳಲಾಯಿತು. ಇ.ಡಿ 55 ಗಂಟೆ ವಿಚಾರಣೆ ನಡೆಸಿತು.

ಹಿಂಸಾಚಾರವನ್ನು ಯಾವುದೇ ಧರ್ಮದೊಂದಿಗೆ ತಳುಕು ಹಾಕುವುದು ತಪ್ಪು. ಎಲ್ಲ ಹಿಂದೂಗಳು ಹಿಂಸೆಯ ಪ್ರೇರಕರು ಎಂಬ ಹೇಳಿಕೆಗಾಗಿ ರಾಹುಲ್ ಗಾಂಧಿ ಕ್ಷಮೆಯಾಚಿಸಬೇಕು.
ಅಮಿತ್ ಶಾ ಗೃಹ ಮಂತ್ರಿ

ಕಾಂಗ್ರೆಸ್ ನಾಯಕ ಸುಳ್ಳು ಹೇಳಿದ್ದಾರೆ. ಅಧಿಕಾರ ಹಿಡಿಯಲು ಪ್ರತಿಪಕ್ಷಗಳ ನಾಯಕರು ದೋಷಪೂರಿತ ತರ್ಕ ಮಾಡುತ್ತಾರೆ. ಅವರು 2024ರ ಚುನಾವಣೆಯ ಜನಾದೇಶವನ್ನು (ಸತತ 3ನೇ ಸೋಲು) ಅರ್ಥಮಾಡಿಕೊಂಡಿಲ್ಲ.
ಜೆ.ಪಿ.ನಡ್ಡಾ ಬಿಜೆಪಿ ಅಧ್ಯಕ್ಷ

'ಹಿಂಸಾವಾದಿ' ಹೇಳಿಕೆ ಸಲ್ಲ

ರಾಹುಲ್ ಮಾತು ಪೂರ್ಣಗೊಳ್ಳುವ ಮುನ್ನವೇ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಆಡಳಿತ ಪಕ್ಷ ನಾಯಕರು ಆಕ್ಷೇಪ ವ್ಯಕ್ತಪಡಿಸಿದರು. ಎಲ್ಲ ಹಿಂದೂಗಳನ್ನು ಹಿಂಸಾವಾದಿಗಳು ಹೇಳುತ್ತಿರುವುದು ತಪ್ಪು. ಹಿಂದೂ ಸಮುದಾಯವನ್ನು ಹಿಂಸಾವಾದಿಗಳೆಂದು ಕರೆಯುತ್ತಿರುವುದು ಗಂಭೀರವಾದ ಸಂಗತಿ ಎಂದರು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ರಾಹುಲ್, ಕೇವಲ ಬಿಜೆಪಿ, ಆರ್‌ಎಸ್‌ಎಸ್‌ನವರನ್ನು ನಾನು ಉಲ್ಲೇಖಿಸಿ ಹೇಳಿರುವುದೇ ಹೊರತು ಪೂರ್ತಿ ಹಿಂದೂ ಸಮಾಜವನ್ನಲ್ಲ. ಪ್ರಧಾನಿ ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸುತ್ತಿದ್ದಾರೆ ಎಂದು ಹೇಳಿದರು.

ಪುಟ ತೆರೆದಂತೆ...

ಸಂಸದರೇ, ನೀವು ಈ ಕೆಲಸ ಮಾಡಬಹುದು!
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ಸ್ಥಳೀಯ ಭಾವನೆಗಳಿಗೆ ಬೆಲೆ ಕೊಡದಿದ್ದರೆ ಹೇಗೆ?
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಮ | 7

ದಾರಿದೀಪೋಕ್ತಿ

ನಮ್ಮ ಬದುಕಿನಲ್ಲಿ ಯಾವಾಗ ಭಯ, ಗಾಬರಿಗಳೇ ಹೆಚ್ಚಾದಾಗ ಜೀವನವೇ ಭಾರವಾದಂತೆ ಭಾಸವಾಗುತ್ತದೆ. ಬದುಕಿನಲ್ಲಿ ನಂಬಿಕೆ, ಭರವಸೆ ಹೆಚ್ಚಾದಾಗ ಬದುಕು ಹಗುರವಾಗಿ ಬಂಗಾರವಾಗುತ್ತದೆ. ಯಾವತ್ತೂ ಭರವಸೆಯನ್ನು ಕಳೆದುಕೊಳ್ಳಬಾರದು.

ವಕ್ರತುಂಡೋಕ್ತಿ

ಎರಡು ವೈಫೈ ಅಂಟೆನಾಗಳು ಮದುವೆಯಾದರೆ, ಚೆನ್ನಾಗಿರೋದು ರಿಸೆಪ್ಶನ್.

ಮಾತಂದ್ರೆ ಮಾತು

ಕೇಂದ್ರ ಸರಕಾರ ಜಾರಿಗೆ ತಂದ ಹೊಸ 3 ಕಾನೂನುಗಳನ್ನು ರಾಜ್ಯದಲ್ಲಿ ತಿದ್ದುಪಡಿಗೆ ಒಳಪಡಿಸಲು ರಾಜ್ಯ ಸರಕಾರ ಚಿಂತನೆ ನಡೆಸಿದೆ. ಈ ನಿಟ್ಟಿನಲ್ಲಿ ಸರಕಾರ ಮಹತ್ವದ ನಿರ್ಧಾರವನ್ನು ಕೈಗೊಳ್ಳಲಿದೆ. ಯಾವ ಸರಕಾರ ಕಾನೂನು ಮಾಡುತ್ತದೆ, ಅದನ್ನು ಅವರ ಅವಧಿಯಲ್ಲಿ ಜಾರಿ ಮಾಡುವ ನೈತಿಕ ಹಕ್ಕಿದೆ. ಆದರೆ, ಸರಕಾರದ ಅವಧಿ ಮುಗಿದ ಮೇಲೆ ಜಾರಿ ಮಾಡುವುದು ಅನೈತಿಕ ಹಾಗೂ ರಾಜಕೀಯ ಅಸಂಬದ್ಧ ಕ್ರಮ.
ಎಚ್.ಕೆ.ಪಾಟೀಲ್, ಸಚಿವ

ಮೇಧಾ ಪಾಟ್ಕರ್‌ಗೆ ಜೈಲು

ದೆಹಲಿ: ಮಾನಹಾನಿ ಪ್ರಕರಣ ಸಂಬಂಧ ನರ್ಮದಾ ಬಚಾವೋ ಆಂದೋಲನದ ಹೋರಾಟಗಾರ್ತಿ ಮೇಧಾ ಪಾಟ್ಕರ್‌ಗೆ 5 ತಿಂಗಳ ಜೈಲು ಶಿಕ್ಷೆ, 10 ಲಕ್ಷ ದಂಡ ವಿಧಿಸಿ ದೆಹಲಿ ನ್ಯಾಯಾಲಯ ಆದೇಶ ಹೊರಡಿಸಿದೆ. ಹಾಲಿ ದೆಹಲಿ ರಾಜ್ಯಪಾಲ ವಿ.ಕೆ.ಸಕ್ಸೆನಾ 23 ವರ್ಷಗಳ ಹಿಂದೆ ಮೇಧಾ ಪಾಟ್ಕರ್ ವಿರುದ್ಧ ಮಾನಹಾನಿ ಪ್ರಕರಣ ದಾಖಲಿಸಿದ್ದರು. ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ರಾಘವ್ ಶರ್ಮಾ ಮಾನಹಾನಿ ಪ್ರಕರಣದಲ್ಲಿ ಮೇಧಾ ಅಪರಾಧಿ ಎಂದು ಘೋಷಿಸಿದ್ದು, ಸಕ್ಸೆನಾರಿಗೆ 10 ಲಕ್ಷ ಪರಿಹಾರ ನೀಡುವಂತೆ ಸೂಚಿಸಿದ್ದಾರೆ.

ರಶೀದ್ ಪ್ರಮಾಣ?

ಕಾಶ್ಮೀರ: ಭಯೋತ್ಪಾದಕ ಚಟುವಟಿಕೆಗಳಿಗೆ ಆರ್ಥಿಕ ನೆರವು ನೀಡಿದ ಆರೋಪದಡಿ ಎನ್‌ಐಎಯಿಂದ ಬಂಧನಕ್ಕೊಳಗಾಗಿರುವ, ಸದ್ಯ ಜೈಲಿನಲ್ಲಿದ್ದುಕೊಂಡೇ ಲೋಕಸಭಾ ಚುನಾವಣೆಯಲ್ಲಿ ಗೆದ್ದಿರುವ ಕಾಶ್ಮೀರದ ಇಂಜಿನಿಯರ್ ರಶೀದ್ ಅಲಿಯಾಸ್ ಶೇಕ್ ಅಬ್ದುಲ್ ರಶೀದ್ ಪ್ರಮಾಣ ವಚನ ಸ್ವೀಕಾರ ಸಂಬಂಧ ದೆಹಲಿಯ ಪಟಿಯಾಲ ನ್ಯಾಯಾಲಯ ಮಂಗಳವಾರ ಆದೇಶ ಪ್ರಕಟಿಸಲಿದೆ.

15ರಿಂದ ಅಧಿವೇಶನ



ಬೆಂಗಳೂರು: ಜುಲೈ 15ರಿಂದ 26ರವರೆಗೆ ಹತ್ತು ದಿನ ವಿಧಾನಮಂಡಲ ಅಧಿವೇಶನ ಕರೆಯಲು ರಾಜ್ಯಪಾಲರಿಗೆ ಸಿಎಂ ಸಿದ್ದರಾಮಯ್ಯ ಅವರು ಶಿಫಾರಸು ಮಾಡಿದ್ದಾರೆ. ಕಳೆದ ಕ್ಯಾಬಿನೆಟ್ ಸಭೆಯಲ್ಲಿ ಅಧಿವೇಶನದ ದಿನಾಂಕ ಅಂತಿಮಗೊಳಿಸಲು ಸಿಎಂ ವಿವೇಚನೆಗೆ ಬಿಡಲಾಗಿತ್ತು. ಅದರಂತೆ ಅಧಿವೇಶನದ ದಿನಾಂಕವನ್ನು ಸಿಎಂ ಸಿದ್ದರಾಮಯ್ಯ ಅಂತಿಮಗೊಳಿಸಿದ್ದಾರೆ.

ಕಣ್ಣೀರಿಟ್ಟ ದರ್ಶನ್

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್ ಅವರನ್ನು ತಾಯಿ ಮೀನಾ ಸೇರಿದಂತೆ ಅವರ ಕುಟುಂಬಸ್ಥರು ಸೋಮವಾರ ಭೇಟಿಯಾದರು. ತಾಯಿಯನ್ನು ಕಂಡ ದರ್ಶನ್ ಕಣ್ಣೀರು ಹಾಕಿದರು. ಇದೇ ವೇಳೆ ಜತೆಗಿದ್ದ ಎಲ್ಲರೂ ಭಾವುಕರಾದರು ಎಂದು ತಿಳಿದುಬಂದಿದೆ.

ಎಸ್ಪಿ ಕಚೇರಿಯಲ್ಲೇ ಪತ್ನಿಯ ಕೊಂದ ಪೇದೆ

ಹಾಸನ: ವರದಕ್ಷಿಣೆ ಕಿರುಕುಳ ಮತ್ತು ದೈಹಿಕ ಹಿಂಸೆ ವಿರುದ್ಧ ದೂರು ಕೊಡಲು ಪತ್ನಿಯನ್ನು, ಪೊಲೀಸ್ ಕಾನ್‌ಸ್ಟೇಬಲ್ ಎಸ್‌ಪಿ ಕಚೇರಿ ಆವರಣದಲ್ಲಿಯೇ ಚಾಕುವಿನಿಂದ ಇರಿದು ಬರ್ಬರವಾಗಿ ಕೊಲೆ ಮಾಡಿದ ಘಟನೆ ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಸೋಮವಾರ ನಡೆದಿದೆ. ಆರ್.ಸಿ.ರಸ್ತೆಯಲ್ಲಿರುವ ಎಸ್‌ಪಿ ಕಚೇರಿ ಆವರಣದಲ್ಲಿ ಪತ್ನಿ ಮಮತಾಳನ್ನು ಕೊಂದ ಪೇದೆ ಲೋಕನಾಥ್‌ನನ್ನು ಬಂಧಿಸಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಆನ್‌ಲೈನ್‌ನಲ್ಲಿ ಆರ್ಡರ್– 6 ವರ್ಷ ಕಳೆದು ಡೆಲಿವರಿ



ಕರವೇ, ವಿವಿಧ ಸಂಘಟನೆಗಳಿಂದ ಪ್ರತಿಭಟನೆ

ಖಾಸಗಿ ವಲಯದ ಮೀಸಲಿಗೆ ಆಗ್ರಹ

ಬೆಂಗಳೂರು: ರಾಜ್ಯ ಸರಕಾರ ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿಯನ್ನು ನೀಡುವಂತೆ ಒತ್ತಾಯಿಸಿ ವಿವಿಧ ಕನ್ನಡ ಪರ ಸಂಘಟನೆಗಳು ಕರವೇ ಅಧ್ಯಕ್ಷ ಟಿ.ಎ.ನಾರಾಯಣ ಗೌಡ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದವು.

ನಗರದ ಫ್ರೀಡಂಪಾರ್ಕ್‌ನಲ್ಲಿ ನಡೆಸಲಾದ ಬೃಹತ್ ಪ್ರತಿಭಟನೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸೇರಿದಂತೆ ವಿವಿಧ ಸಂಘಟನೆಗಳ ಸದಸ್ಯರು, ಸಾವಿರಾರು ಜನರು- ಕಾರ್ಯಕರ್ತರು ಪಾಲ್ಗೊಂಡಿದ್ದರು. ಈ ವೇಳೆ ಖಾಸಗಿ ವಲಯಗಳಲ್ಲಿ ಕನ್ನಡೇತರರಿಗೆ ಹೆಚ್ಚಿನ ಉದ್ಯೋವಕಾಶ ನೀಡಲಾಗುತ್ತಿದ್ದು, ಇದರಿಂದ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ ಹೀಗಾಗಿ ಕನ್ನಡಿಗರಿಗೆ ಖಾಸಗಿ ವಲಯದಲ್ಲಿ ಕಡ್ಡಾಯ ಉದ್ಯೋಗ ಮೀಸಲಾತಿ ಕಲ್ಪಿಸಬೇಕು ಎಂದು ಒತ್ತಾಯಿಸಲಾಯಿತು.

ಖಾಸಗಿ ಸಂಸ್ಥೆಗಳ ಸಿ ಮತ್ತು ಡಿ ದರ್ಜೆ ಹುದ್ದೆ ಶೇ.100 ಕನ್ನಡಿಗರಿಗೆ ಮೀಸಲಿಡಬೇಕು.ಇತರೆ ಹುದ್ದೆ ಶೇ.80 ಕನ್ನಡಿಗರಿಗೆ ನೀಡಬೇಕು. ಹದಿನೈದು ವರ್ಷ ರಾಜ್ಯದಲ್ಲಿದ್ದವರಿಗೆ ಕನ್ನಡಿಗರೆಂದು ಪರಿಗಣಿಸುವ ನಿಯಮವಿದ್ದು, ಅಂತವರಿಗೆ ಕನ್ನಡ ಪರೀಕ್ಷೆ ನಡೆಸಿ ಉತ್ತೀರ್ಣರಾದರೆ ಮಾತ್ರ ಕನ್ನಡಿಗರೆಂದು ಪರಿಗಣಿಸಬೇಕು.
- ಟಿ.ಎ.ನಾರಾಯಣಗೌಡ ಕರವೇ ಅಧ್ಯಕ್ಷ

ಪ್ರತಿಭಟನೆಯಲ್ಲಿ ಕರವೇ ಅಧ್ಯಕ್ಷ ಟಿ.ಎ ನಾರಾಯಣಗೌಡ ಮಾತನಾಡಿ, ಪೊಲೀಸರು ತಮ್ಮನ್ನು ತಡೆಯಲು ಮುಂದಾದರೆ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗುತ್ತದೆ. ಶಾಂತಿಯುತ ಪ್ರತಿಭಟನೆಗೆ ಕರೆ ನೀಡಿದ್ದೇವೆ. → 4

ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಕರವೇ ಅಧ್ಯಕ್ಷ ಟಿ.ಎ.ನಾರಾಯಣ ಗೌಡ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆಯಲ್ಲಿ ನಟ ಪ್ರೇಮ್, ನಟಿ ಪೂಜಾ ಗಾಂಧಿ ಮತ್ತಿತರರು ಇದ್ದರು.

ಪದಾಧಿಕಾರಿಗಳ ಸಭೆಯಲ್ಲಿ ಡಿಕೆಶಿ ಗುಡುಗು

ನನ್ನ ಖಾಲಿ ಮಾಡಿಸಲಾಗಲ್ಲ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಕೆಪಿಸಿಸಿ ಅಧ್ಯಕ್ಷ ಬದಲಾವಣೆ ಬಗ್ಗೆ ಭಾರಿ ಚರ್ಚೆ ನಡೆಯುತ್ತಿರುವ ನಡುವೆಯೇ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ 'ನನ್ನನ್ನು ಖಾಲಿ ಮಾಡಿಸಲು ಆಗುವುದಿಲ್ಲ' ಎಂದು ಗುಡುಗಿದ್ದಾರೆ.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಚರ್ಚೆ ನಡೆಯುತ್ತಿರುವಾಗಲೇ ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ರಾಜ್ಯ ಪದಾಧಿಕಾರಿಗಳ ಸಭೆ ನಡೆಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಈ ಸಂದೇಶ ರವಾನಿಸಿದ್ದಾರೆ ಎನ್ನಲಾಗಿದೆ.

ಸ್ಥಳೀಯ ಸಂಸ್ಥೆ ಚುನಾವಣೆ, ಪಕ್ಷ ಸಂಘಟನೆ, ಲೋಕಸಭಾ ಚುನಾವಣಾ ಫಲಿತಾಂಶಕ್ಕೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ. ಈ ವೇಳೆ ಸಭೆಯಲ್ಲಿ, 'ನನ್ನನ್ನು ಹುದ್ದೆಯಿಂದ ಕೆಳಗಿಳಿಸಲು ಕೆಲವರು ಪ್ರಯತ್ನಿಸುತ್ತಿದ್ದಾರೆ' ಎಂದು ಅಸಮಾಧಾನ ಹೊರಹಾಕಿದ್ದಾರೆ ಎಂದು ಸಭೆಯಲ್ಲಿದ್ದ ಪ್ರಧಾನ ಕಾರ್ಯದರ್ಶಿಯೊಬ್ಬರು ತಿಳಿಸಿದ್ದಾರೆ. → 4

ಕೆಪಿಸಿಸಿ ಕಚೇರಿಯಲ್ಲಿ ಪದಾಧಿಕಾರಿಗಳ ಸಭೆ ಉದ್ಘಾಟಿಸಿದ ಡಿ.ಕೆ.ಶಿವಕುಮಾರ್ ಮತ್ತಿತರರು

ಮಾತು ಮೀರಿದವರಿಗೆ ನೋಟಿಸ್

ಸಭೆಯಲ್ಲಿ ನನನ್ನು ಖಾಲಿ ಮಾಡಿಸಲು ಕೆಲವರು ಪ್ರಯತ್ನ ಮಾಡುತ್ತಿದ್ದಾರೆ. ಅದೆಲ್ಲ ಸಾಧ್ಯವಿಲ್ಲ. ನನ್ನನ್ನು ಖಾಲಿ ಮಾಡಿಸಲು ಆಗಲ್ಲ. ನಾನು ಪಕ್ಷಕ್ಕಾಗಿ ದುಡಿಯುವವನು ಎಂದು ಹೇಳಿದ್ದಾರೆ. ಮುಂದುವರಿದು, ಈ ಬಗ್ಗೆ ಪಕ್ಷದ ಹೈಕಮಾಂಡ್ ಜತೆ ಚರ್ಚೆ ನಡೆಸಿದ್ದೇನೆ. ಸದ್ಯಕ್ಕೆ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯ ಚಿಂತನೆ ಪಕ್ಷದ ಹೈಕಮಾಂಡ್ ಮಟ್ಟದಲ್ಲಿಲ್ಲ. ಆದ್ದರಿಂದ ಈ ವಿಷಯ, ಡಿಸಿಎಂ ಹುದ್ದೆ ಸೃಷ್ಟಿ ಸೇರಿದಂತೆ ಹುದ್ದೆಗಳ ಬದಲಾವಣೆಗೆ ಸಂಬಂಧಿಸಿದಂತೆ ಮಾತನಾಡಿದರೆ ಮುಲಾಜಿಲ್ಲದೇ ನೋಟಿಸ್ ನೀಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರೋಹಿತ್ ಪಡೆಗೆ ಚಂಡಮಾರುತ ಕಾಟ

ಬಾರ್ಬೋಡಾಸ್: ಇಲ್ಲಿನ ಹಲವು ಪ್ರದೇಶಗಳಲ್ಲಿ ಚಂಡಮಾರುತ ಉಂಟಾಗಿದ್ದು, ವಿಮಾನ ಹಾರಾಟ ಸ್ಥಗಿತಗೊಂಡಿದೆ. ಪರಿಣಾಮವಾಗಿ ಟಿ20 ವಿಶ್ವ ಚಾಂಪಿಯನ್ ಟೀಂ ಇಂಡಿಯಾ ಬಾರ್ಬೋಡಾಸ್‌ನಲ್ಲಿ ಸಿಲುಕಿಕೊಂಡಿದೆ. ವರದಿಗಳ ಪ್ರಕಾರ ಭಾರತೀಯ ತಂಡವು ಸೋಮವಾರ ಬಾರ್ಬೋಡಾಸ್‌ನಿಂದ ನ್ಯೂಯಾರ್ಕ್‌ಗೆ ಸ್ಥಳೀಯ ಕಾಲಮಾನ ಬೆಳಿಗ್ಗೆ 11 ಗಂಟೆಗೆ (ಭಾರತೀಯ ಕಾಲಮಾನ ರಾತ್ರಿ 8.30) ಹೊರಡಬೇಕಿತ್ತು, ಅಲ್ಲಿಂದ ಅವರು ದುಬೈಗೆ ಮತ್ತು ನಂತರ ಭಾರತಕ್ಕೆ ಸಂಪರ್ಕ ವಿಮಾನದ ಮೂಲಕ ಆಗಮಿಸಬೇಕಿತ್ತು.

ಎನ್‌ಡಿಎ ಸಂಸದೀಯ ಸಭೆ ಇಂದು

ದೆಹಲಿ: ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ (ಎನ್‌ಡಿಎ) ಸಂಸದೀಯ ಪಕ್ಷದ ಸಭೆ ಮಂಗಳವಾರ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುವ ಸಾಧ್ಯತೆಯಿದೆ. ಮೂರನೇ ಅವಧಿಗೆ ಅಧಿಕಾರ ವಹಿಸಿಕೊಂಡ ಬಳಿಕ ಸಂಸತ್ತಿನ ಮೊದಲ ಅಧಿವೇಶನದಲ್ಲಿ ಆಡಳಿತ ಪಕ್ಷದ ಸಂಸದರನ್ನು ಉದ್ದೇಶಿಸಿ ಮೊದಲ ಬಾರಿಗೆ ಪ್ರಧಾನಿ ಭಾಷಣ ಮಾಡಲಿದ್ದಾರೆ. ಸಭೆಯ ಬಗ್ಗೆ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಎಲ್ಲ ಸಂಸತ್ ಸದಸ್ಯರಿಗೆ ಸೂಚನೆ ನೀಡಿ, ಹಾಜರಾಗುವಂತೆ ತಿಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕ್ಯಾಶ್‌ಲೆಸ್‌ಗೆ ಮುಂದಾದ ನಿಗಮ | 10 ಸಾವಿರಕ್ಕೂ ಹೆಚ್ಚು ಯಂತ್ರಗಳ ಖರೀದಿಗೆ ಸಿದ್ಧತೆ

ಕೆಎಸ್ಸಾರ್ಟಿಸಿ ಬಸ್‌ಗಳಲ್ಲಿ ಸ್ಮಾರ್ಟ್ ಪೇ

ಅಪರ್ಣಾ ಎ.ಎಸ್

ಬೆಂಗಳೂರು: ಟಿಕೆಟ್ ಖರೀದಿ ವೇಳೆ ಒಂದೆರೆಡು ರುಪಾಯಿ ಚಿಲ್ಲರೆಗಾಗಿಯೇ ಪ್ರಯಾಣಿಕ ಹಾಗೂ ಕಂಡಕ್ಟರ್‌ಗಳ ನಡುವೆ ಮಾರಾಮಾರಿ ನಡೆದಿರುವ ಅದೆಷ್ಟೋ ಘಟನೆಗಳಿವೆ. ಇಂದಿನ ಆನ್‌ಲೈನ್ ಜಮಾನದಲ್ಲಿ ಕಾಸಿದೆ ಎಂದು ಬಸ್ ಹತ್ತಿ ಬಳಿಕ ಪರ್ಸ್‌ನಲ್ಲಿ ಹಣವಿಲ್ಲವೆಂದು ತಿಳಿದು ಸಂಕಷ್ಟಕ್ಕೆ ಸಿಲುಕಿದ ಘಟನೆಗಳು ನಿತ್ಯ ವರದಿಯಾಗುತ್ತದೆ. ಈ ಎಲ್ಲ ಸಮಸ್ಯೆಗೆ ಪರಿಹಾರ ನೀಡುವ ಸಲುವಾಗಿ ಕೆಎಸ್‌ಆರ್‌ಟಿಸಿ ಇದೀಗ ಕ್ಯಾಶ್‌ಲೆಸ್ ಸಂಚಾರಕ್ಕೆ ಸಿದ್ಧತೆ ನಡೆಸಿಕೊಂಡಿದೆ.

ಊರಿಂದ ಊರಿಗೆ ಹೋಗುವಾಗ ಟಿಕೆಟ್ ಪಡೆಯಲು ಹತ್ತು ಹಲವು ಸಮಸ್ಯೆಗಳು ಎದುರಾಗುತ್ತಿತ್ತು. ಇಂದಿನ ಆನ್‌ಲೈನ್ ಜಮಾನದಲ್ಲಿ ಚಿಲ್ಲರೆಯ ಸಮಸ್ಯೆಯನ್ನು ಅನೇಕರು ಅನುಭವಿಸುತ್ತಿದ್ದರು. ಆದ್ದರಿಂದ ಈ ಎಲ್ಲ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಭಾಗವಾಗಿ ಇನ್ನು ಮುಂದೆ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಸೇರಿದಂತೆ ಯುಪಿಐ ಮೂಲಕ ಟಿಕೆಟ್ ಹಣ ಸ್ವೀಕರಿಸಲು ನಿಗಮ ಯೋಜನೆ ರೂಪಿಸಿದೆ.

ಇತ್ತೀಚಿನ ದಿನದಲ್ಲಿ ಆನ್‌ಲೈನ್ ವರ್ಗಾವಣೆ ಹೆಚ್ಚಾಗಿರುವುದರಿಂದ, ಕ್ಯಾಶ್‌ಲೆಸ್‌ಗೆ ಬಹುತೇಕರು ಒಗ್ಗಿಕೊಂಡಿರುತ್ತಾರೆ. ಇದನ್ನು ಗಮನಿಸಿರುವ ಕೆಎಸ್‌ಆರ್‌ಟಿಸಿ ಇದೀಗ, ತಮ್ಮ ನಿಗಮದ ಬಸ್‌ಗಳಲ್ಲಿ ಆನ್‌ಲೈನ್ ಹಣ ಪಾವತಿಸಿ ಟಿಕೆಟ್ ಪಡೆಯುವುದನ್ನು ಪರಿಚಯಿಸಲು ಮುಂದಾಗಿದೆ. ಈಗಾಗಲೇ ಬಿಎಂಟಿಸಿಗಳಲ್ಲಿ ಡಿಜಿಟಲ್ ಪಾವತಿಯ ಮೂಲಕ ಟಿಕೆಟ್ ಖರೀದಿಗೆ ಅವಕಾಶ ನೀಡಲಾಗಿದೆ. ಇದೀಗ ಇದೇ ರೀತಿ ಕೆಎಸ್‌ಆರ್‌ಟಿಸಿಯಲ್ಲಿಯೂ ಡಿಜಿಟಲ್ ಪಾವತಿ ಪರಿಚಯಿಸಲು ಸಿದ್ಧತೆ ನಡೆಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. → 4

ನೂತನ ಐಷಾರಾಮಿ ಬಸ್ ಖರೀದಿಗೆ ಸಿದ್ಧತೆ

ಈ ನಡುವೆ ಕೆಎಸ್‌ಆರ್‌ಟಿಸಿ ಪ್ರಯಾಣಿಕರ ಅನುಕೂಲಕ್ಕಾಗಿ ಹೊಸದಾಗಿ ಅಂಬಾರಿ, ಪಲ್ಲಕ್ಕಿ, ಅಶ್ವಮೇಧ, ಇವಿ ಪ್ಲಸ್ ಬಸ್‌ಗಳನ್ನು ಹೆಚ್ಚುವರಿಯಾಗಿ ಖರೀದಿಸಲು ಮುಂದಾಗಿದೆ. 100 ಪಲ್ಲಕ್ಕಿ, 20 ಅಂಬಾರಿ, 30 ಪಲ್ಲಕ್ಕಿ ಕಾಂಬೋ, ಹಾಗೂ 20 ಐರಾವತ ಕ್ಲಬ್ ಕ್ಲಾಸ್ ಬಸ್‌ಗಳನ್ನು ಖರೀದಿಸಲು ಸಿದ್ಧತೆ ನಡೆಸಿದ್ದು, ಶೀಘ್ರವೇ ಈ ಬಸ್‌ಗಳು ರಸ್ತೆಗಿಳಿಯಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶೀಘ್ರದಲ್ಲಿಯೇ ಜಾರಿ

ಈಗಾಗಲೇ ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ವ್ಯವಸ್ಥೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ಯಂತ್ರಗಳನ್ನು ಶೀಘ್ರವೇ ಎಲ್ಲಾ ಮಾರ್ಗಗಳಲ್ಲಿಯೂ ಪರಿಚಯಿಸಲು ನಿಗಮ ಮುಂದಾಗಿದೆ. ಈ ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ಯಂತ್ರದಿಂದ ಕ್ಯಾಶ್‌ಲೆಸ್ ಸಂಚಾರವನ್ನು ಉತ್ತೇಜಿಸಲಿದೆ. ಈ ಯಂತ್ರಗಳು ಕ್ಯೂ ಆರ್ ಕೋಡ್ ಮೂಲಕ ಟಿಕೆಟ್ ನೀಡಲಿದ್ದು, ಡೆಬಿಟ್, ಕ್ರೆಡಿಟ್ ಕಾರ್ಡ್‌ಗಳೊಂದಿಗೆ ಯುಪಿಐ ಪಾವತಿಯನ್ನು ಹೊಂದಿರಲಿದೆ. ಈ ಮೂಲಕ ಸುಲಭವಾಗಿ ಟಿಕೆಟ್ ಕೈಸೇರಲಿದ್ದು ಟಿಕೆಟ್ ಪಡೆಯುವ ಸಲುವಾಗಿ ಗಂಟೆಗಟ್ಟಲೆ ಕಾಯುವ ಹಾಗೂ ಚಿಲ್ಲರೆಗಳಿಗಾಗಿ ನಿರ್ವಾಹಕರೊಂದಿಗೆ ಕಾದಾಟಕ್ಕಿಳಿಯುವ ಸನ್ನಿವೇಶಗಳು ಬಂದ್ ಆಗಲಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಮುಡಾ ಆಯುಕ್ತ, ಕಾರ್ಯದರ್ಶಿ, ಎಇಇ ಎತ್ತಂಗಡಿ, 50:50 ನಿವೇಶನ ಹಂಚಿಕೆಗೆ ತಡೆ

ಮುಡಾ ಹಗರಣ: ತನಿಖೆಗೆ ಆದೇಶ

ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದ ಬಹುಕೋಟಿ ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿ ಮುಡಾ ಆಯುಕ್ತ ದಿನೇಶ್ ಕುಮಾರ್ ಸೇರಿದಂತೆ ಮೂವರು ಅಧಿಕಾರಿಗಳ ವರ್ಗಾವಣೆಗೆ ಆದೇಶಿಸಲಾಗಿದ್ದು, ಹಗರಣ ಕುರಿತು ತನಿಖೆಗೆ ಆದೇಶಿಸಲಾಗಿದೆ.

ಹಗರಣ ಕುರಿತ ವಿಶ್ವವಾಣಿ ಪತ್ರಿಕೆಯ ಜೂನ್ 27ರ ಸಂಚಿಕೆಯಲ್ಲಿ ಪ್ರಕಟವಾದ ವರದಿಯನ್ನು ಆಧರಿಸಿ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಸೋಮವಾರ ತುರ್ತು ಸಭೆ ನಡೆಸಿದ್ದು, ಮುಡಾದಲ್ಲಿ 50–50 ಅನುಪಾತದಲ್ಲಿ ನಡೆದ ನಿವೇಶನ ಹಂಚಿಕೆಯನ್ನು ರದ್ದು ಮಾಡಲು ಆದೇಶಿಸಿದ್ದಾರೆ. ಪ್ರಕರಣದಲ್ಲಿ ಮೇಲ್ನೋಟಕ್ಕೆ ಅಧಿಕಾರಿಗಳ ಪಾತ್ರ ಕಂಡು ಬಂದ ಹಿನ್ನೆಲೆಯಲ್ಲಿ ಮುಡಾ ಆಯುಕ್ತ ದಿನೇಶ್‌ಕುಮಾರ್, ಕಾರ್ಯದರ್ಶಿ ಜಿ.ಡಿ ಶೇಖರ್ ಹಾಗೂ ಎಇಇ ವರ್ಗಾವಣೆಗೆ ಮೌಖಿಕ ಆದೇಶ ನೀಡಿದ್ದಾರೆ.

50:50 ನಿವೇಶನ ಹಂಚಿಕೆಯಲ್ಲಿನ ಅಕ್ರಮ ಕುರಿತು ತನಿಖೆ ನಡೆಸಲು ಹಿರಿಯ ಅಧಿಕಾರಿ ವೆಂಕಟಾಚಲಪತಿ ಕವಳಗಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದ್ದು ನಾಲ್ಕು ವಾರಗಳೊಳಗೆ ವರದಿ ನೀಡಲು ಸೂಚಿಸಲಾಗಿದೆ. ಇಬ್ಬರು ಐಎಎಸ್ ಮತ್ತು ನಾಲ್ವರು ಹೆಚ್ಚುವರಿ ಸಿಬ್ಬಂದಿಯನ್ನೊಳಗೊಂಡ ಸಮಿತಿ ನಿಯಮಬಾಹಿರವಾಗಿ ನಡೆದ ನಿವೇಶನ ಹಂಚಿಕೆಗಳ ಬಗ್ಗೆ ತನಿಖೆ ನಡೆಸಲಿದೆ. ಮುಂದಿನ 1 ತಿಂಗಳು ಯಾವುದೇ ಸೈಟು ಹಂಚಿಕೆ ಮಾಡದಂತೆ, ಮುಡಾದಲ್ಲಿ ಸಭೆ ನಡೆಸದಂತೆ ಸಚಿವರು ಆದೇಶಿಸಿದ್ದಾರೆ. ಈ ಹಿಂದೆ 50:50 ಅನುಪಾತದಡಿ ಹಂಚಿಕೆಯಾಗಿರುವ ಎಲ್ಲಾ ಸೈಟುಗಳನ್ನು ಕೂಡ ತಡೆಹಿಡಿಯಲಾಗುತ್ತದೆ ಎಂದು ಸಚಿವರು ತಿಳಿಸಿದ್ದಾರೆ. → 4

ವಿಶ್ವವಾಣಿ ಫಲಶ್ರುತಿ

ವಿಶ್ವವಾಣಿ ಪತ್ರಿಕೆಯ ವರದಿಯನ್ನು ಪರಿಶೀಲಿಸಲಾಗಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆಯಲ್ಲಿ ನಿಯಮ ಬಾಹಿರವಾಗಿ ನಿವೇಶನ ಹಂ... ಮೂಲಕ ಹಗರಣ ನಡೆದಿರುವುದು ಇದರಿಂದ ಪ್ರಾಧಿಕಾರಕ್ಕೆ ಅಪಾರ ನಷ್ಟ ಉಂಟಾಗಿರು... ಪತ್ರಿಕಾ ಪ್ರಕಟಣೆಗಳಿಂದ ಹಾಗೂ ಸಾರ್ವಜನಿಕರಿಂದ ಹಾಗೂ ಜನಪ್ರತಿನಿಧಿಗಳಿಂದ ...ರುತ್ತಿರುವ ಅನೇಕ ದೂರುಗಳಿಂದ, ನಿಯಮಬಾಹಿರ ಕ್ರಮವಹಿಸಿರುವುದು ಮೇಲ್ನೋಟಕ್ಕೆ ...ಂಡುಬರುತ್ತಿದ್ದು. ಇದರ ಸತ್ಯಾಸತ್ಯತೆಯನ್ನು ಅರಿಯಲು ಒಂದು ತನಿಖಾ ತಂಡವನ್ನು ...ನೇಮಿಸುವುದು ಸೂಕ್ತವೆಂದು ತೀರ್ಮಾನಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ನಅಇ 211 ಮೈಅಪ್ರಾ 2024, ಬೆಂಗಳೂರು, ದಿನಾಂಕ:01.07.2024.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಾಯ್ದೆ/ನಿಯಮ/ವಲಯ ನಿಯಮಾವಳಿ/ ಸರ್ಕಾರದ ಆದೇಶ/ಸರ್ಕಾರದ ಸುತ್ತೋಲೆಗಳನ್ನುಯ ... ಪಾಲಿಸದೆ ಅವ್ಯವಹಾರ ಮತ್ತು ಕರ್ತವ್ಯ ಲೋಪವೆಸಗಿರುವ ಪ್ರಕರಣಗಳು ಹಾಗೂ ವಿಶ್ವವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯ ಅಂಶಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸೂಕ್ತ ದಾಖಲೆಗಳೊಂದಿಗೆ ತನಿಖೆ ನಡೆಸಿ ಸರ್ಕಾರಕ್ಕೆ ಸಮಗ್ರ ವರದಿಯನ್ನು ಸಲ್ಲಿಸಲು ಈ ಕೆಳಕಂಡ ಅಧಿಕಾರಿಗಳನ್ನು ಒಳಗೊಂಡಂತ ತನಿಖಾ ತಂಡವನ್ನು ನೇಮಿಸಿ ಆದೇಶಿಸಿದೆ.

ತುಂಡು ಭೂಮಿ ಹಂಚಿಕೆ ಮಾಡದಂತೆ ನಾನೇ ಆದೇಶಿಸಿದ್ದೆ. ಬಿಜೆಪಿ ಸರಕಾರ ಇದ್ದಾಗ ಮಾಡಿದ ಆದೇಶಗಳನ್ನು ರದ್ದುಮಾಡಲು ಸೂಚನೆ ನೀಡಿದ್ದೇನೆ. ಹಗರಣ ಕುರಿತು ತನಿಖೆ ನಡೆಸಲಾಗುತ್ತದೆ. ಮುಡಾ ಆಯುಕ್ತ ದಿನೇಶ್ ಕುಮಾರ್, ಕಾರ್ಯದರ್ಶಿ ಮತ್ತು ಎಇಇ ವರ್ಗಾವಣೆ ಮಾಡಲು ಮೌಖಿಕ ಸೂಚನೆ ನೀಡಲಾಗಿದೆ.
- ಭೈರತಿ ಸುರೇಶ್ ನಗರಾಭಿವೃದ್ಧಿ ಸಚಿವ

ಯತೀಂದ್ರ ಪಾತ್ರವಿಲ್ಲ

ಮೂಡಾ ಅಕ್ರಮದಲ್ಲಿ ಯತೀಂದ್ರ ಸಿದ್ದರಾಮಯ್ಯ ಪಾತ್ರ ವಿಚಾರ ಕುರಿತು ಪ್ರಸ್ತಾಪಿಸಿದ ಅವರು, ಯತೀಂದ್ರ ಸಿದ್ದರಾಮಯ್ಯನವರ ಪಾತ್ರ ಈ ಕ್ಷಣದಲ್ಲಿ ಕಂಡುಬರುತ್ತಿಲ್ಲ. ಯತೀಂದ್ರ ಸಿದ್ದರಾಮಯ್ಯ ಈಗ ಎಂಎಲ್‌ಸಿ ಆಗಿದ್ದಾರೆ. ಈ ಹಿಂದೆ ಶಾಸಕರಾಗಿದ್ದರು. ಇದಕ್ಕೂ ಅವರಿಗೂ ಸಂಬಂಧವಿಲ್ಲ ಎಂದು ನಗರಾಭಿವೃದ್ಧಿ ಸಚಿವರು ಸ್ಪಷ್ಟಪಡಿಸಿದರು.

ಸಮಾಚಾರ ಸಣ್ಣದಲ್ಲ

ಪ್ರಜ್ವಲ್ ನೋಡಲು ಜೈಲಿಗೆ ಬಂದ ಭವಾನಿ

ಬೆಂಗಳೂರು: ದೌರ್ಜನ್ಯ ಪ್ರಕರಣ ಮತ್ತು ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಜೈಲು ಸೇರಿರುವ ಪ್ರಜ್ವಲ್ ರೇವಣ್ಣ ಅವರನ್ನು ನೋಡಲು ತಾಯಿ ಭವಾನಿ ರೇವಣ್ಣ ಅವರು ಪರಪ್ಪನ ಅಗ್ರಹಾರ ಜೈಲಿಗೆ

ದೌಡಾಯಿಸಿದ್ದರು. ಪರಪ್ಪನ ಅಗ್ರಾಹರ ಜೈಲಿನ ಆವರಣದಲ್ಲಿನ ಕ್ಯಾಮೆರಾಗಳನ್ನು ಕಂಡು ಭವಾನಿ ಮುಜಗರಕ್ಕೆ ಈಡಾದಂತೆ ಆಗಿ, ಕೈ ಗಳಿಂದ ತಮ್ಮ ಮುಖವನ್ನು ಮುಚ್ಚಿಕೊಂಡು ಸಾಗಿದರು. ಪುತ್ರ ಪ್ರಜ್ವಲ್ ರೇವಣ್ಣ ಜರ್ಮನಿಯ ಪ್ರವಾಸವನ್ನು ಮುಗಿಸಿ ನೇರವಾಗಿ ಪೊಲೀಸರ ಅತಿಥಿ ಆಗಿದ್ದಾರೆ. ಹೀಗಾಗಿ ತಾಯಿಯನ್ನು ಭೇಟಿ ಆಗಲು ಆಗಿರಲಿಲ್ಲ. ಸೋಮವಾರ ಭವಾನಿ ರೇವಣ್ಣ ಅವರು ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ಮಗನನ್ನು ವಿಚಾರಿಸಿದರು. ಮಾಜಿ ಸಚಿವ ರೇವಣ್ಣ ಅವರ ಸಂಪೂರ್ಣ ಕುಟುಂಬಕ್ಕೆ ಈಗ ಸಂಕಷ್ಟ ಎದುರಾಗಿದೆ. ಪುತ್ರರಾದ ಪ್ರಜ್ವಲ್ ರೇವಣ್ಣ ಹಾಗೂ ಸೂರಜ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಸಿಐಡಿ ಕಸ್ಟಡಿ ಹಾಗೂ ಜೈಲು ಸೇರಿದ್ದಾರೆ. ಮಾಜಿ ಸಚಿವ ರೇವಣ್ಣ ಸಹ ಜೈಲಿನ ವಾಸವನ್ನು ಅನುಭವಿಸಿ ಬಂದಿದ್ದಾರೆ. ಪತ್ನಿ ಭವಾನಿ ರೇವಣ್ಣ ಜಾಮೀನಿನ ಮೇಲೆ ಹೊರಗಿದ್ದಾರೆ. ಈ ಎಲ್ಲ ಘಟನೆಗಳಿಂದ ಮನ ನೊಂದಿರುವ ಭವಾನಿ ರೇವಣ್ಣ ಜೈಲಿಗೆ ಬರುವವ ವೇಳೆ ಮಾಧ್ಯಮದವನ್ನು ಕಂಡು ತಕ್ಷಣ ಮುಖ ಮುಚ್ಚಿಕೊಳ್ಳುವ ಪ್ರಯತ್ನವನ್ನು ಮಾಡಿದರು.

ಯುವತಿ ಎದೆ ಮುಟ್ಟಿ ವಿಕೃತಿ ಮೆರೆದ ಕಾಮುಕ

ಬೆಂಗಳೂರು: ಜ್ಯೂಸ್ ಕುಡಿದುಕೊಂಡು ವಾಪಸ್ ಬರುತ್ತಿದ್ದ ಯುವತಿಯ ಎದೆ ಮುಟ್ಟಿ ವಿಕೃತಿ ಮೆರೆದಿರುವ ಘಟನೆ ಬೆಂಗಳೂರಿನ ಪೀಣ್ಯಾದ ಎಚ್ ಎಂಟಿ ಲೇಔಟ್‌ನಲ್ಲಿ ನಡೆದಿದೆ. 8ನೇ ಮೈಲಿಯ ಪ್ರತಿಷ್ಠಿತ ಕಾಲೇಜಿನಲ್ಲಿ ಬಿಬಿಎ ವಿದ್ಯಾರ್ಥಿಯಾಗಿರುವ ಯುವತಿ, ಪೀಣ್ಯಾದ ಎಚ್‌ಎಂಟಿ ಲೇಔಟ್‌ನಲ್ಲಿ ಭಾನುವಾರ ರಾತ್ರಿ 9.45ರ ಸುಮಾರಿಗೆ ಜ್ಯೂಸ್ ಕುಡಿದು ವಾಪಸ್ ಪಿಜಿಗೆ ತೆರಳುವಾಗ ದುರುಳ ನೋರ್ವ ಆಕೆಯ ಎದೆ ಭಾಗಕ್ಕೆ ಮುಟ್ಟಿದ್ದಾನೆ. ಬಳಿಕ ಯುವತಿ ಕಿರುಚಾಡಿದ್ದರಿಂದ ಕಾಮುಕ ಬೈಕ್‌ನಲ್ಲಿ ಪರಾರಿಯಾಗಿದ್ದಾನೆ. ಇನ್ನು ಯುವತಿಯ ಎದೆಯನ್ನು ಟಚ್ ಮಾಡಿ ವಿಕೃತಿ ಮೆರೆದು ಪರಾರಿಯಾಗಿರುವ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಈ ಬಗ್ಗೆ ಯುವತಿ ಪೊಲೀಸರಿಗೆ ದೂರು ನೀಡಿದ್ದಾರೆ.

ಅತ್ಯಾಚಾರ ಪ್ರಕರಣ ಆಯುಕ್ತರಿಗೆ ದೂರು

ಬೆಂಗಳೂರು: ಸಿದ್ದಾಪುರ ಪೊಲೀಸ್ ಠಾಣೆಯ ಕಾನ್‌ಸ್ಟೇಬಲ್ ವಿರುದ್ಧ ಪ್ರಕರಣ ದಾಖಲಾಗಿ 20 ದಿನ ಕಳೆದರೂ ಕ್ರಮ ಕೈಗೊಳ್ಳದ ಹಿನ್ನಲೆಯಲ್ಲಿ ಕರ್ನಾಟಕ ದಲಿತ ಸಂಘರ್ಷ ವೇದಿಕೆಯು ಬೆಂಗಳೂರು ಪೊಲೀಸ್ ಆಯುಕ್ತ ದಯಾನಂದ್ ಅವರಿಗೆ ದೂರು ನೀಡಿದ್ದಾರೆ.

ಸೋಮವಾರ ಬೆಂಗಳೂರು ನಗರ ಪೊಲೀಸ್ ಆಯುಕ್ತರಾದ ದಯಾನಂದ್ ಅವರನ್ನು ಕರ್ನಾಟಕ ದಲಿತ ಸಂಘರ್ಷ ವೇದಿಕೆ ರಾಜಾಧ್ಯಕ್ಷ ಡಾ.ಸಿ.ಎಸ್.ರಘು, ಜೈಭೀಮ್ ಸೇನೆಯ ರಾಜ್ಯಾಧ್ಯಕ್ಷ ಎನ್.ಆನಂತ್, ಬಹುಜನ ಭಾಗ್ಯ ವಿಧಾತ ವೇದಿಕೆ ಅಧ್ಯಕ್ಷ ಚೇತನ್ ಕುಮಾರ್ ಅವರು ಭೇಟಿ ಮಾಡಿ ಪೊಲೀಸ್ ಕಾನ್‌ಸ್ಟೇಬಲ್ ಲಕ್ಷ್ಮಿನಾರಾಯಣ್ ಅವರು ದಲಿತ ಮಹಿಳೆ ಮೇಲೆ ಅತ್ಯಾಚಾರ ದೌರ್ಜನ್ಯ ವೆಸಗಿದ್ದಾರೆ ಇದರ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಜೂ.11 ರಂದು ಎಫ್‌ಐಆರ್ ದಾಖಲಾಗಿ 20 ದಿನಗಳು ಕಳೆದರೂ ಸಹ ಕಾನ್‌ಸ್ಟೇಬಲ್ ವಿರುದ್ಧ ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯದ ಆರೋಪಿಯ ವಿರುದ್ಧ ಕ್ರಮ ಜರುಗಿಸದೇ ತಾರತಮ್ಯ ಧೋರಣೆಯಿಂದಾಗಿ ನಿಯಮಾನುಸಾರ ಕಾನೂನು ಕ್ರಮ ವಹಿಸದೇ ನಿರ್ಲಕ್ಷ್ಯ ವಹಿಸಿರುತ್ತಾರೆ. ಪ್ರಕರಣದ ಆರೋಪಿ ಪೊಲೀಸ್ ಲಕ್ಷ್ಮೀನಾರಾಯಣ ಅವರು ಸಿದ್ದಾಪುರ ಪೊಲೀಸ್ ಠಾಣೆಯ ಸಿಬ್ಬಂದಿಯಾಗಿದ್ದು ಪ್ರಕರಣದಲ್ಲಿ ಮೇಲಾಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದಾಗಿ ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದಾರೆ. ಅಲ್ಲದೆ ಮುಂದಿನ 4 ದಿನಗಳಲ್ಲಿ ಕ್ರಮ ಕೈಗೊಳ್ಳದಿದ್ದಲ್ಲಿ ದಲಿತ ಸಂಘಟನೆಗಳು ಪ್ರತಿಭಟನೆ ನಡೆಸಲು ಮುಂದಾಗಿದೆ.

ಕರೋನಾ ಸಮಯದಲ್ಲಿ ವೈದ್ಯರ ಸೇವೆ ಮರೆಯಲು ಸಾಧ್ಯವಿಲ್ಲ | ಡೆಂಘೀ ಜ್ವರ ನಿಯಂತ್ರಣಕ್ಕೆ ಸಾರ್ವಜನಿಕರೂ ಕೈಜೋಡಿಸಬೇಕು | ಆಹಾರ ಪದ್ಧತಿ, ದುಶ್ಚಟದಿಂದ ದೂರವಿದ್ದರೆ, ಆರೋಗ್ಯ ವೃದ್ಧಿ

ವೈದ್ಯರು ಸಮಾಜ ಮುಖಿಯಾಗಿರಬೇಕು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವೈದ್ಯರು ಸಮಾಜ ಮುಖಿಯಾಗಿ, ವೃತ್ತಿ ಧರ್ಮವನ್ನು ಪಾಲಿಸುವುದು ಅತ್ಯಂತ ಅವಶ್ಯಕವಾಗಿದೆ. ರೋಗಿಯ ಪ್ರಾಣ ಉಳಿಸಿದರೆ ವೈದ್ಯರೇ ದೇವರು, ಸ್ವಲ್ಪ ನಿರ್ಲಕ್ಷ್ಯ ತೋರಿದರೂ ಅನಾಹುತವಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ರಾಷ್ಟ್ರೀಯ ವೈದ್ಯರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವೈದ್ಯ ವೃತ್ತಿ ಅತ್ಯಂತ ಪವಿತ್ರವಾದ ವೃತ್ತಿ. ವೈದ್ಯೋ ನಾರಾಯಣೋ ಹರಿಃ ಎಂದೇ ಭಾವಿಸಲಾಗಿದ್ದು, ಕರೋನಾ ಸಂದರ್ಭದಲ್ಲಿ ತಮ್ಮ ಜೀವದ ಹಂಗನ್ನು ತೊರೆದು ದುಡಿದ ವೈದ್ಯರ ಸೇವೆಯನ್ನು ಮರೆಯಲು ಸಾಧ್ಯವಿಲ್ಲ ಎಂದರು.

ವೈದ್ಯರು ವೃತ್ತಿ ಧರ್ಮವನ್ನು ಪಾಲಿಸುವುದು ಅತ್ಯಂತ ಅವಶ್ಯಕವಾಗಿದ್ದು, ರೋಗಿಯ ಪ್ರಾಣ ಉಳಿಸಿದರೆ ವೈದ್ಯರೇ ದೇವರು, ಸ್ವಲ್ಪ ನಿರ್ಲಕ್ಷ್ಯ ತೋರಿದರೂ ಅನಾಹುತವಾಗುತ್ತದೆ. ಇದು ದೇವರ ಕೆಲಸ ಎಂದು ಮಾಡಿದರೆ ಸಮಾಜದಲ್ಲಿ ರೋಗಗಳನ್ನು ತಡೆಗಟ್ಟಿ, ರೋಗಿಗಳ ಸಂಖ್ಯೆಯನ್ನು ಕಡಿಮೆಮಾಡಬಹುದು. ರೋಗಗಳನ್ನು ತಡೆಗಟ್ಟುವುದನ್ನು ಆರೋಗ್ಯ ಇಲಾಖೆ ಗಮನದಲ್ಲಿರಿಸಿಕೊಂಡು ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಸರಕಾರಿ ಆಸ್ಪತ್ರೆಗಳಿಗೆ ಬಡವರೇ ಹೆಚ್ಚು ಬರುವುದರಿಂದ ವೈದ್ಯರು ಹಸನ್ಮುಖಿಗಳಾಗಿ ರೋಗಿಗಳಿಗೆ ಆತ್ಮಸ್ಥೈರ್ಯ ತುಂಬುವ ಕೆಲಸವನ್ನು ಪ್ರತಿ ವೈದ್ಯರೂ ಮಾಡಬೇಕು. ಸಿಡುಬು, ಪ್ಲೇಗು, ಪೋಲಿಯೋ ಮುಂತಾದ ಕಾಯಿಲೆಗಳು ನಿರ್ಮೂಲನೆಯಾಗಿದ್ದು, ವಿಜ್ಞಾನ ತಂತ್ರಜ್ಞಾನ ಬೆಳೆದಂತೆಲ್ಲಾ ಕಾಯಿಲೆಗಳ ನಿರ್ಮೂಲನೆ ಹೆಚ್ಚು ಸಾಧ್ಯವಾಗುತ್ತಿದೆ ಎಂದರು.

ಈ ವೇಳೆ ಜೀವಮಾನ ಸಾಧನೆ ಜೀವನ ಸಾಧನೆ ಹಾಗೂ ಇತರೆ ಪ್ರಶಸ್ತಿಗಳಿಗೆ ಭಾಜನರಾದ ವೈದ್ಯರನ್ನು ಮುಖ್ಯಮಂತ್ರಿಗಳು ಸನ್ಮಾನಿಸಿದರು. ಈ ವೇಳೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಸೇರಿ ಅನೇಕರಿದ್ದರು.



ರಾಷ್ಟ್ರೀಯ ವೈದ್ಯರ ದಿನಾಚರಣೆ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ, ಶಾಸಕ ಡಾ. ಎಂ.ಟಿ.ಶ್ರೀನಿವಾಸ್, ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತಾ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಡೆಂಘೀ ಹೆಚ್ಚುತ್ತಿದ್ದು, ಇದರ ಬಗ್ಗೆ ಎಚ್ಚರವಹಿಸಬೇಕಿದೆ. ಈ ಬಗ್ಗೆ ಪರಿಶೀಲನಾ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರೂ ಸಹ ಸರಕಾರದೊಂದಿಗೆ ಕೈಜೋಡಿಸಿದಾಗ ಮಾತ್ರ ಇದರ ನಿವಾರಣೆ ಸಾಧ್ಯ. ನಮ್ಮ ಆಹಾರ ಪದ್ಧತಿ ಹಾಗೂ ಜೀವನಶೈಲಿ ಬದಲಾಯಿಸಿಕೊಂಡರೆ ಅನೇಕ ರೋಗಗಳನ್ನು ತಡೆಗಟ್ಟಬಹುದಾಗಿದೆ. ಸಾಮಾಜಿಕ ಆರ್ಥಿಕ ಬೆಳವಣಿಗೆಗೆ ಶಿಕ್ಷಣ ಮತ್ತು ಆರೋಗ್ಯ ಬಹಳ ಮುಖ್ಯ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ದೈವಕಾರ್ಯದಷ್ಟೇ ಶ್ರೇಷ್ಠ ವೈದ್ಯರ ಕಾರ್ಯ

ಕಾರ್ಯಕ್ರಮದಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ವೈದ್ಯರನ್ನು ದೈವತ್ವಕ್ಕೆ ಹೋಲಿಸಿದ್ದು, ಇದೊಂದು ಸೇವಾ ಮನೋಭಾವದ ಕಾರ್ಯ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ವೈದ್ಯರಿಗೆ ಅಗತ್ಯ ಸೌಕರ್ಯಗಳನ್ನು ಒದಗಿಸಿಕೊಡಲು ಸರಕಾರ ಬದ್ಧವಾಗಿದೆ. ವೈದ್ಯರನ್ನು ವೈದ್ಯರನ್ನ ಚೆನ್ನಾಗಿ ನೋಡಿಕೊಂಡರೆ, ಜನರ ಆರೋಗ್ಯವನ್ನು ವೈದ್ಯರು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಆರೋಗ್ಯ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆ ತರಲಾಗಿದ್ದು, ಆರಂಭದಲ್ಲಿ ಸರಕಾರಿ ಆಸ್ಪತ್ರೆಗಳಿಗೆ ಔಷಧಿಯೇ ಸರಬರಾಜು ಆಗುತ್ತಿರಲಿಲ್ಲ. ಆದರೀಗ ಶೇ.80ರಷ್ಟು ಔಷಧಿ ಸರಕಾರಿ ಆಸ್ಪತ್ರೆಗಳಿಗೆ ಪೂರೈಕೆಯಾಗುತ್ತಿದೆ. ಮುಂಬರುವ ಎರಡು ತಿಂಗಳೊಳಗೆ ಸಂಪೂರ್ಣವಾಗಿ ಔಷಧಿ ಸರಬರಾಜನ್ನು ಸರಿಪಡಿಸುವುದಾಗಿ ಭರವಸೆ ನೀಡಿದರು.

ದ.ಕೊರಿಯಾ ಕಂಪನಿಗೆ ಸರಕಾರದ ನೆರವು : ಸಚಿವ ಎಂ.ಬಿ ಪಾಟೀಲ್ ಭರವಸೆ

ವಾಹನ ಬಿಡಿಭಾಗ ತಯಾರಿಕೆ; ಬಂಡವಾಳ ಹೂಡಿಕೆಗೆ ಒಲವು

ಜಪಾನ್ ನಂತರ ದಕ್ಷಿಣ ಕೊರಿಯಾ ಪ್ರವಾಸದಲ್ಲಿರುವ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ನಿಯೋಗ ಕೊರಿಯಾ ಕಂಪನಿ ಜೊತೆ ಮಾತುಕತೆ ನಡೆಸಿದರು.

ಬೆಂಗಳೂರು: ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನಲ್ಲಿ ವಾಹನಗಳ ಪ್ಲಾಸ್ಟಿಕ್ ಬಿಡಿಭಾಗ ತಯಾರಿಸುವ ಘಟಕ ಸ್ಥಾಪಿಸಲಿರುವ ನಿಪ್ಕೊ ಕೊರಿಯಾ ಕಂಪನಿಗೆ ಸೂಕ್ತಭೂಮಿ ಸ್ವಾಧೀನ ಮತ್ತು ಇತರ ಅನುಮೋದನೆಗಳಿಗೆ ಸರಕಾರ ತ್ವರಿತವಾಗಿ ಸ್ಪಂದಿಸಲಿದ್ದು, ಕಾರ್ಖಾನೆಗೆ ಸಂಸ್ಕರಿಸಿದ ನೀರನ್ನು ಪೂರೈಸಲಾಗುವುದು ಎಂದು ಸಚಿವ ಎಂ.ಬಿ. ಪಾಟೀಲ ಭರವಸೆ ನೀಡಿದ್ದಾರೆ.

ದಕ್ಷಿಣ ಕೊರಿಯಾಕ್ಕೆ ತೆರಳಿರುವ ನಿಯೋಗವು ಅಲ್ಲಿನ ಬಹುರಾಷ್ಟ್ರೀಯ ಕಂಪನಿಗಳ ಜೊತೆ ಸಮಾಲೋಚನೆ ನಡೆಸಿ ಬಂಡವಾಳ ಹೂಡಿಕೆ ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ರಾಜ್ಯದಲ್ಲಿ ಫೈಬರ್ ಆಪ್ಟಿಕ್ ಅಳವಡಿಕೆ ಯೋಜನೆ ಮತ್ತು ವಿದ್ಯುತ್‌ಚಾಲಿತ ವಾಹನಗಳ ಬಳಕೆ ಹೆಚ್ಚಿಸುವ ಕ್ಷೇತ್ರಗಳಲ್ಲಿ ವ್ಯವಹಾರ ನಡೆಸಲು ಹೊಯ್ಸಂಗ್ ಅಡ್ವಾನ್ಸ್ಡ ಮಟೀರಿಯಲ್ಸ್ ಇಂಗಿತ ವ್ಯಕ್ತಪಡಿಸಿದೆ. ಕಂಪನಿಯ ಉಪಾಧ್ಯಕ್ಷ ಹಾಂಗ್ ಸಂಗ್ ಅಹ್ನ್ ಅವರು ರಾಜ್ಯದ ನಿಯೋಗದೊಂದಿಗಿನ ಮಾತುಕತೆಯಲ್ಲಿ ಭಾಗಿಯಾಗಿ ಟೈರ್ ಕೋರ್ಡ್ಸ್ ತಯಾರಿಕೆಗೆ ಭಾರತವನ್ನು ಪ್ರಮುಖ ನೆಲೆಯನ್ನಾಗಿ ಅಭಿವೃದ್ಧಿಪಡಿಸಲು ಪರಿಸರ ಸ್ನೇಹಿ ಸರಕುಗಳು ಹಾಗೂ ಸುಧಾರಿತ ಜವಳಿ ಉತ್ಪನ್ನಗಳನ್ನು ತಯಾರಿಸುವ ವ್ಯವಹಾರ ವಿಸ್ತರಿಸುವ ಅವಕಾಶಗಳನ್ನು ಕಂಪನಿ ಪರಿಶೀಲಿಸುತ್ತಿದೆ. ರಾಜ್ಯದಲ್ಲಿನ ನವೀಕರಿಸಬಹುದಾದ ಇಂಧನ ವಲಯದಲ್ಲಿನ ಭವಿಷ್ಯದ ವಿಸ್ತರಣೆ ಬಗ್ಗೆ ಸೌರಕೋಶಗಳ ಸೆಮಿಕಂಡಕ್ಟರ್ ತಯಾರಿಸುವ ಒಸಿಐ ಹೋಲ್ಡಿಂಗ್ಸ್ ಕಂಪನಿ ಜೊತೆ ಮಾತುಕತೆ ನಡೆಸಲಾಗಿದೆ. ಮಷೀನ್ ಟೂಲ್ಸ್ ತಯಾರಿಕಾ ಕಂಪನಿ ಡಿಎನ್ ಸೊಲುಷನ್ಸ್, ಬೆಂಗಳೂರು ಬಳಿ 25 ಎಕರೆ ಪ್ರದೇಶದಲ್ಲಿ ತನ್ನ ತಯಾರಿಕಾ ಘಟಕ ಆರಂಭಿಸಲಿದೆ ಎಂದು ತಿಳಿಸಿದ್ದಾರೆ.

ಅರುಣ್ ಕಟಾರೆ ಬಂಧಿತ ಆರೋಪಿ | ಬೀದಿ ಬೀದಿಯಲ್ಲಿ ಗನ್ ತೋರಿಸಿಕೊಂಡು ರೀಲ್ಸ್ ಶೋಕಿ

ರೀಲ್ಸ್ ಶೋಕಿ ಮಾಡುತ್ತಿದ್ದ ವ್ಯಕ್ತಿ ಜೈಲುಪಾಲು

ಬೆಂಗಳೂರು: ಮೈಮೇಲೆ ಕೆಜಿಗಟ್ಟಲೇ ಚಿನ್ನ, ಕೈಯಲ್ಲಿ ಎಕೆ 47, ಹಿಂದೆ-ಮುಂದೆ ಬಾಡಿಗಾರ್ಡ್ಸ್ ಇಟ್ಟುಕೊಂಡು ಸುಂದರಿಯರ ನಡುವೆ ರೀಲ್ಸ್ ಶೋಕಿ ಮಾಡುತ್ತಿದ್ದವ ಇದೀಗ ಜೈಲು ಸೇರಿದ್ದಾನೆ.

ಅಪರಾಧ ಸುದ್ದಿಗಳು

ಅರುಣ್ ಕಟಾರೆ ಬಂಧಿತ ಆರೋಪಿ. ಈತ ಎಕೆ 47 ರೈಫಲ್ ಹಿಡಿದ ಗನ್ ಮ್ಯಾನ್‌ಗಳನ್ನು ಬಾಡಿಗಾರ್ಡ್ಸ್‌ಗಳನ್ನಿಟ್ಟುಕೊಂಡು, ಪಾಶ್ ಕಾರುಗಳನ್ನು ಚಲಾಯಿಸಿಕೊಂಡು, ಮೈಮೇಲೆ ಕಿಲೋಗಟ್ಟಲೆ ಚಿನ್ನ ಧರಿಸಿಕೊಂಡು ಶೋಕಿ ಮಾಡುತ್ತಿದ್ದ. ಅಲ್ಲದೇ ಬೀದಿಬೀದಿಯಲ್ಲಿ ಗನ್ ತೋರಿಸಿಕೊಂಡು ರೀಲ್ಸ್‌ಗಾಗಿ ಶೋಕಿ ಮಾಡಿದವನನ್ನು ಇದೀಗ ಕೊತ್ತನೂರು ಪೊಲೀಸರು ಬಂಧಿಸಿ, ಪರಪ್ಪನ ಅಗ್ರಹಾರಕ್ಕೆ ಮುದ್ದೆ ಮುರಿಯಲು ಕಳಿಸಿದ್ದಾರೆ.

ಈತನ ಶೋನಿಂದ ಬೆದರಿದ ಸಾರ್ವಜನಿಕರು ಆತಂಕದಿಂದ ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸಾರ್ವಜನಿಕರ ಮಾಹಿತಿ ಮೇರೆಗೆ ಕೊತ್ತನೂರು ಪೊಲೀಸರು, ಅರುಣ್ ಕಟಾರೆಯನ್ನು ಬಂಧಿಸಿ ಜೈಲಿಗಟ್ಟಿದ್ದಾರೆ. ಬೀದಿಬೀದಿಯಲ್ಲಿ ಈತನ ಗನ್ ಝಳಪಿಸುವಿಕೆ ಕಂಡು ಜನ ಆತಂಕಕ್ಕೊಳಗಾಗಿದ್ದರು. ಆದರೆ ಈತ ಹಿಡಿದುಕೊಂಡು ಓಡಾಡಿರುವುದು ನಕಲಿ ಗನ್ ಎನ್ನುವುದು ವಿಚಾರಣೆ ವೇಳೆ ಗೊತ್ತಾಗಿದೆ.



ಆದರೂ ನಕಲಿ ಗನ್ ಹಿಡಿದು ಏರಿಯಾದಲ್ಲಿ ಆತಂಕ ಸೃಷ್ಟಿಸಿದಕ್ಕೆ ಪ್ರಕರಣ ದಾಖಲು ಕೊತ್ತನೂರು ಪೊಲೀಸರು, ಆರ್ಮ್ಸ್ ಆಕ್ಟ್, ಐಪಿಸಿ ಸೆಕ್ಷನ್ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಈ ಹಿಂದೆಯೂ ಜೈಲಿಗೆ ಹೋಗಿ ಬಂದಿದ್ದ ರೀಲ್ಸ್ ರಾಜ

ಚಿತ್ರದುರ್ಗದಲ್ಲಿ ಎಸ್‌ಎಸ್‌ಎಲ್‌ಸಿ ಹುಡುಗನನ್ನ ಬೆದರಿಸಿ ಚಿನ್ನಾಭರಣ ಸುಲಿಗೆ ಮಾಡಿದ್ದ ಆರೋಪದಲ್ಲಿ ಈ ರೀಲ್ಸ್ ರಾಜ ಅರುಣ್ ಕಟಾರೆ ಜೈಲಿಗೆ ಹೋಗಿ ಬಂದಿದ್ದ. ಬಾಲಕನಿಗೆ ಬಲವಂತವಾಗಿ ಸಿಗರೇಟ್, ಡ್ರಿಂಕ್ಸ್ ಮಾಡಿಸಿ ಫೋಟೊ ತೆಗೆದು ಬೆದರಿಸಿ ಬರೋಬ್ಬರಿ 35 ಲಕ್ಷ ಮೌಲ್ಯದ 656 ಗ್ರಾಂ ಚಿನ್ನಭರಣ ಸುಲಿಗೆ ಮಾಡಿದ್ದ. ಈ ಸಂಬಂಧ 2023ರಲ್ಲಿ ಚಿತ್ರದುರ್ಗ ನಗರ ಠಾಣೆ ಪೊಲೀಸರು ಅರುಣ್ ನನ್ನ ಬಂಧಿಸಿದ್ದರು. ಇದೇ ಪ್ರಕರಣದಲ್ಲಿ ಅರುಣ್‌ನ ಇಬ್ಬರು ಸಹೋದರರು ಕೂಡ ಆರೋಪಿಗಳಾಗಿದ್ದರು. ಬಳಿಕ ಜಾಮೀನಿನ ಮೇಲೆ ಹೊರಬಂದಿದ್ದ ಅರುಣ್ ಮೇಲೆ ಮತ್ತೊಂದು ವಂಚನೆ ಪ್ರಕರಣ ದಾಖಲಾಗಿತ್ತು. ಪರಿಚಯಸ್ಥರೊಬ್ಬರ ಬಳಿ 3.5 ಲಕ್ಷ ಸಾಲ ಪಡೆದು ವಂಚಿಸಿದ್ದರ ಬಗ್ಗೆ 2023ರಲ್ಲೇ ಚಿತ್ರದುರ್ಗ ನಗರ ಠಾಣೆಯಲ್ಲೇ ಪ್ರಕರಣ ದಾಖಲಾಗಿತ್ತು.

ಅನುಮಾನಾಸ್ಪದವಾಗಿ ಪೊಲೀಸ್ ಕಾನ್‌ಸ್ಟೇಬಲ್ ಶವ ಪತ್ತೆ

ಬೆಂಗಳೂರು: ಒಂದು ವಾರದ ಹಿಂದೆ ನಾಪತ್ತೆಯಾಗಿದ್ದ ಮಡಿವಾಳ ಪೊಲೀಸ್ ಠಾಣೆಯ ಕಾನ್‌ಸ್ಟೇಬಲ್ ಶಿವರಾಜ್ ಎಂಬುವರು, ಇದೀಗ ಜ್ಞಾನಭಾರತಿ ಪೊಲೀಸ್ ಠಾಣಾ

ವ್ಯಾಪ್ತಿಯ ವಿವಿಯ ಆವರಣದಲ್ಲಿರುವ ಬಾವಿಯಲ್ಲಿ ಅನುಮಾನಾಸ್ಪಾದವಾಗಿ ಶವವಾಗಿ ಪತ್ತೆಯಾಗಿದ್ದಾರೆ.

2020ನೇ ಸಾಲಿನಲ್ಲಿ ಪೊಲೀಸ್ ಇಲಾಖೆಗೆ ನೇಮಕಗೊಂಡಿದ್ದ ಶಿವರಾಜ್ ಅವರ ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಸ್ಥಳೀಯರು ಮಾಹಿತಿ ನೀಡಿದ ಮೇರೆಗೆ ಸ್ಥಳಕ್ಕೆ ಪೊಲೀಸರು ದೌಡಾಯಿಸಿ ಪರಿಶೀಲಿಸುತ್ತಿದ್ದಾರೆ. ಜೂನ್ 25ರಂದು ಕೆಲಸಕ್ಕೆ ಹೋಗಿ ಬರುತ್ತೇನೆ ಎಂದು ದ್ವಿಚಕ್ರ ವಾಹನದಲ್ಲಿ ಶಿವರಾಜ್ ಹೊರಟಿದ್ದರು. ಆದರೆ ಸಂಜೆಯಾದರೂ ಮನೆಗೆ ಬಂದಿರಲಿಲ್ಲ. ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿರುವುದು ಗೊತ್ತಾಗಿ ಆತನ ಮನೆಯವರು ನೀಡಿದ ದೂರಿನ ಮೇರೆಗೆ ಸುಬ್ರಮಣ್ಯಪುರ ಪೊಲೀಸ್ ಠಾಣೆಯಲ್ಲಿ ಮಿಸ್ಸಿಂಗ್ ಪ್ರಕರಣ ದಾಖಲಾಗಿತ್ತು.

ಕೌಟುಂಬಿಕ ಕಲಹ?

ಎರಡು ವರ್ಷಗಳ ಹಿಂದೆ ಶಿವರಾಜ್‌ಗೆ ವಾಣಿ ಎಂಬಾಕೆ ಜತೆ ವಿವಾಹವಾಗಿತ್ತು. ಆರಂಭದಲ್ಲಿ ದಂಪತಿಯು ಅನ್ಯೋನ್ಯವಾಗಿದ್ದರು. ಕೆಲ ತಿಂಗಳ ಹಿಂದೆ ಇಬ್ಬರ ನಡುವೆ ಬಿರುಕು ಮೂಡಿತ್ತು. ಎರಡು ತಿಂಗಳ ಹಿಂದೆ ದಾವಣಗೆರೆ ಪೊಲೀಸ್ ಠಾಣೆಯಲ್ಲಿ ಶಿವರಾಜ್ ವಿರುದ್ಧ ಪತ್ನಿಯು ವರದಕ್ಷಣೆ ಕಿರುಕುಳ ಆರೋಪ ಮೇರೆಗೆ ಪ್ರಕರಣ ದಾಖಲಿಸಿದ್ದರು. ಇದೇ ವಿಚಾರಕ್ಕಾಗಿ ಬಳಿಕ ಶಿವರಾಜ್ ನೊಂದಿದ್ದರು. ಜೂನ್ 25ರಂದು ಕೆಲಸಕ್ಕೆ ಹೋಗುವುದಾಗಿ ಹೇಳಿ ನಾಪತ್ತೆಯಾಗಿದ್ದ ಶಿವರಾಜ್ ಇದೀಗ ಜ್ಞಾನಭಾರತಿ ಠಾಣಾ ವ್ಯಾಪ್ತಿಯ ಬಾವಿಯಲ್ಲಿ ಶವ ಪತ್ತೆಯಾಗಿದ್ದಾರೆ. ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂಬುದರ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧಿತರಾಗಿದ್ದ ವಕೀಲ

ದೇವರಾಜೇಗೌಡಗೆ ಜಾಮೀನು ಮಂಜೂರು

ಬೆಂಗಳೂರು: ಅತ್ಯಾಚಾರ ಪ್ರಕರಣದಲ್ಲಿ ವಕೀಲ ದೇವರಾಜೇಗೌಡಗೆ ಹೈಕೋರ್ಟ್ ಏಕಸದಸ್ಯ ಪೀಠ ಜಾಮೀನು ಮಂಜೂರು ಮಾಡಿದೆ. 2023ರ ಡಿ.29ರಂದು ರಂದು ಅತ್ಯಾಚಾರ ಮಾಡಿದ್ದಾರೆ ಎಂದು 2024ರ ಏ.1

ರಂದು ಸಂತ್ರಸ್ತೆ ದೂರು ನೀಡಿದ್ದರು. ಇದಕ್ಕೂ ಮೊದಲು ಹನಿಟ್ರ್ಯಾಪ್ ಎಂದು ದೇವರಾಜೇಗೌಡ ಮಾ.28 ರಂದು ದೂರು ನೀಡಿದ್ದರು. ಇದೀಗ ಪ್ರಕರಣದಲ್ಲಿ ವಕೀಲ ದೇವರಾಜೇಗೌಡಗೆ ಜಾಮೀನು ನೀಡಲಾಗಿದೆ.

ಮಾರ್ಚ್ 29 ರಂದು ದೇವರಾಜೇಗೌಡ ವಿರುದ್ಧ ಸಂತ್ರಸ್ತೆ ಪತಿ ದೂರು ನೀಡಿದ್ದರು. ಅದರಲ್ಲಿ ಅತ್ಯಾಚಾರದ ಬಗ್ಗೆ ಯಾವುದೇ ಚಕಾರವಿಲ್ಲ. ಈ ಪ್ರಕರಣದಲ್ಲಿ ಪೊಲೀಸರು ಬಿ ರಿಪೋರ್ಟ್ ಸಲ್ಲಿಸಿದ್ದಾರೆ ಎಂದು ದೇವರಾಜೇಗೌಡ ಪರ ಹಿರಿಯ ವಕೀಲ ಅರುಣ್ ಶ್ಯಾಮ್ ವಾದ ಮಂಡಿಸಿದ್ದಾರೆ. ವಾದ-ಪ್ರತಿವಾದ ಆಲಿಸಿದ ಬಳಿಕ ವಕೀಲ ದೇವರಾಜೇಗೌಡಗೆ ನ್ಯಾ. ಎಂ.ಜಿ.ಉಮಾ ಅವರಿದ್ದ ಹೈಕೋರ್ಟ್ ಪೀಠ ಜಾಮೀನು ನೀಡಿ ಆದೇಶಿಸಿದೆ.

ವಕೀಲ ದೇವರಾಜೇಗೌಡ ಬಂಧನವಾಗಿದ್ದು ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಾದರೂ ಹಾಸನ ಪೆನ್ ಡ್ರೈವ್ ಪ್ರಕರಣಕ್ಕೇ ತಳುಕು ಹಾಕಿಕೊಂಡಿದೆ. ಈಗಾಗಲೇ ಮಾಜಿ ಸಂಸದ ಶಿವರಾಮೇಗೌಡ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಗಂಭೀರ ಆರೋಪ ಮಾಡಿದ್ದಲ್ಲದೆ, ಅವರ ಜತೆಗಿನ ಮಾತುಕತೆ ಎನ್ನಲಾದ ಆಡಿಯೊವನ್ನು ಬಿಡುಗಡೆ ಮಾಡಿದ್ದರು. ಇದಲ್ಲದೆ, ಸಾಕಷ್ಟು ವಿಡಿಯೊಗಳು, ಸಾಕ್ಷಿಗಳು ಸಹ ತಮ್ಮ ಬಳಿ ಇದೆ ಎಂದು ಹೇಳಿಕೊಂಡಿದ್ದರು. ಸಾಕ್ಷ್ಯಗಳನ್ನು ಮುಂದಿನ ದಿನಗಳಲ್ಲಿ ಸಿಬಿಐ ಮುಂದೆ ಇಡುತ್ತೇನೆ ಎಂದು ಸಹ ಸುದ್ದಿಗೋಷ್ಠಿ ನಡೆಸಿ ನೇರವಾಗಿ ರಾಜ್ಯ ಸರಕಾರದ ವಿರುದ್ಧ ಸವಾಲು ಹಾಕಿದ್ದರು. ಆದರೆ, ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿದ್ದ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಪ್ರಕಣದಲ್ಲಿ ಅವರನ್ನು ಬಂಧಿಸಲಾಗಿತ್ತು.

ಸೂರಜ್ ರೇವಣ್ಣ ಕಸ್ಟಡಿ ಅವಧಿ ವಿಸ್ತರಣೆ

ಬೆಂಗಳೂರು: ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧನವಾಗಿರುವ ಸೂರಜ್ ರೇವಣ್ಣನನ್ನು ಮತ್ತೆ ಎರಡು ದಿನ ಸಿಐಡಿ ಕಸ್ಟಡಿಗೆ ನೀಡಲು 42ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶ ಕೆ.ಎನ್. ಶಿವಕುಮಾರ್ ಆದೇಶ ನೀಡಿದ್ದಾರೆ.

ಯುವಕನೊಬ್ಬನ ಮೇಲೆ ಅಸಹಜ ಲೈಂಗಿಕ ದೌರ್ಜನ್ಯ ಆರೋಪದಡಿ ದಾಖಲಾದ ಪ್ರಕರಣದಲ್ಲಿ ಜೂನ್ 22ರಂದು ಸೂರಜ್ ರೇವಣ್ಣನನ್ನು ಹೊಳೆನರಸೀಪುರ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದರು. ನಂತರ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ 8 ದಿನ ಸಿಐಡಿ ಕಸ್ಟಡಿಗೆ ಒಪ್ಪಿಸಲಾಗಿತ್ತು. ಸೋಮವಾರ ಕಸ್ಟಡಿ ಅಂತ್ಯಗೊಂಡ ಹಿನ್ನೆಲೆಯಲ್ಲಿ ಕೋರ್ಟ್‌ಗೆ ಸೂರಜ್‌ನನ್ನು ಹಾಜರುಪಡಿ ಸಲಾಗಿತ್ತು. ಹೀಗಾಗಿ ಪ್ರಕರಣದ ವಿಚಾ ರಣೆ ನಡೆಸಿರುವ ಕೋರ್ಟ್ ಸೂರಜ್‌ಗೆ ಜುಲೈ 3ರವರೆಗೆ ಕಸ್ಟಡಿ ವಿಸ್ತರಿಸಿದೆ. ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ ವೇಳೆ ಮತ್ತೆ ಆರು ದಿನ ಕಸ್ಟಡಿಗೆ ನೀಡುವಂತೆ ಎಸ್ಪಿಪಿ ಅಶೋಕ್ ನಾಯಕ್ ಮನವಿ ಮಾಡಿದರು. ವಾಯ್ಸ್ ಸ್ಯಾಂಪಲ್ಸ್ ಸಂಗ್ರಹ ಮಾಡಬೇಕಿದೆ, ಪ್ರತಿನಿತ್ಯ ಏನೆಲ್ಲಾ ತನಿಖೆ ನಡೆದಿದೆ, ನಡೆಯುತ್ತಿದೆ ಎಂದು ಮಾಹಿತಿ ನೀಡಿದರು. ಈ ವೇಳೆ ಎಂಟು ದಿನ ಕಸ್ಟಡಿಯಲ್ಲಿದ್ದಾಗ ಏನಾದೂ ತೊಂದರೆ ನೀಡಿದ್ದಾರೆಯೇ ಎಂದು ಸೂರಜ್‌ಗೆ ಜಡ್ಜ್ ಪ್ರಶ್ನೆ ಕೇಳಿದರು. ಯಾವುದೇ ತೊಂದರೆ ನೀಡಿಲ್ಲ ಎಂದು ಸೂರಜ್ ಉತ್ತರಿಸಿದ್ದಾರೆ. ಬಳಿಕ 2 ದಿನ ಕಸ್ಟಡಿ ವಿಸ್ತರಿಸಲು ನ್ಯಾಯಾಧೀಶರು ಸೂಚಿಸಿದ್ದಾರೆ.

ಮಾನ್ಯಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ: 349/2024

ಅರ್ಜಿದಾರರು: 1. ಶ್ರೀಮತಿ. ಪವಿತ್ರ.ಎಸ್.ಎಂ. ಕೋಂ ಅರಕೇಶ ಬಿನ್ ಲೇಟ್ ಮಂಚೇಗೌಡ ವಯಸ್ಸು 34 ವರ್ಷ ವಾಸ: ಕೂತಗಳೆ ಗ್ರಾಮ, ಹೂಕುಂದ ದಾಖ್ಲೆ ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು ತಹಶೀಲ್ದಾರ್, ಕನಕಪುರ. 2) ಗ್ರಾಮ ಲೆಕ್ಕಾಧಿಕಾರಿಗಳು ಹೂಕುಂದ ವೃತ್ತ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರುಗಳಿಗೆ ತಂದೆಯೂ ಹಾಗೂ 3ನೇ ಅರ್ಜಿದಾರರರಿಗೆ ಮಾವನೂ ಆದ ಲೇಟ್ ಮಂಚೇಗೌಡ ಬಿನ್ ಲೇಟ್ ಮೊಳ್ಳೇಗೌಡ ರವರು ದಿನಾಂಕ: 03-09-2010 ರಂದು ಕನಕಪುರ ತಾಲ್ಲೂಕು, ಉಯ್ಯಬಳ್ಳಿ ಹೋಬಳಿ, ಶೆಟ್ಟಿಕೆರೆದೊಡ್ಡಿ ಗ್ರಾಮದಲ್ಲಿ ಮರಣ ಹೊಂದಿದ್ದು ಇವರ ಮರಣ ಪ್ರಮಾಣ ಪತ್ರವನ್ನು ನೀಡುಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿ ಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 02/08/2024 ರ ಬೆಳಿಗ್ಗೆ ಸರಿಯಾಗಿ 11 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

01/07/2024 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಚೇತನ್.ಎಸ್.ಎಂ., ವಕೀಲರು.
ಸ್ಥಳ:ಕನಕಪುರ
ದಿನಾಂಕ: 01.07.2024

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ: 350/2024

ಅರ್ಜಿದಾರರು: 1. ಶ್ರೀಮತಿ. ಯಶೋಧಮ್ಮ ಕೋಂ ಲೇಟ್ ಮಾರೇಗೌಡ ಬಿನ್ ಲೇಟ್ ಹುಚ್ಚೀರೇಗೌಡ @ ಕುಳ್ಳೇಗೌಡ ವಯಸ್ಸು 76 ವರ್ಷ ವಾಸ: ತಟ್ಟಕುಪ್ಪೆ ಗ್ರಾಮ, ಬಿಜ್ಜಹಳ್ಳಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು ತಹಶೀಲ್ದಾರ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇನ್ನೊಬ್ಬರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 6ನೇ ಅರ್ಜಿದಾರರ ತಂದೆಯವರಾದ ಶ್ರೀ. ಹುಚ್ಚೀರೇಗೌಡ @ ಕುಳ್ಳೇಗೌಡ ಬಿನ್ ಲೇಟ್ ಹೊನ್ನೇಗೌಡ ರವರು ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಹೇರಿಂದ್ಯಾಪ್ಪನಹಳ್ಳಿ ಅಂಚೆ, ತಿಪ್ಪೂರು ಗ್ರಾಮದಲ್ಲಿ ದಿನಾಂಕ:13/03/1996 ರಂದು ಮರಣ ಹೊಂದಿದ್ದು ಇವರ ಮರಣ ಪ್ರಮಾಣ ಪತ್ರವನ್ನು ನೀಡುಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿ ಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 02/08/2024 ರ ಬೆಳಿಗ್ಗೆ ಸರಿಯಾಗಿ 11 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

01/07/2024 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಚೇತನ್.ಎಸ್.ಎಂ., ವಕೀಲರು.
ಸ್ಥಳ:ಕನಕಪುರ
ದಿನಾಂಕ: 01.07.2024

PUBLIC NOTICE

Public are informed that, my client Shreyas B. S/o. Babu Reddy, had lost the Original document of 1). Release Deed dated 23/4/2008 executed by Smt. Gowramma and others in favour of Sri. G. Babu Reddy vide doc. No. 112/2008-09. If any person/s firm company, institution or organization has any claim are holding the afore mentioned document, they may contact the undersigned in writing within 7 days from the date of this notice failing which it will be presumed that there are no claims.

SCHEDULE: All that piece and parcel of immovable Western portion of property bearing No.6 & 7, Neww Municipal No. 6/1, situated at 13th cross, Sampangiramnagar (earlier known as Sampigehalli), BBMP, PID No. 77-20-6, Ward No. 77/Sampangiramnagara, Bangalore measuring East to West: 31 feet and North to South: 24' 6" totally measuring 762.6 Sq. ft. and bounded on the: East by: Portion of the same property belongs to Jagadish, West by: Private Property, North by : 13th Cross Road, South by: Private Property.

KSR Associates, ADVOCATES & LEGAL CONSULTANTS OFFICE# 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003, Email: raviksadvocate@gmail.com, Mobile: 99450 00789

NOTICE OF LOSS OF SHARE CERTIFICATES
(FOR CLAIM FROM IEPF AUTHORITY)
UNITED BREWERIES LIMITED

Pursuant to Rule 8 of the Investor Education and Protection Fund (Accounting, Audit,Transfer and Refund) Rules, 2016, NOTICE is hereby given that the following share certificates issued by the Company, M/s.United Breweries Limited ,registered in our name, has been lost / misplaced:

Name of the Share Holder	Folio No.	No. Of Shares	Distinctive Nos.	Certificate Nos.	Face value
RAM KISHAN SHARMA	UB064962	260	7987501- 7987760	115223	1

Any person who has a claim in respect of the said securities should lodge such claim with evidence to the Company, at its Registered Office, M/s. United Breweries Limited , 'UB Tower', UB City, 24, Vittal Mallya Road, Bangalore-560 001.
Email: ublinvestor@ubmail.com or to its Registrar & Transfer Agent : Integrated Registry Management Services Private Limited , 30, Ramana Residency, 4th Cross Sampige Road, Malleswaram, Bangalore - 560 003, Email: bglsta@integratedindia.in within 15 days publication of this notice, else the Company will proceed to settle the claim in favour of the registered holder(s). The Company shall not entertain any claim thereafter. Any person dealing with the above said shares will be doing so at their own risk.
Place: Bangalore
Date: 02/07/2024
Name of Claimant - MUKESH KUMAR SHARMA
AG-435, Second Floor, Shalimar Bagh, Delhi – 110088

ಗೌರವ ಇಲ್ಲದ ಕಡೆ ಯಾಕಿರಬೇಕು..?

ಬೆಂಗಳೂರು: ಗೌರವ ಇಲ್ಲದ ಕಡೆ ನಾವು ಯಾಕೆ ಇರಬೇಕು. ರಾಜೀನಾಮೆ ಕೊಡುವುದಕ್ಕೂ ಹಿಂದೆ ಮುಂದೆ ನೋಡುವುದಿಲ್ಲ ಎಂದು ಶಾಸಕ ವಿನಯ್ ಕುಲಕರ್ಣಿ ಎಚ್ಚರಿಕೆ ನೀಡಿದ್ದಾರೆ. ಕೆಪಿಸಿಸಿ ಕಚೇರಿಯಲ್ಲಿ ಮಾತನಾಡಿದ ಅವರು, ಮಂಡಳಿಯಲ್ಲಿನ ಟೆಂಡರ್ ಕಾಮಗಾರಿ, ಅನುದಾನ ಸಂಬಂಧ ಸಚಿವ ಬೈರತಿ ಸುರೇಶ್ ಜತೆಗೆ ಉಂಟಾಗಿರುವ ಜಟಾಪಟಿ ಬಗ್ಗೆ ಪ್ರತಿಕ್ರಿಯೆ ನೀಡಿದರು.

ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ಅವರ ದೆಹಲಿ ನಿವಾಸದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೌಹಾರ್ದಯುತವಾಗಿ ಭೇಟಿಯಾದರು.

ಬೆಂಗಳೂರಿನಲ್ಲಿ ಡೆಂಘೀಗೆ ಮತ್ತೊಂದು ಬಲಿ

ಬೆಂಗಳೂರು: ನಗರದಲ್ಲಿ ಡೆಂಘೀಗೆ ಮತ್ತೋರ್ವ ವ್ಯಕ್ತಿಯು ಮೃತಪಟ್ಟಿದ್ದು, ಈ ಮೂಲಕ ನಗರದಲ್ಲಿ ಸಾವಿಗೀಡಾದವರ ಸಂಖ್ಯೆಯು ಮೂರಕ್ಕೇರಿದೆ ಎಂದು ಬಿಬಿಎಂಪಿ ಮೂಲಗಳು ತಿಳಿಸಿದೆ.

ಶುಕ್ರವಾರ ಇಬ್ಬರು ಡೆಂಘೀ ಸೋಂಕಿನಿಂದ ಮೃತಪಟ್ಟಿದ್ದು, ಇದೀಗ ಮತ್ತೋರ್ವ 27 ವರ್ಷದ ಯುವಕ ಮೃತಪಟ್ಟಿದ್ದಾನೆ. ಶುಕ್ರವಾರ ಮೃತಪಟ್ಟ 80 ವರ್ಷದ ವೃದ್ಧೆಯ ಸಾವಿಗೆ ಡೆಂಘೀ ಕಾರಣವಲ್ಲ ಬದಲಾಗಿ ಕ್ಯಾನರ್ ಕಾರಣ ಎಂದು ಪಾಲಿಕೆ ಮಾಹಿತಿ ನೀಡಿದ್ದು, ಹೊಸದಾಗಿ 213 ಡೆಂಘೀ ಪ್ರಕರಣಗಳ ಪತ್ತೆಯಾಗಿದ್ದು, ಜೂನ್ ತಿಂಗಳಲ್ಲಿ 1742 ಜನರಿಲ್ಲಿ ಡೆಂಘೀ ಸೊಂಕು ದೃಢವಾಗಿದೆ.

ಆರೋಗ್ಯ ಇಲಾಖೆಯ ಅಂಕಿಅಂಶಗಳ ಪ್ರಕಾರ, ರಾಜ್ಯಾದ್ಯಂತ ಒಟ್ಟು 93,012 ಶಂಕಿತ ಡೆಂಘೀ ಪ್ರಕರಣಗಳು ದಾಖಲಾಗಿವೆ. ಜನವರಿಯಿಂದ ಇಲ್ಲಿಯವರೆಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ 5,878 ಜನರಿಗೆ ಡೆಂಘೀ ರೋಗ ಬಂದಿದೆ. ಬೆಂಗಳೂರು ನಗರ 310 ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ 467 ಜನರಿಗೆ ಡೆಂಘೀ ಸೋಂಕು ಪತ್ತೆಯಾಗಿದೆ. ಆರೋಗ್ಯ ಇಲಾಖೆಯು ಒಳಾಂಗಣ ಮತ್ತು ಹೊರಾಂಗಣದಲ್ಲಿ ಸೊಳ್ಳೆಗಳ ಸಂತಾನೋತ್ಪತ್ತಿ ಸ್ಥಳಗಳಲ್ಲಿ ನಿಯಮಿತ ತಪಾಸಣೆ ನಡೆಸಿದ್ದು, ಆರೋಗ್ಯ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತರು ನಗರ ಮತ್ತು ಗ್ರಾಮೀಣ ವ್ಯವಸ್ಥೆಗಳಲ್ಲಿ ತಪಾಸಣೆ ನಡೆಸಿದ್ದಾರೆ.

ಹಲ್ಲೆ ಮಾಡುತ್ತಿದ್ದವನ ಕೊಲೆ: ನಾಲ್ವರು ಅಂದರ್

ಬೆಂಗಳೂರು: ಚಾಕುವಿನಿಂದ ಇರಿದು ಯುವಕನನ್ನು ಹತ್ಯೆಗೈದಿದ್ದ ನಾಲ್ವರು ಆರೋಪಿಗಳನ್ನು ಪುಲಿಕೇಶಿನಗರ ಠಾಣಾ ಪೊಲೀಸರು ಬಂಧಿಸಿದ್ದಾರೆ.

ಅರುಣ್ ಕುಮಾರ್, ಜಾನ್ ಜಾಕೋಬ್, ಆ್ಯಂಡ್ರ್ಯೂಸ್, ಪ್ರಶಾಂತ್ ಹಾಗೂ ಸಂಜೀವ್ ಬಂಧಿತ ಆರೋಪಿಗಳು. ಜೂನ್ 29ರಂದು ಪುಲಿಕೇಶಿನಗರ ವ್ಯಾಪ್ತಿಯ ಜೀವನಹಳ್ಳಿ ಸಮೀಪದ ರೈಲ್ವೆ ಟ್ರ್ಯಾಕ್ ಬಳಿ ವಿಘ್ನೇಶ್ ಅಲಿಯಾಸ್ ಅಪ್ಪು ಎಂಬಾತನ ಕೊಲೆ ನಡೆದಿತ್ತು. ಜೀವನಹಳ್ಳಿ ಸ್ಲಂ ನಿವಾಸಿಯಾಗಿದ್ದ ವಿಘ್ನೇಶ್, ಏರಿಯಾದಲ್ಲಿ ಪ್ರಾಬಲ್ಯ ಸಾಧಿಸಲು ಅಕ್ಕಪಕ್ಕದ ಹುಡುಗರ ಮೇಲೆ ವಿನಾಕಾರಣ ಹಲ್ಲೆ ಮಾಡುತ್ತಿದ್ದ. ಅದೇ ರೀತಿ ಈ ಹಿಂದೆ ಒಮ್ಮೆ ಅರುಣ್ ಕುಮಾರ್ ಹಾಗೂ ಜಾನ್ ಜಾಕೋಬ್ ಮೇಲೆ ಹಲ್ಲೆ ಮಾಡಿದ್ದ ವಿಘ್ನೇಶ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಇತ್ತೀಚೆಗೆ ಜೀವನಹಳ್ಳಿಯಿಂದ ಶಿಫ್ಟ್ ಆಗಿದ್ದ ವಿಘ್ನೇಶ್, ಮಹಾಲಕ್ಷ್ಮಿ ಲೇಔಟ್ ಸಮೀಪದ ಕುರುಬರಹಳ್ಳಿಯಲ್ಲಿ ನೆಲೆಸಿದ್ದ. ಶನಿವಾರ ಮಧ್ಯಾಹ್ನ ಜೀವನಹಳ್ಳಿಗೆ ಬಂದಿದ್ದ ವಿಘ್ನೇಶ್ ಪುನಃ ಅರುಣ್ ಕುಮಾರ್ ಹಾಗೂ ಜಾನ್ ಜಾಕೋಬ್ ಜತೆ ಗಲಾಟೆ ಮಾಡಿಕೊಂಡಿದ್ದ. ಅದೇ ದಿನ ಸಂಜೆ ಜೀವನಹಳ್ಳಿಯ ರೈಲ್ವೆ ಟ್ರ್ಯಾಕ್ ಬಳಿ ಆರೋಪಿಗಳೊಂದಿಗೆ ಮುಖಾಮುಖಿಯಾಗಿದ್ದ ವಿಘ್ನೇಶ್ ಮತ್ತೊಮ್ಮೆ ಗಲಾಟೆ ಮಾಡಿಕೊಂಡು ಹಲ್ಲೆಗೆ ಮುಂದಾಗಿದ್ದ. ಈ ವೇಳೆ ಆರೋಪಿಗಳು ಆತನ ಮೇಲೆ ಹಲ್ಲೆ ಮಾಡಿ, ಆತನ ಬಳಿಯಿದ್ದ ಚಾಕುವಿನಿಂದಲೇ ಇರಿದು, ಬಳಿಕ ತಲೆ ಮೇಲೆ ಕಲ್ಲು ಎತ್ತಿಹಾಕಿ ಹತ್ಯೆಗೈದಿದ್ದರು ಎಂದು ಪೂರ್ವ ವಿಭಾಗದ ಡಿಸಿಪಿ ಡಿ.ದೇವರಾಜ್ ಮಾಹಿತಿ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಗುತ್ತಿಗೆ ಆಧಾರದಲ್ಲಿ ನೇಮಕ; ಸುಳ್ಳು ವದಂತಿ

ಬೆಂಗಳೂರು: ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಹೆಸರಿನಲ್ಲಿ ವೈದ್ಯರು, ಶುಶ್ರೂಷಕರು, ಲ್ಯಾಬೋರೇಟರ್‌ಗಳು, ಟೆಕ್ನಿಶಿಯನ್, ರೆಸಿಡೆಂಟ್ ಸೇರಿದಂತೆ ಇತರೆ ಹುದ್ದೆಗಳ ಗುತ್ತಿಗೆ ನೇಮಕ ಕುರಿತಂತೆ ಸುಳ್ಳು ಪ್ರಕಟಣೆಯು ವಾಟ್ಸ್‌ಅಪ್‌ನಲ್ಲಿ ಹರಿದಾಡುತ್ತಿದ್ದು, ಈ ಬಗ್ಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಿಂದ ಯಾವುದೇ ಪ್ರಕಟಣೆ ಹೊರಡಿಸಿರುವುದಿಲ್ಲ. ಪ್ರಕಟಣೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಟ್ರಸ್ಟ್‌ನ ಅಧಿಕೃತ ವೆಬ್‌ಸೈಟ್ http://arogya.karnatka.gov.in/sat/ ನಿಂದ ಪಡೆಯಬಹುದು ಎಂದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಕಾರ್ಯಕಾರಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜು.15ರಿಂದ ಮುಂಗಾರು ಅಧಿವೇಶನ

ಬೆಂಗಳೂರು: ಕರ್ನಾಟಕ ವಿಧಾನಸಭೆಯ ಮುಂಗಾರು ಅಧಿವೇಶಕ್ಕೆ ದಿನಾಂಕ ನಿಗದಿಯಾಗಿದ್ದು, ಜುಲೈ 15ರಿಂದ ಜುಲೈ 26ರವರೆಗೆ ಹತ್ತುದಿನಗಳ ಕಾಲ ಅಧಿವೇಶನ ನಡೆಯಲಿದೆ. ಕಳೆದ ಸಚಿವ ಸಂಪುಟ ಸಭೆಯಲ್ಲಿ ಅಧಿವೇಶನ ನಿಗದಿಯ ವಿವೇಚನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿವೇಚನೆಗೆ ಬಿಡಲಾಗಿತ್ತು. ಅದರಂತೆ ಸಿದ್ದರಾಮಯ್ಯ ಅವರು ಅಧಿವೇಶನದ ದಿನಾಂಕ ಅಂತಿಮಗೊಳಿಸಿದ್ದು, ಈ ಕುರಿತು ರಾಜ್ಯಪಾಲರಿಗೆ ಶಿಫಾರಸು ಮಾಡಲಾಗಿದೆ. ಈ ಮುಂಗಾರು ಅಧಿವೇಶನದಲ್ಲಿ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ, ಇಂಧನ, ಹಾಲು ಬೆಲೆ ಏರಿಕೆ, ಸೇರಿದಂತೆ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ಹಗರಣ, ಮೈಸೂರು ಮುಡಾದಲ್ಲಿನ ಹಗರಣಗಳನ್ನು ಇಟ್ಟುಕೊಂಡು ಅಧಿವೇಶನದಲ್ಲಿ ಸರಕಾರವನ್ನ ಕಟ್ಟಿ ಹಾಕುವ ತಂತ್ರವನ್ನು ಬಿಜೆಪಿ-ಜೆಡಿಎಸ್ ನಡೆಸಿವೆ.

ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡಾ. ಫ.ಗು. ಹಳಕಟ್ಟಿಯವರ ಜನ್ಮದಿನದ ಅಂಗವಾಗಿ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯನ್ನು ಇಂದು ಸಂಜೆ 5.00 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆ ಸಿಎಂ ಸಿದ್ದರಾಮಯ್ಯ ಮಾಡಲಿದ್ದು, ಶಾಸಕ ಉದಯ ಗರುಡಾಚಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಶೋಭಾ ಕರಂದ್ಲಾಜೆ, ಡಿಸಿಎಂ ಡಿ.ಕೆ.ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್ ತಂಗಡಗಿ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ.

ಆರೋಗ್ಯ ಕೇಂದ್ರ ಡಂಪಿಂಗ್ ಯಾರ್ಡ್

ಬೆಂಗಳೂರು: ಜಯನಗರದ ಅಶೋಕ ಪಿಲ್ಲರ್ ಬಳಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಕಸದ ರಾಶಿಯನ್ನು ಸುರಿಯಲಾಗಿದ್ದು, ಈ ಕುರಿತು ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜಯನಗರ ಅಶೋಕ ಪಿಲ್ಲರ್ ಬಳಿಯ ಹಳೆಯ ಹೆರಿಗೆ ಆಸ್ಪತ್ರೆಯನ್ನು ತಾತ್ಕಾಲಿಕವಾಗಿ ಸ್ಥಳಾಂತರಿಸಲಾಗಿದ್ದು, ಆದರೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಅಲ್ಲೇ ಉಳಿಸಿಕೊಳ್ಳಲಾಗಿದೆ. ಪ್ರಸ್ತುತ ಈ ಆರೋಗ್ಯ ಕೇಂದ್ರವನ್ನು ತ್ಯಾಜ್ಯಗಳ ಡಂಪಿಂಗ್ ಯಾರ್ಡ್‌ನಂತೆ ಬಳಸಿಕೊಳ್ಳಲಾಗುತ್ತಿದ್ದು, ಕಟ್ಟಡದ ಆವರಣವು ಹಾಳಾಗಿದೆ. ಇನ್ನು ಮುಖ್ಯವಾಗಿ ಕೇಂದ್ರದ ಆವರಣದಲ್ಲೇ ಪಾಳಿಕೆಯ ವಾಹನಗಳ ನಿಲುಗಡೆಯಿದ್ದು, ಆವರಣದಲ್ಲೇ ಕಸದ ರಾಶಿಯನ್ನು ಸುರಿಯಲಾಗುತ್ತಿದೆ ಎಂದು ದೂರಿದ್ದಾರೆ.

ಬೇಡಿಕೆಗಳ ಈಡೇರಿಕೆ ಸರಕಾರಕ್ಕೆ ಹಕ್ಕೊತ್ತಾಯ

ಬೆಂಗಳೂರು: ಬಿಪಿಎಲ್, ಅಂತ್ಯೋದಯ ಕಾರ್ಡ್‌ಗೆ ಉಚಿತವಾಗಿ 3 ಲೀಟರ್ ಸೀಮೆಎಣ್ಣೆ ವಿತರಣೆ, ಕಮಿಷನ್ ಹೆಚ್ಚಳ, ಅನ್ನಭಾಗ್ಯ ಯೋಜನೆಯಲ್ಲಿ ಹಣ ಬದಲು ಅಕ್ಕಿ,ತೊಗರಿ ಬೇಳೆ, ಸಕ್ಕರೆ ವಿತರಣೆ ಸೇರಿ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಸರಕಾರಿ ಪಡಿತರ ವಿತರಕ ಸಂಘ, ಜಿಲ್ಲಾವಾರು ಸಭೆ ಆಯೋಜಿಸುತ್ತಿದೆ. ಶಿವಮೊಗ್ಗ, ಚಿಕ್ಕಮಗಳೂರಿನಲ್ಲಿ ನಡೆಸಿದ್ದ ಸಭೆಯಲ್ಲಿ ಹಲವು ಸಮಸ್ಯೆಗಳ ಬಗ್ಗೆ ನ್ಯಾಯಬೆಲೆ ಅಂಗಡಿ ಮಾಲೀಕರ ಜತೆ ಚರ್ಚೆ ನಡೆಸಲಾಗಿದೆ. ಬುಧವಾರ ಬೆಳಗ್ಗೆ 10.30ಕ್ಕೆ ತುಮಕೂರಿನ ಕನ್ನಡ ಭವನದಲ್ಲಿ ಸಭೆ ಆಯೋಜಿಸಿದ್ದೇವೆ. ಈ ಸಭೆಯಲ್ಲಿ ರಾಜ್ಯ, ಜಿಲ್ಲಾ ಸಂಘಟನೆ, ಸರಕಾರದ ಯೋಜನೆಗಳನ್ನು ಚರ್ಚಿಸಲಾಗುವುದು. ಹಂತ ಹಂತವಾಗಿ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಮನವಿಯನ್ನು ಸರಕಾರಕ್ಕೆ ಸಲ್ಲಿಸಲಾಗುವುದು ಎಂದು ಸಂಘದ ಅಧ್ಯಕ್ಷ ಟಿ. ಕೃಷ್ಣಪ್ಪ ಹೇಳಿದ್ದಾರೆ.

{ಶೋಭಾ ಕರಂದ್ಲಾಜೆ} ಕೇಂದ್ರ ಸಚಿವೆ

ಬೆಂಗಳೂರಿನ ಹೊರವಲಯದಲ್ಲಿ ಡಾಪ್ಲರ್ ವೆದರ್ ರಾಡಾರ್ ಕೇಂದ್ರವನ್ನು ಸ್ಥಾಪಿಸುವುದು ಅಗತ್ಯವಾಗಿದೆ. ಬೆಂಗಳೂರಿನಲ್ಲಿ ಹವಾಮಾನದ ಮುನ್ಸೂಚನೆಯಿಲ್ಲದೆ ಅವಘಡ ಸಂಭವಿಸುತ್ತಿದೆ. ಹೆಚ್ಚಿನ ಮಳೆ, ದಿಢೀರ್ ಪ್ರವಾಹದಿಂದ ತೊಂದರೆಯಾಗುತ್ತಿದೆ. ಹೀಗಾಗಿ ಪ್ರತಿಕೂಲತೆ ತಗ್ಗಿಸಲು ಸುಧಾರಿತ ಹವಾಮಾನ ಮುನ್ಸೂಚನೆ ವ್ಯವಸ್ಥೆ ಅಗತ್ಯವಾಗಿದೆ.

3 ಕಾನೂನುಗಳ ತಿದ್ದುಪಡಿಗೆ ಚಿಂತನೆ : ಎಚ್.ಕೆ. ಪಾಟೀಲ್ | ರಾಜ್ಯದ ಸಲಹೆಗಳನ್ನು ಕೇಂದ್ರ ಸ್ವೀಕರಿಸಿಲ್ಲ

ನೂತನ ಕಾನೂನುಗಳಿಗೆ ರಾಜ್ಯ ವಿರೋಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೇಂದ್ರ ಸರಕಾರ ಜಾರಿಗೊಳಿಸಿರುವ ಮೂರು ಕಾನೂನುಗಳು ಜಾರಿಯಾದ ಮೊದಲ ದಿನವೇ ಈ ಕಾನೂನುಗಳನ್ನು ವಿರೋಧಿಸಲು ರಾಜ್ಯ ಸರಕಾರ ಮುಂದಾಗಿದ್ದು, ಈ ಸಂಬಂಧ ಕೇಂದ್ರಕ್ಕೆ ಪತ್ರ ಬರೆಯಲು ತೀರ್ಮಾನಿಸಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಕೇಂದ್ರ ಸರಕಾರ ಜಾರಿಗೊಳಿಸಿರುವ ಮೂರು ಕಾನೂನುಗಳನ್ನು ರಾಜ್ಯದಲ್ಲಿ ತಿದ್ದುಪಡಿಗೆ ಒಳಪಡಿಸಲು ರಾಜ್ಯ ಸರಕಾರ ಚಿಂತನೆ ನಡೆಸಿದೆ. ಈ ನಿಟ್ಟಿನಲ್ಲಿ ಸರಕಾರ ಮಹತ್ವದ ನಿರ್ಧಾರವನ್ನು ಕೈಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮ ಬದಲಾವಣೆ ಮಾಡಲಾಗಿದೆ. ಮೂರು ಕಾನೂನು ಬದಲಾವಣೆ ಮಾಡಿ ಹೊಸ ಕಾನೂನು ಜಾರಿಗೆ ತರಲಾಗಿದೆ. ಯಾವ ಸರಕಾರ ಕಾನೂನು ಮಾಡುತ್ತದೆ, ಅದನ್ನು ಅವರ ಅವಧಿಯಲ್ಲಿ ಜಾರಿ ಮಾಡುವ ನೈತಿಕ ಹಕ್ಕಿದೆ. ಆದರೆ, ಸರಕಾರದ ಅವಧಿ ಮುಗಿದ ಮೇಲೆ ಜಾರಿ ಮಾಡುವುದು ಅನೈತಿಕ ಹಾಗೂ ರಾಜಕೀಯ ಅಸಂಬದ್ಧ ಕ್ರಮ ಎಂದು ಟೀಕಿಸಿದರು. ಈ ಮೂರು ತಾಯಿ ಕಾನೂನುಗಳು, ಸಂವಿಧಾನದ ತಿದ್ದುಪಡಿ ಮಹತ್ವ ಇದಕ್ಕೆ ಕೊಡಲಾಗುತ್ತದೆ. ಈ ಕಾನೂನು ಜಾರಿಯ ಸಂದರ್ಭದಲ್ಲಿ ಎಲ್ಲಾ ಎಚ್ಚರಿಕೆ ಕೈಗೊಳ್ಳಬೇಕು. ಹಿಂದಿನ ಸರಕಾರದ ಕ್ಯಾಬಿನೆಟ್‌ನಲ್ಲಿ ಆದ ನಿರ್ಧಾರ ಇದೀಗ ಜಾರಿಗೊಳಿಸಿದ್ದು ಸರಿಯಲ್ಲ. 2023ರಲ್ಲಿ ಅಮಿತ್ ಶಾ ಸಿಎಂ ಸಿದ್ದರಾಮಯ್ಯಗೆ ಪತ್ರ ಬರೆದು ಮೂರು ಕಾನೂನುಗಳು ಮಸೂದೆ ಹಂತದಲ್ಲಿರುವಾಗ ಪರಿಶೀಲನೆ, ಸಲಹೆ ಸೂಚನೆ ಕೇಳಿದ್ದರು. ತಜ್ಞರ ಸಮಿತಿ ರಚನೆ ಮಾಡಿ ವರದಿ ನೀಡಲು ಈ ಸಂದರ್ಭದಲ್ಲಿ ನನಗೆ ಸಿಎಂ ಸೂಚಿಸಿದ್ದರು. ಇದಕ್ಕೆ ಉತ್ತರವಾಗಿ ತಜ್ಞರ ಸಮಿತಿ ವರದಿ ಹಾಗೂ ನನ್ನ ಅಭಿಪ್ರಾಯ ತಿಳಿಸಿ ಸಿಎಂಗೆ ಪತ್ರ ಕಳಿಸಿದ್ದೆ. ಇದನ್ನು ಉಲ್ಲೇಖಿಸಿ ಅಮಿತ್ ಶಾಗೆ ಸಿದ್ದರಾಮಯ್ಯ ಪತ್ರ ಬರೆದು, ವರದಿಯನ್ನು ನೀಡಿದ್ದರು ಎಂದು ವಿವರಣೆ ನೀಡಿದರು. ಆದರೆ ಅದ್ಯಾವುದು ಜಾರಿಯಾಗಿಲ್ಲ ಎಂದು ಆಕ್ಷೇಪಿಸಿದರು.

ಈ ಮೂರು ಕಾನೂನುಗಳನ್ನು ರಾಜ್ಯ ಸರಕಾರ ವಿರೋಧ ಮಾಡುತ್ತದೆ. ರಾಜ್ಯದಲ್ಲಿ ಈ ಮೂರು ಕಾನೂನಿಗೆ ನಾವು ಅಗತ್ಯ ತಿದ್ದುಪಡಿ ಮಾಡಿ ಸರಕಾರ ಚಿಂತನೆ ನಡೆಸಿದೆ. ಇದನ್ನು ವಿರೋಧ ಮಾಡಿ, ತಿದ್ದುಪಡಿ ತರುತ್ತೇವೆ. ಕಾನೂನುಗಳನ್ನು ತಿದ್ದುಪಡಿ ಮಾಡಲು ರಾಜ್ಯ ಸರಕಾರಕ್ಕೆ ಅಧಿಕಾರ ಇದೆ. ಸಂವಿಧಾನ ಅನುಚ್ಛೇದ 7, 3 ನೇ ಪಟ್ಟಿಯ ಅಧಿಕಾರ ಬಳಸಿ ತಿದ್ದುಪಡಿ ಮಾಡಲು ಅವಕಾಶವಿದೆ ಎಂದು ಸ್ಪಷ್ಟಪಡಿಸಿದರು.



ಈ ಕಾನೂನಿನಲ್ಲಿ ಸರಕಾರದ ಕ್ರಮ ವಿರೋಧಿಸಿ ಉಪವಾಸ ಸತ್ಯಾಗ್ರಹ ಮಾಡುವುದು ಈ ಕಾನೂನಿನ ಅಪರಾಧ. ಆದರೆ ಆತ್ಮಹತ್ಯೆ ಮಾಡುವುದು ಅಪರಾಧವಲ್ಲ. ಇದು ದುರ್ದೈವದ ಸಂಗತಿಯಾಗಿದೆ. ಇದು ಸ್ವಾತಂತ್ರ್ಯ ಹೋರಾಟಕ್ಕೆ, ಹೋರಾಟಗಾರರನ್ನು ತಿರಸ್ಕಾರ ಮಾಡಲಾಗಿದೆ. ಈ ನಿಟ್ಟಿನಲ್ಲಿ ಉಪವಾಸ ಸತ್ಯಾಗ್ರಹ ಅಪಾರಾಧ ಎಂಬುವುದಕ್ಕೆ ತಿದ್ದುಪಡಿ ಮಾಡಬೇಕಿದೆ.

- ಎಚ್.ಕೆ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ನಾವು 23 ಸಲಹೆ ನೀಡಿದ್ದೆವು

ನಾವು 23 ಸಲಹೆಗಳನ್ನು ನೀಡಿದ್ದೆವು. ಆದರೆ ಕೇಂದ್ರ ಸರಕಾರ ನಮ್ಮ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿಲ್ಲ. ಮಂಡನೆ ಮಾಡಿದ ಮಸೂದೆಯನ್ನು ಯಥಾವತ್ತಾಗಿ ಕಾನೂನು ಮಾಡಿದ್ದಾರೆ. ಆದರೆ, ಹೊಸ ಕಾನೂನಿನಲ್ಲಿ ಅನಾನುಕೂಲಗಳೇ ಅಧಿಕ. ಗೊಂದಲ ಮೂಡಿಸುವ ತಿದ್ದುಪಡಿಗಳು ಇವಾಗಿವೆ. ಜನಾಭಿಪ್ರಾಯ ನಿರ್ಲಕ್ಷ್ಯ ಮಾಡಿ, ವಕೀಲರ ಅಭಿಪ್ರಾಯ ನಿರ್ಲಕ್ಷ್ಯ ಮಾಡಿ ಕಾನೂನು ಮಾಡಿದ್ದಾರೆ ಎಂದು ಸಚಿವ ಎಚ್.ಕೆ. ಪಾಟೀಲ್ ಆರೋಪಿಸಿದರು.

ತಿದ್ದುಪಡಿ ಯಾವುದಕ್ಕೆ ಆಗಬೇಕಿದೆ?

- ರಾಷ್ಟ್ರ ಪಿತ, ರಾಷ್ಟ್ರೀಯ ಲಾಂಛನ, ಬಾವುಟಕ್ಕೆ ಅಗೌರವ ತೋರಿಸಿದವದ ವಿರುದ್ಧ ಕ್ರಮಕ್ಕೆ ತಿದ್ದುಪಡಿ ಮಾಡಲು ಸೂಚಿಸಿದ್ದೆವು. ಆದರೆ ಅದಕ್ಕೆ ಕೇಂದ್ರ ಸರಕಾರ ಒಪ್ಪಿಲ್ಲ. ಈ ನಿಟ್ಟಿನಲ್ಲಿ ತಿದ್ದುಪಡಿಗೆ ಚಿಂತನೆ.
- ಸಂಘಟಿತ ಅಪರಾಧ ಎಂದು ಆರೋಪಿಸಿ, ವ್ಯಕ್ತಿಗಳ ಮೇಲೆ ಮೊಕದ್ದಮೆ ಹೂಡಲು ತನಿಖಾ ಸಂಸ್ಥೆಗಳಿಗೆ ಏಕಪಕ್ಷೀಯ ಮತ್ತು ವಿವೇಚನಾಧಿಕಾರಗಳು ಹೊಸ ಕಾನೂನಿನಲ್ಲಿ ಅವಕಾಶ ಇದೆ. ಇದಕ್ಕೆ ತಿದ್ದುಪಡಿ.
- ರಾಷ್ಟ್ರೀಯ ಭಾವೈಕ್ಯತೆಗೆ ಧಕ್ಕೆ ತರುವ ಅಪರಾಧಗಳಿಗೆ 3 ವರ್ಷ ಜೈಲು ಹಾಗೂ ದಂಡಕ್ಕೆ ಅವಕಾಶ ಇದೆ. ಇದಕ್ಕೆ ತಿದ್ದುಪಡಿ.
- ಸೈಬರ್ ಅಪರಾಧ, ಹ್ಯಾಕಿಂಗ್, ಆರ್ಥಿಕ ಅಪರಾಧ, ಅಣ್ವಸ್ತ್ರ ಗೌಪ್ಯತೆ ಹಾಗೂ ತಂತ್ರಜ್ಞಾನ ಮೂಲಕ ವಿಧ್ವಂಸಕ ಕೃತ್ಯ ಎಸಗುವ ಅಪರಾಧಗಳಿಗೆ ಪ್ರತ್ಯೇಕ ಅಧ್ಯಾಯದ ಮೂಲಕ ಕ್ರಮಕ್ಕೆ ತಿದ್ದುಪಡಿ.
- ಮೃತ ದೇಹದ ಮೇಲೆ ಅತ್ಯಾಚಾರ ಅಪರಾಧೀಕರಣಗೊಳಿಸುವ ನಿಟ್ಟಿನಲ್ಲಿ ತಿದ್ದುಪಡಿ.
- ಹೊಸ ಕಾಯಿದೆಯಲ್ಲಿ ಅಡಿಯಲ್ಲಿ ಪೊಲೀಸ್ ಕಸ್ಟಡಿ ಅವಧಿಯಲ್ಲಿ 90 ದಿನಗಳವರೆಗೆ ಅವಕಾಶ. ಇದಕ್ಕೆ ಕಡಿತಗಳಿಸಲು ತಿದ್ದುಪಡಿ.
- ಅಪರಾಧ ಪ್ರಕರಣದಲ್ಲಿ ಭಾಗಿಯಾದ ಆರೋಪಿಗಳ ಆಸ್ತಿ ಪಾಸ್ತಿ ಜಪ್ತಿ ಮಾಡಲು ಪೊಲೀಸರಿಗೆ ನೀಡಿರುವ ಅಧಿಕಾರಕ್ಕೆ ತಿದ್ದುಪಡಿ.

ಅಧ್ಯಕ್ಷರ ಶ್ರಮದಿಂದ ಮಹದೇವಪುರ ಬದಲಾವಣೆ

ಟಾಸ್ಕ್‌ಫೋರ್ಸ್ ಸದಸ್ಯರಿಗೆ ಧನ್ಯವಾದ: ಲಿಂಬಾವಳಿ

ಮಹದೇವಪುರ ಕ್ಷೇತ್ರದ ಕಾಡುಬೀಸನಹಳ್ಳಿಯಲ್ಲಿ ಟಾಸ್ಕ್‌ಫೋರ್ಸ್ ಸಾರ್ವಜನಿಕ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಶಾಸಕಿ ಮಂಜುಳಾ ಲಿಂಬಾವಳಿ, ಮಾಜಿ ರಾಜ್ಯಸಭಾ ಸದಸ್ಯ ಕೆ. ಸಿ. ರಾಮಮೂರ್ತಿ ಸೇರಿದಂತೆ ಗಣ್ಯರು ಇದ್ದರು.

ಮಹದೇವಪುರ: ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಟಾಸ್ಕ್ ಫೋರ್ಸ್ ಸದಸ್ಯರಾಗಿ, ಉಪಸಮಿತಿಗಳ ಅಧ್ಯಕ್ಷರಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ ಎಲ್ಲಾ ಸ್ವಯಂಸೇವಕರಿಗೆ, ಅಧ್ಯಕ್ಷರಿಗೆ ಹಾಗೂ ಅಧಿಕಾರಿಗಳಿಗೆ ವೈಯುಕ್ತಿಕವಾಗಿ ಮತ್ತು ಟಾಸ್ಕ್ ಫೋರ್ಸ್ ಪರವಾಗಿ ಮಾಜಿ ಸಚಿವ ಅರವಿಂದ ಲಿಂಬಾವಳಿ ಧನ್ಯವಾದ ಸಲ್ಲಿಸಿದರು.

ಮಹದೇವಪುರ ಕ್ಷೇತ್ರದ ಕಾಡುಬೀಸನಹಳ್ಳಿಯಲ್ಲಿ ಆಯೋಜಿಸಿದ್ದ ಟಾಸ್ಕ್‌ಫೋರ್ಸ್ ಸಾರ್ವಜನಿಕ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಟಾಸ್ಕ್ ಫೋರ್ಸ್ ಸದಸ್ಯ, ಅಧ್ಯಕ್ಷರ ಶ್ರಮದಿಂದಾಗಿ ಮಹದೇವಪುರ ಬದಲಾಗುತ್ತಿದೆ. ಯೋಚನೆ ನನ್ನದಾಗಿದ್ದರೂ ಅದನ್ನು ಕಾರ್ಯ ರೂಪಕ್ಕೆ ತರಲು ತಮ್ಮೆಲ್ಲರ ಸಹಕಾರ ದೊರೆತಿದ್ದು, ಆ ಕಾರಣಕ್ಕೆ ಯಶಸ್ವಿಯಾಗಲು ಸಾಧ್ಯವಾಗಿದೆ ಎಂದರು.ಎಲ್ಲಾ ಸ್ವಯಂಸೇವಕರು ಮಹದೇವಪುರ ವಿಧಾನಸಭಾ ಕ್ಷೇತ್ರಾದ್ಯಂತ ಯಾವುದಾದರೂ ಒಂದು ಟಾಸ್ಕ್ ಫೋರ್ಸ್‌ನಲ್ಲಿ ಕೆಲಸ ಮಾಡಬೇಕಾಗುತ್ತದೆ. ಒಂದು ವರ್ಷಗಳಿಂದ ಟಾಸ್ಕ್ ಫೋರ್ಸ್‌ನ ಅನೇಕ ಕೆಲಸಗಳು ಬಾಕಿ ಉಳಿದಿತ್ತು. ಆದ್ದರಿಂದ ನೂತನ ಸಮಿತಿಯನ್ನು ರಚಿಸಿರಲಿಲ್ಲ ಎಂದರು. ಅಧಿಕಾರಿಗಳು ನಮ್ಮ ಅಡಿಯಾಳಲ್ಲ, ನಾವು ಅಧಿಕಾರಿಗಳಿಗೆ ಸಹಾಯಕವಾಗಿ ಕೆಲಸ ಮಾಡಬೇಕು. ನಾವೆಲ್ಲರೂ ಸೇರಿ ಯಶಸ್ವಿಯಾಗಿ ಕೆಲಸ ಮಾಡೋಣ ಎಂದರು.

ಈ ಸಂದರ್ಭದಲ್ಲಿ ಶಾಸಕಿ ಮಂಜುಳಾ ಲಿಂಬಾವಳಿ, ಮಾಜಿ ರಾಜ್ಯಸಭಾ ಸದಸ್ಯ ಕೆ. ಸಿ. ರಾಮಮೂರ್ತಿ, ಕುಪೇಂದ್ರ ರೆಡ್ಡಿ, ಮಂಡಲ ಅಧ್ಯಕ್ಷರಾದ ಮನೋಹರರೆಡ್ಡಿ, ನಟರಾಜ್, ಮಾಜಿ ಅಧ್ಯಕ್ಷ ವೆಂಕಟಸ್ವಾಮಿ ರೆಡ್ಡಿ, ಮಾಜಿ ಪಾಲಿಕೆ ಸದಸ್ಯ ಶ್ರೀಧರ ರೆಡ್ಡಿ, ನಗರಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಮೋದಿ, ಮಂಡಲ ಪ್ರಧಾನ ಕಾರ್ಯದರ್ಶಿ ಎಲ್. ರಾಜೇಶ್,ಕೆ.ವಿ.ನಾಗರಾಜ್ ಇದ್ದರು.

58 ವರ್ಷಗಳ ಪೂರೈಸಿದ ಬಿಎಂಟಿಸಿ ನೌಕರರಿಗೆ ಪಿಂಚಣಿ

ಬಿಎಂಟಿಸಿ ಮತ್ತು ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಯ ಸಹಯೋಗದೊಂದಿಗೆ 58 ವರ್ಷ ಪೂರ್ಣಗೊಂಡ ನೌಕರರಿಗೆ ಪ್ರಯಾಸ್ ಯೋಜನೆ ಅಡಿಯಲ್ಲಿ ಪಿಂಚಣಿ ಸೌಲಭ್ಯ ಆದೇಶ ಪತ್ರವನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೋಮವಾರ ವಿತರಿಸಿದರು.

ಬೆಂಗಳೂರು: ಬಿಎಂಟಿಸಿ ಮತ್ತು ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಯ ಸಹಯೋಗದೊಂದಿಗೆ 58 ವರ್ಷ ಪೂರ್ಣಗೊಂಡ ನೌಕರರಿಗೆ ಪ್ರಯಾಸ್ ಯೋಜನೆ ಅಡಿಯಲ್ಲಿ ಪಿಂಚಣಿ ಸೌಲಭ್ಯ ಆದೇಶ ಪತ್ರವನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೋಮವಾರ ವಿತರಿಸಿದರು. ಪ್ರಯಾಸ್ ಯೋಜನೆಯಿಂದಾಗಿ ನೌಕರರು ಕೆಲಸ ಮಾಡುವ ಸಂಸ್ಥೆ ಹಾಗೂ ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಯವರಿಂದ ನೌಕರರು 58 ವರ್ಷ ತುಂಬಿದ ಮಾಹೆಯಲ್ಲಿಯೇ ದಾಖಲೆಗಳನ್ನು ಕ್ರೂಢೀಕರಿಸಿ ಮುಂಚಿತವಾಗಿ ಸಲ್ಲಿಸುವುದರಿಂದ, ಪಿಂಚಣಿ ಪಾವತಿ ಆದೇಶದ ವಿಲೇವಾರಿ ನೌಕರರ 58ನೇ ವರ್ಷದ ಕೊನೆಯ ದಿನ ವಿತರಿಸಲಾಗುತ್ತದೆ ಎಂದು ಸಚಿವರು ತಿಳಿಸಿದರು. ಈ ವೇಳೆ ಬಿಎಂಟಿಸಿಯ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್, ನಿರ್ದೇಶಕಿ ಶಿಲ್ಪ ಎಂ, ಕೆಎಸ್‌ಆರ್‌ಟಿಸಿಯ ನಿರ್ದೇಶಕಿ ಡಾ. ನಂದಿನಿದೇವಿ, ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತೆ ಟಿ. ಇಂದಿರಾ ಮತ್ತಿತರ ಅಧಿಕಾರಿಗಳು ಇದ್ದರು.

5 ದಿನ ಹೈ ಅಲರ್ಟ್ ಘೋಷಿಸಿದ ಹವಾಮಾನ ಇಲಾಖೆ | ಕೊಡಗಿನಲ್ಲಿ ಅತಿ ಹೆಚ್ಚು ಮಳೆ

ಕರಾವಳಿಯಲ್ಲಿ ಮತ್ತೆ ಚುರುಕಾದ ಮುಂಗಾರು

ಬೆಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಮುಂಗಾರು ಮತ್ತೆ ಚುರುಕಾಗಿದ್ದು, ಮೂರು ಜಿಲ್ಲೆಗಳಿಗೆ ಹವಾಮಾನ ಇಲಾಖೆಯು ಹೈ ಅಲರ್ಟ್ ಘೋಷಿಸಿದೆ.

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಿಗೆ ಮೂರು ದಿನ ಯೆಲ್ಲೋ ಅಲರ್ಟ್, ನಂತರದ ಎರಡು ದಿನ ಆರೆಂಜ್ ಅಲರ್ಟ್ ನೀಡಲಾಗಿದೆ. ಮಲೆನಾಡು ಜಿಲ್ಲೆಗಳಾದ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜೂನ್ 3 ರಿಂದ 5 ರವರೆಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಉಳಿದಂತೆ ಜೂನ್ 5 ರಂದು ಬಾಗಲಕೋಟೆ, ಬೆಳಗಾವಿ, ಬೀದರ್, ಕಲಬುರಗಿ , ರಾಯಚೂರು, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಕರಾವಳಿ ಕರ್ನಾಟಕದ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಗಳ ಒಂದು ಅಥವಾ ಎರಡು ಕಡೆಗಳಲ್ಲಿ ಭಾರೀ ಮಳೆ ಮತ್ತು ನಿರಂತರ ಗಾಳಿ ವೇಗವು ಪ್ರತಿ ಗಂಟೆಗೆ 40 ರಿಂದ 50 ಕಿ.ಮೀ ವೇಗ ಇರಲಿದೆ. ಉತ್ತರ ಒಳನಾಡಿನ ಜಿಲ್ಲೆಗಳ ಒಂದು ಅಥವಾ ಎರಡು ಸ್ಥಳಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗಲಿದ್ದು, ಅಲ್ಲಿ ಗಾಳಿ ವೇಗವು 30 ರಿಂದ 40 ಕಿ.ಮೀ ಪ್ರತಿ ಘಂಟೆಗೆ ತಲುಪುವ ಸಾಧ್ಯತೆಯಿದೆ ಎಂದು ಹೇಳಿದೆ.

ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು, ವಿಜಯನಗರ ಜಿಲ್ಲೆಗಳಲ್ಲಿ ಹಗುರದಿಂದ ಸಾಧಾರಣ ಮಳೆ ಮತ್ತು ನಿರಂತರ ಗಾಳಿ ಬೀಸುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಎಲ್ಲಿ ಅತಿ ಹೆಚ್ಚು ಮಳೆ ?

ಭಾನುವಾರದಿಂದ ರಾಜ್ಯದಲ್ಲಿಯೇ ಅತಿ ಹೆಚ್ಚು 13 ಸೆ.ಮೀ ಮಳೆ ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ದಾಖಲಾಗಿದೆ. ಉಳಿತದಂತೆ ಹೆಚ್ಚು ಮಳೆ ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ (11 ಸೆಮೀ) ಶಿವಮೊಗ್ಗ ಜಿಲ್ಲೆಯ ಆಗುಂಬೆ ಯಲ್ಲಿ (9 ಸೆಮೀ), ಉಡುಪಿ ಜಿಲ್ಲೆಯ ಸಿದ್ಧಾಪುರಲ್ಲಿ ಮತ್ತು ಚಿಕ್ಕಮಗಳೂರಿನ ಕಮ್ಮರಡಿಯಲ್ಲಿ (8 ಸೆಮೀ), ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ (7 ಸೆಮೀ) ಎಂದು ದಾಖಲಿಸಲಾಗಿದೆ.

ಬೆಂಗಳೂರಿನಲ್ಲಿ ಸಾಧಾರಣ ಮಳೆ

ಬೆಂಗಳೂರು ನಗರ ಮತ್ತು ಸುತ್ತಮುತ್ತ ಸ್ಥಳಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಸಾಮಾನ್ಯವಾಗಿ ಮೋಡ ಕವಿದ ಆಕಾಶ ಇರಲಿದೆ. ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನವು ಕ್ರಮವಾಗಿ 29 ಡಿಗ್ರಿ ಮತ್ತು 21 ಡಿಗ್ರಿ ದಾಖಲಾಗಲಿದೆ ಎಂದು ಮಾಹಿತಿ ನೀಡಿದೆ. ನೈರುತ್ಯ ಮಾನ್ಸೂನ್ ರಾಜ್ಯದ ಒಳನಾಡಿನಲ್ಲಿ ಸಕ್ರಿಯವಾಗಿದೆ, ಕರಾವಳಿಯಲ್ಲಿ ಸಾಧಾರಣವಾಗಿದೆ. ಇಂದು ಕರಾವಳಿಯ ಬಹುತೇಕ ಕಡೆಗಳಲ್ಲಿ ಮತ್ತು ಒಳನಾಡಿನ ಹಲವು ಕಡೆಗಳಲ್ಲಿ ಮಳೆಯಾಗಿದೆ ಎಂದು ಬೆಂಗಳೂರು ಹವಾಮಾನ ಕೇಂದ್ರ ಮಾಹಿತಿ ನೀಡಿದೆ.

ಬಿ.ಎಂ.ಶ್ರೀ. ಪ್ರತಿಷ್ಠಾನ, ಕನ್ನಡ ಸಂಘರ್ಷ ಸಮಿತಿ, ನಗರ ಜಿಲ್ಲಾ ಕ.ಸಾ.ಪ ಆಯೋಜಿಸಿದ್ದ ಕಮಲ ಹಂಪನಾ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ವೀರಭದ್ರಚನ್ನಮಲ್ಲ ಶ್ರೀಗಳು, ತಾ ಸಿ ತಿಮ್ಮಯ್ಯ, ರಾಮಣ್ಣ ಕೋಡಿ ಹೊಸಹಳ್ಳಿ, ಎಂ.ಪ್ರಕಾಶಮೂರ್ತಿ, ಎ.ಎಸ್ ನಾಗರಾಜಸ್ವಾಮಿ, ಸಿ ಕೆ ರಾಮೇಗೌಡ , ಡಾ ಶಾಂತರಾಜು ಕಮಲ ಹಂಪನಾ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ದೆಹಲಿಯಲ್ಲಿ ಸಚಿವೆ ಅನ್ನಪೂರ್ಣ ದೇವಿ ಭೇಟಿ ಮಾಡಿದ ಲಕ್ಷ್ಮೀ ಹೆಬ್ಬಾಳ್ಕರ್

ರಾಜ್ಯದ ಅಂಗನವಾಡಿ ಮೇಲ್ದರ್ಜೆ: ನೆರವಿಗೆ ಮನವಿ

ಬೆಂಗಳೂರು: ರಾಜ್ಯದ ಎಲ್ಲಾ ಅಂಗನವಾಡಿ ಕೇಂದ್ರಗಳನ್ನು ಉನ್ನತೀಕರಿಸಿ, ಮಕ್ಕಳಿಗೆ ಪೌಷ್ಟಿಕ ಆಹಾರ ಮತ್ತು ಗುಣಮಟ್ಟದ ಶಿಕ್ಷಣ ನೀಡಲು ಇಲಾಖೆ ಅಗತ್ಯ ಕ್ರಮ ಕೈಗೊಂಡಿದ್ದು, ಅಂಗನವಾಡಿ ಕೇಂದ್ರಗಳಲ್ಲೇ ಪೂರ್ವ ಪ್ರಾಥಮಿಕ ಶಿಕ್ಷಣ (ಎಲ್ ಕೆಜಿ, ಯುಕೆಜಿ) ನೀಡಲು ಅಗತ್ಯವಿರುವ ಅನುದಾನ ಬಿಡುಗಡೆ ಮಾಡುವಂತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕೇಂದ್ರ ಸಚಿವರಲ್ಲಿ ಮನವಿ ಮಾಡಿದ್ದಾರೆ.

ದೆಹಲಿಯಲ್ಲಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣ ದೇವಿ ಅವರನ್ನು ಭೇಟಿ ಮಾಡಿ ಇಲಾಖೆಯ ಬಲವರ್ಧನೆಗೆ ಸಂಬಂಧಿಸಿದ ವಿವಿಧ ಪ್ರಸ್ತಾವನೆ ಸಲ್ಲಿಸಿ ಮಾತನಾಡಿದ ಅವರು, ಕೇಂದ್ರ ಸಹಭಾಗಿತ್ವದ ವಿವಿಧ ಯೋಜನೆಗಳ ಜಾರಿಗೆ ರಾಜ್ಯಕ್ಕೆ ಬಿಡುಗಡೆ ಆಗಬೇಕಿರುವ ಅನುದಾನವನ್ನು ತುರ್ತಾಗಿ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರಲ್ಲದೆ, ಅಂಗನವಾಡಿ ಕೇಂದ್ರಗಳಿಗೆ ಅಗತ್ಯವಿರುವ ಅಕ್ಕಿ, ಗೋಧಿಯನ್ನು ಕೂಡಲೇ ಬಿಡುಗಡೆ ಮಾಡುವಂತೆ ಮನವಿ ಮಾಡಿದರು.

ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ, ಕುಡಿಯುವ ನೀರು, ವಿದ್ಯುತ್ ಸೌಕರ್ಯ ಸೇರಿದಂತೆ ಮೂಲಸೌಕರ್ಯಗಳ ಅಭಿವೃದ್ಧಿಗೆ ಕೇಂದ್ರದಿಂದ ಅನುದಾನದ ನೆರವು ಅಗತ್ಯವಿದ್ದು, ಹಾಗಾಗಿ, ಅನುದಾನವನ್ನು ಬಿಡುಗಡೆ ಮಾಡಿ ಪ್ರಮುಖವಾಗಿ ರಾಜ್ಯದಲ್ಲಿ ಹೊಸದಾಗಿ ಸೃಜನೆಗೊಂಡ ತಾಲ್ಲೂಕುಗಳಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಮತ್ತು ವಿವಿಧ ಸೌಲಭ್ಯಗಳನ್ನು ಕೂಡಲೇ ಮಂಜೂರು ಮಾಡುವಂತೆ ಮನವಿ ಮಾಡಿದರು.

ಹಲವು ಬೇಡಿಕೆಗಳ ಕುರಿತು ಪ್ರಸ್ತಾವನೆ ಸಲ್ಲಿಸಲಾಗಿದೆ. ಎಲ್ಲ ಮಾಹಿತಿಗಳನ್ನು ಅತ್ಯಂತ ತಾಳ್ಮೆಯಿಂದ ಪಡೆದುಕೊಂಡಿರುವ ಕೇಂದ್ರ ಸಚಿವರಿಂದ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ

-ಲಕ್ಷ್ಮೀ ಹೆಬ್ಬಾಳ್ಕರ್, ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

ರಂಗೇರಿದ ಚನ್ನಪಟ್ಟಣ ಉಪಚುನಾವಣೆ ಕಣ

ದೆಹಲಿಯಲ್ಲಿ ಕೇಂದ್ರ ಸಚಿವ ಎಚ್‌ಡಿಕೆ, ಯೋಗೇಶ್ವರ್ ಚರ್ಚೆ

ಬೆಂಗಳೂರು: ಚನ್ನಪಟ್ಟಣ ಕಣ ರಂಗೇರುತ್ತಿದ್ದು, ಡಿಕೆ ಶಿವಕುಮಾರ್ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದು ಕುಮಾರಸ್ವಾಮಿ ಕರ್ಮಭೂಮಿಯಲ್ಲಿ ಸೋಲಿನ ರುಚಿ ತೋರಿಸಲು ಪಣ ತೊಟ್ಟಿದ್ದು, ಈಗಾಗಲೇ ಕಾರ್ಯಪ್ರವೃತ್ತರಾಗಿದ್ದು, ಕ್ಷೇತ್ರಾದ್ಯಂತ ಸಂಚರಿಸಿ ಚುನಾವಣಾ ಅಖಾಡಕ್ಕೆ ಭಾರಿ ತಂತ್ರ ರೂಪಿಸುತ್ತಿದ್ದಾರೆ.

ಇನ್ನೊಂದೆಡೆ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿಗೆ ಪ್ರತಿಷ್ಠೆಯ ಕಣವಾಗಿರುವ ಚನ್ನಪಟ್ಟಣ ಕ್ಷೇತ್ರಕ್ಕೆ ಬಿಜೆಪಿ, ಜೆಡಿಎಸ್ ಮೈತ್ರಿ ಕೂಡ ತಲೆಕೆಡಿಸಿಕೊಂಡಿದ್ದು, ಈ ವಿಚಾರವಾಗಿ ಬಿಜೆಪಿ ನಾಯಕ ಯೋಗೇಶ್ವರ್ ಮತ್ತು ಕುಮಾರಸ್ವಾಮಿ ಮಹತ್ವದ ಚರ್ಚೆ ನಡೆಸಿದ್ದಾರೆ. ನಿಖಿಲ್ ಅಭ್ಯರ್ಥಿಯಾದರೂ ಬೆಂಬಲ ನೀಡುವೆ ಎಂದು ಕುಮಾರಸ್ವಾಮಿ ಅವರ ಬಳಿ ಯೋಗೇಶ್ವರ್ ಹೇಳಿದ್ದಾರೆ ಎನ್ನಲಾಗಿದೆ. ಚನ್ನಪಟ್ಟಣ ಉಪಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಅಭ್ಯರ್ಥಿ ಆಯ್ಕೆ ವಿಚಾರಕ್ಕೆ ಸಂಬಂಧಿಸಿ ಕೇಂದ್ರ ಸಚಿವ ಕುಮಾರಸ್ವಾಮಿ ಮತ್ತು ಬಿಜೆಪಿ ನಾಯಕ ಸಿಪಿ ಯೋಗೇಶ್ವರ್ ಭಾನುವಾರ ರಾತ್ರಿ ದೆಹಲಿಯಲ್ಲಿ ಮಹತ್ವದ ಸಭೆ ನಡೆಸಿದ್ದಾರೆ. ಈ ವೇಳೆ, ಅಭ್ಯರ್ಥಿ ಆಯ್ಕೆ ಸಂಬಂಧ ಮುಂದಿನ ವಾರದಲ್ಲಿ ಸ್ಪಷ್ಟತೆ ನೀಡುವಂತೆ ಕುಮಾರಸ್ವಾಮಿ ಬಳಿ ಯೋಗೇಶ್ವರ್ ಕೇಳಿಕೊಂಡಿದ್ದಾರೆ. ತಾವು ಸಂಪೂರ್ಣವಾಗಿ ಒಪ್ಪಿದರೆ ಅಭ್ಯರ್ಥಿ ಆಗುತ್ತೇನೆ. ಇಲ್ಲವಾದಲ್ಲಿ ನಿಖಿಲ್ ಅಭ್ಯರ್ಥಿಯಾದರೂ ನಾನು ಬೆಂಬಲ ನೀಡುತ್ತೇನೆ. ನೀವೇ ಮುಂದೆ ನಿಂತು ಉಪಚುನಾವಣೆಯನ್ನು ನಡೆಸಬೇಕು ಎಂದು ಕುಮಾರಸ್ವಾಮಿ ಬಳಿ ಯೋಗೇಶ್ವರ್ ಹೇಳಿದ್ದಾರೆ. ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷ ತಯಾರಿ ಆರಂಭಿಸಿದ್ದು, ಅಭ್ಯರ್ಥಿಯನ್ನು ಬೇಗ ಘೋಷಿಸಿದರೆ ತಾವು ಸಿದ್ಧತೆ ಆರಂಭಿಸಬಹುದು ಎಂದು ಯೋಗೀಶ್ವರ್ ಹೇಳಿದ್ದಾರೆ. ಇದೇ ವೇಳೆ, ಈ ವಾರ ಬೆಂಗಳೂರಿಗೆ ಬರುತ್ತೇನೆ. ಮತ್ತೊಮ್ಮೆ ಚರ್ಚಿಸಿ ನಿರ್ಧರಿಸೋಣ ಎಂದು ಕುಮಾರಸ್ವಾಮಿ ಉತ್ತರಿಸಿದ್ದಾರೆ ಎನ್ನಲಾಗಿದೆ.

ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಫೇಕ್‌ನ್ಯೂಸ್‌ಗೆ ಪ್ರತಿಜಿಲ್ಲೆಯಲ್ಲೂ ವಿಶೇಷ ಘಟಕ

ಬೆಂಗಳೂರು: ದಿನದಿಂದ ದಿನಕ್ಕೆ ಫೇಕ್‌ನ್ಯೂ ಸ್‌ಗಳ ಹಾವಳಿ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಜಿಲ್ಲಾ ಕೇಂದ್ರಗಳಲ್ಲಿ ಸುಳ್ಳು ಸುದ್ದಿ ಪತ್ತೆಗೆ ವಿಶೇಷ ಘಟಕ ಆರಂಭಿಸಿದ್ದು, ಮುಂದಿನ ದಿನದಲ್ಲಿ ಇನ್ನಷ್ಟು ಪರಿಣಾ ಮಕಾರಿಯಾಗಿ ಮುಂದುವರಿಸಲು ರಾಜ್ಯ ಸರಕಾರ ಮುಂದಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರು ಪ್ರೆಸ್ ಕ್ಲಬ್, ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ವಾರ್ತಾ ಮತ್ತು ಪ್ರಚಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜಕ್ಕೆ ಅನಾಹುತಕಾರಿಯಾದ ಸುಳ್ಳು ಸುದ್ದಿಗಳ ಮೇಲೆ ನಿಗಾವಹಿಸಲು ಪ್ರತಿಜಿಲ್ಲೆಗಳಲ್ಲೂ ವಿಶೇಷ ಫ್ಯಾಕ್ಟ್ ಚೆಕ್ ಘಟಕ ಸ್ಥಾಪಿಸಲಾಗಿದೆ. ಫೇಕ್ ನ್ಯೂಸ್ ಗಳ ಬಗ್ಗೆ ಇಡೀ ಸಮಾಜ ಬಹಳ ಎಚ್ಚರದಿಂದ ಇರಬೇಕು ಹಾಗೂ ಪತ್ರಿಕಾ, ಮಾಧ್ಯಮ ಸಂಘಟನೆಗಳು ಈ ಬಗ್ಗೆ ಗಂಭೀರವಾಗಿ ಯೋಚಿಸಬೇಕು ಎಂದು ಹೇಳಿದರು.

ಈ ವೇಳೆ ಸಿಎಂ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸರಕಾರದ ಕಾರ್ಯದರ್ಶಿ ಕೆ.ವಿ.ತಿ ್ರಲೋಕಚಂದ್ರ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ವಾರ್ತಾ ಇಲಾಖೆ ಆಯುಕ್ತ ಸೂರಳ್ಕರ್ ವಿಕಾಸ್ ಕಿಶೋರ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಸೇರಿದಂತೆ ಅನೇಕರಿದ್ದರು.

ಪ್ರೆಸ್ ಕ್ಲಬ್‌ನಲ್ಲಿ ನಡೆದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಸನ್ಮಾನಿಸ ಲಾಯಿತು. ಈ ವೇಳೆ ಸರಕಾರದ ಕಾರ್ಯದರ್ಶಿ ಕೆ.ವಿ.ತ್ರಿಲೋಕಚಂದ್ರ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾ ರರಾದ ಕೆ.ವಿ.ಪ್ರಭಾಕರ್, ವಾರ್ತಾ ಇಲಾಖೆ ಆಯುಕ್ತ ಸೂರಳ್ಕರ್ ವಿಕಾಸ್ ಕಿಶೋರ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪ್ರೆಸ್ ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್, ಪ್ರಧಾನ ಕಾರ್ಯದರ್ಶಿ ಮಲ್ಲಪ್ಪ ಉಪಸ್ಥಿತರಿದ್ದರು.

ನನ್ನ ಬಳಿ ಮೊಬೈಲ್ ಇಲ್ಲ

ಕಾರ್ಯಕ್ರಮದಲ್ಲಿ ಮಾತನಾಡುವಾಗ ನನ್ನ ಬಳಿ ಮೊಬೈಲ್ ಇಲ್ಲವೆಂದು ಸಿದ್ದರಾಮಯ್ಯ ಅವರು ಹೇಳಿಕೊಂಡಿದ್ದಾರೆ. ನಾನು ಮೊಬೈಲ್ ಫೋನ್ ಇಟ್ಟುಕೊಂಡಿಲ್ಲ. ಹಾಗಾಗಿ ಸಾಮಾಜಿಕ ಜಾಲತಾಣದಲ್ಲಿ ಏನಾಗುತ್ತದೆ ಎಂದು ನನಗೆ ಗೊತ್ತಾಗುವುದಿಲ್ಲ. ನನ್ನ ಮಗ ಹೇಳಿದರೆ ಮಾತ್ರ ಗೊತ್ತಾಗುತ್ತದೆ. ಈ ಹಿಂದೆ ಫೋನ್ ಇರಬೇಕು ಎನ್ನುವ ಕಾರಣಕ್ಕೆ ಆರು ತಿಂಗಳು ಇಟ್ಟುಕೊಂಡಿದ್ದೆ. ಆಗ ರಾತ್ರಿ ಹೊತ್ತೆಲ್ಲ ಫೋನ್‌ಕಾಲ್ ಬರೋದು ಸಾಮಾನ್ಯವಾಗಿತ್ತು, ನಿದ್ದೆ ಮಾಡೋಕೆ ಬಿಡುತ್ತಿರಲಿಲ್ಲ. ಅವತ್ತಿಂದ ಮೊಬೈಲ್ ಫೋನ್ ಇಟ್ಟುಕೊಳ್ಳಬಾರದು ಎಂದು ನಿರ್ಧರಿಸಿ ಮೊಬೈಲ್ ಫೋನ್ ಇಟ್ಟುಕೊಳ್ಳುವುದನ್ನು ಬಿಟ್ಟಿದ್ದೇನೆ. ಹಾಗಾಗಿ ನನ್ನ ಬಳಿ ಈಗ ಮೊಬೈಲ್ ಫೋನ್ ಇಲ್ಲ ಎಂದು ಸ್ಪಷ್ಟಪಡಿಸಿದರು. ನಮ್ಮ ಆಪ್ತ ಸಹಾಯಕರು, ಗನ್‌ಮ್ಯಾನ್‌ಗಳು ಏನೇ ವಿಷಯ ಇದ್ದರೂ ತಿಳಿಸುತ್ತಾರೆ. ಕರೆ ಮಾಡಲು, ಸಂವಹನ ನಡೆಸಲು ಈ ರೀತಿಯ ಅವಕಾಶಗಳನ್ನು ಬಳಕೆ ಮಾಡಿಕೊಳ್ಳುತ್ತೇನೆ. ನಮ್ಮ ಆಪ್ತ ಸಹಾಯಕರು, ಗನ್‌ಮ್ಯಾನ್‌ಗಳಿಂದ ಪಡೆದ ಮಾಹಿತಿಗಳ ಆಧಾರದಲ್ಲಿ ಪ್ರತಿಕ್ರಿಯೆಗಳಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಸಿಎಂ ತಿಳಿಸಿದರು.

ಸಮಾಚಾರ ಸಣ್ಣದಲ್ಲ

ಬಸ್ ಉರುಳಿ ಬಿದ್ದು ಹಲವರಿಗೆ ಗಾಯ

ಹೊಸನಗರ: ಸರಕಾರಿ ಬಸ್ ಮತ್ತು ಬ್ಯಾಂಕಿಗೆ ಹಣ ಸಾಗಿಸುತ್ತಿದ್ದ ಸಿಎಂಎಸ್ ವಾಹನದ ನಡುವೆ ಅಪಘಾತ ಸಂಭವಿಸಿ ಬಸ್ಸು ಕಮರಿಗೆ ಬಿದ್ದ ಘಟನೆ ರಾಣೇಬೆನ್ನೂರು ಬೈಂದೂರು ಹೆದ್ದಾರಿಯ ಗಾಜನೂರು ಕ್ರಾಸ್ ಬಳಿ ಸೋಮವಾರ ನಡೆದಿದೆ. ಬೆಂಗಳೂರು ನಿಂದ ಭಟ್ಕಳ ಕಡೆ ಸಾಗುತ್ತಿದ್ದ ಬಸ್ಸು, ನಿಟ್ಟೂರು ಬ್ಯಾಂಕಿಗೆ ಹಣ ಹಾಕಿ ಬರುತ್ತಿದ್ದ ಸಿಎಂಎಸ್ ವಾಹನದ ನಡುವೆ ಬಪ್ಪನಮನೆ ಸಮಗೋಡು ನಡುವೆ ಗಾಜನೂರು ಕ್ರಾಸ್ ನಲ್ಲಿ ಅಪಘಾತ ಸಂಭವಿಸಿದೆ. ಚಾಲಕನ ನಿಯಂತ್ರಣ ತಪ್ಪಿ ಹೆದ್ದಾರಿ ಪಕ್ಕಕ್ಕೆ ಉರುಳಿದೆ. ಬಸ್ಸಿನಲ್ಲಿ 50ಕ್ಕೂ ಹೆಚ್ಚು ಪ್ರಯಾಣಿಕರಿದ್ದು ಹಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಗಾಯಾಳುಗಳನ್ನು ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಾರಾಗೃಹದಲ್ಲಿ ಕೈದಿಗಳ ಮಾರಾಮಾರಿ

ಮಂಗಳೂರು: ಇಲ್ಲಿನ ಕಾರಾಗೃಹದಲ್ಲಿ ಖೈದಿಗಳು ಗುಂಪಾಗಿ ಪ್ರತಿಸ್ಪರ್ಧಿ ಗ್ಯಾಂಗ್ ನ ಮೇಲೆ ದಾಳಿ ನಡೆಸಿದ ಘಟನೆ ಸೋಮವಾರ ಸಂಜೆ ನಡೆದಿದೆ. ಘಟನೆಯಲ್ಲಿ ಇಬ್ಬರು ವಿಚಾರಣಾಧೀನ ಖೈದಿಗಳು ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ದಾಳಿಗೊಳಗಾಗಿ ಗಾಯಗೊಂಡವರು ಉಳ್ಳಾಲ ನಿವಾಸಿ ಮುಹಮ್ಮದ್ ಸಮೀರ್ ಅಲಿಯಾಸ್ ಕಡಪರ ಸಮೀರ್(33) ಮತ್ತು ಬೋಳಿಯಾರ್ ನಿವಾಸಿ ಮುಹಮ್ಮದ್ ಮನ್ಸೂರ್ ಅಲಿಯಾಸ್ ಬೋಳಿಯಾರ್ ಮನ್ಸೂರ್ (30) ಎನ್ನುವವರಾಗಿದ್ದಾರೆ. ಇಬ್ಬರೂ ವೆನ್ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು,ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇಬ್ಬರ ತಲೆ, ಭುಜ ಮತ್ತು ದೇಹದ ಇತರ ಭಾಗಗಳಿಗೆ ಗಂಭೀರ ಗಾಯಗಳಾಗಿವೆ. ಅಡುಗೆ ಮನೆಯಲ್ಲಿದ್ದ ಚೂಪಾದ ವಸ್ತುಗಳಿಂದ ಹಲ್ಲೆ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಪ್ಪು ಮಾಡಿದವರು ಯಾರೇ ಆಗಿದ್ದರೂ ಕಾನೂನು ಕ್ರಮ: ಪರಮೇಶ್ವರ್

ಸರಕಾರ ತಪ್ಪಿತಸ್ಥರ ಪರವಾಗಿ ನಿಂತಿಲ್ಲ

ಬೆಂಗಳೂರು: ಯಾವುದೇ ಪ್ರಕರಣದಲ್ಲಿ ರಾಜ್ಯ ಸರಕಾರ ತಪ್ಪಿತಸ್ಥರ ಪರವಾಗಿ ನಿಂತಿಲ್ಲ. ತಪ್ಪು ಮಾಡಿದ್ದರೆ ಅವರ ವಿರುದ್ಧ ಕಾನೂನಾತ್ಮಕವಾಗಿ ಕ್ರಮವಾಗಲಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಪೊಲೀಸರು ಪ್ರತಿ ಪ್ರಕರಣವನ್ನು ಗಂಭೀರವಾಗಿಯೇ ಪರಿಗಣಿಸಿದ್ದಾರೆ. ದರ್ಶನ್ ಪ್ರಕರಣಕ್ಕೆ ಕೊಟ್ಟಿರುವ ಮಹತ್ವದ ವಾಲ್ಮೀಕಿ ನಿಗಮದ ಹಗರಣದ ಪ್ರಕರಣಕ್ಕೆ ನೀಡಿಲ್ಲ ಎನ್ನುವ ಬಿಜೆಪಿಯವರ ಆರೋಪದಲ್ಲಿ ಹುರುಳಿಲ್ಲ. ತಪ್ಪು ಮಾಡಿದವರ ರಕ್ಷಣೆಗೆ ಸರಕಾರ ನಿಂತಿಲ್ಲ. ತಪ್ಪು ಮಾಡಿದವರು ಯಾರೇ ಆಗಿದ್ದರೂ ಕಾನೂನು ಪ್ರಕಾರ ಕ್ರಮ ಜರುಗಲಿದೆ. ಅಧಿಕಾರಿಗಳು ಆಗಿರಬಹುದು ಅಥವಾ ರಾಜಕೀಯ ವ್ಯಕ್ತಿಗಳು ಇರಬಹುದು, ಯಾರೇ ಇದ್ದರೂ ಕ್ರಮ ಜರುಗಿಸುವುದು ಖಚಿತ ಎಂದು ಸ್ಪಷ್ಟಪಡಿಸಿದರು.

ಈ ಪ್ರಕರಣದಲ್ಲಿ ಸಿಬಿಐನವರು ಬ್ಯಾಂಕ್ ಅಧಿಕಾರಿಗಳ ವಂಚನೆಯ ಕುರಿತು ತನಿಖೆ ನಡೆಸುತ್ತಿದ್ದಾರೆ. ಇಲಾಖೆಯಲ್ಲಿನ ವಂಚನೆಯ ಕುರಿತು ಎಸ್ಐಟಿ ತನಿಖೆ ನಡೆಸುತ್ತಿದೆ. ಬಿಜೆಪಿಯವರು ಪ್ರತಿಭಟನೆ ಮಾಡಲಿ. ಸಿಎಂ ಮನೆಗೆ ಮುತ್ತಿಗೆ ಹಾಕಲಿ ಯಾರು ಬೇಡ ಅನ್ನುತ್ತಾರೆ. ತನಿಖೆ ವೇಳೆ ಸಚಿವರು, ಶಾಸಕರ ಮೇಲೆ ಆರೋಪಗಳನ್ನು ಮಾಡುವುದು ಸಹಜ. ತನಿಖೆಯ ವರದಿ ಆಧಾರದ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು.

ಇನ್ನು ದೇಶದಲ್ಲಿ ಜಾರಿಯಾಗಿರುವ ಮೂರು ಹೊಸ ಅಪರಾಧ ಕಾನೂನುಗಳ ಪರಿಣಾಮದ ಬಗ್ಗೆ ಈಗಲೇ ಹೇಳಲು ಬರುವುದಿಲ್ಲ. ಸೋಮವಾರದಿಂದ ದಾಖಲಾಗುವ ಪ್ರಕರಣಗಳಿಗೆ ಹೊಸ ಕಾನೂನುಗಳು ಅನ್ವಯವಾಗಲಿವೆ. ಹೊಸ ಕಾಯಿದೆಗಳು ಸಹಾಯವಾಗುವುದೋ ಇಲ್ಲವೋ ಎನ್ನುವುದು ಈಗಲೇ ಗೊತ್ತಾಗುವುದಿಲ್ಲ. ಪ್ರಕರಣಗಳು ದಾಖಲಾದ ಬಳಿಕ ಕೋರ್ಟ್‌ನಲ್ಲಿ ಯಾವ ರೀತಿ ತೆಗೆದುಕೊಳ್ಳುತ್ತಾರೆ ಎಂಬುದನ್ನು ನೋಡಬೇಕು. ಇಡೀ ದೇಶದಲ್ಲಿ ಜಾರಿ ಮಾಡಿರುವುದರಿಂದ ಎಲ್ಲ ಕಡೆ ಈ ಬಗ್ಗೆ ಪ್ರತಿಕ್ರಿಯೆ ಬರಬೇಕು. ಸರಕಾರ ಕೆಲ ಪರಿಷ್ಕರಣೆ ಮಾಡಬಹುದು ಎಂದು ಹೇಳಿದರು.

ಹೊಸ ಕಾನೂನುಗಳ ಬಗ್ಗೆ ಇಲಾಖೆಯ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ. ಪೊಲೀಸರಿಗಾಗಿ ಹೊಸದಾಗಿ ಮೊಬೈಲ್ ಅಪ್ಲಿಕೇಷನ್ ಸಿದ್ದಪಡಿಸಲಾಗಿದೆ. ಪೊಲೀಸರಿಗೆ ಹೊಂದಿಕೆ ಆಗೋವರೆಗೂ ಈ ಆ್ಯಪ್ ನೋಡಿಕೊಂಡು ಕೆಲಸ ಮಾಡಲು ಸಹಾಯವಾಗಲಿದೆ.

-ಡಾ.ಜಿ. ಪರಮೇಶ್ವರ್, ಗೃಹ ಸಚಿವ

- ರಾಜ್ಯ ಪೊಲೀಸರಿಂದ ಪ್ರತಿ ಪ್ರಕರಣ ಗಂಭೀರವಾಗಿ ಪರಿಗಣನೆ
- ವಾಲ್ಮೀಕಿ ನಿಗಮದ ಹಗರಣದ ಬಗ್ಗೆ ತನಿಖೆಯ ವರದಿ ಆಧಾರದ ಮೇಲೆ ಕ್ರಮ
- ಬಿಜೆಪಿಯವರ ಆರೋಪದಲ್ಲಿ ಹುರುಳಿಲ್ಲ

ಪೇದೆಗಳ ವರ್ಗಾವಣೆಗೆ ನಿಯಮ

ಕಾನ್ಸ್‌ಟೇಬಲ್‌ಗಳ ಅಂತರ ಜಿಲ್ಲಾ ವರ್ಗಾವಣೆಗೆ ನಿಯಮಗಳನ್ನು ರೂಪಿಸಲಾಗುತ್ತಿದೆ. ಈವರೆಗೆ ನಿಯಮಗಳಿರಲಿಲ್ಲ. ಪತಿ-ಪತ್ನಿ ವರ್ಗಾವಣೆಯನ್ನು ಮಾಡಲಾಗುವುದು. ಈ ಕುರಿತು ಪೊಲೀಸ್ ಮಹಾನಿರ್ದೇಶಕರೊಂದಿಗೆ ಚರ್ಚಿಸಿದ್ದೇನೆ. ಅಂತರ ಜಿಲ್ಲಾ ವರ್ಗಾವಣೆ ಸಮಸ್ಯೆಯನ್ನು ಶೀಘ್ರವಾಗಿ ಬಗೆ ಹರಿಸಲಾಗುವುದು ಎಂದು ತಿಳಿಸಿದರು. ಸರಕಾರದ ಭವಿಷ್ಯದ ಕುರಿತು ಸಿ.ಟಿ. ರವಿ, ಬಸವರಾಜ ಬೊಮ್ಮಾಯಿ ಅವರ ಹೇಳಿಕೆಗಳಿಗೆ ಪ್ರತಿಕ್ರಿಯಿಸಿ, ಅವರವರ ವ್ಯಾಖ್ಯಾ ನಗಳು ಅವು. ಅವರಲ್ಲೇ ಅವರ ಹೇಳಿಕೆಗಳು ವಿಭಿನ್ನವಾಗಿವೆ. ಬೊಮ್ಮಾಯಿ ಒಂದು ಹೇಳಿಕೆ ಕೊಟ್ಟರೆ, ಸಿ.ಟಿ.ರವಿ ಇನ್ನೊಂದು ಹೇಳಿಕೆ ಕೊಡು ತ್ತಾರೆ. ಅವರಲ್ಲಿ ಹೊಂದಾಣಿಕೆ ಇಲ್ಲ. ಸರಕಾರ ಅಭಿವೃದ್ಧಿಯನ್ನು ಮರೆತಿಲ್ಲ. ಜನರಿಗೆ ಕೊಟ್ಟ ಮಾತನ್ನು ಮರೆತಿಲ್ಲ. ಗ್ಯಾರಂಟಿ ಯೋಜನೆಗಳ ಜೊತೆ ಎಲ್ಲ ಕೆಲಸಗಳನ್ನು ಮಾಡುತ್ತಿದ್ದೇವೆ. ಯಾವ ಅಭಿವೃದ್ಧಿ ಕಾರ್ಯಗಳು ನಿಂತಿಲ್ಲ ಎಂದರು.

ಮಧುಗಿರಿಯಲ್ಲಿ ಸೋಲಾರ್ ಪಾರ್ಕ್ ನಿರ್ಮಾಣ

ತುಮಕೂರು: ಪಾವಗಡದಂತೆಯೇ ಮಧುಗಿರಿಯಲ್ಲಿಯೂ ದೊಡ್ಡ ಸೋಲಾರ್ ಪಾರ್ಕ್ ನಿರ್ಮಾಣ ಮಾಡಲಿದ್ದೇವೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮಹತ್ವಾಕಾಂಕ್ಷೆಯ ಕುಸುಮ್ ಬಿ ಅಂಡ್ ಸಿ ಯೋಜನೆಗೆ ಚಾಲನೆ ಸಿಕ್ಕಿದ್ದು ಸಂಪುಟ ಸಭೆಯಲ್ಲಿ ಸರಕಾರ ತೀರ್ಮಾನ ತೆಗೆದುಕೊಂಡಿದೆ. ಸೋಲಾರ್ ಸಬ್‌ಸ್ಟೇಷನ್‌ಗಳಿದ್ದು 3 ಸಾವಿರ ಮೆಗಾವ್ಯಾಟ್ ಉತ್ಪಾದಿಸಿ ರೈತರಿಗೆ ಕೊಡಲಾಗುವುದು. ಸರಕಾರಿ ಜಾಗ ಇರುವೆಡೆ ಉಚಿತವಾಗಿ ಕೊಡಬೇಕೆಂದು ನಿರ್ಧರಿಸಲಾಗಿದೆ. ಉಚಿತವಾಗಿ ಜಮೀನು ಸಿಕ್ಕರೂ ಕೂಡ ಗುತ್ತಿಗೆದಾರರು ಪಾವಗ ಡದಲ್ಲಿ ರೈತರಿಗೆ ಹೇಗೆ ಎಕರೆಗೆ 25 ಸಾವಿರ ರು. ನೀಡಲಾಗುತ್ತಿದೆಯೋ ಅದೇ ರೀತಿ ಗುತ್ತಿಗೆದಾರರು ಪ್ರತಿ ಎಕರೆಗೆ ಹಣ ನೀಡಬೇಕು. ಜಿಲ್ಲಾಧಿಕಾರಿ ಖಾತೆಗೆ ಜಮಾ ಆಗುವ ಆ ಹಣದಲ್ಲಿ ಜಮೀನು ಪಡೆಯುವ ಪ್ರದೇಶದ ಸುತ್ತಮುತ್ತಲಿನ ಊರುಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗುವುದು. ಈಗಾಗಲೇ 735 ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನೆಗೆ ಗುತ್ತಿಗೆದಾರರಿಗೆ ಟೆಂಡರ್ ಕೊಡಲಾಗಿದೆ ಎಂದರು.

ಕೇಂದ್ರದ ಏಜೆನ್ಸಿ ನೆರವು

ಪಾವಗಡದಂತೆಯೇ ಮಧುಗಿರಿಯಲ್ಲಿಯೂ ದೊಡ್ಡ ಸೋಲಾರ್ ಪಾರ್ಕ್ ನಿರ್ಮಾ ಣ ಮಾಡಲಾಗುವುದು. ಕೇಂದ್ರ ಸರಕಾರದ ಒಂದು ಏಜೆನ್ಸಿ ಜತೆ ಸೇರಿ ನಿರ್ಮಿಸಲಿ ದ್ದೇವೆ. ಅವರು ಈ ಸೋಲಾರ್ ಪಾರ್ಕ್‌ಗೆ ಬಂಡವಾಳ ಹೂಡುತ್ತಾರೆ. ನಾವು ಜಮೀನು ಕೊಟ್ಟರೆ ರೈತರಿಗೆ 3 ರೂಪಾಯಿ 17 ಪೈಸೆಗಿಂತ ಕಡಿಮೆ ದರದಲ್ಲಿ ಗುತ್ತಿಗೆ ದಾರರು ವಿದ್ಯುತ್ ಕೊಡುತ್ತಾರೆ. ಒಂದು ಮೆಗಾವ್ಯಾಟ್‌ಗೆ ನಾಲ್ಕರಿಂದ ಐದು ಎಕರೆ ಜಮೀನು ಬೇಕು. ಮಧುಗಿರಿಯಲ್ಲಿ 500 ಮೆಗಾವ್ಯಾಟ್ ಉತ್ಪಾದನೆ ಮಾಡುವ ಉದ್ದೇಶವಿದ್ದು ಹೀಗಾಗಿ 2000-2500 ಎಕರೆ ಜಮೀನಿನ ಅಗತ್ಯವಿದೆ. ಇದಕ್ಕೆ ಸಚಿವ ರಾಜಣ್ಣ ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ ಎಂದು ಇಂಧನ ಸಚಿವ ಜಾರ್ಜ್ ತಿಳಿಸಿದರು.

ಹಾಸನ ಎಸ್ಪಿ ಕಚೇರಿ ಆವರಣದಲ್ಲೇ ಬರ್ಬರ ಕೃತ್ಯ

ಪತ್ನಿಯನ್ನು ಇರಿದು ಕೊಂದ ಕಾನ್‌ಸ್ಟೇಬಲ್

ಹಾಸನ: ದೂರು ಕೊಡಲು ಎಸ್‌ಪಿ ಕಚೇರಿಗೆ ಬಂದ ಪತ್ನಿಯನ್ನು ಪೊಲೀಸ್ ಕಾನ್‌ಸ್ಟೇಬಲ್ ಸಹೋದ್ಯೋಗಿಗಳ ಸಮ್ಮುಖದಲ್ಲಿಯೇ ಚಾಕುವಿನಿಂದ ಇರಿದು ಬರ್ಬರವಾಗಿ ಕೊಲೆ ಮಾಡಿದ ಘಟನೆ ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಸೋಮವಾರ ನಡೆದಿದೆ.

ಆರ್.ಸಿ.ರಸ್ತೆಯಲ್ಲಿರುವ ಎಸ್‌ಪಿ ಕಚೇರಿ ಆವರಣದಲ್ಲಿ ಪತ್ನಿ ಮಮತಾಳನ್ನು ಕೊಂದ ಪೇದೆ ಲೋಕನಾಥ್‌ನನ್ನು ಬಂಧಿಸಲಾಗಿದೆ.

ಪ್ರಕರಣದ ಹಿನ್ನೆಲೆ: ಕಳೆದ 17 ವರ್ಷಗಳ ಹಿಂದೆ ಹಾಸನ ಹೊರವಲಯದ ಚನ್ನಪಟ್ಟಣ ಬಡಾವಣೆಯ ಮಮತಾ ಹಾಗೂ ಕೆ.ಆರ್ .ಪುರಂ ನಿವಾಸಿ ಲೋಕನಾಥ್ ಪರಸ್ಪರ ಪ್ರೀತಿಸಿ ಪೋಷಕರ ವಿರೋಧದ ನಡುವೆಯೂ ಅಂತರ್ಜಾತಿ ಮದುವೆಯಾಗಿದ್ದರು. ದಂಪತಿಗೆ ಮುದ್ದಾದ ಇಬ್ಬರು ಗಂಡು ಮಕ್ಕಳಿದ್ದಾರೆ. ಇತ್ತೀಚೆಗೆ ಪೇದೆ ಲೋಕನಾಥ್, ಪತ್ನಿಗೆ ದೈಹಿಕ ಹಿಂಸೆ ಜತೆಗೆ ವರದಕ್ಷಿಣೆ ಕಿರುಕುಳ ನೀಡಲು ಆರಂಭಿಸಿದ್ದ ಎನ್ನಲಾಗಿದೆ. ಕೆಲ ಸಮಯದಿಂದ ಪತಿ-ಪತ್ನಿ ನಡುವೆ ಜಗಳ ಜೋರಾಗಿ, ಮಮತಾ ಸೋಮವಾರ ಹಾಸನ ಎಸ್ಪಿಗೇ ದೂರು ಕೊಡಲು ಕಚೇರಿ ಆವರಣಕ್ಕೆ ಬಂದಿದ್ದಳು. ಆದರೆ ಆಕೆಯನ್ನು ಹಿಂಬಾಲಿಸಿ ಬಂದ ಲೋಕನಾಥ್, ಹರಿತವಾದ ಆಯುಧದಿಂದ ಮಮತಾ ಎದೆಯ ಭಾಗಕ್ಕೆ ಬಲವಾಗಿ ಇರಿದಿದ್ದಾನೆ. ಹೊಟ್ಟೆ ಭಾಗಕ್ಕೆ ಇರಿದ ಚಾಕು ಬೆನ್ನಿನಿಂದ ಹೊರಗೆ ಬಂದಿದೆ. ರಕ್ತದ ಮಡುವಿನಲ್ಲಿದ್ದ ಮಮತಾಳನ್ನು ಸ್ಥಳದಲ್ಲೇ ಇದ್ದ ಪೊಲೀಸರು ಹಾಗೂ ಎಸ್ಪಿ ಕಚೇರಿಯ ಸಿಬ್ಬಂದಿ ಕೂಡಲೇ ಸಮೀಪದ ಹಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿದರು. ಆದರೆ ಗಂಭೀರವಾಗಿ ಗಾಯಗೊಂಡಿದ್ದ ಮಮತಾ, ಕೆಲವೇ ಕ್ಷಣಗಳಲ್ಲಿ ಮೃತಪಟ್ಟಿದ್ದಾರೆ. ಆರೋಪಿಯನ್ನು ಹಾಸನ ನಗರ ಪೊಲೀಸರು ಬಂಧಿಸಿದ್ದಾರೆ.



ಅನಾಥರಾದ ಮಕ್ಕಳು

ಪತಿ-ಪತ್ನಿಯ ಕಲಹ ತಾರಕಕ್ಕೇರಿ ಪತ್ನಿ ಕೊಲೆಯಾದರೆ ಪತಿ ಜೈಲು ಸೇರಿದ್ದಾನೆ. ಏನೂ ಅರಿಯದ ಇಬ್ಬರು ಮಕ್ಕಳೀಗ ಅನಾಥರಾಗಿದ್ದಾರೆ. ''ವರದಕ್ಷಿಣೆ ಹಣ, ಸೈಟ್ ಹಾಗೂ ಒಡವೆ ತರುವಂತೆ ಲೋಕನಾಥ್ ಪತ್ನಿಗೆ ಕಿರುಕುಳ ನೀಡುತ್ತಿದ್ದ. ನನ್ನ ಮಗಳು ಎಲ್ಲವನ್ನೂ ಸಹಿಸಿಕೊಂಡಿದ್ದಳು. ಹತ್ತಾರು ಬಾರಿ ಸಂಧಾನ ಮಾಡಿದ್ದರೂ ಲೋಕನಾಥ್ ತನ್ನ ಧನದಾಹ ಬಿಟ್ಟರಲಿಲ್ಲ. ಮೂರ್ನಾಲ್ಕು ದಿನಗಳಿಂದ ದಂಪತಿ ನಡುವೆ ಏನು ನಡೆದಿದೆಯೋ ಗೊತ್ತಿಲ್ಲ. ಇಂದು ಮಮತಾಳನ್ನು ಕೊಲೆ ಮಾಡಿದ್ದಾನೆ. ಆತನಿಗೆ ಕಠಿಣವಾದ ಶಿಕ್ಷೆ ನೀಡಬೇಕು'' ಎಂದು ಮಮತಾ ತಂದೆ ಶಾಮಣ್ಣ ಹಾಗೂ ಮನೆಯವರು ಅಳಲು ತೋಡಿಕೊಂಡಿದ್ದಾರೆ.

ಬಿಸಿಯೂಟ:30 ವಿದ್ಯಾರ್ಥಿಗಳು ಅಸ್ವಸ್ಥ

ಚಿತ್ತಾಪುರ: ತಾಲೂಕಿನ ಕನಗನಹಳ್ಳಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಿಸಿಯೂಟ ಸೇವಿಸಿ 30ಕ್ಕೂ ಅಧಿಕ ವಿದ್ಯಾರ್ಥಿಗಳು ಅಸ್ವಸ್ಥರಾಗಿದ್ದಾರೆ. ಮಕ್ಕಳಿಗೆ ಕೊಲ್ಲೂರು ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಗಂಭೀರ ಪರಿಸ್ಥಿತಿಯಲ್ಲಿರುವ ಕೆಲ ವಿದ್ಯಾರ್ಥಿಗಳನ್ನು ವಾಡಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿದೆ. ಮಧ್ಯಾಹ್ನ ಊಟದ ಬಳಿಕ ಮಕ್ಕಳಿಗೆ ವಾಂತಿಯಾಗಿ ಮತ್ತು ತಲೆ ಸುತ್ತುವಿಕೆ ಕಂಡುಬಂದಿದ್ದು, ಶಾಲಾ ಆಡಳಿತದ ವಿರುದ್ಧ ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ

ಐ.ಎಫ್.ಟಿ.ಸಂಖ್ಯೆ: 04/2024-25 ದಿನಾಂಕ: 01.07.2024

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ-1 ಮತ್ತು 3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.ಕನಿಷ್ಠ ಅಂದಾಜು ಮೊತ್ತ ರೂ.16.00 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ.75.00 ಲಕ್ಷಗಳು ಟೆಂಡರ್ ಸಲ್ಲಿಸುವ ಕಡೆಯ ದಿ: 10-07-2024 ಸಮಯ 17.00 ಗಂಟೆಯವರೆಗೆ ಬಿಡ್ಡುದಾರರು ಜಿ.ಎಸ್.ಟಿ ಸೇರಿದಂತೆ ದರಗಳನ್ನು ನಮೂದಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಇ-ಪ್ರಾಕ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/-ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/124/2024-25

ಮುಖ್ಯ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ ಮುಳಬಾಗಲು, ಕೋಲಾರ ಜಿಲ್ಲೆ.
ಎಂ.ಸಿ.ರೋಡ್ ಮುಳಬಾಗಲು, ಕೋಲಾರ ಜಿಲ್ಲೆ, ದೂರವಾಣಿ ಸಂಖ್ಯೆ: 08159-298914, Email:amomulbagal@gmail.com,
ಕ್ರ.ಸಂ:ಸಾಆಮು/ಟೆಂಡರ್/01/2023-24 ದಿನಾಂಕ: 27.06.2024

ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ ಮುಳಬಾಗಿಲು ಇಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆಯಂತೆ ಆಸ್ಪತ್ರೆಗಳಿಗೆ ನಾನ್ ಕ್ಲಿನಿಕಲ್ ಸೇವೆಯ ಸಿಬ್ಬಂದಿಯನ್ನು ಪಡೆಯಲು ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಭಾಗವಹಿಸುವ ಟೆಂಡರ್‌ದಾರರ ಹೆಚ್ಚಿನ ಮಾಹಿತಿಗಾಗಿ **eproc.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/-
ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ಮುಳಬಾಗಲು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:62/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯತ ಕಾರ್ಯಾಲಯ, ನಾಲತವಾಡ
ವೆಬ್‌ಸೈಟ್: www.nalatawadtown.mrc.gov.in
ಇ-ಮೇಲ್: ka.nalatawad.tp@gmail.com
ಕ್ರ.ಸಂ:ಪ.ಪಂ.ನಾ/15ನೇಹಕಾಯೋ ಯೋಜನೆ/ಇ.ಟೆಂ.ಪ್ರ/2024-25
ದಿನಾಂಕ:27.06.2024

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಯಾವತ್ತೂ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಮೂರನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸನ್ 2024-25 ನೇ ಸಾಲಿನ 15 ನೇ ಹಣಕಾಸು ಸಾಮಾನ್ಯ ಮೂಲ ಅನಿರ್ಬಂಧಿತ ಅನುದಾನ ಯೋಜನೆಯ ಅಡಿಯಲ್ಲಿ, ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲು, ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಗುತ್ತಿಗೆದಾರರು/ಪೂರೈಕೆದಾರರು ಈ ಕೆಳಕಂಡ ವೇಳಾ ಪಟ್ಟಿಯಂತೆ ಈ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ K.W-1/2/3 ರ ನಮೂನೆಯಲ್ಲಿ ತಮ್ಮ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದ್ದು ಹೆಚ್ಚಿನ ವಿವರಗಳಿಗಾಗಿ ಕಾಮಗಾರಿ ವಿಭಾಗದಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

DMA/2024-25/OW/WORK_INDENT19402,
DMA/2024-25/BD/WORK_INDENT19511,
DMA/2024-25/RD/WORK_INDENT19401,
DMA/2024-25/WS/WORK_INDENT19400,

ಸೂಚನೆಗಳು: ಕೆ.ಪಿ.ಪಿ ಪೋರ್ಟಲ್ ಮೂಲಕ ದಾಖಲೆಗಾಗಿ ಇಲಾಖಾ ವೆಬ್‌ಸೈಟ್ https://kppp.karnataka.gov.in ಮೂಲಕ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವದು.

1) ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **16.07.2024 ರ ಸಂಜೆ 4.30 ಗಂಟೆಯವರೆಗೆ.**
2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 17.07.2024 ಸಾಯಂಕಾಲ 5.00 ಗಂಟೆಗೆ.**
3) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 22.07.2024 ಸಾಯಂಕಾಲ 4.30 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ಪಟ್ಟಣ ಪಂಚಾಯತ ಕಾರ್ಯಾಲಯ ಹಾಗೂ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಪಡೆಯಬಹುದು. http://eproc.karnataka.gov.in

ಸಹಿ/- ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ನಾಲತವಾಡ
ಸಹಿ/- ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ ನಾಲತವಾಡ

ವಾಸಾಸಂಇ/ವಿಜಯಪುರ/66/ಕೆಎಸ್‌ಎಂಸಿಎ/2024-25

ಬೆಳಗಾವಿ ಮಹಾನಗರ ಪಾಲಿಕೆ
ಸುಭಾಷನಗರ, ಬೆಳಗಾವಿ - 590016
Email : itstaff_ulb_belgaum@yahoo.com. Website : www.belgaumcity.mrc.gov.in
ಗುತ್ತಿಗೆ ಸಂಖ್ಯೆ: ಮನಪಾ/ಆಶಾ/ಘವನಿ/ಟಿಎನ್‌ಡಿ/ಇಪ್ರೋ-01/2023-24 ದಿನಾಂಕ: 29-06-2024

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್)

ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999 - 2000 ಪ್ರಕಾರ ಆಕ್ಟ್ 2000 ನಿಯಮದಂತೆ ಬೆಳಗಾವಿ ಮಹಾನಗರ ಪಾಲಿಕೆಯ 2021-22 ನೇ ಸಾಲಿನ 15 ನೇ ಹಣಕಾಸು ಆಯೋಗದ ಅನುದಾನ **Non-Millon Plus Cities Fund** ದಡಿ ಹಾಗೂ **2023-24 ನೇ ಸಾಲಿನ 15 ನೇ ಹಣಕಾಸು ಆಯೋಗ ಅನುದಾನದಡಿ ಘನತ್ಯಾಜ್ಯ ವಸ್ತು ನಿರ್ವಹಣೆ ಹಾಗೂ ವಿಲೇವಾರಿಗಾಗಿ 7 ವಿವಿಧ ವಾಹನ ಮತ್ತು ಯಂತ್ರೋಪಕರಣ ಖರೀದಿಗಾಗಿ** ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **18-07-2024 ರಂದು ಇರುತ್ತದೆ.** ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ವೆಬ್‌ಸೈಟ್: **(https://www.kppp.karnataka.gov.in)** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಆಯುಕ್ತರು
ಮಹಾನಗರ ಪಾಲಿಕೆ, ಬೆಳಗಾವಿ

ವಾಸಾಸಂಇ/ಬೆಳಗಾವಿ/247/ಅಡ್ವರ್ಟೋರ್/2024-25

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436
ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/2024-25/16272-76
ದಿನಾಂಕ:01.07.2024

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)

ಪಿಸಿ-1355:-ಗು.ವಿ.ಸ.ಕಂ.ನಿ. ಯ ವಿವರಣೆಯಂತೆ ಹೈ ವಿಜಬಿಲಿಟಿ ರಿಫ್ಲೆಕ್ಟಿವ್ ರೇನ್ ಕೋಟ್ ಸರಬರಾಜು ಮಾಡುವುದು.
ದಿನಾಂಕ: **ಕೆಪಿಪಿಪಿ ಪೋರ್ಟಲ್ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: 02.07.2024** ರಂದು ಅಥವಾ ನಂತರ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **18.07.2024 @ 17:30** ಗಂಟೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20.07.2024 @ 11:00** ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **22.07.2024 @ 11:00** ಗಂಟೆಗೆ.
ಟೆಂಡರ್ ಮೊತ್ತ: **ರೂ. 138.67 ಲಕ್ಷ**
ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ-585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: **https://kppp.karnataka.gov.in.**

ಸಹಿ/- ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/150/ಕೆ.ಎಸ್.ಎಂ.ಸಿ.&ಎ/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, (ಯಲಹಂಕ ವಲಯ), ಬೃಬೆಂಮಪಾ, ಅಮೃತಹಳ್ಳಿ, ಬ್ಯಾಟರಾಯನಪುರ, ಬೆಂಗಳೂರು-560 092.
ಸಂ: ಹಿಸನಿತೋ(ಯಲಹಂಕ)ಟೆಂಡರ್/02/2024-25 ದಿನಾಂಕ: 01.07.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(2ನೇ ಕರೆ) (ದ್ವಿ ಲಕೋಟೆ ಪದ್ಧತಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು (ಯಲಹಂಕ), ಬೃಬೆಂಮಪಾ, (ಈ ದಾಖಲೆಗಳಲ್ಲಿ ಮಾಲೀಕರು ಎಂದು ಉಲ್ಲೇಖ), ಇವರು ಕೆಟಿಪಿಪಿ ನಿಯಮಗಳು 2000ರ ಅನುಸಾರ ಕರ್ನಾಟಕ ಸರ್ಕಾರದ ಸರ್ಕಾರಿ ಇಲಾಖೆಗಳಲ್ಲಿ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಅನುಭವವುಳ್ಳ ವ್ಯಕ್ತಿ/ಏಜೆನ್ಸಿಗಳು/ಸಂಸ್ಥೆಗಳಿಂದ (ಈ ದಾಖಲೆಗಳಲ್ಲಿ ಗುತ್ತಿಗೆದಾರರು ಎಂದು ಉಲ್ಲೇಖ) ಉದ್ಯಾನವನಗಳ ನಿರ್ವಹಣೆಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು	ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಜಕ್ಕೂರು ವಾರ್ಡ್‌ನ ಉದ್ಯಾನವನಗಳ ತೋಟಗಾರಿಕೆ ಕಾಮಗಾರಿಗಳ ನಿರ್ವಹಣೆ. (ವಾರ್ಡ್ ಸಂ.06) (2ನೇ ಕರೆ)	59.85	59,900/-
ಪೂರ್ಣಗೊಳಿಸುವ ಕಾಲಾವಧಿ (ತಿಂಗಳುಗಳಲ್ಲಿ) : 8 ತಿಂಗಳು. ಪ್ರವರ್ಗ: ಪ.ಪಂಗಡ			

ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಪೋರ್ಟಲ್ ಮೂಲಕ ದಿನಾಂಕ: **03.07.2024 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ: **05.07.2024 ರ ಬೆಳಿಗ್ಗೆ 11.30 ಗಂಟೆಗೆ.** 3) ಟೆಂಡರ್ ಮುಕ್ತಾಯದ ದಿನಾಂಕ: **12.07.2024ರ ಸಂಜೆ 4:00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **15.07.2024ರ ಸಂಜೆ 4:30 ಗಂಟೆಗೆ.** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆ ನಂತರ.
ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿಯ ವೇಳೆಯಲ್ಲಿ ಎಲ್ಲಾ ಕೆಲಸದ ದಿನದಂದು ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://eproc.karnataka.gov.in ನಿಂದ ಪಡೆಯಬಹುದು.

ಸಹಿ/- ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ (ಯಲಹಂಕ ವಲಯ), ಬೃಬೆಂಮಪಾ

ರಾಹುಲ್ ವಾಗ್ದಾಳಿ: ಬಿಜೆಪಿ ತಬ್ಬಿಬ್ಬು

← ಮೊದಲಪುಟದಿಂದ

ಅಯೋಧ್ಯೆಯಲ್ಲಿ ರಾಮ ಮಂದಿರದ ಉದ್ಘಾಟನೆಯ ದಿನ ಅದಾನಿ, ಅಂಬಾನಿಯವರನ್ನು ಆಮಂತ್ರಿಸಲಾಗಿತ್ತು. ಆದರೆ, ಅಲ್ಲಿನ ಸ್ಥಳೀಯ ಜನರನ್ನು ದೂರ ವಿಡಲಾಗಿತ್ತು. ಆದರೆ, ಲೋಕ ಸಭಾ ಚುನಾವಣೆಯಲ್ಲಿ ಅಲ್ಲಿನ ಮತದಾರರು ಬಿಜೆಪಿಗೆ ಸೂಕ್ತ ಪಾಠ ಕಲಿಸಿದ್ದಾರೆ ಎಂದು ರಾಹುಲ್ ವಾಗ್ದಾಳಿ ನಡೆಸಿದರು.

ಸರಕಾರ ಸಂವಿಧಾನ ಮತ್ತು ಭಾರತದ ಮೂಲಭೂತ ಕಲ್ಪನೆಯ ಮೇಲೆ ವ್ಯವಸ್ಥಿತ ದಾಳಿಗಳನ್ನು ನಡೆಸುತ್ತಿದೆ ಎಂದು ಆರೋಪಿಸಿದ ರಾಹುಲ್, ಆಡಳಿತ ಪಕ್ಷವು ಪ್ರಸ್ತಾಪಿಸಿದ ವಿಚಾರಗಳನ್ನು ಲಕ್ಷಾಂತರ ಜನರು ವಿರೋಧಿಸಿ ದ್ದಾರೆ. ಪ್ರಧಾನಿ ಮೋದಿಯವರ ಆದೇ ಶದ ಮೇರೆಗೆ ನನ್ನ ಮೇಲೆ ದಾಳಿ ನಡೆದಿದೆ. 20ಕ್ಕೂ ಹೆಚ್ಚು ಪ್ರಕರಣಗಳು ನನ್ನ ವಿರುದ್ಧ ದಾಖಲಾ ಗಿವೆ. ನನ್ನ ಮನೆಯನ್ನು ಕಿತ್ತುಕೊಳ್ಳಲಾ ಯಿತು, ಇ.ಡಿ 55 ಗಂಟೆಗಳ ವಿಚಾರಣೆ ನಡೆಸಿತು ಎಂದು ಆರೋಪಿಸಿದರು. ಅಗ್ನಿಪಥ್ ಯೋಜನೆಯು ಪ್ರಧಾನಿ ಮೋದಿ ಯ ಕೂಸು. ಆದರೆ ಸಶಸ್ತ್ರ ಪಡೆಗಳದ್ದಲ್ಲ. ನಮ್ಮ ಸರಕಾರ ಬಂದಾಗ ಅಗ್ನಿಪಥ್ ಯೋಜನೆಯನ್ನು ರದ್ದುಗೊಳಿಸುತ್ತೇವೆ. ಇದು ಸಶಸ್ತ್ರ ಪಡೆಗಳು ಮತ್ತು ದೇಶಭಕ್ತಿಗೆ ವಿರುದ್ಧವಾಗಿದೆ. ಬಿಜೆಪಿಯ ನೀತಿಗಳು, ರಾಜಕಾರಣವು ಮಣಿಪುರವನ್ನು ಭಸ್ಮ ಮಾಡಿದೆ, ನಾಗರಿಕ ಯುದ್ಧಕ್ಕೆ ನೂಕಿದೆ. ಆದರೂ ಪ್ರಧಾನಿ ಮೋದಿ ರಾಜ್ಯಕ್ಕೆ ಈವರೆಗೂ ಭೇಟಿ ನೀಡಿಲ್ಲ ಎಂದರು.

ನೀವು ಹಿಂದೂಗಳೇ ಅಲ್ಲ : ಬಿಜೆಪಿ ಹಾಗೂ ಅದರ ಮಿತ್ರ ಪಕ್ಷಗಳ ವಿರುದ್ಧ ವಾಗ್ದಾಳಿ ಆರಂಭಿಸಿದ ರಾಹುಲ್, ಹಿಂದೂ ಧರ್ಮ ಹಾಗೂ ನಮ್ಮ ಅನೇಕ ಹಿಂದೂ ಮಹಾಪುರುಷರು ಅಹಿಂಸೆಯನ್ನು ಪ್ರತಿಪಾದಿಸುತ್ತಾರೆ. ಯೇಸು ಕ್ರಿಸ್ತನೂ ಅಹಿಂಸೆಯನ್ನೇ ಪ್ರತಿಪಾದಿಸುತ್ತಾನೆ. ಸ್ವತಃ ಕೈಯಲ್ಲಿ ತ್ರಿಶೂಲ ಹಿಡಿದಿರುವ ಮಹಾಶಿವನೂ ಅಹಿಂಸೆಯನ್ನೇ ಹೇಳುತ್ತಾನೆ. ಆದರೆ ದಿನದ 24 ಗಂಟೆ ಹಿಂದೂಗಳೆಂದು ಹೇಳುತ್ತಾ ತಿರುಗಾಡುವವರು ಹಿಂಸೆ, ಶತ್ರುತ್ವ, ಅಸತ್ಯವನ್ನೇ ಹೇಳುತ್ತಿದ್ದಾರೆ. ನೀವು ಹಿಂದೂಗಳೇ ಅಲ್ಲ ಎಂದು ರಾಹುಲ್ ಕಿಡಿಕಾರಿದರು.

ಶಿವನ ಫೋಟೋ ತೋರಿಸಿದಕ್ಕೆ ಸ್ಪೀಕರ್ ಆಕ್ಷೇಪ: ತಮ್ಮ ಭಾಷಣದ ಸಮಯದಲ್ಲಿ ರಾಹುಲ್ ಗಾಂಧಿ ಶಿವನ ಚಿತ್ರ ತೋರಿಸಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸ್ಪೀಕರ್ ಓಂ ಬಿರ್ಲಾ, ಸದನದಲ್ಲಿ ಫಲಕಗಳನ್ನು ಪ್ರದರ್ಶನ ಮಾಡಲು ಯಾವುದೇ ನಿಯಮಗಳು ಅನುಮತಿ ನೀಡುವುದಿಲ್ಲ ಎನ್ನುವುದನ್ನು ನೀವು ತಿಳಿದುಕೊಂಡಿರಬೇಕು ಎಂದು ಹೇಳಿದರು. ಇಸ್ಲಾಂ ಮತ್ತು ಸಿಖ್ ಧರ್ಮ ಸೇರಿದಂತೆ ಎಲ್ಲ ಧರ್ಮಗಳು ಧೈರ್ಯ ಮತ್ತು ನಿರ್ಭೀತರಾಗಿರು ವುದರ ಮಹತ್ವವನ್ನು ಒತ್ತಿಹೇಳುತ್ತವೆ. ಎಲ್ಲ ಧರ್ಮಗಳು ಧೈರ್ಯದ ಬಗ್ಗೆ ಮಾತನಾಡುತ್ತವೆ, ಇಸ್ಲಾಂ, ಕ್ರೈಸ್ತ, ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳು ನಿರ್ಭಯತೆ ಮತ್ತು ಅಹಿಂಸೆಯ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತವೆ ಎಂದು ಹೇಳಿದರು.

ಕೆಎಸ್‌ಆರ್‌ಟಿಸಿಯಲ್ಲೂ ಕಾರ್ಡ್ ಯುಪಿಐನಲ್ಲೇ ಟಿಕೆಟ್ ಪಡೆಯಿರಿ

← ಮೊದಲಪುಟದಿಂದ

ಬಾಡಿಗೆ ಆಧಾರದಲ್ಲಿ ಯಂತ್ರಗಳ ಖರೀದಿ: ಎಲೆಕ್ಟ್ರಾನಿಕ್ ಟಿಕೆಟಿಂಗ್‌ಗೆ ಸರಿಹೊಂದುವ ಯಂತ್ರಗಳನ್ನು ಬಾಡಿಗೆ ಆಧಾರದಲ್ಲಿ ಖರೀದಿಸಲು ಕೆಎಸ್‌ಆರ್‌ಟಿಸಿ ಮುಂದಾಗಿದೆ. ಸಮಗ್ರ ಟಿಕೆಟಿಂಗ್ ತಂತ್ರಾಂಶದ ವಿನ್ಯಾಸ, ಅಭಿವೃದ್ಧಿ, ಅನುಷ್ಠಾನ, ವೆಬ್ ಹೋಸ್ಟಿಂಗ್, ಕಾರ್ಯಾಚರಣೆ ಮತ್ತು ನಿರ್ವಹಣೆಯ ಜತೆಗೆ ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ಯಂತ್ರಗಳ ಪೂರೈಕೆದಾರರನ್ನು ಆಯ್ಕೆ ಮಾಡಲು ಟೆಂಡರ್ ಕರೆಯಲಾಗಿತ್ತು. ಇದೀಗ ಈ ಟೆಂಡರ್ ಅನ್ನು ದೆಹಲಿ ಮೂಲದ ಮೇಎಬಿಕ್ಸ್ ಕ್ಯಾಶ್ ಸಂಸ್ಥೆ ಪಡೆದುಕೊಂಡಿದೆ. ಈ ಸಂಸ್ಥೆ ಯಂತ್ರಗಳನ್ನು ಪೂರೈಸಲಿದ್ದು, ಆರಂಭಿಕ ಹಂತದಲ್ಲಿ 10245 ಟಿಕೆಟಿಂಗ್ ಯಂತ್ರ ಗಳನ್ನು ಬಳಸಿಕೊಳ್ಳ ಲಾಗುತ್ತಿದೆ. ಬಳಿಕ ಸಂಖ್ಯೆಗೆ ಅನುಗುಣವಾಗಿ ಯಂತ್ರ ಬಳಸಿಕೊಳ್ಳಲು ಮುಂದಾಗಿದೆ.

ಮುಡಾ ಹಗರಣ: ತನಿಖೆಗೆ ಆದೇಶ

← ಮೊದಲಪುಟದಿಂದ

ಈ ಕುರಿತು ಸಭೆ ಬಳಿಕ ಪ್ರತಿಕ್ರಿಯೆ ನೀಡಿದ ಸಚಿವರು '' ನಮ್ಮ ಅವಧಿಯಲ್ಲಿ ಅಕ್ರಮಕ್ಕೆ ಅವಕಾಶ ಕೊಟ್ಟಿಲ್ಲ. ಬಿಜೆಪಿ ಸರಕಾರ ಅಧಿಕಾರದಲ್ಲಿ ಈ ನಿಯಮ ಜಾರಿಗೆ ತಂದಿದೆ. ಅಲ್ಲಿಂದ ಏನು ಆಗಿದೆ ಎಂಬುದನ್ನು ತಿಳಿಯಬೇಕಿದೆ. 2023ರ ಅಕ್ಟೋಬರ್ 27ರಂದು ನಿವೇಶನ ಹಂಚಿಕೆ ಆದೇಶ ಮಾಡಲಾಗಿದೆ. 2020ನೇ ಇಸವಿಯಲ್ಲಿ 50-50 ಅನುಪಾತ ಜಾರಿಗೆ ಬಂದಿದೆ. ಆದರೆ ಮುಡಾ ನೀಡಿರುವ ಜಾಗಕ್ಕೆ ಸಂಬಂಧಿಸಿ ಸಚಿವ ಸಂಪುಟದಲ್ಲಿ ಯಾವುದೇ ತೀರ್ಮಾನ ಆಗಿಲ್ಲ. ಈವರೆಗೆ ಇದೇ ನಿಯಮದಲ್ಲಿ ಮುಡಾ ಅಧಿಕಾರಿಗಳು ಸಾಕಷ್ಟು ನಿವೇಶನ ನೀಡಿದ್ದಾರೆ ಎಂದು ಸಚಿವರು ತಿಳಿಸಿದರು.

ನನ್ನ ಖಾಲಿ ಮಾಡಿಸಲಾಗಲ್ಲ

← ಮೊದಲಪುಟದಿಂದ

ಸಚಿವರ ವಿರುದ್ಧ ದೂರಿದ ನಾಯಕರು: ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ವಿನಯ್ ಕುಲಕರ್ಣಿ ಸೇರಿದಂತೆ ಹಲವು ಪದಾಧಿಕಾರಿಗಳು ಹಲವು ಸಚಿವರ ವಿರುದ್ಧ ದೂರು ನೀಡಿದ್ದಾರೆ ಎಂದು ತಿಳಿದುಬಂದಿದೆ. ಸಚಿವರು ಪಕ್ಷದ ಮುಖಂಡರಿಗೆ, ಕಾರ್ಯಕರ್ತರಿಗೆ ಮೂರು ಕಾಸಿನಬೆಲೆ ಕೊಡುತ್ತಿಲ್ಲ, ಮುಖಕೊಟ್ಟು ಮಾತನಾಡಲ್ಲ. ಲೋಕಸಭಾ ಚುನಾವಣೆಯಲ್ಲಿ ನಮಗೆ ಹಿನ್ನಡೆಯಾಗಲು, ಸಂಘಟನೆಯಲ್ಲಿ ನಾವು ವಿಫಲವಾಗಲು ಇದೇ ಕಾರಣ. ಕಾರ್ಯಕರ್ತರು, ಮುಖಂಡರು ಹೋಗಲಿ ಶಾಸಕರಿಗೆ ಸರಿಯಾದ ಮರ್ಯಾದೆ ಸಿಗುತ್ತಿಲ್ಲ. ಈ ವಿಷಯನ್ನು ಸಿಎಂ, ಡಿಸಿಎಂ ಗಂಭೀರವಾಗಿ ಪರಿಗಣಿಸಬೇಕು. ಇಲ್ಲದಿದ್ದರೆ, ಸ್ಥಳೀಯ ಸಂಸ್ಥೆ ಚುನಾವಣೆ ವೇಳೆಗೆ ಭಾರಿ ಹಿನ್ನಡೆಯಾಗಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.ಇನ್ನು ಮಾಜಿ ಸಂಸದ ಉಗ್ರಪ್ಪ ಅವರು ಲೋಕಸಭಾ ಚುನಾವಣೆ ಹಿನ್ನಡೆಗೆ ಸಚಿವರುಗಳೇ ಕಾರಣ ಎಂದು ಪರೋಕ್ಷವಾಗಿ ಆರೋಪಿಸಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆಯಾಗಿದೆ. ಒಂದೇ ವರ್ಷದಲ್ಲಿ 160 ಕ್ಷೇತ್ರದಲ್ಲಿ ಹಿನ್ನಡೆಯಾಗಿದೆ ಎಂದರೆ ಏನರ್ಥ? 19 ಸಚಿವರು ಕ್ಷೇತ್ರದಲ್ಲಿ ಹಿನ್ನಡೆಯಾಗಿದೆ. ಅಲ್ಲಿ ಜನಪ್ರಿಯತೆ ಕಳೆದುಕೊಂಡರೇ? ಕ್ಷೇತ್ರ ಮರೆತರೇ? ಎಂದು ಪ್ರಶ್ನಿಸಿದ್ದಾರೆ ಎಂದು ತಿಳಿದುಬಂದಿದೆ.

ಖಾಸಗಿ ವಲಯದ ಮೀಸಲಿಗೆ ಗಡುವು

ಪ್ರತಿಭಟನೆ ಮಾಡಲು ಪ್ರತಿಯೊಬ್ಬರಿಗೂ ಹಕ್ಕಿದೆ. ಆದರೆ ಅದು ಶಾಂತಿಯುತ ಪ್ರತಿಭಟನೆಯಾದರೆ ಯಾವುದೇ ಸಮಸ್ಯೆಯಿಲ್ಲ. ಆದರೆ ಕಾನೂನು ಕೈಗೆತ್ತಿಕೊಳ್ಳಲು ಮುಂದಾದರೆ ಕಾನೂನಾತ್ಮಕ ಕ್ರಮವಹಿಸಲಾಗುವುದು. ಕರವೇ ಕರೆ ನಡೆಸಿರುವ ಪ್ರತಿಭಟನೆಯ ಮೇಲೆ ನಿಗಾ ಇಡಲಾಗಿದೆ.

-ಡಾ.ಜಿ.ಪರಮೇಶ್ವರ್ ಗೃಹ ಸಚಿವ

← ಮೊದಲಪುಟದಿಂದ

ಸರೋಜಿನಿ ಮಹಿಷಿ ವರದಿ ಜಾರಿಗೊಳಿಸಲು ಹಾಗೂ ಕನ್ನಡಿಗರಿಗೆ ಖಾಸಗಿ ವಲಯದಲ್ಲಿ ಉದ್ಯೋಗ ಮೀಸಲಾತಿ ಕಲ್ಪಿಸಲು ರಾಜ್ಯ ಸರಕಾರಕ್ಕೆ ಒಂದು ತಿಂಗಳ ಕಾಲಾವಕಾಶ ನೀಡಿದ್ದೇವೆ. ಒಂದು ವೇಳೆ ಅನುಷ್ಠಾನಗೊಳಿಸಲು ವಿಫಲವಾದರೆ ನಮ್ಮ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಲಿದೆ ಎಂದು ಎಚ್ಚರಿಕೆ ನೀಡಿದ ಅವರು, ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲು ಸಮಯಾವಕಾಶ ಕೋರಿದ್ದೇವೆ ಎಂದರು.

ಶೇ.80ರಷ್ಟು ಮೀಸಲು ನೀಡಿ: ಇತರೆ ರಾಜ್ಯಗಳಿಂದ ಉದ್ಯೋಗ ಅರಸಿ ಬೆಂಗಳೂರಿನತ್ತ ವಲಸೆ ಬರುವವರ ಸಂಖ್ಯೆ ಹೆಚ್ಚಳವಾಗಿದೆ. ಖಾಸಗಿ ವಲಯಗಳಲ್ಲಿ ಕನ್ನಡೇತರರಿಗೆ ಹೆಚ್ಚಿನ ಉದ್ಯೋಗ ಅವಕಾಶ ನೀಡಲಾಗುತ್ತಿದೆ. ಇದರಿಂದ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ. ಖಾಸಗಿ ವಲಯದಲ್ಲಿ ಸಿ ಮತ್ತು ಡಿ ದರ್ಜೆಯ ಹುದ್ದೆಗಳಲ್ಲಿ ಶೇ.100 ರಷ್ಟು ಕನ್ನಡಿಗರಿಗೆ ಮೀಸಲು ನೀಡಬೇಕು. ಇತರೆ ಗ್ರೂಪ್‌ಗಳಲ್ಲಿ ಶೇ.80 ರಷ್ಟು ಮೀಸಲಾತಿ ನೀಡುವಂತೆ ಒತ್ತಾಯಿಸಿದರು.

ಕೈಗಾರಿಕಾ ಉದ್ಯೋಗ ಸ್ಥಾಯಿ ಆದೇಶ ಕಾಯ್ದೆ 1946 ರ ಅನ್ವಯ ಬಲಿಷ್ಠ ಕಾನೂನೂ ರೂಪಿಸಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ನೀಡಬೇಕು. ಖಾಸಗಿ ಸಂಸ್ಥೆಗಳ ಸಿ ಮತ್ತು ಡಿ ದರ್ಜೆ ಹುದ್ದೆ ಶೇ.100 ಕನ್ನಡಿಗರಿಗೆ ಮೀಸಲಿಡಬೇಕು.ಇತರೆ ಹುದ್ದೆ ಶೇ.80 ಕನ್ನಡಿಗರಿಗೆ ನೀಡಬೇಕು. ಹದಿನೈದು ವರ್ಷ ರಾಜ್ಯದಲ್ಲಿದ್ದವರಿಗೆ ಕನ್ನಡಿಗರೆಂದು ಪರಿಗಣಿಸುವ ನಿಯಮವಿದ್ದು, ಅಂತವರಿಗೆ ಕನ್ನಡ ಪರೀಕ್ಷೆ ನಡೆಸಿ ಉತ್ತೀರ್ಣರಾದರೆ ಮಾತ್ರ ಕನ್ನಡಿಗರೆಂದು ಪರಿಗಣಿಸಬೇಕು ಎಂದರು.

ನಿಯಮ ಪಾಲಿಸದ ಸಂಸ್ಥೆಗಳ ಪರವಾನಗಿಯನ್ನು ರದ್ದು ಮಾಡಬೇಕು. ಸರಕಾರ ನೀಡಿರುವ ಭೂಮಿ, ಸವಲತ್ತುಗಳನ್ನು ವಾಪಾಸ್ ಪಡೆದು ಕ್ರಿಮಿನಲ್ ಮೊಕದ್ದಮೆ ಹಾಕಬೇಕು. ರಾಜ್ಯ ಸರಕಾರಿ ಸಂಸ್ಥೆ ಮತ್ತು ಸಾರ್ವಜನಿಕ ವಲಯದಲ್ಲಿ ಶೇ.100 ಕನ್ನಡಿಗರಿಗೆ ಮೀಸಲಾತಿ ನೀಡಬೇಕು. ಕೇಂದ್ರ ಸರಕಾರದ ಇಲಾಖೆಗಳಲ್ಲಿ ಗ್ರೂಪ್ ಸಿ ಹಾಗೂ ಡಿ ಹುದ್ದೆಗಳಲ್ಲಿ ಶೇ.100 ಕನ್ನಡಿಗರಿಗೆ ಮೀಸಲಾತಿ ಸಿಗಬೇಕು. ಉಳಿದ ಉದ್ಯೋಗದಲ್ಲಿ ಶೇ.90 ಮೀಸಲಾತಿ ನೀಡಬೇಕು ಎಂದು ಮನವಿ ಮಾಡಿದರು.

ಈ ಪ್ರತಿಭಟನಾ ಮೆರವಣಿಗೆಯಲ್ಲಿ ಕನ್ನಡ ಚಿತ್ರರಂಗದ ಪ್ರೇಮ್, ಪೂಜಾ ಗಾಂಧಿ ಸೇರಿದಂತೆ ಅನೇಕ ನಟರು ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದರು. ಯಾದಗಿರಿ, ಚಿತ್ರದುರ್ಗ, ಹಾವೇರಿ, ಧಾರವಾಡ, ಬೆಳಗಾವಿ ಮತ್ತಿತರ ಕಡೆ ಇದೇ ರೀತಿಯ ಪ್ರತಿಭಟನೆಗಳು ನಡೆಯುತ್ತಿವೆ.

ಟ್ವೀಟೂ-ಖಾರಾ

ಜೆ. ಪಿ ನಡ್ಡಾ
ಕೇಂದ್ರ ಸಚಿವ

ಪಶ್ಚಿಮ ಬಂಗಾಳದಲ್ಲಿ ಜೋಡಿಯೊಂದರ ಮೇಲೆ ಬಹಿರಂಗವಾಗಿಯೇ ಹಲ್ಲೆ ನಡೆಯುತ್ತಿದ್ದರೇ ರಾಜ್ಯ ಸರಕಾರ ಏನು ಮಾಡುತ್ತಿದೆ. ಈ ಅಮಾನವೀಯ ಘಟನೆ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಕ್ರೂರತ್ವಕ್ಕೆ ನಿದರ್ಶನ. ಇದನ್ನು ವಿರೋಧಿಸುವ ಬದಲು ಟಿಎಂಸಿ ಶಾಸಕರು ಸಮರ್ಥಿಸುತ್ತಿದ್ದಾರೆ. ಸಂದೇಶ್ ಖಾಲಿ ಸೇರಿದಂತೆ ರಾಜ್ಯದ ಯಾವುದೇ ಪ್ರದೇಶದಲ್ಲೂ ಮಹಿಳೆಯರಿಗೆ ಭದ್ರತೆ ಇಲ್ಲ ಎನ್ನುವುದು ಸಾಬೀತಾಗಿದೆ.

ಬಿಜೆಪಿ
ಕರ್ನಾಟಕದ

ಕುಲಕುಲವೆಂದು ಹೊಡೆದಾಡದಿರಿ ಎಂದ ಕನಕದಾಸರ ನುಡಿಗೆ ವಿರುದ್ಧವಾಗಿ ಸಿದ್ದರಾಮಯ್ಯ ಸರಕಾರ ಮತ್ತೊಮ್ಮೆ ಸಮಾಜ ಒಡೆಯುವ ಕೆಲಸ ಮಾಡುತ್ತಿದೆ.ಪಠ್ಯದಲ್ಲಿ ವೀರಶೈವ ಪದವನ್ನು ತೆರವು ಮಾಡಿ ವೀರಶೈವ-ಲಿಂಗಾಯತರ ನಡುವೆ ಗೊಂದಲ ಸೃಷ್ಟಿಸಿ ಜಾತಿಗಳನ್ನು ಎತ್ತಿಕಟ್ಟುವ ಹೀನ ಕೆಲಸಕ್ಕೆ ಕಾಂಗ್ರೆಸ್ ಸರಕಾರ ಕೈಹಾಕಿದೆ.

ಸಮಿತಿಯಿಂದ ಪ್ರತಿ ವಿಧಾನಸಭಾ ಕ್ಷೇತ್ರವಾರು ಅಧ್ಯಯನ: ಡಿ.ಕೆ.ಶಿವಕುಮಾರ್ | ಕಾರ್ಯಕರ್ತರಿಗೆ ಸಚಿವರ ದರ್ಶನ

ಸೋಲಿನ ಪರಾಮರ್ಶೆಗೆ ಸತ್ಯಶೋಧನ ಸಮಿತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಲೋಕಸಭಾ ಚುನಾವಣೆಯಲ್ಲಿ ನಿರೀಕ್ಷಿತ ಸ್ಥಾನಗಳು ಗೆಲ್ಲದಿರುವುದರಿಂದ ಸೋಲಿನ ಪರಾಮರ್ಶೆ ನಡೆಸಲು ಸತ್ಯಶೋಧನ ಸಮಿತಿ ರಚನೆ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಕೆಪಿಸಿಸಿ ಕಚೇರಿಯಲ್ಲಿ ನಡೆದ ಪದಾಧಿಕಾರಿಗಳ ಸಭೆಯ ಬಳಿಕ ಮಾತನಾಡಿದ ಅವರು, ಕರ್ನಾಟಕ ಲೋಕಸಭಾ ಚುನಾವಣೆಯ ಫಲಿತಾಂಶ ಸಮಾಧಾನಕರವಾಗಿಲ್ಲ. 15ಕ್ಕೂ ಹೆಚ್ಚು ಸ್ಥಾನಗಳನ್ನು ಪಡೆಯುತ್ತೇವೆ ಎನ್ನುವ ನಿರೀಕ್ಷೆ ಸುಳ್ಳಾಗಿದೆ. ಕಲ್ಯಾಣ ಕರ್ನಾಟಕ ಹೊರತಾಗಿ ಮಿಕ್ಕ ಕಡೆ ಪಕ್ಷಕ್ಕೆ ಏಕೆ ಸೋಲಾಯಿತು ಎಂದು ಪರಾಮರ್ಶೆಗೆ ಒಳಪಡಿಸಲು ಸತ್ಯಶೋಧನ ಸಮಿತಿ ರಚಿಸಲಾಗುವುದು. ಈ ಸಮಿತಿ ಪ್ರತಿ ವಿಧಾನಸಭಾ ಕ್ಷೇತ್ರವಾರು ಅಧ್ಯಯನ ನಡೆಸಿ ವರದಿ ನೀಡುವುದು ಎಂದರು.

ಚುನಾವಣೆಯಲ್ಲಿ ಹೊಸಮುಖಗಳಿಗೆ ಹಾಗೂ ಆರು ಜನ ಮಹಿಳೆಯರಿಗೆ ಅವಕಾಶ ಮಾಡಿಕೊಡಲಾಯಿತು. ಇದರಲ್ಲಿ ಇಬ್ಬರು ಗೆದ್ದಿದ್ದಾರೆ. ಕಾಂಗ್ರೆಸ್ ಕೇವಲ ಎರಡು ಸ್ಥಾನಗಳನ್ನು ಮಾತ್ರ ಗಳಿಸುತ್ತದೆ ಎಂದು ಮಾಧ್ಯಮಗಳ ಹೇಳಿದ್ದವು. ಆದರೆ ಎಲ್ಲವೂ ತಲೆಕೆಳಗಾಗಿ ನಾವು 9 ಸ್ಥಾನಗಳನ್ನು ಗೆದ್ದೆವು. ಈ ಫಲಿತಾಂಶ ನಮಗೆ ಸಮಾಧಾನ ತಂದಿಲ್ಲ. ಇನ್ನು ಇನ್ನು ನಾಲ್ಕೈದು ಸ್ಥಾನಗಳನ್ನು ಗೆಲ್ಲಬಹುದಾಗಿತ್ತು. ಎಲ್ಲಿ ಎಡವಲಾಯಿತು.

ಎಲ್ಲಾ ಯೋಜನೆಗಳನ್ನು ಅತ್ಯಂತ ಯಶಸ್ವಿಯಾಗಿ ಜಾರಿಗೆ ತಂದರು ಏಕೆ ಜನ ನಮ್ಮ ಕೈ ಹಿಡಿಯಲಿಲ್ಲ ಎಂದು ಚಿಂತನೆ ಮಾಡಲಾಗು ವುದು ಎಂದು ಸ್ಪಷ್ಟಪಡಿಸಿದರು. ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಮೂರನೇ ಅವಧಿಗೆ ಅಧಿಕಾರ ಹಿಡಿದ ತಕ್ಷಣ ಷೇರು ಪೇಟೆ ಹಗರಣ, ನೀಟ್ ಮತ್ತು ನೆಟ್ ಹಗರಣ ನಡೆಯಿತು. ಇದರ ಕುರಿತು ಖಂಡನಾ ನಿರ್ಣಯ ಅಂಗೀಕಾರ ಮಾಡಲಾಯಿತು. ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯ ಖಂಡಿಸಿ ಹೋರಾಟ ಮುಂದುವರೆಸಲಾಗುವುದು. ಲೋಕಸಭಾ ಸದನದಲ್ಲಿ ಬಿಜೆಪಿಯ ಹಗರಣಗಳ ಕುರಿತು ಚರ್ಚೆ ನಡೆಸಲು ಅವಕಾಶ ಮಾಡಿಕೊಟ್ಟಿಲ್ಲ. ಅಲ್ಲದೇ ಮೈಕ್‌ಗಳನ್ನು ಬಂದ್ ಮಾಡಲಾಗಿತ್ತು ಎಂದು ಆರೋಪಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ರಾಜ್ಯ ಪದಾಧಿಕಾರಿಗಳ ಸಭೆ ನಡೆಯಿತು. ಡಿಸಿಎಂ ಡಿ.ಕೆ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ನಾಯಕರು ಭಾಗವಹಿಸಿದ್ದರು.

15 ದಿನಗಳಿಗೆ ಒಮ್ಮೆ ಜಿಲ್ಲಾ ಕೇಂದ್ರ ಹಾಗೂ ತಿಂಗಳಿಗೆ ಒಮ್ಮೆ ಬೆಂಗಳೂರಿನಲ್ಲಿ ಮೂರ ರಿಂದ ನಾಲ್ಕು ಗಂಟೆ ಗಳ ಕಾಲ ಕಾರ್ಯ ಕರ್ತರನ್ನು ಭೇಟಿ ಮಾಡಬೇಕು ಎಂದು ಸೂಚನೆ ನೀಡಲಾಗಿದೆ. ಪಕ್ಷದ ಕಚೇರಿಯಲ್ಲಿ ಇಬ್ಬರು ಮಂತ್ರಿ ಗಳ ಭೇಟಿಗೆ ಅವಕಾಶ ಕಲ್ಪಿಸಲಾಗುವುದು. ಈ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳು ಈ ಕಾರ್ಯ ಕ್ರಮ ಉದ್ಘಾಟನೆ ಮಾಡುತ್ತಾರೆ. ಶೀಘ್ರದಲ್ಲಿ ದಿನಾಂಕ ಪ್ರಕಟ ಮಾಡಲಾಗುವುದು.

-ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಮೂರು ಸಭೆಗೆ ಬರದ ಪದಾಧಿಕಾರಿಗಳಿಗೆ ಸ್ಥಾನ ನಷ್ಟ

ಪಕ್ಷದಲ್ಲಿ ಶಿಸ್ತು ಮುಖ್ಯ. ಯಾರೂ ಸಹ ಸೂಚನೆಗಳನ್ನು ಉಲ್ಲಂಘಿಸಿ ಬಹಿರಂಗವಾಗಿ ಮಾತನಾಡಬಾರದು ಎಂದು ಸೂಚನೆ ನೀಡಲಾಗಿದೆ. ಸ್ಥಾನ ಪಡೆದುಕೊಂಡಿರುವ ಪದಾಧಿಕಾರಿಗಳು ಜಿಲ್ಲಾ ಹಾಗೂ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕೆಲಸ ಮಾಡದೆ, ಸಭೆ ನಡೆಸದೆ ಇದ್ದರೆ ಕ್ರಮ ತೆಗೆದುಕೊಳ್ಳಲಾಗುವುದು. ಮೂರು ಸಭೆಗಳಿಗೆ ಗೈರುಹಾಜರಾದರೆ ವಿಶ್ರಾಂತಿ ನೀಡಲಾಗುವುದು. ಕೂಡಲೇ ಬೇರೆಯವರಿಗೆ ಅಧಿಕಾರ ನೀಡಲಾಗುವಂತಹ ವ್ಯವಸ್ಥೆ ಮಾಡಲಾಗಿದೆ ಎಂದು ಸ್ಪಷ್ಟಪಡಿಸಿದರು. ತಾಲೂಕು, ಜಿಲ್ಲಾ ಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿಗಳಿಗೆ ಚುನಾವಣೆ ವೇಳೆಯಲ್ಲಿ ತರಾತುರಿಯಲ್ಲಿ ನೇಮಕಗಳಾಗಿವೆ. ನಾನು ವೈಯಕ್ತಿಕವಾಗಿ ಒಂದಷ್ಟು ನಿಯಮಾವಳಿಗಳನ್ನು ರೂಪಿಸಿದ್ದು ಅದರಂತೆ ಕಾರ್ಯನಿರ್ವಹಿಸಲು ಸೂಚನೆ ನೀಡಲಾಗಿದೆ. ಸಮಿತಿಯಲ್ಲಿ ಯುವ ಕಾಂಗ್ರೆಸ್, ಅಲ್ಪಸಂಖ್ಯಾತ ಸೇರಿದಂತೆ ಎಲ್ಲಾ ವಿಭಾಗಗಳ ಸದಸ್ಯರಿಗೆ ಅವಕಾಶ ಮಾಡಿಕೊಡಬೇಕು ಎಂದು ಸೂಚನೆ ನೀಡಲಾಗಿದೆ. ಕಾರ್ಯಕರ್ತರಿಗೆ ಸಾಕಷ್ಟು ಸಮಿತಿಗಳಿಗೆ ನೇಮಕ ಮಾಡಲು ಅವಕಾಶವಿದ್ದು ಇಲ್ಲೆಲ್ಲಾ ಶೀಘ್ರ ನೇಮಕ ಮಾಡಬೇಕು ಎಂದರು.

ಉಪಚುನಾವಣೆ ಎದುರಿಸಲು ತಂಡ ರಚನೆ

ಮೂರು ವಿಧಾನಸಭಾ ಕ್ಷೇತ್ರಗಳಿಗೆ ನಡೆಯುವ ವಿಧಾನಸಭಾ ಉಪಚುನಾವಣೆಯನ್ನು ಎದುರಿಸಲು ಮೂರು ತಂಡಗಳನ್ನು ರಚಿಸಲಾಗಿದೆ.

ಈಗಾಗಲೇ ಶಿಂಗ್ಗಾವಿ ಕ್ಷೇತ್ರದ ವರದಿ ನೀಡಲಾಗಿದೆ. ಜುಲೈ 3 ರ ನಂತರ ಸಂಡೂರಿನ ವರದಿ ಸಲ್ಲಿಸುತ್ತಾರೆ. ಸಚಿವರಾದ ಚಲುವರಾಯ ಸ್ವಾಮಿ ಅವರು ಚನ್ನಪಟ್ಟಣ ಕ್ಷೇತ್ರದ ಕುರಿತು ವರದಿ ನೀಡುತ್ತಾರೆ.

ಪಕ್ಷದ ಸಭೆಗಳನ್ನು ಮುಂದಿನ ದಿನಗಳಲ್ಲಿ ಕಡ್ಡಾಯವಾಗಿ ಶಾಸಕರ ಮನೆಗಳಲ್ಲಿ ಸಭೆ ನಡೆಸುವಂತಿಲ್ಲ. ಸಭೆಗೆ ಅವರ ಬೆಂಬಲಿಗರ ಹೊರತಾಗಿ ಪದಾಧಿಕಾರಿಗಳು ಬರಬೇಕು. ಆದ್ದರಿಂದ ಈ ಕ್ರಮಕ್ಕೆಗೊಳ್ಳಲಾಗಿದೆ. ಸಭೆಗಳನ್ನು ಪಕ್ಷದ ಕಚೇರಿ ಅಥವಾ ಕಲ್ಯಾಣ ಮಂಟಪದಲ್ಲಿ ನಡೆಸಬೇಕು ಎಂದು ಸೂಚನೆ ನೀಡಲಾಗಿದೆ. ಒಂದು ವೇಳೆ ಯಾರಾದರೂ ಈ ನಿಯಮ ಪಾಲಿಸದಿದ್ದರೆ ಕ್ರಮವಹಿಸಲಾಗುವುದು ಎಂದು ಡಿಸಿಎಂ ಎಚ್ಚರಿಕೆ ನೀಡಿದರು.

ಫೈನಲ್ ಪಂದ್ಯವನ್ನು ವಿಮಾನ ನಿಲ್ದಾಣದಲ್ಲಿ ವೀಕ್ಷಿಸಿದ ವಿಡಿಯೊ ವೈರಲ್ | ಒಂದೂವರೆ ಲಕ್ಷಕ್ಕೂ ಹೆಚ್ಚು ಲೈಕ್

ಸಿಎಂ ಕ್ರಿಕೆಟ್ ವೀಕ್ಷಣೆ: ಭಾರಿ ವೈರಲ್



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕ್ರಿಕೆಟ್ ಕ್ರೇಜ್ ಏನು ಹೊಸದಲ್ಲ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಯಾವುದೇ ಪಂದ್ಯಾವಳಿ ನಡೆದರೂ, ಒಂದು ಕ್ಷಣವಾದರೂ ಹೋಗಿ ಬರುವ ರೂಢಿಯಿಟ್ಟುಕೊಂಡಿದ್ದಾರೆ. ಇನ್ನು ಪ್ರಮುಖ ಪಂದ್ಯಾವಳಿಗಳಿದ್ದರೆ, ಮನೆಯಲ್ಲಿಯೇ ಆಪ್ತರೊಂದಿಗೆ ಕೂತು ವೀಕ್ಷಿಸುವುದು ಸಾಮಾನ್ಯ.

ಆದರೆ ಈ ಬಾರಿ ಟಿ20 ವಿಶ್ವಕಪ್ ಫೈನಲ್ ಪಂದ್ಯಾವಳಿಯ ದಿನದಂದು ದೆಹಲಿಯಿಂದ ವಾಪಸಾಗುತ್ತಿದ್ದ ಸಿದ್ದರಾಮಯ್ಯ ಅವರು, ವಿಮಾನವೇರುವ ಮೊದಲು ಐಪ್ಯಾಡ್‌ನಲ್ಲಿ ಪಂದ್ಯಾವಳಿ ವೀಕ್ಷಿಸಿದ್ದರು. ಈ ವಿಡಿಯೊ ಇದೀಗ ಭಾರಿ ವೈರಲ್ ಆಗಿದ್ದು, ಇತ್ತೀಚಿನ ವರ್ಷಗಳಲ್ಲಿ ರಾಜ್ಯ ರಾಜಕಾರಣಿಯೊಬ್ಬರ ವಿಡಿಯೊವೊಂದು ಈ ಪ್ರಮಾಣದಲ್ಲಿ ವೈರಲ್ ಆಗಿದ್ದು ಇದೇ ಮೊದಲು ಎನ್ನುವುದು ಗಮನಾರ್ಹ.

ಕಳೆದ ಶನಿವಾರ ಟಿ20 ವಿಶ್ವಕಪ್ ನ ಫೈನಲ್ ನಡೆದು, ಭಾರತ ತಂಡ ರೋಚಕ ಜಯದೊಂದಿಗೆ ವಿಶ್ವಕಪ್‌ಗೆ ಮುತ್ತಿಕ್ಕಿದೆ. ಪ್ರತಿ ಎಸೆತವೂ ಪಂದ್ಯದ ಗತಿ ಬದಲಿಸುವಂತಿತ್ತು. ಇಡೀ ದೇಶವೇ ಫೈನಲ್ ಪಂದ್ಯವನ್ನು ನಿಬ್ಬೆರಗಾಗಿ ವೀಕ್ಷಿಸಿದೆ. ಮೂರು ದಿನಗಳ ಕಾಲ ದೆಹಲಿ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾತ್ರಿ 8 ಗಂಟೆಗೆ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿ ಮಾಡಿ 9.30ರ ವಿಮಾನ ಹತ್ತಿ ಬೆಂಗಳೂರಿಗೆ ವಾಪಾಸಾಗಬೇಕಿತ್ತು. ಈ ಎಲ್ಲದರ ನಡುವೆ ಅವರಿಗೆ ಸಿಕ್ಕಿದ್ದು ಕೆಲವೇ ಕೆಲವು ನಿಮಿಷಗಳು ಮಾತ್ರ, ಅದೇ ಅಲ್ಪ ಬಿಡುವಿನ ಸಮಯದಲ್ಲಿ ವಿಮಾನದ ಬಾಗಿಲಲ್ಲಿ ನಿಂತು ವಿಶ್ವಕಪ್ ಟಿ20 ಫೈನಲ್ ಪಂದ್ಯ ವೀಕ್ಷಿಸಿದ್ದರು.

70 ಲಕ್ಷ ಜನ ವೀಕ್ಷಣೆ

ಈ ವಿಡಿಯೊ ಇದೀಗ ಜಾಲತಾಣದಲ್ಲಿ ಭಾರೀ ಹವಾ ಸೃಷ್ಟಿಸಿದೆ. ವಿಡಿಯೊವನ್ನು 70 ಲಕ್ಷಕ್ಕೂ ಅಧಿಕ ಜನ ವೀಕ್ಷಿಸಿದ್ದಾರೆ. 1,30,000 ಮಂದಿ ಸಿದ್ದರಾಮಯ್ಯನವರ ಕ್ರಿಕೆಟ್ ಪ್ರೇಮಕ್ಕೆ ಲೈಕ್ ಒತ್ತಿ ಮೆಚ್ಚಿದ್ದಾರೆ. ಸಾವಿರಾರು ಮಂದಿ ಕಮೆಂಟ್‌ಗಳ ಸುರಿಮಳೆಗೈದು ನಿಮ್ಮ ಕ್ರೀಡಾ ಪ್ರೀತಿಗೆ ನಾವು ಅಭಿಮಾನಿಯಾಗಿದ್ದೇವೆಂದು ಕೊಂಡಾಡಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ರಾಜಕಾರಣಿಯೊಬ್ಬರ ಸಾಮಾಜಿಕ ಜಾಲತಾಣದಲ್ಲಿ ಹಾಕಲ್ಪಟ್ಟ ಯಾವೊಂದು ವೀಡಿಯೊ ಕೂಡ ಇಷ್ಟು ವೈರಲ್ ಆಗಿಲ್ಲ ಎಂಬುದು ಗಮನಾರ್ಹ.

ಮುಖ್ಯಮಂತ್ರಿ ಸ್ಥಾನ ಹೈಕಮಾಂಡ್ ನಿರ್ಧರಿಸುತ್ತದೆ: ಶಾಸಕ ಬಾಲಕೃಷ್ಣ

ಬಾಯಿಚಪಲಕ್ಕೆ ಸಿಎಂ ಬದಲಾವಣೆ ಮಾತು

ಮಾಗಡಿ: ಯಾರೊ ತಮ್ಮ ಬಾಯಿಚಪಲಕ್ಕಾಗಿ ಮುಖ್ಯಮಂತ್ರಿ ಬದಲಾ ವಣೆ ಕುರಿತು ಮಾತನಾಡುತ್ತಾರೆ. ಶಾಸಕರು ಸಹ ಹಾದಿಬೀದಿಯಲ್ಲಿ ಹೋಗುವ ಜನರಂತೆ ಮಾತನಾಡಬಾರದು ಎಂದು ಮನವಿ ಮಾಡು ವುದಾಗಿ ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷ ಶಿಸ್ತಿನಿಂದ ನಡೆಯಬೇಕು. ಕಾರ್ಯಕರ್ತರ ಅಭಿಪ್ರಾಯಕ್ಕೆ ಗೌರವ ಕೊಡಬೇಕು. ಅವರ ಮನಸ್ಸಿಗೆ ನೋವಾಗದಂತೆ, ಧಕ್ಕೆಯಾಗದಂತೆ ಮುಖಂಡರು ನಡೆದುಕೊಳ್ಳಬೇಕು. ನಾನು ಯಾರನ್ನೂ ಮುಖ್ಯಮಂತ್ರಿ ಮಾಡೋಕೆ ಆಗಲ್ಲ, ಇಳಿಸೋಕು ಆಗಲ್ಲ. ಕಾಂಗ್ರೆಸ್ ತತ್ವ- ಸಿದ್ಧಾಂತ ಹಾಗೂ ಹೈಕಮಾಂಡ್ ಇದೆ. ಸಿ.ಎಂ ಸ್ಥಾನದ ಬಗ್ಗೆ ಅವರು ತೀರ್ಮಾನ ಮಾಡುತ್ತಾರೆ. ಅದು ಬಿಟ್ಟು ಹಾದಿಬೀದಿಯಲ್ಲಿ ಮಾತನಾಡುವುದು ಸೂಕ್ತವಲ್ಲ ಎಂದು ಅಭಿಪ್ರಾಯ ಪಟ್ಟರು. ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಚಂದ್ರಶೇಖರ ಸ್ವಾಮೀಜಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸಮುದಾಯ ಪ್ರತಿನಿಧಿಸುವ ಅವರು ಅಭಿಪ್ರಾಯ ವ್ಯಕ್ತಪಡಿಸಬಹುದು. ಅವರನ್ನು ಬಿಟ್ಟು ರಾಜಕಾರಣಿಗಳು ಮಾತನಾಡಬಾರದು ಎಂದು ಬಾಲಕೃಷ್ಣ ತಾಕೀತು ಮಾಡಿದರು.

ಸ್ವಾಮೀಜಿ ಟೀಕೆ ಸರಿಯಲ್ಲ

ಸ್ವಾಮೀಜಿ ಅವರ ಹೇಳಿಕೆ ಸಂಬಂಧಅವರನ್ನು ಟೀಕಿಸುವುದು ಸರಿಯಲ್ಲ.ಎಲ್ಲ ಸ್ವಾಮೀಜಿಗಳು ಅವರವರ ಸಮುದಾಯ ದವರು ಮುಖ್ಯಮಂತ್ರಿಯಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸುವುದು ಸಹಜ. ಹೀಗಾಗಿ, ರಾಜಕಾರಣಿಗಳು ತಮ್ಮ ಇತಿಮಿತಿಯಲ್ಲಿ ವರ್ತಿಸಬೇಕು ಎಂದು ಸಚಿವ ಕೆ.ಎನ್. ರಾಜಣ್ಣ ಹೇಳಿಕೆಯನ್ನು ಶಾಸಕ ಎಚ್.ಸಿ.ಬಾಲಕೃಷ್ಣ ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡರು.

ಡಾ.ಶೃತಿ ಹೆಗಡೆಗೆ ವಿಶ್ವ ಸುಂದರಿ ಕಿರೀಟ

ಶಿರಸಿ: ಶಿರಸಿ ತಾಲೂಕಿನ ಮುಂಡಿಗೆಸರ ಮೂಲದ ಹುಬ್ಬಳ್ಳಿಯ ಯುವತಿಯೊಬ್ಬಳು ಇತ್ತೀಚೆಗೆ ಅಮೆರಿಕದಲ್ಲಿ ಜರುಗಿದ ಸೌಂದರ್ಯ ಸ್ಪರ್ಧೆಯಲ್ಲಿ ವಿಜೇತಳಾಗಿದ್ದಾಳೆ.

ಮುಂಡಿಗೆಸರ ಅಜ್ಜೊರಮನೆ ಕುಟುಂಬದವರಾದ ಹುಬ್ಬಳ್ಳಿಯಲ್ಲಿ ನೆಲೆಸಿದ ಕೃಷ್ಣ ಹೆಗಡೆ, ಕಮಲಾ ದಂಪತಿಯ ಪುತ್ರಿ ಶೃತಿ ಹೆಗಡೆ ಅಮೆರಿಕದಲ್ಲಿ ನಡೆದ ಸ್ಪರ್ಧೆಯಲ್ಲಿ ವಿಶ್ವ ಸುಂದರಿಯಾಗಿ ಹೊರಹೊಮ್ಮಿದ್ದಾಳೆ. ಆಕೆ ಈ ಮೊದಲು 2018 ರಲ್ಲಿ ಮಿಸ್ ಕರ್ನಾಟಕ ರನ್ನರ್ ಅಪ್, ಮಿಸ್ ಸೌತ್ ಇಂಡಿಯಾ ವಿಜೇತೆಯಾಗಿದ್ದಳು. 2023 ರಲ್ಲಿ ಮಿಸ್ ಏಷ್ಯಾ ಇಂಟರ್‌ನ್ಯಾಷನಲ್ ಇಂಡಿಯಾ ಪ್ರಶಸ್ತಿ ಗೆದ್ದಿದ್ದ ಶೃತಿ ಇದೀಗ ವಿಶ್ವ ಸುಂದರಿ ಕಿರೀಟ ಮುಡಿಗೇರಿಸಿಕೊಂಡಿದ್ದಾಳೆ.

ಹುಬ್ಬಳ್ಳಿಯಲ್ಲಿಯೇ ಎಂ.ಬಿ.ಬಿ.ಎಸ್. ಪೂರೈಸಿರುವ ಡಾ.ಶೃತಿ ಹೆಗಡೆ, ಚರ್ಮರೋಗ ತಜ್ಞೆಯಾಗುವ ಹಂಬಲದಿಂದ ತುಮಕೂರಿನಲ್ಲಿ ಎಮ್.ಡಿ. ಅಧ್ಯಯನ ನಡೆಸುತ್ತಿದ್ದಾರೆ. ಭರತ ನಾಟ್ಯ ಕಲಾವಿದೆಯೂ ಆಗಿದ್ದು, ದುಬೈ, ಮಾಲ್ಡೀವ್ಸ್, ಭೂತಾನ್ ಮುಂತಾದ ದೇಶಗಳಲ್ಲಿ ಪ್ರದರ್ಶನ ನೀಡಿದ್ದಾಳೆ.ಕೆಲವು ಧಾರವಾಹಿ, ಕನ್ನಡ ಚಲನಚಿತ್ರ, ವೆಬ್ ಸಿರೀಸ್ ನಲ್ಲಿ ಆಕೆ ನಟಿಸಿದ್ದಾಳೆ ಎಂಬುದು ಉಲ್ಲೇಖನೀಯ.

ಫ್ಲೋರಿಡಾದಲ್ಲಿ ವಿಶ್ವ ಸುಂದರಿ ಸ್ಪರ್ಧೆ: ಫ್ಲೋರಿಡಾದಲ್ಲಿ ಕಳೆದ ಜೂ.6 ರಿಂದ 10 ವರೆಗೆ ಆಯೋಜನೆಗೊಂಡಿದ್ದ ಸ್ಪರ್ಧೆಯಲ್ಲಿ ಭಾರತ ಸೇರಿದಂತೆ 40 ದೇಶಗಳ ಸುಂದರಿಯವರು ಪೈಪೋಟಿಯಲ್ಲಿದ್ದರು. ರಾಷ್ಟ್ರೀಯ ಉಡುಗೆ, ಈಜು ಉಡುಗೆ, ಪ್ರಶ್ನೋತ್ತರ, ವೈಯಕ್ತಿಕ ಸಂದರ್ಶನ ಮುಂತಾದ ಸುತ್ತುಗಳಲ್ಲಿ ಸ್ಪರ್ಧೆ ಸಾಗಿತ್ತು. ಎಲ್ಲದರಲ್ಲೂ ಉತ್ತಮ ಪ್ರದರ್ಶನ ನೀಡಿ, ಶೃತಿ ಹೆಗಡೆ ಗೆಲುವು ಸಾಧಿಸಿದ್ದಾರೆ.

ಶಿರಸಿ ಮೂಲದ ಪ್ರತಿಭೆಗೆ ಒಲಿದ ಪ್ರಶಸ್ತಿ

ಸಮಾಚಾರ ಸಣ್ಣದಲ್ಲ

ಲೈಂಗಿಕ ದೌರ್ಜನ್ಯ: ಶಿಕ್ಷಕನ ವಿರುದ್ಧ ದೂರು

ಬೀದರ್: ಕಮಲನಗರ ಪೊಲೀಸ್ ಠಾಣೆ ವ್ಯಾಪ್ತಿಯ 9ನೇ ತರಗತಿಯ ವಿದ್ಯಾರ್ಥಿನಿಯೊಬ್ಬಳಿಗೆ ಲೈಂಗಿಕ ಕಿರುಕುಳ ನೀಡಿದ ಪ್ರೌಢ ಶಾಲಾ ಶಿಕ್ಷಕನ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲಾಗಿದೆ. ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಪ್ರಕರಣ ದಾಖಲಿಸಿಕೊಂಡಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ್ ಕೋಸಂಬೆ ತಿಳಿಸಿದ್ದಾರೆ. ಈ ಘಟನೆ ಸಂಬಂಧ ಡಿಡಿಪಿಐ ಅವರೊಂದಿಗೆ ಮಾತನಾಡಿ, ವಿದ್ಯಾರ್ಥಿನಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಶಿಕ್ಷಕನ ವಿರುದ್ಧ ಕ್ರಮ ಕೈಗೊಂಡು ಆಯೋಗಕ್ಕೆ ಮಾಹಿತಿ ನೀಡಲು ಸೂಚಿಸಿದ್ದಾರೆ. ಮಕ್ಕಳ ಹಕ್ಕುಗಳ ಕಾಯ್ದೆ, ಪೋಕ್ಸೊ ಕಾಯ್ದೆ, ಬಾಲ ನ್ಯಾಯ ಕಾಯ್ದೆ ಕುರಿತು ಜಾಗೃತಿ ಮೂಡಿಸಿದ್ದರೂ ಕೆಲವೆಡೆ ಇಂತಹ ಕೆಟ್ಟ ಪ್ರಕರಣ ನಡೆಯುತ್ತಿರುವುದು ದುರಂತದ ಸಂಗತಿ. ಹಾಗಾಗಿ, ಮುಂಬರುವ ದಿನಗಳಲ್ಲಿ ಶಿಕ್ಷಣ, ಪೊಲೀಸ್, ಇತರ ಇಲಾಖೆಯವರು ಎಲ್ಲ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕಾಯ್ದೆ, ಪೋಕ್ಸೊ, ಬಾಲನ್ಯಾಯ ಕಾಯ್ದೆ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಮುನ್ನೆಚ್ಚರಿಕೆ ವಹಿಸಬೇಕು ಎಂದು ಶಶಿಧರ ಕೋಸಂಬೆ ತಿಳಿಸಿದ್ದಾರೆ.

ಡೆಂಘೀಗೆ 13 ವರ್ಷದ ಬಾಲಕಿ ಬಲಿ

ಹಾಸನ: ಡೆಂಘೀ ಜ್ವರಕ್ಕೆ ಹಾಸನದಲ್ಲೊಂದು ಜೀವ ಬಲಿಯಾಗಿದೆ. 13 ವರ್ಷದ ಬಾಲಕಿ ಡೆಂಘೀ ಜ್ವರದಿಂದ ಮೃತಪಟ್ಟ ಘಟನೆ ಹಾಸನ ತಾಲೂಕಿನ ಬೊಮ್ಮನಾಯಕ ಹಳ್ಳಿ ಗ್ರಾಮದಲ್ಲಿ ನಡೆದಿದೆ. ಅಕ್ಷತಾ (13) ಮೃತ ಬಾಲಕಿ. ಅಕ್ಷತಾ ಮೂಲತಃ ಅರಕಲ ಗೂಡು ತಾಲೂಕಿನ ದೊಡ್ಡಮಗ್ಗೆ ಗ್ರಾಮದವರು. ಕೂಲಿ ಕೆಲಸ ಮಾಡುತ್ತಿದ್ದ ಅಪ್ಪಣ್ಣ ಶೆಟ್ಟಿ ಹಾಗೂ ಪದ್ಮಾ ದಂಪತಿ ಪುತ್ರಿ ಅಕ್ಷತಾ, ಹಾಸನದ ಖಾಸಗಿ ಶಾಲೆಯಲ್ಲಿ 7ನೇ ತರಗತಿ ಓದುತ್ತಿದ್ದರು. ಕಳೆದ ಬುಧವಾರ ಜ್ವರಕ್ಕೆ ತುತ್ತಾಗಿದ್ದರು. ನಂತರ ಬಾಲಕಿಗೆ ಬೊಮ್ಮನಾಯಕ ಹಳ್ಳಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಲಾಗಿತ್ತು. ಆದಾಗ್ಯೂ ಬಾಲಕಿ ಗುಣಮುಖಳಾಗದೇ ಇದ್ದ ಕಾರಣ ಪೋಷಕರು ಆಕೆಯನ್ನ ಹಾಸನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು.

ಆದರೂ ಅಕ್ಷತಾ ಆರೋಗ್ಯದಲ್ಲಿ ಚೇತರಿಕೆ ಕಾಣದೇ ಮತ್ತೊಂದು ಆಸ್ಪತ್ರೆಗೆ ದಾಖಲಿಸಿದ್ದರು. ಬಾಲಕಿ ಸ್ಥಿತಿ ಗಂಭೀರ ವಾಗುತ್ತಿದ್ದಂತೆ ಜಿಲ್ಲಾಸ್ಪತ್ರೆ ಕರೆದುಕೊಂಡು ಹೋಗು ವಂತೆ ಖಾಸಗಿ ಆಸ್ಪತ್ರೆ ವೈದ್ಯರು ತಿಳಿಸಿದ್ದರು. ನಂತರ ಪೋಷಕರು ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದರು. ಕೊನೆಗೆ ಚಿಕಿತ್ಸೆ ಫಲಕಾರಿಯಾಗದೇ ಬಾಲಕಿ ಸಾವನ್ನಪ್ಪಿ ದ್ದಾಳೆ. ಬಾಲಕಿ ಸಾವಿನಿಂದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

{ಆರ್.ವಿ.ದೇಶಪಾಂಡೆ} ಶಾಸಕ

ರಾಜ್ಯ ಸರಕಾರ ಬಡವರು ಮತ್ತು ಜನ ಸಾಮಾನ್ಯರ ಹಿತದೃಷ್ಟಿಯಿಂದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ತಂದಿದೆ. ಅವುಗಳಲ್ಲಿ ವಿದ್ಯುತ್ ರಿಯಾಯಿತಿ ಯೋಜನೆಯು ಪ್ರಮುಖವಾಗಿದೆ. ಆರ್ಥಿಕ ಸಂಪನ್ನರು ಉಚಿತ ವಿದ್ಯುತ್ ಬಳಕೆ ಮಾಡುವುದು ಸೂಕ್ತವಲ್ಲ. ಹಾಗಾಗಿ ಆರ್ಥಿಕ ಸಂಪನ್ನರು ವಿದ್ಯುತ್ ರಿಯಾಯಿತಿ ಯೋಜನೆಯ ಬಿಟ್ಟು ಕೊಡುವುದು ಒಳಿತು.



ಬಿಜೆಪಿಯಿಂದ ನನಗೆ ಆಹ್ವಾನ ನನ್ನ ನಿಲುವು ಸ್ಪಷ್ಟಪಡಿಸಿಲ್ಲ

ಶಿವಮೊಗ್ಗ: ನನಗೆ ಬಿಜೆಪಿಯಿಂದ ಆಹ್ವಾನ ಬಂದಿದೆ. ಆದರೆ ನನ್ನ ನಿಲುವನ್ನು ಇನ್ನೂ ಸ್ಪಷ್ಟಪಡಿಸಿಲ್ಲ ಎಂದು ಮಾಜಿ ಡಿಸಿಎಂ ಕೆ. ಎಸ್. ಈಶ್ವರಪ್ಪ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯಿಂದ ಆಹ್ವಾನ ಬಂದಿದೆ. ನಾನಿನ್ನೂ ಏನನ್ನೂ ಹೇಳಿಲ್ಲ. ಕಾದುನೋಡಿ ಏನಾಗುತ್ತದೆ. ನನ್ನ ಮಗ ಕಾಂತೇಶ್ ಹಾವೇರಿಯಲ್ಲಿ ಶಾಸಕ ಸ್ಥಾನ ಖಾಲಿ ಇರುವಲ್ಲಿ ಸ್ಪರ್ಧಿಸುವ ವಿಚಾರ ನಮ್ಮ ಮುಂದೆ ಇಲ್ಲ. ಎಲ್ಲಾ ಪ್ರಮುಖರ ಜೊತೆ ಕುಳಿತು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ ಎಂದರು. ಪಾಲಿಕೆ ಆಡಳಿತ ಅಧಿಕಾರಿಗಳ ಕೈಯಲ್ಲಿ ಇದೆ. ಇದರಿಂದ ರಾಜ್ಯ ಸರಕಾರ ಚುನಾವಣೆ ನಡೆಸಬೇಕು. 15 ರ ಒಳಗೆ ಚುನಾವಣೆ ಕುರಿತು ಘೋಷಿಸದಿದ್ದರೆ, ನಾವು ಹೋರಾಟ ಮಾಡಬೇಕಾಗುತ್ತದೆ. ಪಾಲಿಕೆ 5 ಕಿ.ಮೀ. ನಷ್ಟು ವಿಸ್ತರಿಸುವ ಕುರಿತು ಊಹಾಪೋಹ ನಡೆಯುತ್ತಿದೆ. ಅಧಿಕಾರಿಗಳ ಕೈಯಲ್ಲಿ ಆಡಳಿತ ಇರಬಾರದು ಎಂಬುದು ನಮ್ಮ ಸ್ಪಷ್ಟ ಉದ್ದೇಶ ಎಂದರು.

ಸಿಎಂ-ಡಿಕೆಶಿ ನಡುವೆ ಉತ್ತಮ ಹೊಂದಾಣಿಕೆ

ಚಿತ್ರದುರ್ಗ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಉತ್ತಮ ಹೊಂದಾಣಿಕೆ ಇದೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರ ಅಪ್ರಸ್ತುತ' ಎಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಭಾನುವಾರ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ವಿರಾಟ್ ಕೊಹ್ಲಿ-ರೋಹಿತ್ ಶರ್ಮಾ ಸೇರಿ ಟಿ-20 ಕ್ರಿಕೆಟ್ ವಿಶ್ವಕಪ್ ಕಿರೀಟ ಗೆದ್ದುಕೊಟ್ಟಿದ್ದಾರೆ. ಸಿದ್ದರಾಮಯ್ಯ ಮತ್ತು ಡಿ. ಕೆ.ಶಿವಕುಮಾರ್ ಅವರು ಕರ್ನಾಟಕದ ಪಾಲಿಗೆ ಕೊಹ್ಲಿ-ರೋಹಿತ್ ಜೋಡಿಯಂತೆ ಇದ್ದಾರೆ. ತತ್ವ, ಸಿದ್ಧಾಂತದ ಆಧಾರದಲ್ಲಿ ಕಾಂಗ್ರೆಸ್‌ನಲ್ಲಿ ಸಾಮಾಜಿಕ ನ್ಯಾಯ ಇದೆ. ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ಮಾತನಾಡಬಾರದು ಎಂದು ಡಿ. ಕೆ.ಶಿವಕುಮಾರ್ ಅವರೇ ಸೂಚಿಸಿದ್ದಾರೆ. ಹೀಗಾಗಿ ಈ ವಿಚಾರದ ಚರ್ಚೆ ಅನಗತ್ಯ ಎಂದರು.

ಸಿಎಂ, ಡಿಸಿಎಂ ಬದಲಾವಣೆ ಚರ್ಚೆ ಅನಗತ್ಯ: ತಂಗಡಗಿ

ಕಲಬುರಗಿ: ಮುಖ್ಯಮಂತ್ರಿ ಬದಲಾವಣೆ, ಮೂವರು ಉಪಮುಖ್ಯಮಂತ್ರಿ ಮಾಡುವ ಬಗ್ಗೆ ಚರ್ಚೆ ಮಾಡುವ ಅಗತ್ಯ ಇಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪಕ್ಷದಲ್ಲಿ ಯಾವುದೇ ನಿರ್ಧಾರವನ್ನು ಹೈಕಮಾಂಡ್ ನಿರ್ಧರಿಸುತ್ತದೆ. ಸಿಎಂ ಬದಲಾವಣೆ ಬಗ್ಗೆ ಸ್ವಾಮೀಜಿ ಹೇಳಿಕೆ ವೈಯಕ್ತಿಕ ವಿಚಾರವಾಗಿದೆ. ನಾನು ಅದೇ ವೇದಿಕೆಯಲ್ಲಿ ಇದ್ದೆ. ಅದು ಮಾಧ್ಯಮದಲ್ಲಿ ಅಷ್ಟು ದೊಡ್ಡದಾಗಿ ಚರ್ಚೆ ಆಗುತ್ತಿದೆ ಎಂದು ಹೇಳಿದರು.

ಸಿ.ಟಿ ರವಿ ಏನು ಮಾತಾಡ್ತಾರೆ ಅವರಿಗೆ ಗೊತ್ತಾಗುತ್ತಿಲ್ಲ. 136 ಶಾಸಕರನ್ನು ಗೆಲ್ಲಿಸುವ ಮೂಲಕ ಜನರು ಕಾಂಗ್ರೆಸ್‌ಗೆ ಬಹುಮತ ಕೊಟ್ಟಿದ್ದಾರೆ. ಬಿಜೆಪಿ ಹೈಕಮಾಂಡ್ ಮೆಚ್ಚಿಸಲು ರವಿ ಮಾತನಾಡುತ್ತಿರಬೇಕು ಎಂದು ತಂಗಡಗಿ ಮಾರ್ಮಿಕವಾಗಿ ನುಡಿದರು.

ಸಿಎಂ-ಡಿಸಿಎಂ ಹುದ್ದೆ: ಬೀದಿಯಲ್ಲಿ ಜಗಳ ಸರಿಯಲ್ಲ

ಕಲಬುರಗಿ: ಸಿಎಂ ಬದಲಾವಣೆ ಹಾಗೂ ಮೂರು ಜನ ಡಿಸಿಎಂ ಚರ್ಚೆ ವಿಚಾರವಾಗಿ ಈಗಾಗಲೇ ನಾವು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದು, ಸಿಎಂ-ಡಿಸಿಎಂ ಹುದ್ದೆ ಕೇಳುವುದು ಎಲ್ಲರಿಗೂ ಹಕ್ಕಿದೆ. ಆದರೆ, ಇದರ ಬೀದಿಯಲ್ಲಿ ಜಗಳವಾಡುವುದು ಸರಿಯಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಹುದ್ದೆ ಕುರಿತಾಗಿ ಎಲ್ಲಿ ಕೇಳಬೇಕೋ, ಅಲ್ಲಿಯೇ ಕೇಳಬೇಕು. ಅದನ್ನು ಬಿಟ್ಟು ಮಾಧ್ಯಮದಲ್ಲಿ ಕೇಳಿದರೆ, ಮಾಧ್ಯಮದವರು ಸಿಎಂ, ಡಿಸಿಎಂ ಮಾಡುತ್ತಾರಾ ಎಂದು ಪ್ರಶ್ನಿಸಿದರು. ನಮ್ಮ ಅಭಿಪ್ರಾಯಗಳನ್ನು ಬೀದಿಯಲ್ಲಿ ಚರ್ಚೆ ಮಾಡುವುದು ಸರಿಯಲ್ಲ. ಸೂಕ್ತ ವೇದಿಕೆಯಲ್ಲಿ ಕೇಳಿದರೆ ಉತ್ತಮ. ಇನ್ನೂ ಸಿಎಂ ಬದಲಾವಣೆ, ಡಿಸಿಎಂ ಸೃಷ್ಟಿ ಬಗ್ಗೆ ಏನಿದ್ದರೂ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡಲಿದೆ ಎಂದು ಹೇಳಿದರು.

ಡಿಕೆ ಶಿವಕುಮಾರ್ ಸಿಎಂ ಆಗುವುದು ಖಚಿತ

ಬಳ್ಳಾರಿ: ಡಿಕೆ ಶಿವಕುಮಾರ್ ಮುಖ್ಯಮಂತ್ರಿ ಆಗುವುದು ಖಚಿತ ಎಂದು ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಪುನರುಚ್ಚರಿಸಿದ್ದಾರೆ. ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ತಳಮಟ್ಟದಿಂದ ಪಕ್ಷವನ್ನು ಸಂಘ ಟಿಸಿದ್ದು ಡಿಕೆ ಶಿವಕುಮಾರ್. ಹೀಗಾಗಿ ಅವರು ರಾಜ್ಯದ ಮುಖ್ಯಮಂತ್ರಿ ಆಗಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಮತ್ತು ಲೋಕಸಭಾ ಚುನಾವಣೆಯಲ್ಲಿ ಒಂದರಿಂದ ಒಂಬತ್ತು ಸ್ಥಾನ ಗೆಲ್ಲಲು ಡಿಕೆಶಿಯೇ ಕಾರಣ. ಅವರು ಮುಖ್ಯಮಂತ್ರಿ ಆಗುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಡಿಸಿಎಂ ಹುದ್ದೆಗಾಗಿ ಸಚಿವ ಕೆ.ಎನ್ ರಾಜಣ್ಣ ಬಹಿರಂಗ ಚರ್ಚೆ ನಡೆಸಿರುವ ವಿಚಾರಕ್ಕೂ ಪ್ರತಿಕ್ರಿಯಿಸಿದ ಬಸವರಾಜ್, ಡಿಸಿಎಂ ಹುದ್ದೆ ಬೇಕೆಂದವರು ಪಕ್ಷದ ಹೈಕಮಾಂಡ್ ಬಳಿ ತೆರಳಿ ಚರ್ಚಿಸಬೇಕು. ಹಿರಿಯರು, ಅನುಭವಿಗಳು, ನಮ್ಮಂತ ಕಿರಿಯ ಶಾಸಕರಿಗೆ ಮಾದರಿ ಆಗಬೇಕು. ಅಧ್ಯಕ್ಷರು ಎಚ್ಚರಿಕೆ ಸಂದೇಶ ನೀಡಿದ್ದರೂ ಅದನ್ನು ಮೀರಿ ಮತ್ತೆ ಮಾತನಾಡುತ್ತಿದ್ದಾರೆ. ಈಗ ಬಂದು ರಾಜ್ಯಾಧ್ಯಕ್ಷರಾಗಲು ಸಿದ್ಧ ಅಂತಿದ್ದಾರೆ. ಪಕ್ಷ ಕಷ್ಟದ ಕಾಲದಲ್ಲಿದ್ದಾಗ ರಾಜಣ್ಣ ಮಾತನಾಡಲಿಲ್ಲ. ಆಗ ಕಾಂಗ್ರೆಸ್ ಪಕ್ಷ ಗಟ್ಟಿಗೊಳಿಸಿದ್ದು ಡಿಕೆ ಶಿವಕುಮಾರ್ ಎಂದು ತಿರುಗೇಟು ನೀಡಿದರು.

ಜನರ ದಿಕ್ಕು ತಪ್ಪಿಸುವ ಕೆಲಸ ಬೇಡ: ಎನ್‌ಡಿಎ ಸಂಸದರಿಗೆ ಎಚ್ಚರಿಕೆ

ರಾಜ್ಯದಲ್ಲಿ ವಿತ್ತೀಯ ಕೊರತೆಯಿಲ್ಲ: ರಾಯರೆಡ್ಡಿ

ಕಲಬುರಗಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಸರಕಾರದಲ್ಲಿ ಯಾವುದೇ ಆರ್ಥಿಕ ಅಶಿಸ್ತು ಇಲ್ಲ. ಅಭಿವೃದ್ಧಿಗೆ ಹಣದ ಕೊರತೆ ಇಲ್ಲ. ಸಾಲದ ಹೊಣೆಯು ಇಲ್ಲ. ವಿತ್ತಿಯ ಹೊಣೆಗಾರಿಕೆ ಸರಿಯಾಗಿದೆ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ್ ರಾಯರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕರ್ನಾಟಕದಲ್ಲಿ ಆರ್ಥಿಕ ಅಶಿಸ್ತು ಇದೆ ಎಂದು ಪತ್ರ ಬರೆಯುವ ಮೂಲಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಎಚ್.ಡಿ ಕುಮಾರಸ್ವಾಮಿ, ಜಗದೀಶ್ ಶೆಟ್ಟರ್ ಹಾಗೂ ಬಸವರಾಜ ಬೊಮ್ಮಾಯಿ ಹಿರಿಯ ಸಂಸದ ಪ್ರಲ್ಹಾದ್ ಜೋಶಿ ಅವರು ರಾಜ್ಯದ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಆರ್ಥಿಕ ಶಿಸ್ತಿದೆ: ರಾಜ್ಯದಲ್ಲಿ ಆರ್ಥಿಕ ಅಶಿಸ್ತು ಇದೆ. ರಾಜ್ಯ ಸಾಲದ ಸುಳಿಯಲ್ಲಿ ಸಿಲುಕಿದೆ. ವಿತ್ತಿಯ ಕೊರತೆ ಎದ್ದು ಕಾಣುತ್ತಿದೆ ಎಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ಆದರೆ, ಮುಖ್ಯಮಂತ್ರಿ ಸಿದ್ದ ರಾಮಯ್ಯ ಎಂದು ಕೂಡಾ ಆರ್ಥಿಕ ಅಶಿಸ್ತು ಮಾಡಿಲ್ಲ. ಸಿಎಂಗಳಾಗಿ ಸೇವೆ ಸಲ್ಲಿಸಿದ ಎಚ್.ಡಿ. ಕುಮಾರಸ್ವಾಮಿ, ಜಗದೀಶ್ ಶೆಟ್ಟರ್ ಹಾಗೂ ಬಸವರಾಜ ಬೊಮ್ಮಾಯಿ ಪರಿಸ್ಥಿತಿಯನ್ನು ಅರಿತು ಮಾತನಾಡಬೇಕು ಎಂದು ರಾಯರೆಡ್ಡಿ ಸಲಹೆ ಮಾಡಿದರು.

ಸಂವಿಧಾನದಲ್ಲಿ ಡಿಸಿಎಂ ಹುದ್ದೆಗೆ ಬೆಲೆಯಿಲ್ಲ

ರಾಜ್ಯದಲ್ಲಿ ಮುಖ್ಯಮಂತ್ರಿಗಳ ಬದಲಾವಣೆ, ಹೆಚ್ಚುವರಿ ಡಿಸಿಎಂ ಬೇಡಿಕೆ ಅನಗತ್ಯ. ಒಕ್ಕಲಿಗ ಸಮುದಾಯದ ಶ್ರೀಗಳಾದ ಚಂದ್ರಶೇಖರ ಮಹಾಸ್ವಾಮೀಜಿಯವರ ಬೇಡಿಕೆ ಸರಿಯಲ್ಲ. ಅವರೇನು ಶಾಸಕಾಂಗ ಪಕ್ಷದ ಸದಸ್ಯರೇ ? ಅಥವಾ ಪಕ್ಷದ ಪದಾಧಿಕಾರಿಗಳೇ ? ಇಂತಹ ಪ್ರಮುಖ ಹುದ್ದೆಗಳ ಬಗ್ಗೆ ಸಾರ್ವಜನಿಕವಾಗಿ ಮಾತನಾಡುವುದು ಸರಿಯಲ್ಲ. ಜಾತಿ ಆಧಾರದ ಮೇಲೆ ಹುದ್ದೆಗಳನ್ನು ಕೇಳುವುದು ಸರಿಯಲ್ಲ. ಅರ್ಹತೆ ಮೇಲೆ ಅವಕಾಶ ನೀಡಬೇಕು. ಸಿದ್ದರಾಮಯ್ಯ ಉತ್ತಮ ಮುಖ್ಯಮಂತ್ರಿ, ಅವರನ್ನು ಇಳಿಸುವುದು ಸರಿಯಲ್ಲಎಂದು ಸಂವಿಧಾನದಲ್ಲಿ ಉಪಮುಖ್ಯಮಂತ್ರಿ ಹುದ್ದೆಗೆ ಯಾವುದೇ ಬೆಲೆಯಿಲ್ಲ.ರಾಯರೆಡ್ಡಿ ಸ್ಪಷ್ಟಪಡಿಸಿದರು.

ಏಳನೇ ವೇತನ ಆಯೋಗ ಜಾರಿ ಮಾಡಲು ತೀರ್ಮಾನಿಸಲಾಗಿದೆ. ಜುಲೈ ತಿಂಗಳ ಮೊದಲ ವಾರ ಅಥವಾ ಯಾವಾಗ ಬೇಕಾದರೂ ಏಳನೇ ವೇತನ ಆಯೋಗದ ವರದಿ ಜಾರಿಗೆ ಬರಬಹುದು. ವರದಿಯಲ್ಲಿ ಬೇಡಿಕೆ ಇರುವ 27.5% ಹೆಚ್ಚುವರಿ ನೀಡಲು ಸಂಪುಟ ಒಪ್ಪಿಗೆ ಸೂಚಿಸಿದ್ದು, ವರದಿ ಶೀಘ್ರವೇ ಜಾರಿಗೆ ಬರಲಿದೆ.

-ಬಸವರಾಜ ರಾಯರೆಡ್ಡಿ, ಮುಖ್ಯಮಂತ್ರಿಗಳ ಸಲಹೆಗಾರ

ಮುಡಾ ಹಗರಣ ಸಿಬಿಐಗೆ ವಹಿಸಿ

ಮೈಸೂರು: ಮುಡಾ ಕಚೇರಿಯಲ್ಲಿ ನಡೆದಿರುವ ಹಗರಣವನ್ನು ಸಿಬಿಐಗೆ ವಹಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯನವರ ಮೂಗಿನಡಿ ಎರಡೂವರೆ ಸಾವಿರ ಕೋಟಿ ಸರಕಾರಿ ಆಸ್ತಿ ದುರುಪಯೋಗವಾಗಿದೆ ಎಂಬ ವಿಚಾರ ಕೇಳಿ ದಿಗ್ಭ್ರಮೆಯಾಯಿತು ಎಂದರು.

ಬಡವರಿಗೆ, ದಲಿತರಿಗೆ ಕೊಡಲು ಇವರ ಬಳಿ ನಿವೇಶನಗಳಿಲ್ಲ. ಕಳ್ಳಕಾಕರಿಗೆ ಬೇನಾಮಿಯಾಗಿ ಕೊಡಲು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಮುಡಾ ಪ್ರಕರಣದ ಬಗ್ಗೆ ಸಮಗ್ರ ತನಿಖೆಯಾಗಬೇಕು, ತಪ್ಪಿತಸ್ಥರ ತಲೆದಂಡವಾಗದಿದ್ದಲ್ಲಿ ಉಗ್ರ ಹೋರಾಟ ರೂಪಿಸುತ್ತೇವೆ. ಈ ವ್ಯವಹಾರದಲ್ಲಿ ದೊಡ್ಡವರ ಕೃಪಾಕಟಾಕ್ಷ ಇದೆ. ಹಾಗಾಗಿ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಒತ್ತಾಯಿಸಿದರು.

ಚಂದ್ರಶೇಖರನಾಥ ಸ್ವಾಮೀಜಿ ಬಗ್ಗೆ ಸಚಿವ ರಾಜಣ್ಣ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ನಾನು ಆ ವಿವಾದದ ಬಗ್ಗೆ ಮಾತನಾಡಲು ಇಷ್ಟಪಡುವುದಿಲ್ಲ. ಆದರೆ, ಇದು ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿ ಇಲ್ಲ ಎಂಬುದನ್ನು ಸೂಚಿಸುತ್ತದೆ ಎಂದು ಹೇಳಿದರು.

ಸಂಪಾದಕೀಯ

ಉಳಿದ ಕ್ರೀಡೆಗಳಿಗೂ ಇಡಿಗಂಟು ಸಿಗಲಿ

ಭಾರತೀಯರ ಪಾಲಿಗೆ ಕ್ರಿಕೆಟ್ ಒಂದು ಪ್ರತ್ಯೇಕ ಧರ್ಮ ಎಂಬ ಮಾತಿದೆ. ಜಾತಿ, ಮತ, ಭಾಷೆ, ಪ್ರಾದೇಶಿಕ ಎಲ್ಲೆಗಳನ್ನು ಮೀರಿ, ಗೆದ್ದಾಗ ಎಲ್ಲರೂ ಒಂದಾಗಿ ಸಂಭ್ರಮಿಸುವ, ಸೋತಾಗ ಎಲ್ಲರೂ ಬೇಸರಿಸುವ ಕ್ರೀಡೆ ಎಂದರೆ ಅದು ಕ್ರಿಕೆಟ್. ಇದಕ್ಕೆ ನಿದರ್ಶನ ಎಂಬಂತೆ, 17 ವರ್ಷಗಳ ಬಳಿಕ ಟಿ-20 ವಿಶ್ವಕಪ್ ಗೆದ್ದ ಭಾರತ ಕ್ರಿಕೆಟ್ ತಂಡಕ್ಕೆ ಅಭಿನಂದನೆಗಳ ಮಹಾಪೂರ ಹರಿದು ಬರುತ್ತಿದೆ. ಜನರು ತಾವೇ ಕಪ್ ಗೆದ್ದಷ್ಟು ಸಂಭ್ರಮಿಸುತ್ತಿದ್ದಾರೆ. ಇದೀಗ ವಿಜೇತ ತಂಡಕ್ಕೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ 125 ಕೋಟಿ ರೂ.ಗಳ ಭರ್ಜರಿ ಬಹುಮಾನ ಘೋಷಿಸಿದೆ. ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಮಂಡಳಿಯಾದ ಬಿಸಿಸಿಐಗೆ ಇದು ದೊಡ್ಡ ಮೊತ್ತವೇನೂ ಅಲ್ಲ. ಆದರೆ ಇತರೇ ಕ್ರೀಡೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಈ ದೇಶದ ಲಕ್ಷಾಂತರ ಕ್ರೀಡಾಪಟುಗಳ ಪಾಲಿಗಿದು ಬಹು ದೊಡ್ಡ ಮೊತ್ತ. ರೈಲು, ವಿಮಾನಪ್ರಯಾಣಕ್ಕೆ ದುಡ್ಡಿಲ್ಲದೆ, ಸ್ಪರ್ಧೆಯನ್ನೇ ಕೈ ಬಿಡುವ ಸಾವಿರಾರು ಪ್ರತಿಭಾವಂತ ಕ್ರೀಡಾಪಟುಗಳಿಗಂತೂ ಇದು ಕನಸಿನ ಮೊತ್ತ. ಇದೇ ತಿಂಗಳ 26ರಿಂದ ಪ್ಯಾರಿಸ್‌ನಲ್ಲಿ ಒಲಿಂಪಿಕ್ಸ್ ಕ್ರೀಡಾಕೂಟ ಆರಂಭವಾಗಲಿದೆ. ಕಳೆದ ಒಲಿಂಪಿಕ್ಸ್ ನಲ್ಲಿ ಭಾರತ ಉತ್ತಮ ನಿರ್ವಹಣೆ ತೋರಿತ್ತು. ಆದರೆ 140 ಕೋಟಿ ಜನಸಂಖ್ಯೆಯನ್ನು ಹೊಂದಿರುವ ದೇಶಕ್ಕೆ ಈ ತನಕ ಎರಡಂಕೆಯ ಪದಕ ಪಡೆಯಲೂ ಸಾಧ್ಯವಾಗಿಲ್ಲ ಎನ್ನುವುದು ಬೇಸರದ ವಿಚಾರ. ಬಿಸಿಸಿಐ ನೀಡಿದ ಬಹುಮಾನದ ಶೇ. ಒಂದರಷ್ಟು ಪ್ರೋತ್ಸಾಹಧನ ಸಿಕ್ಕಿದರೂ ದೇಶದ ಸಾವಿರಾರು ಪ್ರತಿಭೆಗಳಿಗೆ ಸಂಜೀವಿನಿಯಾಗುತ್ತಿತ್ತು. ರಾಷ್ಟ್ರೀಯ ಕ್ರೀಡೆಯಾದ ಹಾಕಿ, ಲಕ್ಷಾಂತರ ಅಭಿಮಾನಿಗಳಿರುವ ಫುಟ್ಬಾಲ್, ಕಬಡ್ಡಿಯಂತಹ ಕ್ರೀಡೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಈ ಕ್ರೀಡೆಯಿಂದಲೇ ತಮ್ಮ ಜೀವನ ನಡೆಸಲು ಸಾಧ್ಯವಿಲ್ಲ. ಇದೇ ರೀತಿ ನೂರಾರು ವೈಯಕ್ತಿಕ ಕ್ರೀಡೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರಲ್ಲಿ ಕೆಲವೇ ಕೆಲವು ಮಂದಿ ರೈಲ್ವೆ, ಬ್ಯಾಂಕಿಂಗ್‌ನಂತಹ ಸರಕಾರಿ ಹುದ್ದೆಗಳಲ್ಲಿದ್ದುಕೊಂಡು ತಮ್ಮ ಕ್ರೀಡಾ ಜೀವನವನ್ನೂ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ವಿಶ್ವದ ಶ್ರೀಮಂತ ಕ್ರೀಡಾಮಂಡಳಿಗಳಲ್ಲಿ ಒಂದಾದ ಬಿಸಿಸಿಐ, ಟೀಮ್ ಇಂಡಿಯಾ ಗೆದ್ದ ಸಂಭ್ರಮದಲ್ಲಿ ದೇಶದ ಎಲ್ಲ ತಾಲ್ಲೂಕುಗಳಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಲು ನೆರವು ಘೋಷಿಸಬಹುದಿತ್ತು. ಪ್ಯಾರಿಸ್ ಒಲಿಂಪಿಕ್ಸ್ ನಲ್ಲಿ ಪದಕ ಗೆದ್ದವರಿಗೆ ಬಹುಮಾನ ನೀಡುವ ಘೋಷಣೆ ಮಾಡಬಹುದಿತ್ತು. ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ಪ್ರಮುಖ ಕ್ರೀಡಾಕೂಟಗಳಿಂದ ದೂರವುಳಿಯುವ ಕ್ರೀಡಾಪಟುಗಳ ನೆರವಿಗಾಗಿಯೇ ಪ್ರತ್ಯೇಕ ದತ್ತಿನಿಧಿಯೊಂದನ್ನು ಸ್ಥಾಪಿಸಬಹುದಿತ್ತು. ಬಿಸಿಸಿಐ ದೇಶದ ಉಳಿದ ಕ್ರೀಡೆಗಳಿಗೆ ಪೋಷಕ ಸಂಸ್ಥೆಯಾದರೆ, ಕ್ರೀಡಾಲೋಕದಲ್ಲಿ ಅಚ್ಚರಿಯನ್ನೇ ಸಾಧಿಸಬಹುದು. ಒಲಿಂಪಿಕ್ಸ್‌ನಲ್ಲಿ ಕೊರಿಯಾ, ಚೀನಾದಂತಹ ರಾಷ್ಟ್ರಗಳ ಸಾಲಿನಲ್ಲಿ ಭಾರತವೂ ನಿಲ್ಲಲೂ ಸಾಧ್ಯವಿದೆ.

ಸೊಂಪಾದಕೀಯ

ಕತ್ತೆ ಹಾಲು ಹಿಡಿಬೇಕು..

ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ಅನ್ನೋ ಗಾದೆ ಮಾತನ್ನ ನಾವು ಕೇಳಿದ್ದೇವೆ. ಆದರೆ ಈ ವಿಷಯ ಕೇಳಿದರೆ ಕತ್ತೆಗೊಂದು ಕಾಲ ಅಂತ ಹೇಳೋ ಅನಿವಾರ್ಯತೆ ಎದುರಾಗುತ್ತದೆ. ಯಾಕಂದ್ರೆ, ಇದು ಕತ್ತೆಗೆ ಇರೋ ಡಿಮ್ಯಾಂಡ್ ವಿಷಯದ್ದು. ಹಾಗೆ ನೋಡಿದರೆ ಕತ್ತೆ ಹಾಲಿಗೆ ಇರೋ ಡಿಮ್ಯಾಂಡ್ ಇದು. ಕತ್ತೆ ಹಾಲಿಗೆ ಈಗ ಪ್ರತಿ ಲೀಟರ್‌ಗೆ 1350 ರುಪಾಯಿ ಆಗಿದೆಯಂತೆ. ಆದರೆ ಈ ಸುದ್ದಿ ಕೇಳಿ ಕತ್ತೆ ಹಾಲು ಯಾರು ಮಾರಾಟ ಮಾಡುತ್ತಾರೆ. ಅದರ ಮಾರಾಟ ಮಳಿಗೆ ಎಲ್ಲಿದೆ? ಕತ್ತೆ ಹಾಲನ್ನು ಹಸುವಿನ ಹಾಲಿನಂತೆ ಅಂಗಡಿಯಲ್ಲಿ ಮಾರಾಟ ಮಾಡ್ತಾರೆಯೇ ಅನ್ನೋ ಪ್ರಶ್ನೆಗಳು ಮೂಡುತ್ತವೆ. ಆದರೆ ಕತ್ತೆ ಹಾಲನ್ನು ದೈನಂದಿನ ಬಳಕೆಗೆ ಬಳಸದೆ ಕೇವಲ ಅದರ ಔಷಧೀಯ ಗುಣಗಳಿಗಾಗಿ ಬಳಸಲಾಗುತ್ತದೆ ಅನ್ನೋದು ವಾಸ್ತವ. ಹಾಗೆ ನೋಡಿದರೆ, ಮೇಕೆ ಮತ್ತು ಒಂಟೆ ಹಾಲಿಗೂ ಈ ರೀತಿಯ ಔಷಧೀಯ ಗುಣಗಳಿದ್ದರೂ ಕತ್ತೆ ಹಾಲು ಅವೆರಡಕ್ಕಿಂತ ಜಾಸ್ತಿ ಎಫೆಕ್ಟಿವ್ ಅಂತೆ. ಹಾಗಾಗಿ ಕೆಲಸಕ್ಕೆ ಬಾರದ ಕತ್ತೆ ಅಂತ ಬಯ್ಯೋರಿಗೆ ಕತ್ತೆ ಹಾಲಿಗೂ ಬೆಲೆ ಇದೆ ಅಂತ ಹೇಳಬೇಕಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕತ್ತೆಯ ಹಾಲಿಗೆ ಬೇಡಿಕೆ ಇದೆಯಂತೆ. ಒಂದು ಹುಡುಗಿ ಯನ್ನ, ನೋಡೋಕೆ ಇಷ್ಟ್ ಚೆನ್ನಾಗಿದ್ದೀರಲ್ಲ ನೀವು ಯಾವ ಸೋಪಲ್ಲಿ ಸ್ನಾನ ಮಾಡೋದು ಅಂತ ಕೇಳಿದ್ರೆ, ಕತ್ತೆ ಹಾಲಿನ ಸೋಪ್ ಅನ್ನೋ ಉತ್ತರವೂ ಬರಬಹುದು. ಅಷ್ಟೇ ಅಲ್ಲದೆ ಕತ್ತೆ ಹಾಲಿಗೆ ಕೆಲವೊಂದು ರೋಗಗಳನ್ನು ಗುಣಪಡಿಸೋ ಶಕ್ತಿ ಇದೆಯಂತೆ. ಆದರೆ ಕೆಲಸಕ್ಕೆ ಬಾರದ ಕತ್ತೆಗಳಿಗೆ ಬುದ್ಧಿ ಕಲಿಸೋ ಶಕ್ತಿ ಕತ್ತೆ ಹಾಲಿನಲ್ಲಿ ಇದೆಯೇ ಅನ್ನೋದು ಇನ್ನಷ್ಟೇ ಗೊತ್ತಾಗಬೇಕಿದೆ. ಒಟ್ಟಿನಲ್ಲಿ ಕಾರ್ಯವಾಸಿ ಕತ್ತೆ ಕಾಲು ಹಿಡಿ ಅನ್ನೋ ಮಾತಿನಂತೆ ಈಗ ಕಾರ್ಯವಾಸಿ ಅಲ್ಲ, ರೋಗ ವಾಸಿ ಆಗಲು ಕತ್ತೆ ಬೇಕಿದೆ. ಆದರೆ ಹಿಡಿಯಬೇಕಾಗಿರೋದು ಕತ್ತೆಯ ಕಾಲಲ್ಲ, ಕತ್ತೆ ಹಾಲನ್ನ.

ಸಂಪಾದಕರ ಸದ್ಯಶೋಧನೆ

ದೇವಕಾಂತ ಬರೂವಾ ನೆನಪು

ಸ್ವಾತಂತ್ರ್ಯ ನಂತರ ಭಾರತದ ರಾಜಕಾರಣದಲ್ಲಿ, ಒಬ್ಬ ರಾಜಕಾರಣಿ ತನ್ನ ಒಂದೇ ಒಂದು ಹೇಳಿಕೆಯಿಂದ ಜನಪ್ರಿಯನಾದರೆ ಮತ್ತು ಇಂದಿಗೂ ನೆನಪಿನಲ್ಲಿ ಉಳಿದಿದ್ದರೆ ಅದು ಡಿ.ಕೆ.(ದೇವ ಕಾಂತ) ಬರೂವಾ. 'India is Indira, and Indira is India' ಎಂಬ ಆ ಒಂದು ಹೇಳಿಕೆಯಿಂದ ಬರೂವಾ ಮನೆಮಾತಾಗಿಬಿಟ್ಟರು. ಆ ಹೇಳಿಕೆಯ ಜತೆಗೆ ಅವರು ಇನ್ನೊಂದು ಮಾತನ್ನೂ ಹೇಳಿದ್ದರು – Who lives if Indira dies?. ಆದರೆ 'India is Indira, and Indira is India'ಮಾತ್ರ ಇಂದಿಗೂ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದುಬಿಟ್ಟಿದೆ. ಈ ಹೇಳಿಕೆ ಭಟ್ಟಂಗಿತನ ಅಥವಾ ಮುಖಸ್ತುತಿಯ ಪರಾಕಾಷ್ಠೆ ಎಂದೇ ಭಾವಿಸಲಾಗಿದೆ. ಒಬ್ಬ ರಾಜಕಾರಣಿಯನ್ನು ಇದಕ್ಕಿಂತ ಮಿಗಿಲಾಗಿ ಹೊಗಳಲು ಸಾಧ್ಯವೇ ಇಲ್ಲ. ಆ ದಿನಗಳಲ್ಲಿ ಈ ಹೇಳಿಕೆ ದೇಶಾದ್ಯಂತ ಚರ್ಚೆಗೆ ಈಡಾಗಿತ್ತು. ಈ ಹೇಳಿಕೆ ಕೇಳಿದ ಇಂದಿರಾ ಗಾಂಧಿಯವರು ಒಳಗೊಳಗೇ ಆನಂದತುಂದಿಲರಾದರೂ, ಬರುವಾ ಜತೆ ಮಾತಾಡುವಾಗ, 'This is too much of you..'ಎಂದು ನಸುನಗುತ್ತಾ ಹೇಳಿದ್ದರಂತೆ. ಅವರ ಮಂದ ನಗು ಆ ಹೇಳಿಕೆಯನ್ನು ಪುರಸ್ಕರಿಸುವಂತಿತ್ತು. ಆ ಸಮಯದಲ್ಲಿ ಬರೂವಾ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಅಧ್ಯಕ್ಷರಾಗಿದ್ದ ಅವರು ಮೂರು ವರ್ಷಗಳ ಕಾಲ (1975 ರಿಂದ 1978) ಆ ಪದವಿಯಲ್ಲಿದ್ದರು. ಇಂದಿರಾ ಗಾಂಧಿಯವರನ್ನು ಸಂಪ್ರೀತಗೊಳಿಸಲು ಅವರು ಯಾವ ಕೆಲಸಕ್ಕೂ ಸಿದ್ಧರಾಗಿದ್ದರು. ಅಧ್ಯಕ್ಷರಾಗಿದ್ದಾಗ ಸಾರ್ವಜನಿಕ ಸಭೆಯಲ್ಲಿ ತಮ್ಮ ಪಾದಸ್ಪರ್ಶ ಮಾಡಿ ನಮಸ್ಕರಿಸಕೂಡದು ಎಂದು ಇಂದಿರಾ ತಾಕೀತು ಮಾಡಿದ್ದರೂ, ಅವರನ್ನು ಕಂಡೊಡನೆ ಬರೂವಾ ನಡು ಬಗ್ಗುತ್ತಿತ್ತು. 'ನಾನು ಅಸ್ಸಾಮಿನವನು. ಇಲ್ಲಿ ತನಕ ಅಸ್ಸಾಮಿನ ಯಾವ ನಾಯಕನೂ ಕಾಂಗ್ರೆಸ್ ಅಧ್ಯಕ್ಷರಾಗಿಲ್ಲ. ನಾನೇ ಮೊದಲಿಗ. ಇಂದಿರಾ ನನ್ನನ್ನು ಈ ಹುದ್ದೆಗೆ ನನ್ನ ನಿಷ್ಠೆಯನ್ನು ನೋಡಿ ನೇಮಿಸಿದ್ದಾರೆ. ನಾನು ಅವರಿಗೆ ಯಾವತ್ತೂ ಕೃತಜ್ಞನಾಗಿರುತ್ತೇನೆ' ಎಂದು ಅವರು ತಮ್ಮ ಆಪ್ತರ ಮುಂದೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಇಂದಿರಾ ಗಾಂಧಿಯವರು ಹತ್ತಿರವಿದ್ದರೆ, ತಾವು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಂಬುದನ್ನೂ ಮರೆತು ಚಪ್ರಾಸಿ ಥರ ವರ್ತಿಸುತ್ತಿದ್ದರು. ಅದಕ್ಕಾಗಿ ಅವರಿಗೆ ಸ್ವಲ್ಪವೂ ಬೇಸರ, ಮುಜುಗರ ಇರಲಿಲ್ಲ. ಆ ಕಾರ್ಯವನ್ನು ಅತ್ಯಂತ ಭಕ್ತಿಯಿಂದ ಮಾಡುತ್ತಿದ್ದರು. ಪ್ರಥಮ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್‌ನಿಂದ ಆರಿಸಿ ಬಂದ ಬರೂವಾ, ದಿಲ್ಲಿ ರಾಜಕಾರಣದಲ್ಲಿ ಮೇಲಕ್ಕೇರುವುದು ಹೇಗೆ ಎಂಬುದನ್ನು ಬಹುಬೇಗ ಕಲಿತುಕೊಂಡರು. ಆ ದಿನಗಳಲ್ಲಿ ರಾಜ್ಯಪಾಲರಾದವರು ನಂತರ ಸಚಿವರಾಗು ವುದು ಸಾಮಾನ್ಯವಾಗಿತ್ತು. 1971 ರಿಂದ 1973 ರವರೆಗೆ ಬರೂವಾ ಬಿಹಾರದ ರಾಜ್ಯಪಾಲರಾಗಿದ್ದರು. ನಂತರ ಇಂದಿರಾ ಗಾಂಧಿ ಸಂಪುಟದಲ್ಲಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವರಾದರು. ನಾಲ್ಕು ಮತ್ತು ಐದನೇ ಲೋಕಸಭಾ ಚುನಾವಣೆಯಲ್ಲಿ ಬರೂವಾ ಪರಾಭವಗೊಂಡಿದ್ದರಿಂದ ಅವರಿಗೆ ಇಂದಿರಾ ಗಾಂಧಿ ರಾಜ್ಯ ಪಾಲರ ಹುದ್ದೆಯನ್ನು ಕರುಣಿಸಿದ್ದರು. ಅಸ್ಸಾಮಿನ ದಿಬ್ರುಗಢದಲ್ಲಿ ಜನಿಸಿದ ಬರೂವಾ, ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದರು. 1949 ರಿಂದ 1951 ರತನಕ ಅವರು ಕಾನ್ಸ್ಟಿಟ್ಯೂಟ್ ಅಸೆಂಬ್ಲಿಯ ಸದಸ್ಯರೂ ಆಗಿದ್ದರು. 'ಇಂಡಿಯಾ ಅಂದ್ರೆ ಇಂದಿರಾ, ಇಂದಿರಾ ಅಂದ್ರೆ ಇಂಡಿಯಾ. ಇಂದಿರಾ ನಿಧನರಾದರೆ ಜೀವಿಸಬೇಕು ಎನ್ನುವವರು ಯಾರು?' ಎಂಬ ಹೇಳಿಕೆಯಿಂದ ಪ್ರಸಿದ್ಧರಾಗಿದ್ದ ಬರೂವಾ ಮುಂದೊಂದು ದಿನ ಇಂದಿರಾಗೆ ಸೆಡ್ಡು ಹೊಡೆಯುತ್ತಾರೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ. ಅವರನ್ನು ಮಂತ್ರಿ ಮಾಡಲೆಂದೇ ಇಂದಿರಾ ರಾಜ್ಯಸಭಾ ಸದಸ್ಯರನ್ನಾಗಿ ಮಾಡಿದ್ದರು. ಆದರೆ ತುರ್ತುಪರಿಸ್ಥಿತಿ ಬಳಿಕ ಅವರು ಇಂದಿರಾ ಪಕ್ಷವನ್ನು ತೊರೆದು, ಅರಸು ಕಾಂಗ್ರೆಸ್ ಸೇರಿದರು. ಅದು ಬರೂವಾ ಮಾಡಿದ ಪ್ರಮಾದವಾಗಿತ್ತು. ಪಕ್ಷದ ಅಧ್ಯಕ್ಷ ಸ್ಥಾನದಲ್ಲಿದ್ದವರು ಮತ್ತೊಂದು ಪಕ್ಷವನ್ನು ಸೇರುವುದನ್ನು ಊಹಿಸಿ ಕೊಳ್ಳಲೂ ಆಗುತ್ತಿರಲಿಲ್ಲ. ಆದರೆ ಬರೂವಾ ಅಲ್ಲಿ ತನಕ ಗಳಿಸಿದ ಭಟ್ಟಂಗಿತನವೆಲ್ಲ ನೀರು ಪಾಲಾಗಿತ್ತು. ಅಸ್ಸಾಮಿನ ಖ್ಯಾತ ಕವಿ ನವಕಾಂತ ಬರೂವಾ ಅವರ ಹಿರಿಯ ಸಹೋದರರಾದ ಡಿ.ಕೆ.ಬರುವಾ ಕೂಡ ತಮ್ಮ ಮಾತೃಭಾಷೆಯಲ್ಲಿ ಕವನಗಳನ್ನು ರಚಿಸುತ್ತಿದ್ದರು. 1996 ರಲ್ಲಿ ನಿಧನರಾದ ಬರೂವಾ, ಇಂದಿಗೂ ನೆನಪಿನಲ್ಲಿ ಉಳಿದಿರುವುದು ಆ ಒಂದು ಸಾಲಿನ ಮೂಲಕ.

ಸಂಸದರೇ, ನೀವು ಈ ಕೆಲಸ ಮಾಡಬಹುದು!

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ದೇಶದಲ್ಲಿ ಲೋಕಸಭಾ ಚುನಾವಣೆ ಮುಗಿದು ಸರಕಾರ ರಚನೆಯಾಗಿ, ಪ್ರತಿಪಕ್ಷ ನಾಯಕನಾಗಿ ರಾಹುಲ್ ಗಾಂಧಿ ಪ್ರತಿಷ್ಠಾಪನೆಯಾಗಿದೆ. ದೆಹಲಿಯ ಸಂಸತ್ ಭವನದಲ್ಲಿ ನೂತನ ಸಂಸದರು ಪ್ರಮಾಣವಚನ ಸ್ವೀಕರಿಸಿ ಆಗಿದೆ. ಅಲ್ಲಿಗೆ ಬಹುತೇಕ ಸಂಸದರು ತಮ್ಮ 'ಕೆಲಸ' ಮುಗಿಯಿತು ಎನ್ನುವ ನಿರಾಳ ಭಾವನೆಗೆ ಜಾರಿದ್ದಾರೆ. ಇನ್ನೇನಿದ್ದರೂ, ಮುಂದಿನ ಐದು ವರ್ಷದ ಬಳಿಕ ಎದುರಾಗುವ ಚುನಾವಣೆ ವೇಳೆಗೆ ಕ್ಷೇತ್ರದಲ್ಲಿ ಮುಖ ತೋರಿಸಿದರಾಯಿತು ಎನ್ನುವ ಮನಸ್ಥಿತಿಯಲ್ಲಿದ್ದಾರೆ. 'ಸಂಸದರೇಕೆ ಕಾಣಿಸಿಕೊಳ್ಳುವುದಿಲ್ಲ?' ಎಂದು ಯಾರಾದರೂ ಪ್ರಶ್ನಿಸಿದರೆ, 'ಸಂಸದರ ಕಾರ್ಯವ್ಯಾಪ್ತಿಯೇ ಚಿಕ್ಕದು. ಸ್ಥಳೀಯ ಸಂಸ್ಥೆ, ಶಾಸಕರಿಗೆ ಇರುವಷ್ಟು ಅನುದಾನವಾಗಲಿ, ಅಧಿಕಾರವಾಗಲಿ ನಮಗಿರುವುದಿಲ್ಲ' ಎನ್ನುವ ಸಿದ್ಧ ಉತ್ತರವನ್ನು ಬಹುತೇಕ ಸಂಸದರು ನೀಡುತ್ತಾರೆ.

ಸಂಸದರಿಗೆ ವರ್ಷಕ್ಕೆ ಸಿಗುವ ಒಂದೆರೆಡು ಕೋಟಿ ಅನುದಾನದಲ್ಲಿ ಮಠ ಮಾನ್ಯಗಳ ಅಭಿವೃದ್ಧಿ, ಛತ್ರಗಳ ನಿರ್ಮಾಣ ಕಾಮಗಾರಿಗೆ, ಹೆಚ್ಚೆಂದರೆ ರಸ್ತೆ ಬದಿಯಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಅನುದಾನ ನೀಡುವುದು. ಇದನ್ನು ಮೀರಿ ಎಲ್ಲ ಸರಕಾರಿ ಕಾರ್ಯಕ್ರಮಗಳಲ್ಲಿ 'ಘನ' ಉಪಸ್ಥಿತಿಯಲ್ಲಿ ಕೂರುವುದು, ಇಲ್ಲವೇ ದಿಶಾ ಸಭೆಗಳಲ್ಲಿ ಅಧಿಕಾರಿಗಳನ್ನು ತರಾಟೆಗೆ ತಗೆದುಕೊಳ್ಳುವುದು. ಇವನ್ನು ಬಿಟ್ಟರೆ, ಇಎಸ್‌ಐ ಆಸ್ಪತ್ರೆ, ಕಾಫಿ ಬೋರ್ಡ್ ಸೇರಿದಂತೆ ಕೆಲ ಕೇಂದ್ರ ಸರಕಾರದಿಂದ ನಡೆಯುವ ಸಂಸ್ಥೆಗಳಿಗೆ ಶಿಫಾರಸು ಪತ್ರ ಕೊಡುವುದು, ದೆಹಲಿಗೆ ಹೋಗುವ ತಮ್ಮ ಕ್ಷೇತ್ರದ ಕೆಲ ಪ್ರಭಾವಿಗಳಿಗೆ ಕರ್ನಾಟಕ ಭವನದಲ್ಲಿ 'ವಸತಿ ವ್ಯವಸ್ಥೆ' ಮಾಡುವುದೇ ಇಡೀ ಕ್ಷೇತ್ರಕ್ಕೆ ಮಾಡುವ ಕೆಲಸ ಎನ್ನುವಂತಾವಾಗಿದೆ. ಇದನ್ನು ಹೊರತುಪಡಿಸಿ, ಈ ಹಿಂದೆ ಬಹುತೇಕರಿಗೆ ಸಂಸದರು ನೆನಪಾಗುತ್ತಿದ್ದನ್ನು ಕೇಂದ್ರಿಯ ವಿದ್ಯಾಲಯದಲ್ಲಿ ಸೀಟು ಪಡೆಯುವ ಸಮಯದಲ್ಲಿ (ಹಿಂದೆ ಪ್ರತಿಯೊಬ್ಬ

ಸಂಸದರಿಗೆ ಕೇಂದ್ರಿಯ ವಿದ್ಯಾಲಯದಲ್ಲಿ ವರ್ಷಕ್ಕೆ ಒಬ್ಬ ವಿದ್ಯಾರ್ಥಿಯನ್ನು ಶಿಫಾರಸು ಮಾಡುವ ಅವಕಾಶವಿತ್ತು. ಈಗ ಈ ಶಿಫಾರಸಿಗೂ ಅವಕಾಶವಿಲ್ಲ) !

ಇವಿಷ್ಟೇ ಸಂಸದರ ಕೆಲಸವೆಂದು ಬಹುತೇಕರು ಅಂದುಕೊಂಡಿದ್ದಾರೆ (ಇದಕ್ಕೆ ಅಪವಾದವೆನ್ನುವಂತೆ ರಾಜ್ಯದ ಕೆಲ ಸಂಸದರು ಇದ್ದಾರೆ). ಇನ್ನೇನು ಚುನಾವಣೆ ಎದುರಾಗಲಿದೆ ಎನ್ನುವ ಸಮಯದಲ್ಲಿ 'ಅಂಕಪಟ್ಟಿ/ಅಭಿವೃದ್ಧಿ ಕಾರ್ಡ್'ಗಳನ್ನು ಶಾಸಕರಿಗೆ ಸಿದ್ಧಪಡಿಸುವಂತೆ ಸಂಸದರಿಗೆ ಸಿದ್ಧಪಡಿಸಿದ ಉದಾಹರಣೆಯಿಲ್ಲ. ಇದ್ದರೂ ಅದು ಬೆರಳೆಣಿಕೆಯಷ್ಟು ಎನ್ನುವುದನ್ನು ಬಿಡಿಸಿ ಹೇಳಬೇಕಿಲ್ಲ. ಸಂಸದರೂ ಸಹ, ತಮ್ಮ ಕಾರ್ಯವ್ಯಾಪ್ತಿಯಲ್ಲಿ ಇರುವಷ್ಟು ಮಾತ್ರ ಮಾಡುತ್ತೇವೆ ಎನ್ನುವ ಉತ್ತರದ ಮೂಲಕ ಬಚಾವಾಗುತ್ತಾರೆ.

ಹಾಗಾದರೆ, ಸಂಸದರಾಗಿ ಆಯ್ಕೆಯಾದವರು ವರ್ಷಕ್ಕೆ ನಾಲ್ಕೈದು ಬಾರಿ ದೆಹಲಿಗೆ ತೆರಳಿ ಸಂಸತ್ ಅಧಿವೇಶನದಲ್ಲಿ ಭಾಗವಹಿಸುವುದು, ತಮ್ಮ ಪಕ್ಷಗಳ ಪರವಾಗಿ ಕೈ ಎತ್ತುವುದು, ಇಲ್ಲವೇ ರಾಜ್ಯ ಸರಕಾರದಿಂದ ಕೇಂದ್ರ ಸರಕಾರದ ಬಳಿಗೆ ತೆರಳುವ 'ಸರ್ವ ಪಕ್ಷ ನಿಯೋಗ'ದಲ್ಲಿ ತಾವೂ ಒಬ್ಬರಾಗಿ ಹೋಗಿ ಬರುವುದಷ್ಟೇ ಕೆಲಸವೇ? ಇಡೀ ಜಿಲ್ಲೆ ಅಥವಾ ಎಂಟತ್ತು ವಿಧಾನಸಭಾ ಕ್ಷೇತ್ರಗಳನ್ನು ಪ್ರತಿನಿಧಿಸುವ, 15ರಿಂದ 20 ಲಕ್ಷ ಮತದಾರರ ಪ್ರತಿನಿಧಿಯಾಗಿ ದೆಹಲಿಯಲ್ಲಿ ಪ್ರತಿನಿಧಿಸುವ ಸಂಸದರಿಗೆ ಇರುವ 'ಕಾರ್ಯವ್ಯಾಪ್ತಿ' ಇಷ್ಟೇನಾ? ಕೇಂದ್ರದಿಂದ ಬರುವ ಎರಡು ಕೋಟಿ ಸಂಸದರ ಅಭಿವೃದ್ಧಿ ಅನುದಾನವನ್ನು ಹೊರತುಪಡಿಸಿ ಇನ್ನಾವುದೇ ಕೆಲಸ ಮಾಡಲು 'ಶಿಷ್ಠಾಚಾರ' ಸಿಗುವುದಿಲ್ಲವೇ ಎನ್ನುವುದು ಬಹುತೇಕರ ಅಚ್ಚರಿಯಾಗಿರುತ್ತದೆ.

ಜಿಲ್ಲಾ ಪಂಚಾಯಿತಿ ಅಥವಾ ಬಿಬಿಎಂಪಿ ಕಾರ್ಪೋರೇಟರ್‌ಗಳಿಗೆ ಇರುವಷ್ಟು ಅನುದಾನ-ಅಧಿಕಾರಮೂ ಕೆಲವೊಮ್ಮೆ ಸಂಸದರಿಗೆ ಇರುವುದಿಲ್ಲ ಎನ್ನುವುದು ಬಹುತೇಕ ರಾಜಕೀಯ ನಾಯಕರ ಮಾತು. ಅದಕ್ಕೆ ಆರೆಂಟು ಬಾರಿ ಸಂಸದರಾಗಿ ಆಯ್ಕೆಯಾದರೂ, ಜನಮಾನಸದಲ್ಲಿ ಗುರುತಿಸಿಕೊಂಡಿರುವುದಿಲ್ಲ. ಒಂದರ್ಥದಲ್ಲಿ ಸಂಸದರ ಕಾರ್ಯವ್ಯಾಪ್ತಿ ಮೇಲ್ನೋಟಕ್ಕೆ ಸೀಮಿತವಾಗಿರುತ್ತದೆ. ಸ್ಥಳೀಯ ಶಾಸಕರು, ಸ್ಥಳೀಯ ಸಂಸ್ಥೆ ಸದಸ್ಯರಿಗೆ ಇರುವಷ್ಟು 'ಅಧಿಕಾರ' ಸಂಸದರಿಗೆ ಇರುವುದಿಲ್ಲ.

ಆದರೆ, ಈ ಎಲ್ಲ ಕಟ್ಟಲೆಗಳನ್ನು ಮೀರಿ ಕೆಲಸ ಮಾಡಲೇಬೇಕು ಎನ್ನುವ ಛಲಕ್ಕೆ ನಿಂತರೆ ಸಂಸದರಿಗೆ ಬೇಕಾದಷ್ಟು ಅವಕಾಶಗಳಿರುತ್ತವೆ. ಈ ಕೆಲಸಗಳನ್ನು ಹುಡುಕಿಕೊಂಡು ಹೋಗಬೇಕಾಗಿರುವುದು ಮನಸ್ಸು ಸಂಸದರಿಗೆ ಇರಬೇಕಷ್ಟೆ. ಸಂಸದರೆಂದರೆ ಬೆಂಗಳೂರು-ದೆಹಲಿ ಓಡಾಡಿಕೊಂಡಿರುವುದಷ್ಟೇ ಕೆಲಸವಲ್ಲ. ಈ ಸಂಚಾರದ ವೇಳೆ ಕ್ಷೇತ್ರದ ಸಮಸ್ಯೆಗಳನ್ನು ದೆಹಲಿ ಮಟ್ಟದಲ್ಲಿ ಬಗೆಹರಿಸಬಹುದೇ ಎನ್ನುವ ಆಲೋಚನೆಗಳಿರಬೇಕು. ಕರ್ನಾಟಕದ ಮಟ್ಟಿಗೆ ದಿ.ಅನಂತಕುಮಾರ್ ಅವರು ಈ ಕೆಲಸವನ್ನು ಚಾಚು ತಪ್ಪದೇ ಮಾಡುತ್ತಿದ್ದರು. ಇನ್ನು ಹುಡುಕಿಕೊಂಡು ಹೋಗಿ ಕೆಲಸ ಮಾಡಿಸಿಕೊಂಡು ಬರುವ ವಿಷಯದಲ್ಲಿ, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಈ ಹಿಂದಿನ ಸಂಸದ ಪ್ರತಾಪ್ ಸಿಂಹ, ಬೆಂಗಳೂರು ದಕ್ಷಿಣ ಕ್ಷೇತ್ರದ ತೇಜಸ್ವಿ ಸೂರ್ಯ ಹಲವು ಸಂಸದರಿಗೆ 'ಮಾದರಿ'ಯಾಗಿದ್ದರು ಎಂದರೆ ತಪ್ಪಾಗುವುದಿಲ್ಲ.

ಮೊದಲೇ ಹೇಳಿದಂತೆ ಸಂಸದರಾಗಿ ಆಯ್ಕೆಯಾದವರು ಒಂದು ಲೋಕಸಭಾ ಕ್ಷೇತ್ರದ ಜನರನ್ನು ದೆಹಲಿ ಮಟ್ಟದಲ್ಲಿ ಪ್ರತಿನಿಧಿಸುತ್ತಾರೆ. ಕೇವಲ ತಮ್ಮ ಕ್ಷೇತ್ರಕ್ಕೆ ಸೀಮಿತವಾಗದೇ, ಇಡೀ ರಾಜ್ಯದ ಪ್ರತಿನಿಧಿಯಾಗಿ ದೆಹಲಿಯಲ್ಲಿ ಧ್ವನಿ ಎತ್ತಿದರೆ ತಪ್ಪೇನಿಲ್ಲ. ಈ ಹಿಂದೆ ದಿ. ಅನಂತಕುಮಾರ್ ಅವರು ಆಡಳಿತ ಪಕ್ಷದಲ್ಲಿರಲಿ, ವಿರೋಧ ಪಕ್ಷದಲ್ಲಿರಲಿ ರಾಜ್ಯದ ವಿಷಯವೆಂದು ಬಂದಾಗ ಕರ್ನಾಟಕ ಹಾಗೂ ದೆಹಲಿಯ 'ಸೇತುವೆ'ಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಈ ರೀತಿ ದೆಹಲಿಯೊಂದಿಗೆ ಇಡೀ ರಾಜ್ಯದ ಕೊಂಡಿಯಾಗಿರಲು ಸಾಧ್ಯವಿಲ್ಲದಿದ್ದರೆ, ಕನಿಷ್ಠ ತಮ್ಮ ತಮ್ಮ ಕ್ಷೇತ್ರಗಳಿಗೆ ಏನಾಗಬೇಕು ಎನ್ನುವ ಬಗ್ಗೆಯೂ ಯೋಚಿಸಬಹುದು.

ಹಾಗೇ ನೋಡಿದರೆ, ಕೇಂದ್ರ ಸರಕಾರದ ಹತ್ತಾರು ಯೋಜನೆಗಳನ್ನು ಘೋಷಿಸುತ್ತದೆ. ಆದರೆ ಈ ಯೋಜನೆಗಳನ್ನು ಅನೇಕ ಯೋಜನೆಗಳು ಜನರ ಬಳಿಗೆ ತಲುಪುವುದೇ ಇಲ್ಲ. ಈ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಹಾಗೂ ಯೋಜನೆಯ ಫಲಾನುಭವಿಗಳನ್ನು ಆಯ್ಕೆ ಮಾಡುವ ವಿಷಯದಲ್ಲಿ ಸಂಸದರು ಆಲೋಚಿಸಬಹುದು. ಇದರೊಂದಿಗೆ, ಕೇಂದ್ರ ಹಾಗೂ ರಾಜ್ಯ ಸರಕಾರದ ನರೇಗಾ, ಜಲಜೀವನ್ ಮಿಷನ್, ಆಯುಷ್ಮಾನ್ ಭಾರತ್, ಗ್ರಾಮೀಣ ಭಾಗದ ರಸ್ತೆ ಅಭಿವೃದ್ಧಿ ಸೇರಿದಂತೆ ನೂರಾರು ಯೋಜನೆಗಳನ್ನು ತಮ್ಮ ಲೋಕಸಭಾ ಕ್ಷೇತ್ರಗಳಿಗೆ ತಗೆದುಕೊಂಡು ಬರುವ ನಿಟ್ಟಿನಲ್ಲಿ ದೆಹಲಿ ಮಟ್ಟದಲ್ಲಿ ಓಡಾಡಬಹುದು. ಆದರೆ ಬಹುತೇಕ ಸಂಸದರಿಗೆ ಈ ರೀತಿಯ ಯೋಜನೆಗಳನ್ನು ತರಬಹುದು ಎನ್ನುವ ಆಲೋಚನೆಯೂ ಬರುವುದಿಲ್ಲ ಎನ್ನುವುದೇ ದುರಂತ.

ಮತದಾರರಿಗೆ ನೇರವಾಗಿ ಲಭಿಸುವ ಯೋಜನೆಗಳು ಒಂದೆಡೆಯಾದರೆ, ಮತ್ತೊಂದೆಡೆ ಕ್ಷೇತ್ರದ ಮೂಲಸೌಕರ್ಯ ಹೆಚ್ಚಿಸುವಲ್ಲಿ ಕೇಂದ್ರದ ಯಾವೆಲ್ಲ ಯೋಜನೆಗಳನ್ನು ಬಳಸಿಕೊಳ್ಳಬಹುದು? ಕೇಂದ್ರದ ಅನುದಾನವನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಬಹುದು ಎನ್ನುವ ಬಗ್ಗೆಯೂ ಆಲೋಚಿಸಬಹುದು. ಉದಾಹರಣೆಗೆ, ಕ್ಷೇತ್ರದಲ್ಲಿರುವ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ, ರೈಲ್ವೇ ಸಂಪರ್ಕವನ್ನು ಹೆಚ್ಚಿಸುವ, ರೈಲ್ವೆ ಹಳಿಗಳ ಅಭಿವೃದ್ಧಿ ಸೇರಿದಂತೆ ನಾನಾ ಯೋಜನೆಗಳ ಮೂಲಕ ತಮ್ಮ ಕ್ಷೇತ್ರಕ್ಕೆ ಸಂಪರ್ಕ ಜಾಲವನ್ನು ಹೆಚ್ಚಿಸಿಕೊಳ್ಳಬಹುದು. ಇದಕ್ಕೆ ತಾಜಾ ಉದಾಹರಣೆಯಾಗಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರಕ್ಕೆ ಪ್ರತಾಪ್ ಸಿಂಹ ಮಾಡಿದ್ದನ್ನು ಗಮನಿಸಬಹುದು. ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ಮುಕ್ತಾಯಗೊಳ್ಳಲು ದಶಕಗಳೇ ಬೇಕು ಎಂದು ಅನೇಕರು ಅಂದಾಜಿಸಿದ್ದರು. ಆದರೆ ಪ್ರತಾಪ್ ಸಿಂಹ ಸಂಸದರಾಗಿ ತಗೆದುಕೊಂಡ ವಿಶೇಷ ಆಸಕ್ತಿಯಿಂದ ಕೆಲವೇ ವರ್ಷದಲ್ಲಿ ಇಡೀ ಯೋಜನೆ ಮುಕ್ತಾಯವಾಗಿತ್ತು. ಇದೇ ರೀತಿ ಮೈಸೂರಿಗೆ ಪಾಸ್‌ಪೋರ್ಟ್ ಸೇವಾ ಕೇಂದ್ರ, ಎಕ್ಸ್‌ಪ್ರೆಸ್ ರೈಲು ಸೇರಿದಂತೆ ಹತ್ತು ಹಲವು ಯೋಜನೆಗಳನ್ನು ಕೇಂದ್ರದಿಂದ ರಾಜ್ಯ ಸರಕಾರದ ನೆರವಿಲ್ಲದೇ ನೇರವಾಗಿ ತಂದರು. ಈ ಮೂಲಕ ಸಂಸದರಾಗಿ ಈ ಎಲ್ಲ ಕೆಲಸಗಳನ್ನು ಮಾಡಬಹುದು ಎನ್ನುವುದನ್ನು ತೋರಿಸಿದ್ದಾರೆ.

ಇವುಗಳೊಂದಿಗೆ ದೆಹಲಿಯ ಸಂಸತ್‌ನಲ್ಲಿ ರಾಜ್ಯದ ಹಿತದೃಷ್ಟಿಗೆ ಸಂಬಂಧಿಸಿದಂತೆ, ರಾಜ್ಯದ ಭಾಷೆ, ಗಡಿಗೆ ಸಂಬಂಧಿಸಿದಂತೆ ಧ್ವನಿ ಎತ್ತಬಹುದು. ಆದರೆ ನನಗೆ ನೆನಪಿಗೆ ಇರುವಂತೆ ಬಹುತೇಕ ಸಂಸದರು, ದೆಹಲಿಗೆ ಹೋಗಿ ಮೇಜು ಕುಟ್ಟುವುದನ್ನು ಬಿಟ್ಟು ಬೇರೆ ಯಾವ ಕೆಲಸವನ್ನು ಮಾಡಿಲ್ಲ. ಕನ್ನಡಿಗರಿಗೆ ಕನ್ನಡದಲ್ಲಿಯೇ ನೀಟ್ ಬರೆಯುವಂತೆ, ಬ್ಯಾಂಕಿಂಗ್ ಪರೀಕ್ಷೆಯಲ್ಲಿ ಕನ್ನಡಕ್ಕೆ ಅವಕಾಶ ನೀಡುವಂತೆ ಗಟ್ಟಿ ಧ್ವನಿ ಎತ್ತಿರುವುದನ್ನು ನೋಡಿಲ್ಲ. ಈ ನಿಟ್ಟಿನಲ್ಲಿ ಈ ಬಾರಿ ಆಯ್ಕೆಯಾಗಿರುವ ಸಂಸದರಾದರೂ, ಆಲೋಚಿಸಲಿ.

ಸ್ಥಳೀಯ ಮಟ್ಟದಲ್ಲಿಯೇ ನೋಡುವುದಾದರೆ, ಸಂಸದರಾದವರು ದಿಶಾ ಸಭೆಗಳನ್ನು ನಡೆಸಲಿ, ಆ ಸಭೆಗಳಲ್ಲಿ ಲೋಕಸಭಾ ಕ್ಷೇತ್ರದಲ್ಲಿ ಆಗುತ್ತಿರುವ ಯೋಜನೆ, ಕಾಮಗಾರಿ, ಕೇಂದ್ರ, ರಾಜ್ಯ ಸರಕಾರದ ಫಲಾನುಭವಿಗಳ ಮಾಹಿತಿ ಪಡೆಯುವ ಹಕ್ಕಿರುತ್ತದೆ. ಈ ಸಭೆಯನ್ನು ಸಂಸದರ ನೇತೃತ್ವದಲ್ಲಿಯೇ ನಡೆಸಬೇಕಿರುವುದರಿಂದ ತಿಂಗಳಿಗೊಮ್ಮೆ ಅಧಿಕಾರಿಗಳಿಂದ ಏನಾಗಿದೆ ಎಂದು ಮಾಹಿತಿ ಪಡೆದು, ಏನಾದರೂ ಲೋಪದೋಷಗಳಿದ್ದರೆ ಅವುಗಳನ್ನು ಮುಖ್ಯಮಂತ್ರಿಗಳೊಂದಿಗೆ ಅಥವಾ ರಾಜ್ಯ ಸರಕಾರದೊಂದಿಗೆ ಚರ್ಚಿಸಿ ಬಗೆಹರಿಸುವ ಬಗ್ಗೆಯೂ ಕ್ರಮವಹಿಸಬಹುದು. ಆದರೆ ಎಷ್ಟು ಸಂಸದರು ಪ್ರತಿ ತಿಂಗಳು ದಿಶಾ ಸಭೆ ನಡೆಸಿದ್ದಾರೆ? ಸಭೆ ನಡೆಸಿದ್ದರೂ, ಅಲ್ಲಿನ ಯಾವ ಅಜೆಂಡಾಗಳನ್ನು ಮುಂದಿಟ್ಟುಕೊಂಡು ಕೇಂದ್ರ ಹಾಗೂ ರಾಜ್ಯ ಸರಕಾರಗಳೊಂದಿಗೆ ಸಂವಹನ ನಡೆಸಿ, ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ ಎನ್ನುವುದು ಗಮನಿಸಬೇಕು.

ಲೋಕಸಭಾ ಚುನಾವಣೆ ಬಹುತೇಕ ಸಮಯದಲ್ಲಿ ನಡೆಯುವುದು ರಾಷ್ಟ್ರ ಮಟ್ಟದ ವಿಷಯಗಳ ಮೇಲೆ ಹೊರತು, ಸಂಸದ ಅಭ್ಯರ್ಥಿ ಯಾರು ಎನ್ನುವುದರ ಮೇಲಲ್ಲ. ಆದ್ದರಿಂದ ಬಹುತೇಕ ಸಮಯದಲ್ಲಿ ಪಕ್ಷದ ಗುರುತಿನ ಮೇಲೆ ಯಾರೇ ನಿಂತಿದ್ದಾರೆ ಎನ್ನುವುದರ ಮೇಲೆ ಅಭ್ಯರ್ಥಿಗಳ ಸೋಲು-ಗೆಲುವು ನಿರ್ಧಾರವಾಗಲಿದೆ. ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಗೆಲುವುದು ಎಷ್ಟು ಮುಖ್ಯವೋ, ಗೆದ್ದ ಬಳಿಕ ಗೆಲ್ಲಿಸಿದ ಕ್ಷೇತ್ರದ ಜನರ 'ಋಣ' ತೀರಿಸಿದಂತಾಗುತ್ತದೆ. ಈ ಬಾರಿ ಕರ್ನಾಟಕದಿಂದ ಆಯ್ಕೆಯಾಗಿರುವ ಸಂಸದರಲ್ಲಿ ಶೇ.50ಕ್ಕಿಂತ ಹೆಚ್ಚು ಮಂದಿ ನೂತನ ಸಂಸದರಿದ್ದಾರೆ. ಇವರಾದರೂ, ಈ ಹಿಂದಿನ ಸಂಸದರ ಸಂಪ್ರದಾಯಕವನ್ನು ಮುರಿಯುವ ಪ್ರಯತ್ನ ಮಾಡಬೇಕು. ಇರುವ ಅವಕಾಶಗಳನ್ನು ಬಳಸಿಕೊಳ್ಳದೇ, 'ಸಂಸದರಾಗಿ ನಮಗ್ಯಾವ ಅಧಿಕಾರ'ವಿದೆ ಎಂದು ಮೂಗು ಮುರಿಯುವ ಸಂಸದರು ಇನ್ನಾದರೂ ತಮಗಿರುವ ಕಾರ್ಯವ್ಯಾಪ್ತಿಯನ್ನು ಸೂಕ್ಷ್ಮವಾಗಿ ಗಮನಿಸಿ, ಅದನ್ನು ಬಳಸಿಕೊಂಡು ಮತದಾರರಿಗೆ ನೆರವಾಗುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಿ. ಸಿಕ್ಕಿರುವ ಅವಕಾಶವನ್ನು ಬಳಸಿಕೊಂಡು, ರಾಜ್ಯ ಹಾಗೂ ಕ್ಷೇತ್ರದ ಜನರಿಗೆ ಏನೆಲ್ಲ ಯೋಜನೆಗಳನ್ನು ತರಲು ಸಾಧ್ಯ ಎನ್ನುವ ಬಗ್ಗೆ ಯೋಚಿಸಿ, ಈ ನಿಟ್ಟಿನಲ್ಲಿ ಕೆಲಸ ಮಾಡಿದರೆ 'ಭಿನ್ನ ಸಂಸದ'ರಾಗುತ್ತೀರಾ. ಇಲ್ಲದಿದ್ದರೂ, ಮೇಜುಕುಟ್ಟಿ ಬರುವ ನೂರಾರು ಸಂಸದರಲ್ಲಿ ನೀವೊಬ್ಬರಾಗಿ ಕಳೆದು ಹೋಗುತ್ತೀರಾ ಎನ್ನುವುದು ಸ್ಪಷ್ಟ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಿಶ್ವ ಗೆದ್ದ ಭಾರತ

ಚಾತಕಪಕ್ಷಿಗಳಂತೆ ಪ್ರತಿಯೊಬ್ಬ ಕ್ರಿಕೆಟ್ ಪ್ರೇಮಿ ಹದಿನೇಳು ವರ್ಷಗಳಿಂದ ಕಂಡ ಕನಸನ್ನು ನಾಯಕ ರೋಹಿತ್ ಶರ್ಮಾ ನೇತೃತ್ವದ ಭಾರತ ನನಸಾಗಿಸಿದೆ, ಬಾರ್ಬಡೋಸ್‌ನ ಕೆನ್ಸಿಗ್ಟಂನ್ ಓವಲ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸುವ ಮೂಲಕ ಭಾರತ ತಂಡ ವಿಶ್ವಚಾಂಪಿಯನ್ ಆಗಿ ಹೊರಹೊಮ್ಮಿದೆ.

ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡವಾಗಿ ಕಣಕ್ಕಿಳಿದ ಟೀಂ ಇಂಡಿಯಾ ಫೈನಲ್ ವರೆಗೂ ಅಜೇಯವಾಗಿ ಮುನ್ನುಗ್ಗಿ ಕಪ್‌ಗೆ ಮುತ್ತಿಕ್ಕಿದೆ. ಕ್ರಿಕೆಟ್ ಆಟವನ್ನು ಧರ್ಮವೆಂದು ಆರಾಧಿಸುವ ಭಾರತದಲ್ಲಿ ದೀಪಾವಳಿ ಸಡಗರ ಮನೆ ಮಾಡಿದ್ದು. ಈ ಗೆಲುವು ತಂಡದ ಪ್ರತಿಯೊಬ್ಬರ ಸಹಭಾಗಿತ್ವದಿಂದ ಸಾಧ್ಯವಾಗಿದೆ ಎಂದರೆ ತಪ್ಪಾಗದು.

ಇಡೀ ಟೂರ್ನಿಯೊದ್ದಕ್ಕು ಮುಗ್ಗರಿಸಿದ್ದ ವಿರಾಟ್ ಕೊಹ್ಲಿ ಪ್ರಮುಖ ಪಂದ್ಯದಲ್ಲಿ ಫಾರ್ಮ್‌ಗೆ ಮರಳಿದರಿಂದ ಪೈಪೋಟಿಯ ಮೊತ್ತ ಕಲೆಹಾಕಲು ಸಾಧ್ಯವಾಯಿತು. ಪಂದ್ಯ ಇನ್ನೇನು ಕೈ ತಪ್ಪಿ ಹೋಯಿತು ಎಂದುಕೊಳ್ಳುವಾಗಲೇ ಭಾರತದ ಪ್ರಮುಖ ಬೌಲರ್‌ಗಳಾದ ಜಸ್ಪ್ರಿತ್ ಬುಮ್ರಾ, ಅರ್ಶ್‌ದೀಪ್ ಸಿಂಗ್, ಆಲ್ ರೌಂಡರ್ ಹಾರ್ದಿಕ್ ಪಾಂಡ್ಯ ಮಾಡಿದ ಕೊನೆಯ ಐದು ಓವರ್‌ಗಳು ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಕೊನೆಯ ಓವರನಲ್ಲಿ ಸೂರ್ಯಕುಮಾರ್ ಯಾದವ್ ಕೇವಲ ಕ್ಯಾಚ್ ಹಿಡಿಯಲಿಲ್ಲ ಬೌಂಡರಿ ಹತ್ತಿರವೇ ಇದ್ದ ಕಪ್ ಎತ್ತಿಕೊಂಡು ಬಂದರು. ಕ್ರಿಕೆಟ್ ಎನ್ನುವ ಶಬ್ದ ಇರುವವರೆಗೂ ಆ ಕ್ಯಾಚ್ ಎಲ್ಲರ ನೆನಪಿನಾಳದಲ್ಲಿ ನೆಲೆಯೂರಲಿದೆ. ಟಿ-20 ವಿಶ್ವಕಪ್ ಗೆ ಆಟಗಾರರ ಆಯ್ಕೆ ವೇಳೆ ರೋಹಿತ್ ಶರ್ಮಾ ನಾಲ್ವರು ಸ್ಪಿನರ್‌ಗಳನ್ನು ತಂಡಕ್ಕೆ ಆಯ್ಕೆ ಮಾಡಿ ಕೊಂಡಾಗ ಅನೇಕರು ಅಚ್ಚರಿ ವ್ಯಕ್ತಪಡಿಸಿದ್ದರು ಅವರಿಗೆಲ್ಲ ನಾಯಕ ವಿಶ್ವಕಪ್‌ನಲ್ಲೇ ಉತ್ತರ ಸಿಗಲಿದೆ ಎಂದಿದ್ದರು. ಅದರಂತೆಯೇ ವೆಸ್ಟ್ ಇಂಡೀಸ್‌ನಲ್ಲಿ ನಡೆದ ಪಂದ್ಯಗಳಲ್ಲಿ ಮೂವರು ಸ್ಪಿನ್ನರ್‌ಗಳನ್ನು ಆಡಿಸಿ ತಮ್ಮ ಜಾಣ್ಮೆ ಪ್ರದರ್ಶಿಸಿ ದರು. ಸಂಕಷ್ಟದ ಸಂದರ್ಭವನ್ನು ಹೇಗೆ ನಿಭಾಯಿಸ ಬೇಕೆಂಬುದಕ್ಕೆ ರೋಹಿತ್‌ಗಿಂತ ಇನ್ನೊಂದು ಉದಾಹರಣೆ ಸಿಗಲು ಸಾಧ್ಯವಿಲ್ಲ, ಬೌಲರ್‌ಗಳ ಮೇಲೆ ಸದಾ ನಂಬಿಕೆ ಇಡುವ ಶರ್ಮಾ ಅವರಿಗೆ ಪೂರ್ಣ ಸ್ವಾತಂತ್ರ ನೀಡುವುದ ರೊಂದಿಗೆ ಗುಣಾತ್ಮಕ ಫಲಿತಾಂಶವನ್ನು ಪಡೆಯುತ್ತಿದ್ದಾರೆ ಅದೇ ತಂಡದ ಯಶಸ್ಸಿನ ಗುಟ್ಟಾಗಿದೆ.

ಈ ವಿಶ್ವಕಪ್ ಗೆಲುವಿನ ನಂತರ ದಿಗ್ಗಜ ಜೋಡಿಗಳಾದ ವಿರಾಟ್ ಕೊಹ್ಲಿ ಮತ್ತು ನಾಯಕ ರೋಹಿತ್ ಶರ್ಮಾ ಟಿ 20 ಮಾದರಿಯ ಕ್ರಿಕೆಟ್ ಗೆ ನಿವೃತಿ ಘೋಷಿಸಿದರು. ಬಹುಶಃ ಇದಕ್ಕಿಂತ ಇನ್ನೊಂದು ಸಂದರ್ಭ ಅವರಿಗೆ ಸಿಗಲು ಸಾಧ್ಯವಿರಲಿಲ್ಲ. ಕಳೆದ ಹತ್ತು ವರ್ಷದಲ್ಲಿ ಭಾರತ ಗೆಲುವಿಗೆ ಜೋಡೆತ್ತುಗಳಂತೆ ಹೆಗಲು ಕೊಟ್ಟಿರುವ ಇಬ್ಬರ ಎರಡನೇ ಇನ್ನಿಂಗ್ಸ್ ಇನ್ನು ಅದ್ಭುತವಾಗಿರಲಿ.

-ಮಣಿಕಂತ ಪಾ ಹಿರೇಮಠ ಚವಡಾಪೂರ

ದುಬಾರಿ ಮೂವಿ!

ಇತ್ತೀಚೆಗೆ ನಾವು ಕುಟುಂಬ ಸಮೇತ ಶ್ರೀರಂಗಪಟ್ಟಣಕ್ಕೆ ದೇವರ ದರ್ಶನಕ್ಕೆ ಹೋಗಿದ್ದೆವು. ದರ್ಶನ ಮುಗಿಸಿ ಹೊರಬಂದ ನಂತರ ಅಮ್ಮನಿಗೆ ಮೂವಿಗೆ (ಮೂತ್ರ ವಿಸರ್ಜನೆ) ಹೋಗುವಂತಾಯಿತು. ಅಲ್ಲೇ ಇದ್ದ ಸುಲಭ ಶೌಚಾಲಯಕ್ಕೆ ಹೋಗಿ ಬಂದ ನಂತರ ಅಲ್ಲೇ ಕುಳಿತಿದ್ದಾತನಿಗೆ ಐದು ರು. ಕೊಟ್ಟರೆ ಒಪ್ಪಲಿಲ್ಲ. ಆತ ಹತ್ತು ರುಪಾಯಿಗೆ ಬೇಡಿಕೆ ಇಟ್ಟ. ವಿಧಿಯಿಲ್ಲದೆ ತೆತ್ತಿದ್ದಾಯಿತು. ಹತ್ತು ರುಗೆ ಕಾಫಿ ಕುಡಿದರೆ ಅದನ್ನು ಹೊರಹಾಕಲು ಹತ್ತು ರುಪಾಯಿ ಎಂದರೆ ಹೇಗೆ? ಅದರಲ್ಲೂ ಮಧುಮೇಹಿಗಳಿಗೆ ದಿನಕ್ಕೆ ಹಲವಾರು ಬಾರಿ ಹೋಗುವಂತೆ ಆಗುತ್ತದೆ. ಪ್ರತಿಬಾರಿ ಹತ್ತು ರುಪಾಯಿ ಎಂದರೆ. ಮೂತ್ರ ವಿಸರ್ಜನೆಗೆ ದುಬಾರಿ ದರ ವಿಧಿಸುವುದರಿಂದ ಪ್ರವಾಸಿ ಸ್ಥಳಗಳಲ್ಲಿ ಅಥವಾ ಇನ್ನಿತರ ಸ್ಥಳಗಳಲ್ಲಿ ಅನೇಕರು ಮರದ ಮರೆಯಲ್ಲಿ ಅಥವಾ ಖಾಲಿ ನಿವೇಶನಗಳಲ್ಲಿ ತಮ್ಮ ನೈಸರ್ಗಿಕ ಕ್ರಿಯೆಯನ್ನು ಮುಗಿಸುತ್ತಾರೆ. ಇದರಿಂದ ಪರಿಸರ ಹಾಳಾಗುವುದರ ಜೊತೆಗೆ ನಾನಾ ಸಾಂಕ್ರಾಮಿಕ ರೋಗಗಳಿಗೂ ಕಾರಣವಾಗುತ್ತದೆ. ಸರಕಾರಕ್ಕೆ ಭಕ್ತರು ಹಾಕುವ ಕಾಣಿಕೆ, ಅಂಗಡಿ ಬಾಡಿಗೆ ಹಣ ಮುಂತಾದ ಹಲವು ಮಾರ್ಗಗಳಲ್ಲಿ ಆದಾಯ ಇರುತ್ತದೆ. ಇಂತಹ ಅಗತ್ಯ ಕೆಲಸಗಳಿಗೆ ಹಣ ಪಡೆಯದೆ ಉಚಿತ ಸೇವೆಯನ್ನು ನೀಡಿದರೆ ಪರಿಸರದ ನೈರ್ಮಲ್ಯ ಉಳಿಯುತ್ತದೆ. ಸರಕಾರ ಈ ಕುರಿತು ಮನಸ್ಸು ಮಾಡಲಿ ಎಂಬುದು ನನ್ನ ಆಶಯ.

-ಪತ್ತಂಗಿ ಎಸ್. ಮುರಳಿ ಬೆಂಗಳೂರು

ಪ್ರವಾಸೋದ್ಯಮಕ್ಕೆ ಮಸಿ ಬಳಿಯುವ ಅವ್ಯವಸ್ಥೆ

ವಿದ್ಯಮಾನ
ಆದರ್ಶ್ ಶೆಟ್ಟಿ ಉಪ್ಪಿನಂಗಡಿ
vveditoped@gmail.com

ದೇಶದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗಾಗಿಯೇ ಸರಕಾರಗಳು ಸಾಕಷ್ಟು ಅನುದಾನವನ್ನು ಮೀಸಲಿಡುತ್ತವೆ. ನಮ್ಮ ರಾಜ್ಯ ಅಥವಾ ದೇಶದಲ್ಲಿ ಸಾಕಷ್ಟು ಪ್ರವಾಸೋದ್ಯಮ ಪ್ರದೇಶವನ್ನಾಗಿ ಮಾರ್ಪಾಡು ಮಾಡಬಹುದಾದ ಜಾಗಗಳಿವೆ. ಅಲ್ಲಿಗೆ ಸೂಕ್ತ ಮೂಲಭೂತ ಸೌಕರ್ಯಗಳ ಕೊರತೆಯಿಂದ, ಸರಿಯಾದ ವ್ಯವಸ್ಥೆಗಳಿಲ್ಲದೆ ಅಭಿವೃದ್ಧಿ ಮರೀಚಿಕೆಯಾಗಿ ನನೆಗುದಿಗೆ ಬಿದ್ದ ಅದೆಷ್ಟೋ ಕ್ಷೇತ್ರಗಳು ನಮ್ಮ ಊರಿನಲ್ಲಿವೆ. ಒಂದು ಊರಿನ ಪ್ರವಾಸೋದ್ಯಮ ಅಭಿವೃದ್ಧಿಯಾದರೆ ಸರಕಾರದ ಬೊಕ್ಕಸಕ್ಕೆ ಆದಾಯ, ಆ ಊರಿನ ಅಭಿವೃದ್ಧಿ ಜೊತೆಗೆ ಆ ಊರು ಆರ್ಥಿಕವಾಗಿ ಬಲಗೊಳ್ಳುವುದರ ಜೊತೆಗೆ ಸಾಕಷ್ಟು ಜನರಿಗೆ ಉದ್ಯೋಗ, ವ್ಯಾಪಾರದ ಮೂಲಕ ಜೀವನ ಕಟ್ಟಿಕೊಳ್ಳಲು ಒಂದು ಒಳ್ಳೆಯ ದಾರಿ ಸಿಕ್ಕಂತಾಗುತ್ತದೆ. ಐತಿಹಾಸಿಕ ಧಾರ್ಮಿಕ ಕ್ಷೇತ್ರಗಳು, ಐತಿಹಾಸಿಕ ಸ್ಥಳಗಳು, ಸುಂದರವಾದ ರಮಣೀಯ ತಾಣಗಳ ಮೂಲಕ ಆ ಊರು ಕುಗ್ರಾಮವಾಗಿದ್ದರೂ ಪ್ರೇಕ್ಷಣೀಯ ಜಾಗಗಳ ಮೂಲಕ ಹತ್ತೂರಿಗೆ ಪ್ರಸಿದ್ಧಿಯನ್ನು ಪಡೆದಿರುತ್ತವೆ. ಪ್ರವಾಸೋದ್ಯಮ ಬೆಳೆದರೆ ಆ ದೇಶದ ಅಭಿವೃದ್ಧಿಗೆ ಕೂಡ ಅಡಿಪಾಯ ಹೊಂದಿದಂತೆ. ನಮ್ಮ ಊರಿನಲ್ಲಿ ಪ್ರವಾಸಿ ತಾಣಗಳು ಬೆಳೆದರೆ ಅಥವಾ ತಾಣಗಳಿದ್ದರೆ ಅದನ್ನು ಪೋಷಿಸುವ ಮತ್ತು ಅದರ ಪಾವಿತ್ರ್ಯತೆಯನ್ನು ಕಾಪಾಡುವ ಹೊಣೆಗಾರಿಕೆ ಪ್ರಜ್ಞಾವಂತ ನಾಗರಿಕರ ಮೇಲಿರುತ್ತದೆ. ಪ್ರಕೃತಿಯ ಸೊಬಗು ಎಂದರೆ ಅದೊಂದು ದೇವರ ಸೃಷ್ಟಿ. ಶುದ್ಧ ಗಾಳಿ, ಶುದ್ಧ ವಾತಾವರಣ, ಶುದ್ಧ ನೀರು ಇವೆಲ್ಲವೂ ಪ್ರಕೃತಿ ದತ್ತವಾಗಿ ನಮಗೆ ದೊರಕಿರುವ ವರ ಎಂದರೆ ತಪ್ಪಾಗಲಾರದು.

ಒಂದು ಐತಿಹಾಸಿಕ ಪ್ರವಾಸಿ ಸ್ಥಳಗಳಿಗೆ ಅನ್ಯರಾಜ್ಯ, ಜಿಲ್ಲೆ, ಊರುಗಳಿಂದ ಪ್ರವಾಸಿಗರು ಅಥವಾ ಜನಸಾಮಾನ್ಯರು ಭೇಟಿ ನೀಡುವ ಸಂದರ್ಭ ಅದೇ ಊರಿನ ಕೆಲ ಪುಂಡ ಗುಂಪುಗಳು, ಅಮಾಯಕ ಜನರ ಮೇಲೆ ತೋರುವ ದೌರ್ಜನ್ಯ, ವಸೂಲು ಬಾಜಿತನ, ಹೆಣ್ಣು ಮಕ್ಕಳ ಮೇಲೆ ಶೋಷಣೆ, ಸಾರ್ವಜನಿಕ ಶಾಂತಿ ಭಂಗ, ಚುಡಾವಣೆಯಂತಹ ಘಟನೆಗಳು ಸಾಕಷ್ಟು ಕಂಡು ಬರುತ್ತವೆ. ಮಂಗಳೂರಿನಲ್ಲೊಂದು ತಣ್ಣೀರು ಬಾವಿ ಎಂಬ ಬೀಚ್ ಪ್ರದೇಶವಿದೆ. ಇಲ್ಲಿಗೆ ಸಾಕಷ್ಟು ನವವಿವಾಹಿತರು, ಪ್ರೇಮಿಗಳು ಅಥವಾ ದೂರದ ಊರಿನಿಂದ ಪ್ರವಾಸಿಗರು ಭೇಟಿ ನೀಡುತ್ತಲೇ ಇರುತ್ತಾರೆ. ಈ ಪರಿಸರದಲ್ಲಿ ಕೂಡ ಒಂದಷ್ಟು ಡ್ರಗ್, ಗಾಂಜಾ, ಅಮಲು ಪದಾರ್ಥ ವ್ಯಸನದ ಗುಂಪು ಅಮಾಯಕ ಅಪರಿಚಿತ ಪ್ರವಾಸಿಗರ ದರೋಡೆ, ದೌರ್ಜನ್ಯ, ಪ್ರೇಮಿಗಳು, ನವಜೋಡಿಗಳನ್ನು ಬೆದರಿಸಿ ಲೈಂಗಿಕ ಶೋಷಣೆ ನಡೆಸಿದ ಪ್ರಕರಣಗಳು ಈ ಹಿಂದೆ ಬೆಳಕಿಗೆ ಬಂದಿದ್ದವು. ಇಂತಹ ಘಟನೆಗಳಿಂದ ಮರ್ಯಾದೆ ಮತ್ತು ಘನತೆಗೆ ಅಂಜಿ ಪ್ರವಾಸಿಗರು ದೂರು ನೀಡಲು ಹಿಂದೇಟು ಹಾಕುವ ಕಾರಣಕ್ಕೆ ಸಾಕಷ್ಟು ಪ್ರಕರಣಗಳು ಮುಚ್ಚಿ ಹೋಗಿವೆ. ಕೆಲ ವರ್ಷಗಳ ಹಿಂದೆ ಇದೇ ಪ್ರದೇಶದಲ್ಲಿ ಹೊರ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಾಗಿರುವ ನವದಂಪತಿಗಳನ್ನು ಕೂಡ ಈ ಗ್ಯಾಂಗ್ ದರೋಡೆ ನಡೆಸಿ, ಅನುಚಿತವಾಗಿ ವರ್ತಿಸಿರುವ ಘಟನೆ ರಾಜ್ಯಮಟ್ಟದಲ್ಲಿ ಸುದ್ದಿಯಾಗಿತ್ತು. ಅಂದು ಸಂತ್ರಸ್ತ ಜಿಲ್ಲಾಧಿಕಾರಿ ನೀಡಿರುವ ದೂರಿನ ಹಿನ್ನೆಲೆಯಲ್ಲಿ ಈ ಗ್ಯಾಂಗ್ ಅನ್ನು ಇಲಾಖೆ ಹೆಡೆಮುರಿ ಕಟ್ಟಿತ್ತು. ಅಲ್ಲದೇ ಅಂದು ಜಿಲ್ಲೆಯಲ್ಲಿ ಸಾಕಷ್ಟು ಕೋಲಾಹಲ ಸೃಷ್ಟಿಸಿದ ಕಾಲೇಜು ವಿದ್ಯಾರ್ಥಿನಿಯೋರ್ವಳ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ, ವಿಹಾರಕ್ಕೆಂದು ಬಂದ ಪ್ರೇಮಿಗಳ ಅಸಹಾಯಕತೆಯನ್ನು ಬಳಸಿ ಪುಂಡರ ಗುಂಪು ಇಂತಹ ಕೃತ್ಯ ಎಸಗಿದೆ ಎಂಬ ಗುಮಾನಿ ಕೂಡ ನಾಗರಿಕ ವಲಯದಲ್ಲಿ ವ್ಯಕ್ತವಾಗಿತ್ತು. ಇತ್ತೀಚೆಗೆ ರಾಜ್ಯಮಟ್ಟದಲ್ಲಿ ಸುದ್ದಿಯಾಗಿರುವ ಸಕಲೇಶಪುರ ತಾಲೂಕಿನ ಪಟ್ಲಬೆಟ್ಟ ಎಂಬ ಪ್ರವಾಸಿ ನಿಸರ್ಗಧಾಮವನ್ನು ವೀಕ್ಷಿಸಲು ತೆರಳಿದ ಅಮಾಯಕ ಪ್ರವಾಸಿಗರ ಮೇಲೆ ಹಲ್ಲೆ ಹಾಗೂ ಪುಂಡಾಟ ಮೆರೆದಿರುವ ಘಟನೆಯನ್ನೇ ಗಮನಿಸುವುದಾದರೆ ಈ ಪ್ರದೇಶಕ್ಕೆ ಹೊರಭಾಗದಿಂದ ಬಂದ ಪ್ರವಾಸಿಗರು ತಮ್ಮ ಸ್ವಂತ ವಾಹನದಲ್ಲಿ ಪಟ್ಲ ಬೆಟ್ಟಕ್ಕೆ ಭೇಟಿ ನೀಡಬಾರದಂತೆ. ಅಲ್ಲಿಗೆ ಯಾರು ಭೇಟಿ ನೀಡುವುದಿದ್ದರೂ ತಮ್ಮ ಸ್ವಂತ ವಾಹನ ಬದಿಗಿಟ್ಟು ಈ ಸೀಮಿತ ವಾಹನ ಚಾಲಕರ ಪಿಕ್ ಅಪ್, ಜೀಪ್ ಅನ್ನು ಬಾಡಿಗೆ ಮಾಡಿಕೊಂಡು ವೀವ್ ಪಾಯಿಂಟ್‌ಗೆ ತೆರಳಬೇಕು ಇದು ನಮ್ಮ ಊರು ಇದು ನಮ್ಮ ಆದೇಶ ಅನ್ನುತ್ತಲೇ ಪ್ರವಾಸಿಗರ ಮೇಲೆ ಹಲ್ಲೆ ನಡೆಸಿದ ವೀಡಿಯೋ ವೈರಲ್ ಆಗಿ ಸಾಮಾಜಿಕ ಜಾಲತಾಣಗಳಲ್ಲಿ ಜನಸಾಮಾನ್ಯರಿಂದ ಸಾಕಷ್ಟು ಆಕ್ರೋಶ ವ್ಯಕ್ತವಾದ ಬಳಿಕ ಹಾಸನ ಜಿಲ್ಲಾ ಎಸ್.ಪಿಯವರ ಸೂಚನೆ ಮೇರೆಗೆ ಪೊಲೀಸರು ಪುಂಡಾಟ ಮೆರೆದವರ ಇತ್ತೀಚೆಗೆ ಹೆಡೆಮುರಿ ಕಟ್ಟಿದ್ದರು. ಇಲ್ಲೂ ಪ್ರವಾಸಿಗರನ್ನು ಅಪಾಯಕಾರಿಯಾಗಿ ವಾಹನದಲ್ಲಿ ತುಂಬಿಸಿಕೊಂಡು ಪ್ರವಾಸಿಗರಿಂದ 3-4 ಪಟ್ಟು ಬಾಡಿಗೆ ದೋಚುವ ದಂಧೆ, ಪ್ರವಾಸಿ ಹೆಣ್ಣು ಮಕ್ಕಳ ಮೇಲೆ ಅನುಚಿತ ವರ್ತನೆಯ ಆರೋಪಗಳು ಹಲವಾರು ಬಾರಿ ಕೇಳಿ ಬಂದಿದೆ. ನಿರ್ಜನ ಹಾಗೂ ಜನ ವಿರಳ ಪ್ರದೇಶವಾಗಿರುವುದರಿಂದ ಇಲ್ಲಿ ನೊಂದವರು ನುಂಗಿ ಅಸಹಾಯಕತೆ ವ್ಯಕ್ತಪಡಿಸುವ ಪ್ರವಾಸಿಗರೇ ಹೆಚ್ಚು.

ಈ ಪಟ್ಲ ಬೆಟ್ಟ, ಮಡಿಕೇರಿ ಹಾಗೂ ರಾಜ್ಯದ ಕೆಲ ಗ್ರಾಮೀಣ ಪ್ರದೇಶದ ಪ್ರವಾಸಿ ತಾಣಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಮೂಲಭೂತ ಸೌಕರ್ಯ, ರಸ್ತೆಗಳ ಅಭಿವೃದ್ಧಿಗೆ ಇಲ್ಲಿನ ಇಂತಹ ಪುಂಡರೇ ಅಡ್ಡಿ ವ್ಯಕ್ತಪಡಿಸುವುದು, ಪ್ರವಾಸಿಗರ ವಾಹನಗಳು ತೆರಳಲು ಅನಾನುಕೂಲವಾಗುವಂತೆ ರಸ್ತೆಗಳಿಗೆ ಗುಂಡಿ ಅಗೆಯುವುದು ಆ ಮೂಲಕ ಪ್ರವಾಸಿಗರು ತಮ್ಮ ಸ್ವಂತ ವಾಹನದಲ್ಲಿ ತೆರಳದೆ ಬಾಡಿಗೆ ವಾಹನದಲ್ಲಿ ತೆರಳುವ ಅನಿವಾರ್ಯತೆ ಸೃಷ್ಟಿಸುವ ಮಂದಿಯೂ ಇದ್ದಾರೆ. ಇನ್ನು ನಮ್ಮ ಪ್ರಕೃತಿ ಸೌಂದರ್ಯದ ಹೊಣೆಗಾರಿಕೆಯನ್ನು ಹೊತ್ತು ಕೊಳ್ಳಬೇಕಾದವರು ನಾವೇ. ಆದರೆ ಬಹುತೇಕ ಪ್ರವಾಸಿ ಪ್ರದೇಶಗಳು ಮದ್ಯದ ಬಾಟಲ್, ಪಾನ್ ಪರಾಗ್, ಗುಟ್ಕಾ, ಸಿಗರೇಟ್ ಪ್ಯಾಕೆಟ್, ಅನೈತಿಕ ಚಟುವಟಿಕೆಗಳ ಮೂಲಕ ಪಾವಿತ್ರ್ಯತೆಯನ್ನು ಕಳೆದುಕೊಳ್ಳುವುದರ ಜೊತೆಗೆ ಸಭ್ಯ ನಾಗರಿಕರು ಮುಖ ತಿರುಗಿಸಿ ನಡೆಯಬೇಕಾದ ಪರಿಸ್ಥಿತಿ ಎದುರಾಗುತ್ತವೆ. ನಮ್ಮ ಊರಿನಲ್ಲಿ ಅಥವಾ ದೇಶದಲ್ಲಿ ಶೋಭಿಸಲ್ಪಡುವ ಯಾವುದೇ ಒಂದು ಪ್ರೇಕ್ಷಣೀಯ ಸ್ಥಳದ ಮಹತ್ವ ಹಾಗೂ

ಅದರ ಉದ್ದೇಶದ ಬಗ್ಗೆ ಮೊತ್ತ ಮೊದಲು ನಮಗೆ ಅಭಿಮಾನ ಹೆಮ್ಮೆ ಎಂಬುದು ಮೂಡಬೇಕು. ಇನ್ನು ಕೆಲ ಪ್ರವಾಸಿ ಜಾಗಗಳಲ್ಲಿ ಸುಂದರ ಕಟ್ಟಡ, ಅಲ್ಲಿನ ಸೌಕರ್ಯಗಳನ್ನು ಪ್ರವಾಸಿಗರೇ ವಿರೂಪಗೊಳಿಸುವುದು, ಅಂದಗೆಡಿಸುವುದು, ಅಶ್ಲೀಲ ಬರಹಗಳನ್ನು ಗೋಡೆಗಳ ಮೇಲೆ ಕೆತ್ತುವುದು, ಸ್ಥಳಗಳನ್ನು ಮಲೀನಗೊಳಿಸುವಂತಹ ಕಿಡಿಗೇಡಿ ವಿಕೃತ ಮನಸ್ಥಿತಿ ಇದೆಯಲ್ಲ ಅದು ದೇಶದ್ರೋಹಕ್ಕೆ ಸಮಾನವೆಂದರೂ ಅತಿಶಯೋಕ್ತಿಯಾಗಲಾರದು.

ಇನ್ನು ಸರಕಾರಗಳು ಕೂಡ ಪ್ರವಾಸಿಗರ ಆಕರ್ಷಣೆಯ ಪ್ರದೇಶ, ಪ್ರವಾಸಿ ತಾಣಗಳಲ್ಲಿನ ಸುರಕ್ಷತೆಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಂತಿಲ್ಲ.ದಟ್ಟ ಕಾಡು ನಿರ್ಜನ ಪ್ರದೇಶ ವ್ಯಾಪ್ತಿಯನ್ನು ಒಳಗೊಂಡ ಪ್ರದೇಶಗಳಲ್ಲಿ ಟ್ರೆಕ್ಕಿಂಗ್, ಚಾರಣಕ್ಕೆಂದು ಬರುವ ಪ್ರವಾಸಿಗರು ನಾಪತ್ತೆಯಾಗುವ ಪ್ರಕರಣಗಳು ಹಲವಾರು ಬಾರಿ ಕಂಡು ಬರುತ್ತವೆ. ಇಲ್ಲೊಂದು ಪೊಲೀಸ್ ಸಿಬ್ಬಂದಿ, ಚೆಕ್ ಪೋಸ್ಟ್, ಅಥವಾ ಬೀಟ್ ಪೊಲೀಸ್ ವ್ಯವಸ್ಥೆಯ ಕಡೆ ಗೃಹ ಹಾಗೂ ಪ್ರವಾಸೋದ್ಯಮ ಇಲಾಖೆ ಗಮನ ಹರಿಸುವಂತಾಗಬೇಕು. ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಪ್ರವಾಸೋದ್ಯಮ ಇಲಾಖೆ ಇದ್ದರೂ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಸಾಕಷ್ಟು ವಿಪುಲ ಅವಕಾಶಗಳಿದ್ದರೂ ಅಲ್ಲೊಂದು ಮೂಲಭೂತ ಸೌಕರ್ಯಗಳು,ಪ್ರವಾಸಿಗರಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಿದರೆ ಪ್ರವಾಸೋದ್ಯಮ ಬೆಳೆಯುವುದರಲ್ಲಿ ಯಾವುದೇ ಸಂದೇಹವಿಲ್ಲ. ಭಾರತದ ಅತಿ ದೊಡ್ಡ ಸೇವಾ ವಲಯದಲ್ಲಿ ಪ್ರವಾಸೋದ್ಯಮವು ಕೂಡ ಒಂದು. ಪ್ರವಾಸೋದ್ಯಮ ಉದ್ಯೋಗ ರಂಗಕ್ಕೂ ಕೂಡ ಮಹತ್ವದ ಕೊಡುಗೆಯನ್ನು ನೀಡುತ್ತಾ ಬಂದಿದೆ. ಈ ಸಾಲಿಗೆ ಪ್ರಮುಖವಾಗಿ ಐತಿಹಾಸಿಕ ಧಾರ್ಮಿಕ ಕ್ಷೇತ್ರಗಳು, ಸಾಂಸ್ಕೃತಿಕ ನಗರಗಳು, ಬೀಚ್, ಜಲಪಾತಗಳು ಅರಣ್ಯ ಪ್ರದೇಶಗಳು ಪ್ರಮುಖವಾಗಿ ಜನರನ್ನು ಕೈಬೀಸಿ ಕರೆಯುತ್ತಿದೆ. ದೇಶದ ವಿವಿಧ ರಾಜ್ಯಗಳು ಪ್ರವಾಸೋದ್ಯಮದ ಕ್ಷೇತ್ರಗಳನ್ನು ಹೊಂದಿರುವ ಕಾರಣ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತವೆ. ವಿಶೇಷವಾಗಿ ಗೋವಾ, ಹಿಮಾಚಲ ಪ್ರದೇಶ, ಕೇರಳ, ರಾಜಸ್ಥಾನ, ಪಂಜಾಬ್, ಆಂಧ್ರಪ್ರದೇಶ, ದೆಹಲಿ, ಜಮ್ಮು ಕಾಶ್ಮೀರ, ಕರ್ನಾಟಕ ಸೇರಿದಂತೆ ವಿವಿಧ ಪ್ರದೇಶಗಳು ದೇಶ ವಿದೇಶಿಗರನ್ನು ತನ್ನ ಹಲವು ವೈಶಿಷ್ಟ್ಯಗಳಿಂದ ತನ್ನತ್ತ ಸೆಳೆಯುತ್ತಿದೆ.

ಪ್ರವಾಸೋದ್ಯಮ ಎಂಬುವುದು ದೇಶದ ಶಾಂತಿ, ಸಾಮರಸ್ಯ ಮತ್ತು ಸಂಸ್ಕೃತಿಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಯುರೋಪ್ ಮತ್ತು ಅಮೆರಿಕ ಸೇರಿದಂತೆ ಇನ್ನಿತರ ಕೆಲ ರಾಷ್ಟ್ರಗಳ ಆರ್ಥಿಕತೆಯ ಆಧಾರ ಪ್ರವಾಸೋದ್ಯಮವೇ ಆಗಿರುವುದರಿಂದ ಆ ದೇಶಗಳಲ್ಲಿ ಪರಿಸರ ಮತ್ತು ಸಾಂಸ್ಕೃತಿಕ ಕಟ್ಟಡಗಳು ತನ್ನ ವೈವಿಧ್ಯತೆಯನ್ನು ವಿಸ್ತರಿಸುತ್ತಿದೆ. ಪ್ರವಾಸಿ ತಾಣಗಳಲ್ಲಿ ಪ್ರಮುಖವಾಗಿ ದೇಶೀಯ ಪ್ರವಾಸೋದ್ಯಮ, ಒಳನಾಡಿನ ಪ್ರವಾಸೋದ್ಯಮ ಹಾಗೂ ಹೊರನಾಡಿನ ಪ್ರವಾಸೋದ್ಯಮ ಎಂಬ ಮೂರು ಪ್ರಕಾರಗಳನ್ನು ಒಳಗೊಂಡಿದೆ. ಆಧುನಿಕ ಯುವ ಪೀಳಿಗೆಗೆ ದೇಶದ ಇತಿಹಾಸ ದರ್ಶನ, ವೈವಿಧ್ಯಮಯ ಕಲೆ, ಸಂಸ್ಕೃತಿ, ವಾಸ್ತುಶಿಲ್ಪ, ಧರ್ಮ, ಪ್ರಕೃತಿ, ಪರಂಪರೆಗಳ ಪರಿಚಯಗಳು ಪ್ರವಾಸೋದ್ಯಮದಿಂದಲೇ ದೊರಕುವುದರಿಂದ ಇದು ಕೂಡ ಶಿಕ್ಷಣದ ಒಂದು ಭಾಗವೆನ್ನಬಹುದು. ಒಂದು ರಾಜ್ಯ ಹಲವು ಜಗತ್ತು ಎಂಬ ಧ್ಯೇಯದಡಿಯಲ್ಲಿ ಕಾರ್ಯನಿರ್ವಹಿಸುವ ಕರ್ನಾಟಕದ ಪ್ರವಾಸೋದ್ಯಮ ದೇಶದಲ್ಲಿ ನಾಲ್ಕನೇ ಸ್ಥಾನವನ್ನು ಹೊಂದಿದೆ. ಉಳಿದ ರಾಜ್ಯಗಳಿಗೆ ಹೋಲಿಸಿದರೆ ಅಭಿವೃದ್ಧಿಯಲ್ಲಿ ಮಂದಗತಿಯಲ್ಲಿರುವುದು ಕೂಡ ಅಷ್ಟೇ ವಾಸ್ತವಿಕ. ಪ್ರವಾಸೋದ್ಯಮ ಎಂಬುವುದು ಸುಂದರ ಪರಿಸರದ ಅನಾವರಣದ ಜೊತೆಗೆ ಪ್ರಾಕೃತಿಕ ಸೌಂದರ್ಯ ಹಾಗೂ ಪ್ರಕೃತಿಯ ಶಿಕ್ಷಣದ ಒಂದು ಭಾಗ. ಇದನ್ನು ಉಳಿಸಿ ಬೆಳೆಸುವ ಜೊತೆಗೆ ಪಾವಿತ್ರ್ಯತೆಯನ್ನು ಕಾಪಾಡುವ ಹೊಣೆಗಾರಿಕೆಯು ನಮ್ಮೆಲ್ಲರದ್ದಾಗಿದೆ.

ಭಟ್ಟರ್ ಸ್ಕಾಚ್

● ಎಂ.ವಿವೇಕ ರಾಜ್, ಬೆಂಗಳೂರು
ಭಟ್ರೇ, ಕೃತಿಯಲ್ಲಿ ಇನ್ನೂ ಹೆಚ್ಚಿನ ಬೆಂಕಿ (ಕಿಚ್ಚು) ಇರಬೇಕು ಎಂದು ವಿಮರ್ಶಕರು ಹೇಳಿದರೆ ಏನರ್ಥ ?
- ಕೃತಿಯನ್ನೇ ಬೆಂಕಿಗೆ ಹಾಕಬೇಕು ಎಂದರ್ಥ!

● ಜಗದೀಶ ಬಾಬು ಎನ್., ಕಡೂರು
ಭಟ್ರೇ, ಮನೆಯಲ್ಲಿ ಪುಸ್ತಕ ಇಟ್ಟುಕೊಂಡವರು ಅವನ್ನೆಲ್ಲ ಓದಿರುತ್ತಾರಾ?
- ಓದಿದ್ದರೆ ಪುಸ್ತಕಮನೆ ಖ್ಯಾತಿಯ ಹರಿಹರಪ್ರಿಯರಿಗೆ ನೊಬೆಲ್ ಪ್ರಶಸ್ತಿ ಕೊಡಬೇಕಾಗುತ್ತಿತ್ತು!

● ಸಂದೀಪ ನಾಯಕ, ಬೆಂಗಳೂರು
ಭಟ್ರೇ, ಕೆಲವರ ಬಾಯಿಯಿಂದ ಬರೀ ಹೊಲಸೇ ಉದುರುತ್ತದಲ್ಲ?
- ಅಂಥವರ ಬಾಯಿ ಅಂದ್ರೆ, ಬಚ್ಚಲಮನೆ!

● ಸತೀಶ್ ಎಲ್.ವಿ., ಮೈಸೂರು
ಭಟ್ರೇ, ರಾಜಕಾರಣಿಗೂ, ಹೆಂಡತಿಗೂ ಏನು ವ್ಯತ್ಯಾಸ?
- ನಾವು ಹೇಳಿದ್ದನ್ನು ರಾಜಕಾರಣಿ ಮರೆಯುತ್ತಾನೆ, ಹೆಂಡತಿ ನೆನಪಿನಲ್ಲಿಟ್ಟುಕೊಳ್ಳುತ್ತಾಳೆ!

● ನರೇಂದ್ರ ಶೆಣೈ, ಮಂಗಳೂರು
ಭಟ್ರೇ, ಯಾರೂ ನಮ್ಮ ಜತೆ ಶಾಶ್ವತವಾಗಿ ಇರುವುದಿಲ್ಲ ಅಂತಾರಲ್ಲ?
- ಹೂಂ.. ಹೀಗಾಗಿ ಒಬ್ಬರೇ ಇರುವುದನ್ನು ರೂಢಿ ಮಾಡಿಕೊಳ್ಳಬೇಕು!

● ರಮೇಶ ಗೌಡ, ಮಳವಳ್ಳಿ
ಭಟ್ರೇ, ನಿಖಿಲ್ ಕುಮಾರಸ್ವಾಮಿ ಜೆಡಿಎಸ್ ಅಧ್ಯಕ್ಷರಾಗುತ್ತಾರಂತೆ?
- ತಂದೆಯ ಆಸ್ತಿ ಮಗನಿಗೆ ಸಿಗಬೇಕಲ್ವ?!

● ವಿ.ಹೇಮಂತಕುಮಾರ, ಬೆಂಗಳೂರು
ಭಟ್ರೇ, ನರಿಗಳು ಅದೃಷ್ಟದ ಸಂಕೇತವಂತೆ ಹೌದಾ?
- ಈ ವಿಷಯ ಗೊತ್ತಾದರೆ ಗೂಬೆಗಳೂ ಪೈಪೋಟಿಗಿಳಿಯಬಹುದು!

● ಸಂಗೀತಾ ಗೌಡ, (ಇಮೇಲ್ ಮೂಲಕ)
ಭಟ್ರೇ, ಆಲ್ಕೋಹಾಲ್ ಕುಡಿಯುವವರೇ ವಾಸಿ ಅಂತ ಇಲ್ಲೊಬ್ಬ ಹೇಳ್ತಾನಲ್ಲ, ಹೇಗೆ?
- ರೇಟನ್ನು ಎಷ್ಟೇ ಜಾಸ್ತಿ ಮಾಡಿದರೂ ಪ್ರತಿಭಟನೆ ಮಾಡುವುದಿಲ್ಲವಲ್ಲ?!

● ಉಜ್ಜನಿ ಜಲೇಂದ್ರ, ಮಲ್ಲುಂಗೆರೆ
ಭಟ್ರೇ, 'ನೀ ಒಲಿದಂತೆ ನಾ ಹಾಡುವೆ' ಅಂತ ಹೇಳ್ತಾಳಲ್ಲ?
- ಯಾವ ರಾಗ ಹೊರಹೊಮ್ಮುವುದೋ ಆ ರಾಗದಲ್ಲಿ ಹಾಡ್ತೇನೆ ಅಂತ ಅರ್ಥ!

● ನಾ.ರಾ.ಹೇಮಂತ, ಉಳ್ಳಾಲ
ಭಟ್ರೇ, ಬೆಂಗಳೂರಿಗೆ ಬಂದ್ರೆ ಹೋಗಲೇಬೇಕಾದ ಸ್ಥಳ ಯಾವುದು?
- ಸದ್ಯ, ಪಟ್ಟಣಗೆರೆ ಶೆಡ್!

ಸ್ಥಳೀಯ ಭಾವನೆಗಳಿಗೆ ಬೆಲೆ ಕೊಡದಿದ್ದರೆ ಹೇಗೆ?

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ದೇಶ ಯಾವುದೇ ಇರಲಿ ನಾವು ಅಲ್ಲಿನ ಭಾಷೆಯನ್ನ ಕಲಿತು ಅಲ್ಲಿನ ಜನ ರೊಂದಿಗೆ ಬೇರೆಯದಿದ್ದರೆ ಸದಾ ಒಂದು ರೀತಿಯ ಬೇಸರ ಇದ್ದೇ ಇರುತ್ತದೆ. ಸ್ಥಳೀ ಯರ ಜೊತೆ ಬೆರೆಯುವುದು ಅವರ ರೀತಿ ರಿವಾಜು ಗಳನ್ನ ಅಳವಡಿಸಿಕೊಳ್ಳುವುದು ನಾವು ಅವರಿಗೆ ಮಾಡುವ ಉಪಕಾರವಲ್ಲ, ಅದು ನಮಗೆ ನಾವೇ ಮಾಡಿಕೊಳ್ಳುವ ಉಪಕಾರ ಎನ್ನುವುದನ್ನ ಮರೆಯ ಬಾರದು. ಒಂದು ಭಾಷೆಯನ್ನ ನಾನು ಬಲ್ಲೆ ಅಥವಾ ನಾನು ಬೇರೊಂದು ದೇಶದ ಸಂಸ್ಕೃತಿಯನ್ನ ಅರ್ಥ ಮಾಡಿಕೊಂಡೆ ಎಂದು ಹೇಳ ಬೇಕಾದರೆ ಮೊದಲಿಗೆ ಅಲ್ಲಿನ ಸ್ಥಳೀಯ ಭಾವನೆಗಳನ್ನು, ಅಲ್ಲಿನ ಆಡು ಮಾತಗಳನ್ನ ಮತ್ತು ಅವುಗಳನ್ನ ಯಾವ ಆಧಾರದ ಮೇಲೆ ಮತ್ತು ಯಾವ ಅರ್ಥದಲ್ಲಿ ಹೇಳಿದ್ದಾರೆ ಎನ್ನುವುದನ್ನ ಅರಿತುಕೊಳ್ಳಬೇಕು. ಬಾರ್ಸಿಲೋನಾ ನಿಡ ಯಾದ ಎರಡು ಅಥವಾ ಮೂರು ವರ್ಷದಲ್ಲಿ ಸ್ಪ್ಯಾನಿಷ್ ಆಡು ಮಾತುಗಳು, ಗಾದೆಗಳನ್ನ ಮಾತಿನ ಮಧ್ಯೆ ಉಚ್ಚರಿಸುವ ಅವುಗಳ ಭಾವಾರ್ಥವನ್ನ ಅರ್ಥ ಮಾಡಿಕೊಳ್ಳುವ ಮಟ್ಟಕ್ಕೆ ನನ್ನ ಭಾಷಾ ಜ್ಞಾನ ವಿಸ್ತರಿಸಿತ್ತು. ಇವತ್ತು ಇಂತಹ ಒಂದೆರೆಡು ಮೂರು ಆಡು ಮಾತುಗಳನ್ನ ನಿಮಗೆ ಹೇಳುವೆ.

ಬದುಕಿನಲ್ಲಿ ಎಷ್ಟೊಂದು ಜನ ಬಂದು ಹೋಗು ತ್ತಾರೆ ಅಲ್ಲವೇ? ಹಾಗೆ ನಮ್ಮ ಬದುಕಿನಲ್ಲಿ ಬಂದವ ರಲ್ಲಿ ಹಲವರು ಬಹಳ ಸರಳವಾಗಿ ಸುಲಭವಾಗಿ ಬೆರೆತು ಹೋಗುತ್ತಾರೆ. ಇನ್ನು ಕೆಲವರು ಮನಸ್ಸಿಗೆ ಕಿರಿಕಿರಿ ಮಾಡಲೆಂದೇ ಬರುತ್ತಾರೆ. ಹಾಗೆ ನೋಡಲು ಹೋದರೆ ಹಾಗೆ ನಮ್ಮ ಬದುಕಿಗೆ ಬಂದವರು ಯಾರು ಬೇಕಾದರೂ ಆಗಿರಬಹುದು. ಗೆಳೆಯ, ಸಹೋದ್ಯೋಗಿ, ಸಹೋದರ, ಸಹೋದರಿ ಕೊನೆಗೆ ಹೆತ್ತವರು ಯಾರಾದರೂ ಸರಿಯೇ! ಕೆಲವೊಮ್ಮೆ ಹಾಲು ಜೇನಿನಂತೆ, ಹಾಲು ಸಕ್ಕರೆಯಂತೆ ಬೆರೆತು ಖುಷಿಯನ್ನ ನೀಡುವ ಸಂಬಂಧ ಕೆಲವೊಮ್ಮೆ ಎಣ್ಣೆ ಸೀಗೆಕಾಯಿ ಅಥವಾ ಎಣ್ಣೆ –ನೀರಿನಂತೆ ಯಾವ ಸುಖವನ್ನೂ ನೀಡದೆ ಮನಸ್ಸಿಗೆ ದುಃಖವನ್ನ ನೀಡುತ್ತದೆ. ಬದುಕಿನ ಈ ರೀತಿಯ ವೈವಿಧ್ಯತೆಯನ್ನ ಅರಿತ ನಮ್ಮ ಹಿರಿಯರು ಬಹಳ ಸರಳ ವಾಕ್ಯದಲ್ಲಿ ಜೀವನಕ್ಕೆ ಬೇಕಾದ ತತ್ವಜ್ಞಾನವನ್ನ ತಿಳಿಸಿ ಹೇಳಿದ್ದಾರೆ.

ಮೆಟ್ಟಲಾಗದ ಚಪ್ಪಲಿಯನ್ನ ಬಿಡುವುದೇ ಲೇಸು ಎನ್ನುವ ನಮ್ಮ ಹಿರಿಯರ ಮಾತಿನಲ್ಲಿ ಅಡಗಿರುವ ತತ್ವವನ್ನ ಅರಿತುಕೊಂಡರೆ ಬದುಕು ಸುಂದರ. ಕಾಲಿಗೆ ಧರಿಸುವ ಪಾದರಕ್ಷೆ ನಮ್ಮ ಪಾದಕ್ಕೆ ಸರಿಯಾಗಿ ಹೊಂದುವಂತಿದ್ದರೆ ಅದು ನಮ್ಮ ಪಾದದ ರಕ್ಷಣೆ ಮಾಡುತ್ತದೆ. ನಡಿಗೆಯಲ್ಲಿ ವೇಗವನ್ನೂ ನೀಡುತ್ತದೆ. ಅದೇ ಪಾದರಕ್ಷೆ ನಮ್ಮ ಪಾದದ ಆಕಾರಕ್ಕೆ ಅಥವಾ ಗಾತ್ರಕ್ಕೆ ಹೊಂದಿಕೆಯಾಗದಿದ್ದರೆ ಅದು ಕಾಲನ್ನ ರಕ್ಷಣೆ ಮಾಡುವ ಬದಲು ಘಾಸಿಗೊಳಿಸುತ್ತದೆ, ಗಾಯಗೊಳಿಸುತ್ತದೆ. ನಡಿಗೆಯ ವೇಗವನ್ನೂ ಕಡಿಮೆ ಮಾಡುತ್ತದೆ. ನೀವೆಷ್ಟೇ ಪ್ರಯತ್ನ ಪಡಿ ಗಾತ್ರ ಸರಿಯಿಲ್ಲದ ಪಾದರಕ್ಷೆ ನೀಡುವುದು ಕೇವಲ ನೋವು. ಅಂತಹ ಮೆಟ್ಟಲು/ತೊಡಲು ಬಾರದ ಚಪ್ಪಲಿಯನ್ನ ವರ್ಜಿಸುವುದು ಉತ್ತಮ ಎನ್ನುವುದು ಆಡು ಮಾತಿನ ಯಥಾವತ್ತು ಗ್ರಹಿಕೆ. ಹೇಗೆ ಪಾದದ ಗಾತ್ರಕ್ಕೆ ಹೊಂದದ ಪಾದರಕ್ಷೆ ನೋವು ನೀಡು ತ್ತದೆಯೋ ಹಾಗೆಯೇ ಕೆಲವು ಸಂಬಂಧಗಳು ಕೂಡ ನೋವನ್ನ ನೀಡುತ್ತವೆ. ಅಂತಹ ಸಂಬಂಧವನ್ನ ಕಡಿದುಕೊಳ್ಳುವುದು ಉತ್ತಮ ಎನ್ನುವುದು ಅಂತರಾರ್ಥ.

ಇದನ್ನ ನಮ್ಮ ಸ್ಪ್ಯಾನಿಷ್ ಜನರು Agua que no has de beber d,jala correr (ಅಗ್ವಾ ಕೆ ನೋ ಹಾಸ್ ದೆ ಬೆಬೆರ್ ದೆಹಲ ಕೊರ್ರೆ) ಎನ್ನು ತ್ತಾರೆ. ಕುಡಿಯಲು ಆಗದ ನೀರನ್ನ ಹರಿಯಲು ಬಿಡು ಎನ್ನುವುದು ಯಥಾವತ್ತು ಅನುವಾದ. ಒಳಾರ್ಥ ಮಾತ್ರ ಸೇಮ್! ಕುಡಿಯಲು ಯೋಗ್ಯವಲ್ಲದ ನೀರನ್ನ ಹಿಡಿದಿಟ್ಟು ಪ್ರಯೋಜನವೇನು? ಅದನ್ನ ಅದರ ಪಾಡಿಗೆ ಹರಿಯಲು ಬಿಡುವುದು ಒಳ್ಳೆಯದು ಹಾಗೆಯೇ ನೋವನ್ನ ನೀಡುವ ಸಂಬಂಧದಲ್ಲಿ ಇರುವುದಕ್ಕಿಂತ ಅದರಿಂದ ಹೊರ ಬರುವುದು ಉತ್ತಮ ಎನ್ನುವ ಭಾವನೆ ಇಲ್ಲಿಯದು ಕೂಡ.

ಜಗತ್ತಿನ ಬಹುತೇಕ ಜನ ಬಹಳ ಸುಲಭವಾಗಿ ಯಾವುದಾದರೊಂದು ಕೆಲಸವನ್ನ ಮಾಡಬಲ್ಲೆ ಎಂದು ಹೇಳುತ್ತಾರೆ. ಹೌದೇ ಸರಿ ಮಾಡಿ ಎಂದಾಗ ಮಾತ್ರ ಹೇಳಿದಷ್ಟು ಸುಲಭವಲ್ಲ ಮಾಡುವುದು ಎನ್ನುವುದು ತಿಳಿಯುತ್ತದೆ. ಕಣ್ಣಿಗೆ ಹತ್ತಿರ ಇದೆ ಎನ್ನಿಸುವ ಕಟ್ಟಡವನ್ನ ತಲುಪಲು ನೆಡೆಯಲು ಶುರು ಮಾಡಿದ ಮೇಲೆ ತಿಳಿಯುತ್ತದೆ ಇದು ಕಣ್ಣಿಗೆ ಮಾತ್ರ ಹತ್ತಿರ ಕಾಣಿಸುತ್ತದೆ ಆದರೆ ಇದು ಕಂಡಷ್ಟು ಹತ್ತಿರವಿಲ್ಲ ಎನ್ನುವುದು . ಇದನ್ನ ನಮ್ಮ ಹಿರಿಯರು 'ಕಣ್ಣಿಗೆ ಹತ್ತಿರ ಕಾಲಿಗೆ ದೂರ' ಎಂದರು. ಇದರ ನೆಲೆಯಲ್ಲೇ ಹುಟ್ಟಿದ ಮಾತು 'ಆಡಿದಷ್ಟು ಸುಲಭವಲ್ಲ ಮಾಡುವುದು'.

ಇತರರಿಗೆ ಹೇಳುವಾಗ ಅದೇನು ಮಹಾ ಒಂದು ವಾರದಲ್ಲಿ ಮಾಡಿ ಕೊಡುತ್ತೇವೆ ಎನ್ನುವುದು ಸಾಮಾನ್ಯವಾಗಿ ಕೆಲಸವನ್ನ ಒಪ್ಪಿಕೊಳ್ಳುವ ಜನ ಅಥವಾ ಸಂಸ್ಥೆಯ ಪ್ರತಿನಿಧಿಸುವ ಜನ ಹೇಳುವ ಮಾತು. ಅದರ ಅದರ ಅನುಷ್ಠಾನಕ್ಕೆ ಹೊರಟಾಗ ಎದುರಾಗುವ ಅಡೆತಡೆಗಳು ಒಂದೆರೆಡಲ್ಲ. ಹೀಗಾಗಿ ಬೇಕೋ

ಬೇಡವೋ ಹೇಳಿದ ಸಮಯಕ್ಕೆ ಕೆಲಸ ವಂತೂ ಮುಗಿಯುವುದಿಲ್ಲ. ಇದು ಎಲ್ಲರಿಗೂ ಸಾಮಾನ್ಯವಾಗಿ ಆಗಿರುವ ಅನುಭವ. ಈ ಆಡು ಮಾತಿನ ಮೂಲಕ ನಮ್ಮ ಹಿರಿಯರು 'ಬಾಯಲ್ಲಿ ಹೇಳಿದ ವೇಗಕ್ಕೆ ಕೆಲಸ ಮಾಡಲು ಸಾಧ್ಯವಿಲ್ಲ ಆದ್ದರಿಂದ ನಿಧಾನಿಸಿ ಉತ್ತರಿಸು' ಎನ್ನುವ ಸೂಕ್ಷ್ಮ ವನ್ನ ತಿಳಿಸಲು ಪ್ರಯತ್ನಿಸಿದ್ದಾರೆ. ಇದನ್ನ ಇನ್ನೊಂದು ಅರ್ಥದಲ್ಲೂ ಅರ್ಥೈಸಬಹುದು ಅದೇನೆಂದರೆ 'ನೀನು ಮಾಡುವ ಕೆಲಸ ಮಾತನಾಡಬೇಕು' ಎನ್ನು ವುದು. ಅಂದರೆ ಅದೇನು ಮಹಾ ಮಾಡಿಬಿಡುತ್ತೇನೆ ಎನ್ನುವುದಕ್ಕಿಂತ ಮಾಡಿ ನಂತರ ಮಾತನಾಡುವುದು ಒಳ್ಳೆಯದು ಎನ್ನುವ ಅರ್ಥ. ಸರಳವಾಗಿ ಹೇಳುವುದಾದರೆ ಮಾತಿಗಿಂತ ಕೃತಿ ಮೇಲು ಎನ್ನುವುದು ಹೆಚ್ಚು ಉತ್ತಮ.

ಇದನ್ನ ಸ್ಪ್ಯಾನಿಷ್ ಪೂರ್ವಜರು No es lo mismo decirlo que hacerloಎಂದರು . (ನೊ ಈಸ್ ಲೊ ಮಿಸ್ಮೋ ದಿಸಿರ್ಲೊ ಕೆ ಹಸೆರ್ಲೊ) ಬಾಯಲ್ಲಿ ಹೇಳುವುದು ಕೈಯಲ್ಲಿ ಮಾಡುವುದು ಒಂದೇ ಅಲ್ಲ ಎನ್ನುವುದು ಅರ್ಥ. ಇಲ್ಲಿಯೂ ನಮ್ಮ ಕನ್ನಡದ ಆಡು ಮಾತಿನ ಅರ್ಥವನ್ನೇ ನೀಡುತ್ತದೆ . ಆಡುವ ಮುನ್ನ ಎಚ್ಚರವಿರಲಿ ಮಾತು ಆಡಿದ ಮೇಲೆ ಅದಕ್ಕೆ ತಕ್ಕಂತೆ ನೆಡೆದುಕೊಳ್ಳುವುದು ಅಷ್ಟು ಸುಲಭ ವಲ್ಲ ಎನ್ನುವುದು ಇಲ್ಲಿನ ಹಿರಿಯರು ಕೂಡ ನಂಬಿದ್ದ ಮಾತಾಗಿದೆ .

ಜಗತ್ತಿನಲ್ಲಿ ಇಷ್ಟೊಂದು ಜನರಿದ್ದೇವೆ ಒಬ್ಬಬ್ಬರ ಬದುಕು ಒಂದೊಂದು ತರ. ಒಂದೇ ತಾಯಿಯ ಹೊಟ್ಟೆಯಲ್ಲಿ ಜನಿಸಿದ ಮಕ್ಕಳಲ್ಲಿ, ಅವರ ಬದುಕಲ್ಲಿ ಬಹಳಷ್ಟು ಅಂತರವಿರುತ್ತದೆ. ಹೀಗೇಕೆ? ಅವರು ಬೆಳೆದ ವಾತಾವರಣ, ನೀಡಿದ ಶಿಕ್ಷಣ, ಪ್ರೀತಿ, ಸುರಕ್ಷತಾ ಭಾವ ಎಲ್ಲವೂ ಒಂದೇ ಇದ್ದೂ ಬೆಳೆಯುತ್ತಾ ಅವರ ಜೀವನದಲ್ಲಿ ಬಹಳಷ್ಟು ಅಂತರ ಸೃಷ್ಟಿಯಾಗುತ್ತದೆ ಹೀಗೇಕೆ? ಇಲ್ಲಿ ಏಕೆ ಎನ್ನವುದಕ್ಕೆ ಉತ್ತರವನ್ನ ನಿಖರವಾಗಿ ನೀಡಲು ಸಾಧ್ಯವಿಲ್ಲದ ಸಮಯದಲ್ಲಿ 'ಹಣೆಬರಹ , ಪೂರ್ವ ಜನ್ಮದ ಕರ್ಮ ಅಥವಾ ಡೆಸ್ಟಿನಿ' ಎನ್ನುವ ಪದಗಳು ಸೃಷ್ಟಿಯಾಗಿರ ಬಹುದು. ಅಲ್ಲದೆ ಕೆಲವೊಮ್ಮೆ ಎಷ್ಟೇ ಕಷ್ಟಪಟ್ಟರೂ ಕೆಲವೊಂದು ವಿಷಯಗಳಿಗೆ ನಿಖರ ಉತ್ತರ ಹುಡುಕುವುದು ಅಥವಾ ಕಾರಣ ಕೊಡುವುದು ಕಷ್ಟ ಸಾಧ್ಯ. ನಾವು ನಂಬಲಿ ಅಥವಾ ಬಿಡಲಿ ಕೆಲವೊಂದು ವಿಷಯವನ್ನ ಇದ್ದಹಾಗೆ ಒಪ್ಪಿಕೊಳ್ಳುವುದ ಬಿಟ್ಟು ಹೆಚ್ಚಿನದೇನೂ ನಾವು ಮಾಡಲು ಸಾಧ್ಯವಿಲ್ಲ.

ಈ ಮಾತಿನ ಅರ್ಥ ಇಂತಹುದೆ ವಿಷಯವನ್ನ ಸ್ಪಷ್ಟ ಮಾಡುತ್ತದೆ. ಜೀವನದಲ್ಲಿ ಎಲ್ಲಾ ತರದ ಸೋಲು, ನೋವು ತಿಂದ ವ್ಯಕ್ತಿಯೊಬ್ಬ ಇನ್ನು ಈ ಜೀವನ ನನಗೆ ಸಾಕು ಎಂದು ತನ್ನ ಜೀವನವನ್ನ ಕೊನೆಗೊಳಿಸಲು ಪ್ರಯತ್ನಿಸುತ್ತಾನೆ. ಅಲ್ಲಿಯೂ ಹಲವು ವಿಫಲಗಳನ್ನ ಕಂಡು ಕೊನೆಗೆ ಸಮುದ್ರದಲ್ಲಿ ಮುಳುಗಿ ಸಾಯುವ ನಿಶ್ಚಯಕ್ಕೆ ಬರುತ್ತಾನೆ. ಹೀಗೆ ಸಮುದ್ರ ಹೊಕ್ಕಾಗ ಅಲ್ಲಿನ ನೀರು ಕೂಡ ಹಿಂಗಿ ಹೋಗಿ ಕೇವಲ ಮೊಳಕಾಲವರೆಗೆ ಮಾತ್ರ ನೀರು ಇರುತ್ತದೆ. ಕೊನೆಗೆ ಅವನ ಸಾಯುವ ಪ್ರಯತ್ನಕ್ಕೆ ಸಮುದ್ರ ಹೊಕ್ಕರು ಜಯ ಸಿಗುವುದಿಲ್ಲ. ಇಲ್ಲಿ ಋಣಾತ್ಮಕ ಉದಾಹರಣೆ ಕೊಡಲಾಗಿದೆ ಆದರೆ ಇದನ್ನ ಬದುಕಿನ ಎಲ್ಲಾ ಮಜಲುಗಳಲ್ಲೂ ಅನ್ವಯಿಸ ಬಹುದು. ಅರ್ಥ ಬಹಳ ಸರಳ ಕೆಲವೊಮ್ಮೆ ಮನುಷ್ಯ ಎಷ್ಟೇ ಪ್ರಯತ್ನ ಪಟ್ಟರೂ ಅವರಿಗೆ ಅದರಲ್ಲಿ ಜಯ ಸಿಗದೇ ಹೋಗಬಹುದು ಏಕೆಂದರೆ ಅವರ ಹಣೆ ಬರಹದಲ್ಲಿ ಅದು ಇರುವುದಿಲ್ಲ, ಅಥವಾ ಆ ವಸ್ತು ಅಥವಾ ವಿಷಯದ ಪ್ರಾಪ್ತಿ ಅಥವಾ ಲಬ್ಧತೆ ಇರುವುದಿಲ್ಲ. ಈ ಗಾದೆ ನಮಗಿಂತ ಹೆಚ್ಚಿನ ಬಲವುಳ್ಳ ಕಣ್ಣಿಗೆ ಕಾಣದ ಶಕ್ತಿಯ ಬಗ್ಗೆ ಜೊತೆಗೆ ನಮ್ಮ ಡೆಸ್ಟಿನಿ ಬಗ್ಗೆ ನಂಬಿಕೆ ಹೆಚ್ಚಿಸುವ ಮಾತನಾಡುತ್ತದೆ. ನಾವೆಲ್ಲ ನಮ್ಮ ಹಣೆಬರಹವನ್ನ ಹೊತ್ತು ಬಂದಿರುತ್ತೇವೆ ಎನ್ನವುದು ಸಾಮಾನ್ಯ ಅರ್ಥ.

ಇದನ್ನ ಸ್ಪಾನಿಷ್ ಭಾಷಿಕರು El que nace para tamal, del cielo le caen las hojasಎಂದರು. (ಎಲ್ ಕೆ ನಾಸೆ ಪರ ತಮಾಲ್, ದೆಲ್ ಸಿಯಲೋ ಕಾಯೆನ್ ಲಾಸ್ ಹೋಹಾಸ್). ಇದು ನಮ್ಮ ಪಾಪಿ ಸಮುದ್ರ ಹೊಕ್ಕರೂ ಮೊಳ ಕಾಲುದ್ದ ನೀರು ಎನ್ನುವ ಗಾದೆಯ ಯಥಾವತ್ತು ಅರ್ಥ ನೀಡುತ್ತದೆ. ಇಲ್ಲಿ ಬಳಸಿರುವ ಉಪಮೆ ಮಾತ್ರ ಭಿನ್ನವಾಗಿದೆ. ತಮಾಲ್ ಎನ್ನುವುದು ಲಾಟಿನ್ ಭಾಷಿಕರು ಮಾಡುವ ಒಂದು ಖಾದ್ಯ. ಜೋಳ ಮತ್ತು ಮಾಂಸವನ್ನ ಸೇರಿಸಿ ಬೇಯಿಸಿ ಮಾಡುವ ಒಂದು ಆಹಾರ ಪದಾರ್ಥ. ಈ ಗಾದೆ ಹೇಳುತ್ತದೆ ಕೆಲವರು ತಮಾಲ್ ಖಾದ್ಯವನ್ನ ಮಾಡ ಲೆಂದೇ ಹುಟ್ಟಿರುತ್ತಾರೆ ಅಂತವರಿಗೆ ಎಲೆಯಲ್ಲಿ ಕಟ್ಟಿದ ಮಾಂಸ ಮತ್ತು ಜೋಳ ಆಕಾಶದಿಂದ ಬೀಳುತ್ತದೆ.

ಇದರರ್ಥ ಕೆಲವರ ಹಣೆಬರಹ ಅಥವಾ ಅದೃಷ್ಟ ಎಷ್ಟು ಚೆನ್ನಾಗಿರುತ್ತದೆ ಎಂದರೆ ಅವರ ನಿಂತ ಜಾಗಕ್ಕೆ ಆ ಖಾದ್ಯ ತಯಾರಿಸಲು ಬೇಕಾದ ವಸ್ತು ಸಿಗುತ್ತದೆ. ಅದೇ ಕೆಲವರು ಎಷ್ಟೇ ಕಷ್ಟ ಪಟ್ಟರೂ ಅವರಿಗೆ ತಮಾಲ್ ತಯಾರಿಸುವ, ತಿನ್ನುವ ಯೋಗವಿರುವು ದಿಲ್ಲ, ವೇಳೆ, ಹಣೆಬರಹ ಚೆನ್ನಾಗಿದ್ದರೆ ಮುಟ್ಟಿದ್ದೆಲ್ಲ ಚಿನ್ನ ಇಲ್ಲವೇ ಎಲ್ಲವೂ ವಿರುದ್ಧ ಎನ್ನುವುದು ಎರಡೂ ಗಾದೆ ಮಾತುಗಳ ಅರ್ಥ. ಇವು ಕೇವಲ ಕೆಲವೊಂದು ಉದಾಹರಣೆ ಮಾತ್ರ. ಇಂತಹ ನೂರಾರು ಆಡು ಮಾತುಗಳು, ಗಾದೆ ಮಾತುಗಳು ನಮ್ಮಲ್ಲಿ ಇದ್ದಂತೆ ಇಲ್ಲಿಯೂ ಇದೆ, ಮುಕ್ಕಾಲು ಪಾಲು ಇಂತಹ ಮಾತುಗಳ ಅರ್ಥ ಕೂಡ ಅದೇ ಇರುತ್ತದೆ. ಸಮಾಜವಾಗಿ ಅಂದಿಗೆ ಜಗತ್ತು ಒಂದಾಗಿತ್ತು ಎನ್ನುವುದನ್ನ ಈ ಮಾತುಗಳು ನನಗೆ ಕಲಿಸಿದವು. ಅಭಿವೃದ್ಧಿಯ ಹೆಸರಿನಲ್ಲಿ ಜಗತ್ತಿನೆಲ್ಲೆಡೆ ಮನುಷ್ಯ ಬದುಕಿನ ಮೂಲಭೂತ ಮೌಲ್ಯಗಳನ್ನ ಮರೆ ಯುತ್ತಾ ಹೋದಂತೆಲ್ಲ, ಸಮಾಜದಲ್ಲಿನ ಬದುಕು ನೀರಸವಾಯಿತು. 'ನಾವು– ನಮ್ಮದು' ಎನ್ನುವ ಜಾಗದಲ್ಲಿ 'ನಾನು– ನನ್ನದು' ಸ್ಥಾನ ಪಡೆಯಿತು. ಅದರ ಫಲಿತಾಂಶ ಇಂದು ನಾವೆಲ್ಲರೂ ನೋಡುತ್ತಿದ್ದೇವೆ ಅಲ್ಲವೇ? ಬದಲಾವಣೆ ಜಗದ ನಿಯಮ.

ಅಭಿಮತ

ತುರುವೇಕೆರೆ ಪ್ರಸಾದ್

ವಿಕೃತ ನಕ್ಷೆ ಅಳಿಸಿ ಬರಬೇಕು ವಿವೇಕದ ಶ್ರೀರಕ್ಷೆ!

ನಟ ದರ್ಶನ್ ಮತ್ತು ಅವರ ಗ್ಯಾಂಗ್ ವ್ಯಕ್ತಿಯೊಬ್ಬರನ್ನು ಅತ್ಯಂತ ಅಮಾನುಷವಾಗಿ, ಬರ್ಬರವಾಗಿ ಹತ್ಯೆ ಮಾಡಿದೆ ಎಂಬ ಆರೋಪ ಹೊತ್ತು ನಿಂತಿದೆ. ಇದರ ಬಗ್ಗೆ ವ್ಯಾಪಕ ಖಂಡನೆ ವ್ಯಕ್ತವಾಗುತ್ತಿದೆ. ಜೀವಪರರೆಲ್ಲರೂ ಮನುಷ್ಯತ್ವದ ಉಳಿವಿನ ದೃಷ್ಟಿಯಿಂದ ಇಂತಹ ಕೃತ್ಯಗಳನ್ನು ಖಂಡಿಸಲೇ ಬೇಕು, ಜೊತೆಗೆ ಸಮಾಜ ಇಂತಹ ಘಟನೆಗಳಿಂದ ಪಾಠ ಕಲಿಯಬೇಕು, ಸಮಾಜದ ದುಷ್ಟ ಶಕ್ತಿಗಳು ತಮ್ಮ ನೀಚ ಪ್ರವೃತ್ತಿಯನ್ನು ಬದಲಿಸಿಕೊಳ್ಳಬೇಕು, ಅಲ್ಲದೆ ಇಂತಹ ಪ್ರವೃತ್ತಿ ಮೊಳಕೆಯೊಡೆದು ಹೆಮ್ಮರವಾಗಿ ತಮ್ಮ ಪರಮನೀಚತನದ ದರ್ಶನ ಮಾಡಿಸುವ ಮುಂಚೆ ಅವನ್ನು ಸಾಮಾಜಿಕ ಸುಧಾರಣೆಗಳ ಮೂಲಕ ಪರಿವರ್ತಿಸಬೇಕು.

ನಮ್ಮ ಸಮಾಜ ಹಾಗೂ ನಮ್ಮ ಯುವಜನತೆ ಹೇಗೆ ಹೀಗಾಯಿತು? ಇಷ್ಟು ರಸಾತಳಕ್ಕೆ ಇಳಿದಿದ್ದಾದರೂ ಹೇಗೆ? ಮನುಷ್ಯನೊಬ್ಬನ ಹಸಿ ಹಸಿ ಮಾಂಸ, ಬಿಸಿ ಬಿಸಿ ರಕ್ತವನ್ನು ನೋಡಿ ಸಂಭ್ರಮಿಸುವ ವಿಕೃತಿಗೆ, ಅಸಹ್ಯಕರ ಮನಸ್ಥಿತಿಗೆ ಮನುಷ್ಯನ ಮನಸ್ಸು ತಲುಪಿದ್ದಾದರೂ ಹೇಗೆ?ಎಂದು ಯೋಚಿಸಿದರೆ ಆಶ್ಚರ್ಯ, ಆಘಾತ ಎರಡೂ ಆಗುತ್ತದೆ. ಮನುಷ್ಯನ ಮೆದುಳಿನಲ್ಲಿ ಅವನ ಜೀವನಕ್ರಮ ಮತ್ತು ನಡೆವಳಿಕೆಯ ಒಂದು ನಕ್ಷೆ ರೂಪುಗೊಂಡಿರುತ್ತದೆ. ಅವನು ಹುಟ್ಟಿದಾಗಿನಿಂದ ಅವನು ಬೆಳೆದ ಪರಿಸರ, ಆಚಾರ, ವಿಚಾರ, ನಂಬಿಕೆಗಳು, ರೀತಿ, ರಿವಾಜುಗಳು ಇವುಗಳಿಗೆ ತಕ್ಕಂತೆ ಈ ಮ್ಯಾಪಿಂಗ್ ಆಗಿರುತ್ತದೆ. ಇದರ ಆಧಾರದ ಮೇಲೆಯೇ ಮನುಷ್ಯ ತನ್ನ ಕ್ರಿಯೆಗಳನ್ನು ನಡೆಸುತ್ತಾನೆ ಮತ್ತು ಘಟನೆಗಳಿಗೆ ಪ್ರತಿಕ್ರಿಯಿಸುತ್ತಾನೆ. ಇದು ಅತ್ಯಂತ ಪ್ರಭಾವ ಶಾಲಿಯಾಗಿದ್ದು ತಕ್ಷಣಕ್ಕೆ ಬದಲಾಗುವಂತಹುದಲ್ಲ. ಈ ವಿಶ್ಲೇಷಣೆಯನ್ನು ನ್ಯೂರೋ ಲಿಂಗ್ವಿಸ್ಟಿಕ್ ಪ್ರೋಗ್ರಾಂಮಿಂಗ್ ಪರಿಭಾಷೆಯಲ್ಲಿ ಟ್ರಾನ್ಸಾಕ್ಷನಲ್ ಅನಾಲಿಸಿಸ್ ಎನ್ನುತ್ತಾರೆ.

ನಮ್ಮ ಸಮಾಜ ಮತ್ತು ಇಲ್ಲಿನ ಸಾರಸ್ವತ, ಜನಪದೀಯ ಸಾಂಸ್ಕೃತಿಕ ಬದುಕು ಹತ್ತಾರು ಪೀಳಿಗೆ ಯುದ್ದಕ್ಕೂ ಭಕ್ತಿ, ಶ್ರದ್ಧೆ, ಕರುಣೆ, ಉದಾರತೆ ಮೊದಲಾದ ಉತ್ತಾತ್ತ ಗುಣಗಳ ಹಾಗೂ ಒಳ್ಳೆಯ ಭಾವನೆಗಳ, ಆದರ್ಶ ನಡವಳಿಕೆಗಳ ಮಾದಿರಗಳನ್ನು ಪೋಷಿಸುತ್ತಾ ಬಂದಿದೆ. ಹಾಗಾಗಿ ಇಂತಹದೊಂದು ಸಂಸ್ಕೃತಿಪರ, ನೆಲಮೂಲ, ಮಾನವೀಯ ಮ್ಯಾಪಿಂಗ್ ನಮ್ಮ ಮೆದುಳಿನಲ್ಲಿ ಇರಬೇಕಾಗಿತ್ತು. ಆದರೆ ಇದು ಎಲ್ಲೋ ಒಂದು ಕಡೆ ಮುಕ್ಕಾಗುತ್ತಿದೆಯೇನೋ ಎನಿಸುತ್ತಿದೆ. ಆಧುನಿಕತೆಯ ವಿಕಾರಗಳು ಮತ್ತು ಮಾಧ್ಯಮದ ಅತಿರಂಜಕತೆ, ಅಗತ್ಯಕ್ಕೆ ಮೀರಿದ ತೆರೆದುಕೊಳ್ಳುವಿಕೆಯ ಫಲವಾಗಿ ಈ ಹಿಂದಿನ ವಿಚಾರಾತ್ಮಕ, ವಿವೇಕಯುಕ್ತ ನಕ್ಷೆ ಅಳಿಸಿಹೋಗಿದೆ. ಅದರ ಬದಲಿಗೆ ಕೋಪ–ತಾಪ, ದ್ವೇಷ, ಹಿಂಸೆ, ವಿಕೃತ ನಡವಳಿಕೆಗಳು ನಮ್ಮ ಬಹುತೇಕ ಯುವಜನರ ಮೆದುಳಿನಲ್ಲಿ ಹೊಸ ಮ್ಯಾಪಿಂಗ್ ಆಗಿ ಅಚ್ಚಾಗಿ ಹಿಂಸೆಯನ್ನು ಆನಂದಿಸುವ, ವಿಕೃತ ಕೃತ್ಯಗಳನ್ನು ಬೆಂಬಲಿಸುವ ಒಂದು ತರ್ಕಬದ್ಧ ಸರಣಿಯನ್ನು ಅಪ್ರಜ್ಞಾಪೂರ್ವಕವಾಗಿಯೇ ಬೆಳೆಸುತ್ತಾ ಬಂದಿದೆ. ಇದು ನಮಗೆ ಮಾತ್ರವಲ್ಲ, ಮನುಕುಲಕ್ಕೇ ಒಂದು ಅಪಾಯಕಾರಿಯಾದ ಬೆಳವಣಿಗೆ.

ಆಧುನಿಕತೆ, ತಂತ್ರಜ್ಞಾನ ಬೆಳೆದಂತೆಲ್ಲ ಸಿನಿಮಾ ಗಳಲ್ಲಿನ ಹಿಂಸಾದೃಶ್ಯಗಳು, ವಿಕೃತಿಗಳೂ ನಿಯಂತ್ರಣಕ್ಕೆ ಸಿಕ್ಕದಾಗಿವೆ. ಹಿಂದಿನಂತೆ ಸಂಸಾರಕ್ಕೆ, ಸಮಾಜಕ್ಕೆ ಸಂದೇಶ ಹೇಳುವ ಚಿತ್ರಗಳು ಯಾರಿಗೂ ಬೇಡವಾಗಿದೆ. ಇದಕ್ಕೆ ಕಾರಣ ನಿರಂತರವಾದ ಹಿಂಸೆ ಮತ್ತು ವಿಕೃತಿಗಳ ಪ್ರಭಾವದಿಂದ ಯುಕ್ತಾಯುಕ್ತತೆಯ ಪರಿಜ್ಞಾನವನ್ನು ಕಳೆದುಕೊಂಡಿ ರುವುದು. ಹಿಂದೆ ನಟರು ಪಾತ್ರಗಳಲ್ಲಿ ಪರಕಾಯಪ್ರವೇಶ ಮಾಡಿ ಅಭಿನಯಿ ಸುತ್ತಿದ್ದರು. ಅಂತಹ ನೈಜ, ಮನಮುಟ್ಟುವ, ಅನುಕರಣೀಯ ಅಭಿನಯ ಅದು. ಅದು ನಮ್ಮ ಈ ಹಿಂದಿನ ದೇಶೀಯ ಸಾಂಸ್ಕೃತಿಕ ಮನಸ್ಥಿತಿಗೆ(ಮ್ಯಾಪಿಂಗ್ಗೆ) ಒಗ್ಗುವಂತಾದ್ದಾಗಿತ್ತು. ಹಾಗಾಗಿ ಅದೊಂದು ಆರೋಗ್ಯಪೂರ್ಣ ಮನರಂಜನೆಯಾಗಿತ್ತು. ನಟರು ಸಿನಿಮಾದಲ್ಲಿನ ತಮ್ಮ ಆದರ್ಶ ನಾಯಕನ ಪಾತ್ರಕ್ಕೆ ತಕ್ಕಂತೆ ನಿಜಜೀವನದಲ್ಲೂ ನಡೆದುಕೊಳ್ಳುತ್ತಿದ್ದರು. ಈಗಿನ ದುರಂತವೆಂದರೆ ಆದರ್ಶದ ಪರಿಕಲ್ಪನೆಯೇ ಬದಲಾಗಿರುವುದು. ಹಿಂಸೆ, ದ್ವೇಷ, ಇನ್ನೊಬ್ಬರನ್ನು ಅವಹೇಳನ ಮಾಡುವುದು, ಶ್ರೇಷ್ಠತೆಯ ವ್ಯಸನದಿಂದ ಮೆರೆಯುವುದು, ಶ್ರೀಮಂತಿಕೆಯ ಅಹಂಕಾರ, ಧಿಮಾಕಿನಿಂದ ಮನುಷ್ಯ ಜೀವಿಗಳನ್ನು ಯಕಶ್ಚಿತ್ ಹುಳಗಳಂತೆ ಕಾಣುವುದು ಇವೇ ಆದರ್ಶ ಎನಿಸುತ್ತಿದೆ. ನಟರು ಪಾತ್ರಗಳಲ್ಲಿ ಪರಕಾಯ ಪ್ರವೇಶ ಮಾಡಿ ಕೈ ಕಾಲು ಮುರಿದು, ತಲೆ ಒಡೆದು, ಮಾಂಸ ಬಗೆದು, ರಕ್ತ ಚೆಲ್ಲಾಡಿದ ನಂತರವೂ ಪಾತ್ರಗಳಿಂದ ಹೊರ ಬರುವುದೇ ಇಲ್ಲ. ಜೀವನವನ್ನೂ ಒಂದು ಭ್ರಾಮಕ ಸಿನಿಮಾ ಎಂದೇ ಭಾವಿಸಿಬಿಡುತ್ತಾರೆ. ಅಲ್ಲೂ ಇದೇ ವಿಕೃತಿಯ ಪ್ರದರ್ಶನಕ್ಕೆ ಇಳಿಯುತ್ತಾರೆ. ತಾವೂ ವಾಸ್ತವ ಜೀವನದ ದರ್ಶನ ಮಾಡುವುದಿಲ್ಲ, ತಮ್ಮ ಅಭಿಮಾನಿಗಳನ್ನೂ ಅಂತಹ ವಾಸ್ತವಗಳಿಂದ ಭ್ರಮಾಲೋಕಕ್ಕೆ ಎಳೆದೊಯ್ಯುತ್ತಾರೆ. ಪದೇ ಪದೇ ಇಂತಹದೇ ದೃಶ್ಯಗಳನ್ನು ವೀಕ್ಷಿಸಿ ಇಂತಹದೇ ಪರಿಸರದಲ್ಲಿ ಬೆಳೆಯುವವರೂ ಈ ನಾಯಕರ ಹಿಂದೆ ಕತ್ತಿ, ಮಚ್ಚು ಹಿಡಿದು ಹೊರಟುಬಿಡುತ್ತಾರೆ. ನಾವು ಶ್ರೇಷ್ಠರೆನಿಸಿ ಒಂದು ಅತ್ಯಂತ ನಾಗರಿಕ ವೆನಿಸಿದ ಸಾಮ್ರಾಜ್ಯ ನಿರ್ಮಾಣ ಮಾಡಿದ್ದಾಗ್ಯೂ ಸಹ ನಮ್ಮೊಳಗೆ ಎಲ್ಲೋ ಒಂದೆಡೆ ಹಿಂಸೆಯ ಮತ್ತು ಕ್ಷೋಭೆಯ ಭೂತಕಾಲದ ಪ್ರವೃತ್ತಿ ಜೀವಂತವಾಗಿರುತ್ತದೆ ಎಂದು ಖ್ಯಾತ ಮನಶಾಸ್ತ್ರಜ್ಞ ಡೇವಿಡ್ ಚೆಸ್ಟರ್ ಹೇಳುವುದು ನಿಜ ಎನಿಸುತ್ತದೆ. ಹಿಂಸೆ ಸಾಮಾನ್ಯವಾಗಿ ಋಣಾತ್ಮಕ ಗುಣ ಗಳಾದ ಕೋಪ ಮತ್ತು ಭಯದಿಂದ ಉಂಟಾಗುತ್ತದೆ. ಆದರೆ ಅದನ್ನೂ ಮೀರಿ ಇದು ಮನುಷ್ಯನ ಗೀಳು, ಉನ್ಮಾದ, ಚಟದ ಪ್ರವೃತ್ತಿಯಾಗಿ ವಿಕೃತ ಆನಂದದ ಸ್ವರೂಪ ಹೊಂದಿರುವುದು ತೀರಾ ಆತಂಕಕಾರಿ ಬೆಳವಣಿಗೆ. ಸಿನಿಮಾ ಮತ್ತು ಮಾಧ್ಯಮಗಳಲ್ಲಿ ಕ್ರೂರ, ಅಮಾನವೀಯ ಹಿಂಸೆಯನ್ನು ನಿಯಂತ್ರಿಸಬೇಕು. ಆಧುನಿಕತೆ ಮತ್ತು ತಾಂತ್ರಿಕ ಔನ್ನತ್ಯ ನಾಗರಿಕ ವೈಭವವನ್ನು ಮೆರೆಸಬೇಕೇ ಹೊರತು ಅನಾಗರಿಕ ಕ್ರೌರ್ಯವನ್ನಲ್ಲ. ಹಿಂದಿನಂತೆ ಸಾಮಾಜಿಕ ಸಂದೇಶ ಸಾರುವ ನಾಗಾಭರಣ, ಗಿರೀಶ್ ಕಾಸರವಳ್ಳಿ, ಪಿ.ಶೇಷಾದ್ರಿ, ಟಿ.ಎನ್.ಸೀತಾರಾಮ್ ಇಂತಹವರ ಚಿತ್ರಗಳು ಹೆಚ್ಚು ಹೆಚ್ಚು ಬರಬೇಕು. ದುಡ್ಡು ಹಾಕಿ ದುಡ್ಡು ತೆಗೆಯುವುದೇ ಪರಮ ಉದ್ದೇಶವಾದರೆ ಮನುಷ್ಯ ತನ್ನ ಸಂತತಿಯನ್ನು ತಾನೇ ತಿನ್ನುವ ಕ್ಯಾನಿಬಾಲ್ ಆಗುವ ಕಾಲ ದೂರವಿಲ್ಲ.

ರಾಜಕಾರಣಿಗಳ ಮನಸ್ಸಿನ ಕಹಿ ಕರಗಬೇಕಾಗಿದೆ

ಅಭಿಮತ

ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಮೋದಿಯವರು ವಾರಣಾಸಿಯಿಂದ ಚುನಾಯಿತರಾಗಿ ಮೊದಲ ಬಾರಿ ಕ್ಷೇತ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ನಡೆದ ರೋಡ್ ಶೋ ವೇಳೆ ಆಕಸ್ಮಿಕವಾಗಿ ಹೂವು ಎಸೆಯುತ್ತಿದ್ದವರ ಕೈಯಲ್ಲಿದ್ದ ಮೊಬೈಲ್ ಫೋನು ಅವರ ವಾಹನದ ಮೇಲೆ ಬೀಳುತ್ತದೆ. ಕಾರಿನ ಮೇಲೆ ಚಪ್ಪಲಿ ಎಸೆಯಲಾಯಿತು ಎಂದು ಸಾಮಾಜಿಕ ತಾಣದಲ್ಲಿ ಸುಳ್ಳು ಸುದ್ದಿ ಬಿತ್ತರವಾಗುವುದು. ಉತ್ತರ ಪ್ರದೇಶದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಇದರ ಬಗ್ಗೆ ಪ್ರತಿಕ್ರಿಯಿಸುತ್ತಾ ಕಾರ್ನ ಮೇಲೆ ಬಿದ್ದ ವಸ್ತುವು ಚಪ್ಪಲಿ ಅಲ್ಲ, ಆದರೆ ಪ್ರಧಾನಿಯ ಕಾರಿನ ಬಾನೆಟ್ ಮೇಲೆ ಬಿದ್ದಿದ್ದು ಮೊಬೈಲ್ ಫೋನ್ ಎಂದು ಸ್ಪಷ್ಟನೆ ಕೊಡುತ್ತಾರೆ.

ಈ ಘಟನೆಯ ಬಗ್ಗೆ ರಾಹುಲ್ ಗಾಂಧಿಯವರು ಪೂರ್ಣ ವಿವರವನ್ನು ಪಡೆಯದೆ ತಮ್ಮ ಪತ್ರಿಕಾಗೋಷ್ಠಿಯಲ್ಲಿ ನೀವು ಹಿಂದಿನ ದಿನ ನೋಡಿದ್ದೀರಿ, ವಾರಣಾಸಿಯಲ್ಲಿ ಯಾರೋ ಅವರ ಕಾರಿಗೆ ಚಪ್ಪಲಿ ಎಸೆದರು. ಹಾಗಾಗಿ ಈ ಚುನಾವಣೆಯಲ್ಲಿ ಮೋದಿಯ ಮೂಲ ಪರಿಕಲ್ಪನೆಯೇ ನಾಶವಾಗಿದೆ ಎಂಬುದು ಸ್ಪಷ್ಟವಾಗಿದೆ ಎಂದು ತಮ್ಮ ಮನಸ್ಸಿನಲ್ಲಿದ್ದ ಕಹಿಯನ್ನು ಒಮ್ಮೆಗೆ ಕಕ್ಕಿಬಿಡುತ್ತಾರೆ.

ಭಾರತದ ರಾಜಕಾರಣದಲ್ಲಿ ಮಾನವೀಯ ಸಂಬಂಧಗಳು ಎಂದೂ ಪಕ್ಷ ರಾಜಕಾರಣದ ಆಧಾರದಲ್ಲಿ ನಡೆಯುವುದಿಲ್ಲ, ವೈಯಕ್ತಿಕ ಸಂಬಂಧಗಳು ಬಹುದೊಡ್ಡ ಪಾತ್ರ ವಹಿಸಿದೆ ಮತ್ತು ದೇಶದ ಗೌರವ ಹಾಗೂ ಹಿತದ ಪ್ರಶ್ನೆ ಎದುರಾದಾಗ ವಿರೋಧ ಪಕ್ಷದ ನಾಯಕರು ದೇಶವನ್ನು ಆಯ್ಕೆ ಮಾಡಿಕೊಂಡು ಮಾದರಿಯಾಗಿರುವ ಹಲವಾರು ಘಟನೆಗಳು ಇದಕ್ಕೆ ಪುಷ್ಠಿ ನೀಡುತ್ತದೆ.

1987ರಲ್ಲಿ ರಾಜೀವ್ ಗಾಂಧಿ ಶ್ರೀಲಂಕಾ ಸೇನೆಯ ಗೌರವ ರಕ್ಷೆಯನ್ನು ಸ್ವೀಕರಿಸುತ್ತಿದ್ದ ವೇಳೆ ಸಿಪಾಯಿಯೊಬ್ಬನು ರೈಫಲ್ ನಿಂದ ಅವರ ತಲೆಯ ಹಿಂದೆ ಹೊಡೆಯುತ್ತಾನೆ.

ರಾಜೀವ್ ರವರು ತಮ್ಮ ಸಮಯಪ್ರಜ್ಞೆ ಯಿಂದ ಹೆಚ್ಚು ಅಪಾಯವಿಲ್ಲದೆ ಪಾರಾಗುತ್ತಾರೆ. ಅನಿರೀಕ್ಷಿತವಾಗಿ ನಡೆದ ಈ ಘಟನೆಯು ಟಿವಿಯಲ್ಲಿ ಪ್ರಸಾರವಾದಾಗ ದೇಶವಾಸಿಗಳು ಆತಂಕದಿಂದ ಉಸಿರು ಹಿಡಿದು ಅವರ ಮೇಲಿನ ಹಲ್ಲೆಯನ್ನು ವೀಕ್ಷಿಸಿ ಅವರು ಕ್ಷೇಮವಾಗಿ ದೇಶಕ್ಕೆ ವಾಪಸ್ ಬರಲಿ ಎಂದು ಪ್ರಾರ್ಥಿಸಿ ದರು. ರಾಜಕೀಯ ನಾಯಕರು ಪಕ್ಷಾತೀತವಾಗಿ ಈ ಘಟನೆಯನ್ನು ಕಟುವಾಗಿ ಟೀಕಿಸಿದರು. ಇಡಿ ದೇಶ ರಾಜೀವ್ ಗಾಂಧಿಯವರ ಹಿಂದೆ ನಿಂತಿತು.

ವಾಜಪೇಯಿಯವರು 1985 ರಲ್ಲಿ ತಮ್ಮ ಒಂದು ಮೂತ್ರಪಿಂಡವನ್ನು ಕಳೆದುಕೊಂಡಿರುತ್ತಾರೆ. 1988ರಲ್ಲಿ ತಮ್ಮ ಎರಡನೆಯ ಮೂತ್ರಪಿಂಡದ ಸಮಸ್ಯೆಯಿಂದಲೂ ಬಳಲುತ್ತಿರುತ್ತಾರೆ. ಆಗ ತುರ್ತು ಚಿಕಿತ್ಸೆ ಅವಶ್ಯಕತೆಯೂ ಇತ್ತು. ರಾಜೀವ್ ಗಾಂಧಿಯವರಿಗೆ ಈ ವಿಷಯ ತಿಳಿದು ಅಮೆರಿಕಗೆ ತೆರಳುತ್ತಿದ್ದ ಭಾರತೀಯ ನಿಯೋಗದಲ್ಲಿ ವಾಜಪೇಯಿಯವರನ್ನು ಸೇರ್ಪಡೆ ಮಾಡಿ ಅಮೆರಿಕದಲ್ಲಿ ಚಿಕಿತ್ಸೆ ಪಡೆಯಲು ಅನುಕೂಲ ಕಲ್ಪಿಸುತ್ತಾರೆ ಹಾಗೂ ಅವರ ಚಿಕಿತ್ಸೆ ಸಂಪೂರ್ಣ ಆಗುವ ತನಕ ಅಲ್ಲಿಯೇ ಇರುವಂತೆಯೂ ವ್ಯವಸ್ಥೆಯನ್ನು ಮಾಡಿರುತ್ತಾರೆ. ರಾಜೀವ್ ಹತ್ಯೆಯ ನಂತರ ಸ್ವತಃ ವಾಜಪೇಯಿಯವರು ರಾಜೀವ್ ಗಾಂಧಿಯವರ ಈ ಮಾನವೀಯ ಮುಖವನ್ನು ಹಂಚಿಕೊಳ್ಳುತ್ತಾರೆ.

ಇಂದಿರಾ ಹತ್ಯೆಯ ನಂತರ 1984 ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಜೀವ್ ಗಾಂಧಿಯವರು ದಾಖಲೆಯ 405 ಸ್ಥಾನ ಗೆದ್ದು ವಿರೋಧ ಪಕ್ಷವನ್ನು ಧೂಳಿಪಟ ಮಾಡಿರುತ್ತಾರೆ. ಸ್ವತಃ ವಾಜಪೇಯಿಯವರು ಗ್ವಾಲಿಯರ್ನಿಂದ ಮಾಧವರಾವ್ ಸಿಂಧ್ಯ ವಿರುದ್ಧ ಪರಾಭವಗೊಂಡಿರುತ್ತಾರೆ. ಆದರೆ ರಾಜಕೀಯ ಭಿನ್ನಾಭಿಪ್ರಾಯವು ಅವರಲ್ಲಿ ವೈಯಕ್ತಿಕ ದ್ವೇಷಕ್ಕೆ ಆಸ್ಪದ ನೀಡಿರುವುದಿಲ್ಲ. ಅವರಿಬ್ಬರ ನಡುವೆ ಪರಸ್ಪರ ಸೌಹಾರ್ದಯುತ ಸಂಬಂಧಗಳು ಗಟ್ಟಿಯಾಗಿಯೇ ಇರುತ್ತದೆ.

ಪಿ.ವಿ.ನರಸಿಂಹರಾಯರು ಪ್ರಧಾನಿಯಾಗಿದ್ದಾಗ ಕಾಶ್ಮೀರದಲ್ಲಿ ಮಾನವ ಹಕ್ಕು ಉಲ್ಲಂಘನೆಯ ವಿಷಯದ ಮೇಲೆ ಜಿನೀವಾದಲ್ಲಿ ಚರ್ಚೆಯಾಗಿ ಮತದಾನವಿರುತ್ತದೆ. ಆಗ ಪಿವಿಎನ್ ರವರು ಭಾರತವನ್ನು ಪ್ರತಿನಿಧಿಸುವ ನಿಯೋಗದಲ್ಲಿ ವಾಜಪೇಯಿಯವರನ್ನು ಸೇರ್ಪಡೆ ಮಾಡುತ್ತಾರೆ. ದೇಶದ ಹಿತ ಕಾಯಲು ವಾಜಪೇಯಿಯವರು ಕೂಡಲೇ ಒಪ್ಪಿಗೆ ಸೂಚಿಸಿ ನಿಯೋಗದೊಂದಿಗೆ ತೆರಳಿ ವಿಶ್ವಸಂಸ್ಥೆಯ ಸಭೆಯಲ್ಲಿ ಪಾಲ್ಗೊಂಡು ಭಾರತದ ವಿಜಯ ಪತಾಕೆ ಹಾರಿಸುತ್ತಾರೆ.

1996 ರ ಲೋಕಸಭಾ ಚುನಾವಣೆಯ ಮುನ್ನ ಪಿ.ವಿ. ನರಸಿಂಹರಾವ್ ರವರು ರಷ್ಯಾದಿಂದ ಸುಖೋಯ್ 30 ಖರೀದಿಸಲು 350ಮಿಲಿಯನ್ ಮುಂಗಡ ಹಣವನ್ನು ನೀಡಿರುತ್ತಾರೆ. ಆಶ್ಚರ್ಯವೆಂದರೆ, ಅಂತಿಮ ಬೆಲೆಯು ನಿಗದಿಯಾಗಿರುವುದಿಲ್ಲ ಮತ್ತು ಖರೀದಿಗೆ ಅಧಿಕೃತ ಒಪ್ಪಂದವೂ ಆಗಿರುವುದಿಲ್ಲ.

ಹಲವಾರು ಹಗರಣದಲ್ಲಿ ಸಿಲುಕಿ ನಲುಗಿ ಹೋಗಿದ್ದ ಪಿವಿಎನ್ ಸರಕಾರ ಯುದ್ಧ ವಿಮಾನ ಖರೀದಿಯಲ್ಲಿ ಭ್ರಷ್ಟಾಚಾರ ಮಾಡಿಲ್ಲ ಎಂದರೆ ಯಾರೂ ನಂಬುವ ಸ್ಥಿತಿಯಲ್ಲಿ ಇರಲಿಲ್ಲ. ಇಂಡಿಯನ್ ಎಕ್ಸ್‌ಪ್ರೆಸ್ ಸುಖೋಯ್ ಖರೀದಿಯ ಬಗ್ಗೆ ತನಿಖಾ ವರದಿಯನ್ನು ಪ್ರಕಟ ಮಾಡುತ್ತದೆ. ವಿರೋಧ ಪಕ್ಷದ ನಾಯಕರಾಗಿದ್ದ ವಾಜಪೇಯಿಯವರು ಪತ್ರಿಕಾ ವರದಿಯ ಮೇಲೆ ಖರೀದಿಯ ಬಗ್ಗೆ ಯಾವುದೇ ಹೇಳಿಕೆ ನೀಡದೆ ಇದರ ಹಿನ್ನೆಲೆಯ ಸಂಪೂರ್ಣ ಮಾಹಿತಿ ಸಂಗ್ರಹ ಮಾಡುತ್ತಾರೆ. ಇದರ ಖರೀದಿಯಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ ಎಂದು ಖಾತರಿಯಾದ ನಂತರ ಸುಖೋಯ್ ಖರೀದಿಯನ್ನು ಚುನಾವಣಾ ವಿಷಯವಾಗಿಸುವುದಿಲ್ಲ.

96ರಲ್ಲಿ ಚುನಾವಣೆಯು ಮುಗಿದ ತರುವಾಯ ಅಧಿಕಾರಕ್ಕೆ ಬಂದ ದೇವೇಗೌಡರ ಸರಕಾರದಲ್ಲಿ ರಕ್ಷಣಾ ಸಚಿವರಾಗಿದ್ದ ಮುಲಾಯಂ ಸಿಂಗ್ ಯಾದವ್ ಪ್ರಮುಖ ವಿರೋಧ ಪಕ್ಷದ ಮುಖಂಡರುಗಳ ಸಭೆಯನ್ನು ಕರೆದು ಸುಖೋಯ್ ಖರೀದಿಯ ಸಂಪೂರ್ಣ ವಿವರ ನೀಡಿ ತುರ್ತಾಗಿ ಸೈನ್ಯಕ್ಕೆ ಬೇಕಾಗಿದ್ದ ವಿಮಾನ ಖರೀದಿಯ ಒಪ್ಪಂದವನ್ನು ವಿವಾದವಿಲ್ಲದೆ ಸುಗಮವಾಗಿ ಜಾರಿಯಾಗುವಂತೆ ಮಾಡುತ್ತಾರೆ. ರಾಜಕೀಯ ಕಾರಣಕ್ಕಾಗಿ ಆಧಾರರಹಿತವಾದ ಆರೋಪವನ್ನು ಮಾಡಿ ದೇಶದ ಭದ್ರತೆಗಾಗಿ ಖರೀದಿಸುತ್ತಿದ್ದ ಯುದ್ಧ ವಿಮಾನಕ್ಕೆ ಅಡ್ಡಿ ಮಾಡುವ ಕೆಲಸವನ್ನು ಬಿಜೆಪಿ ಮಾಡಲಿಲ್ಲ.

ಇದಕ್ಕೆ ವ್ಯತಿರಿಕ್ತವಾಗಿ 2018 ರಲ್ಲಿ ಭಾರತ ಫ್ರಾನ್ಸ್‌ನಿಂದ ಖರೀದಿಸಿದ 36 ರಫೇಲ್ ಯುದ್ಧ ವಿಮಾನದ ವಿರುದ್ಧ ರಾಹುಲ್ ಗಾಂಧಿ ಆಧಾರರಹಿತವಾಗಿ ಭ್ರಷ್ಟಾಚಾರದ ಆರೋಪವನ್ನು ಮಾಡಿ ವಿಮಾನ ಖರೀದಿಯನ್ನು ವಿವಾದದ ವಸ್ತು ಮಾಡುತ್ತಾರೆ. 2019ರ ಚುನಾವಣೆಯಲ್ಲಿ ರಫೇಲ್ ವಿಮಾನ ಖರೀದಿಯು ಬಹು ದೊಡ್ಡ ಚುನಾವಣಾ ವಿಷಯವಾಗುತ್ತದೆ. ರಫೇಲ್ ವಿಮಾನ ಖರೀದಿಯನ್ನು ತಡೆಯಲು ಸರ್ವ ಪ್ರಯತ್ನವು ನಡೆಯುತ್ತದೆ. ಸುಪ್ರೀಂಕೋರ್ಟ್ ವಿಮಾನ ಖರೀದಿಯ ಬಗ್ಗೆ ಕ್ಲೀನ್ ಚಿಟ್ ನೀಡಿದ ನಂತರವೂ ರಾಹುಲ್ ರವರು ಪ್ರಧಾನಿ ಮೋದಿಯವರನ್ನು ಚೌಕೀದಾರ್ ಚೋರ್ ಹೈ ಎಂದು ಹೀಯಾಳಿಸುತ್ತಾರೆ.

2010ರಲ್ಲಿ ಭಾರತದಲ್ಲಿ ನಡೆದ ಕಾಮನ್ ವೆಲ್ತ್ ಕ್ರೀಡಾ ಕೂಟದ ಆಯೋಜನೆಯಲ್ಲಿ 70,000 ಕೋಟಿ ರು. ಅವ್ಯವಹಾರ ನಡೆದಿದೆ ಎಂಬ ಗಂಭೀರ ಆರೋಪ ಕೇಳಿ ಬರುತ್ತದೆ. ತತ್ಸಂಬಧವಾಗಿ ಅಂದಿನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿಯವರು ಸೂಕ್ತವಾದ ಸಾಕ್ಷ್ಯಗಳ ಸಹಿತ ಪತ್ರಿಕಾಗೋಷ್ಠಿ ಮಾಡಬೇಕಾಗಿರುತ್ತದೆ. ಆದರೆ ಕ್ರೀಡಾ ಕೂಟ ನಡೆಯುವಾಗ ಮಾಡುವುದು ಸಮಂಜಸವಲ್ಲ ಇದರಿಂದ ದೇಶದ ಘನತೆಗೇ ಧಕ್ಕೆಯಾಗುತ್ತದೆ ಎಂದು ಕ್ರೀಡಾ ಕೂಟ ಮುಗಿದ ನಂತರವೇ ಪತ್ರಿಕಾಗೋಷ್ಠಿಯ ನಡೆಸಿ ಅವ್ಯವಹಾರವನ್ನು ಬಹಿರಂಗಪಡಿಸುತ್ತಾರೆ.

2013ರಲ್ಲಿ ಮನಮೋಹನ ಸಿಂಗ್ ಸರಕಾರವು ಶಿಕ್ಷೆಗೊಳಗಾದ ಚುನಾಯಿತ ಪ್ರತಿನಿಧಿಗಳ ಸದಸ್ಯತ್ವ ತಕ್ಷಣದಿಂದಲೇ ರದ್ದಾಗುವ ನಿಬಂಧನೆಗೆ ತಿದ್ದಪಡಿ ತಂದ ಕಾಯಿದೆಯ ಪ್ರತಿಯನ್ನು ರಾಹುಲ್ ಗಾಂಧಿಯವರು ಕಾಂಗ್ರೆಸ್ ಪಕ್ಷದ ವಕ್ತಾರ ಅಜಯ್ ಮಖನ್ ಪತ್ರಿಕಾಗೋಷ್ಠಿ ನಡೆಸುತ್ತಿರುವಾಗ ದಿಢೀರನೆ ಬಂದು ತಾವು ಈ ಕಾಯಿದೆಯ ತಿದ್ದುಪಡಿಯನ್ನು ಒಪ್ಪುವುದಿಲ್ಲ ಎಂದು ತಿದ್ದುಪಡಿಯ ಪ್ರತಿಯನ್ನು ಅಲ್ಲಿಯೇ ಹರಿದು ಬಿಸಾಕುತ್ತಾರೆ. ಪಾಪ ಅಂದು ಅಜಯ್ ಮಾಖನ್ ಪರಿಸ್ಥಿತಿಯು ನೋಡಲಾಗುತ್ತಿರಲಿಲ್ಲ.

ಮನಮೋಹನ್ ಸಿಂಗ್ ರವರು ಅಮೆರಿಕ ಪ್ರವಾಸದಲ್ಲಿರುತ್ತಾರೆ. ತನ್ನ ವರ್ತನೆಯಿಂದ ಅವರಿಗಾಗುವ ಮುಜುಗರವನ್ನು ರಾಹುಲ್ ಲೆಕ್ಕಿಸುವುದಿಲ್ಲ. ಪ್ರಾಯಶಃ ಬೇರಾವ ಪ್ರಧಾನಿಯಾಗಿದ್ದರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡುತ್ತಿದ್ದರು. ಆದರೆ, ಸಿಂಗ್ ರವರು ಅಪ್ಪಿ ತಪ್ಪಿಯು ಅಂತಹ ಆಲೋಚನೆಯನ್ನು ಮಾಡದೆ ತಮಗಾದ ಅವಮಾನವನ್ನು ನುಂಗಿಕೊಂಡು ತಮ್ಮ ಸ್ಥಾನದಲ್ಲಿ ಮುಂದುವರೆಯುತ್ತಾರೆ.

ರಾಹುಲ್ ಗಾಂಧಿಯವರಿಗೆ ತಮ್ಮ ವೈಯಕ್ತಿಕ ವರ್ಚಸ್ಸು ಹೆಚ್ಚಿಸಿಕೊಳ್ಳಲು ತಮ್ಮದೆ ಪಕ್ಷದ ಪ್ರಧಾನಿಯವರು ವಿದೇಶ ಪ್ರವಾಸದಲ್ಲಿರುವಾಗ ಅವರಿಗೆ ಮುಜುಗರ ಮಾಡುವ ಮತ್ತು ಅವಮಾನವಾಗುವ ಹಾಗೆ ನಡೆದುಕೊಳ್ಳಬಾರದು ಎಂಬ ವಿವೇಕವು ಅವರಿಗೆ ಇರಲಿಲ್ಲ.

2019ರಲ್ಲಿ ಸೋನಿಯಾ ಗಾಂಧಿಯವರು ವಾರಣಾಸಿಯಲ್ಲಿ ರೋಡ್ ಶೋ ನಡೆಸುವ ವೇಳೆ ಅಸ್ವಸ್ಥರಾಗಿ ಆಸ್ಪತ್ರೆಗೆ ತೆರಳಬೇಕಾಗುತ್ತದೆ. ಮೋದಿಯವರು ಅವರಿಗೆ ಹೆಚ್ಚಿನ ಚಿಕಿತ್ಸೆ ದೆಹಲಿಯಲ್ಲಿ ಪಡೆಯಲು ವಿಶೇಷ ವಿಮಾನ ನೀಡಲಾಗುವುದು ಎಂದು ಅವರ ನಿಕಟವರ್ತಿಗಳಿಗೆ ತಿಳಿಸುತ್ತಾರೆ. ರಾಜಕೀಯ ವೈರತ್ವವಿಲ್ಲದ ಮಾನವೀಯ ಸಂಬಂಧಕ್ಕೆ ಹೆಚ್ಚಿನ ಮಹತ್ವ ಮೋದಿಯವರು ಕೊಡುತ್ತಾರೆ.

ರಾಹುಲ್ ಗಾಂಧಿಯವರಿಗೆ ಗುಜರಾತಿನಲ್ಲಿ ನಡೆದ ಮಾನನಷ್ಟ ಮೊಕದ್ದಮೆಯಲ್ಲಿ ನ್ಯಾಯಾಲಯ ವಿಧಿಸಿದ ಎರಡು ವರ್ಷ ಜೈಲು ಶಿಕ್ಷೆ, ಅದರಿಂದ ಸದಸ್ಯತ್ವ ಅನರ್ಜಿತವಾಗಿದ್ದು ಹಾಗೂ ಸರಕಾರಿ ನಿವಾಸದಿಂದ ತೆರವುಗೊಳಿಸಿದ್ದರಿಂದ ಅವರಿಗೆ ತೀವ್ರ ಅವಮಾನವಾಗಿದ್ದು ಸುಳ್ಳಲ್ಲ. ಆದರೆ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ವಾರಾಣಾಸಿ ಘಟನೆಯನ್ನು ತಿರುಚಿ ಬೆಂಬಲಿಸಿದ್ದು ಸಮರ್ಥನೀಯವಲ್ಲ.

ದೇಶದ ಹಿತ ದೃಷ್ಟಿಯಿಂದ ಪ್ರಮುಖ ರಾಜಕೀಯ ಪಕ್ಷಗಳ ನಾಯಕರ ಸಂಬಂಧಗಳು ಸೌಹಾರ್ದಯುತವಾಗಿರಬೇಕು. ಸೌಜನ್ಯಪೂರಿತ ಟೀಕೆ ಟಿಪ್ಪಣಿಗಳು ನಡೆಯಬೇಕು. ಇದರಿಂದ ಪ್ರಜಾಪ್ರಭುತ್ವದ ಬೇರುಗಳು ಗಟ್ಟಿಯಾಗುತ್ತದೆ. ಜನರಲ್ಲಿಯೂ ನಮ್ಮ ರಾಜಕೀಯ ವ್ಯವಸ್ಥೆಯ ಮೇಲೆ ನಂಬಿಕೆಯುಂಟಾಗುತ್ತದೆ. ಪರಸ್ಪರ ಸಂಬಂಧಗಳು ಹಳಸಿ ಹೋಗಿ ಒಬ್ಬರ ಮುಖ ಒಬ್ಬರು ನೋಡ ಹಾಗಾದರೆ ರಾಷ್ಟ್ರದ ಅಭಿವೃದ್ಧಿಗೆ ಹಿನ್ನಡೆಯಾಗುವುದು.

ರಾಜಕೀಯ ನಾಯಕರ ಪೈಪೋಟಿಯು ಚುನಾವಣೆಗೆ ಮಾತ್ರ ಸಿಮೀತವಾಗಿರಲಿ. ತದನಂತರ ದೇಶ ನಿರ್ಮಾಣದಲ್ಲಿ ಆಡಳಿತ ಪಕ್ಷದಷ್ಟೆ ವಿರೋಧ ಪಕ್ಷಗಳಿಗೂ ಜವಾಬ್ದಾರಿ ಇರುವುದು ಮರೆಯಬಾರದು. ಈ ದೃಷ್ಟಿಯಲ್ಲಿ ಕರ್ನಾಟಕದ ರಾಜಕೀಯ ದೇಶಕ್ಕೆ ಮಾದರಿಯಾಗಿದೆ ಎಂಬುದೆ ನಮಗೆ ಹೆಮ್ಮೆಯ ಸಂಗತಿ.

ರಾಹುಲ್ ಗಾಂಧಿಯವರು ಇಪ್ಪತ್ತು ವರ್ಷದ ತರುವಾಯ ಮೊದಲ ಬಾರಿಗೆ ಶಾಸನ ಬದ್ಧ ಹುದ್ದೆಯನ್ನು ಅಲಂಕರಿಸಿದ್ದಾರೆ. ಬಹುದೊಡ್ಡ ಹೊಣೆಗಾರಿಕೆಯು ಅವರ ಮೇಲೆ ಇದೆ. ಭವಿಷ್ಯದ ಬೆಳವಣಿಗೆಗೆ ಇಂದಿನ ಸ್ಥಾನ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ತಮ್ಮ ಮನಸ್ಸಿನ ಕಹಿಯನ್ನು ನಕಾರಾತ್ಮಕ ಧೋರಣೆಯನ್ನು ತೊರೆದು ಪ್ರಬುದ್ಧ ಮತ್ತು ಜವಾಬ್ದಾರಿಯುತ ಸಮರ್ಥ ವಿರೋಧ ಪಕ್ಷದ ನಾಯಕರಾಗಿ ರಾಹುಲ್ ಹೊರಹೊಮ್ಮಲಿ, ಮುಂದಿನ ದಿನಗಳಲ್ಲಿ ಸಕಾರಾತ್ಮಕ ರಾಜಕಾರಣಕ್ಕೆ ಆದ್ಯತೆ ನೀಡಲಿ ಎಂಬುದೆ ಜನರ ಆಶಯವಾಗಿದೆ.



ನಾರದ ಸಂಚಾರ

ಕಲಹಪ್ರಿಯ
naadigru@gmail.com

ಅಧಿಕಾರಿಗಳ ಕೈಯಲ್ಲಿ ಬೀಗ

ಬಿಹಾರದ ಜೆಡಿಯು ನಾಯಕರು ಒಡಿಶಾದ ಬಿಜು ಜನತಾದಳದಿಂದ ಸೋಲನ್ನು ಭವಿಸಿದ ನಂತರ ತುಂಬಾ ಚಿಂತಿತರಾಗಿದ್ದಾರೆ. ಅವರ ಕಳಕಳಿ ಏನೆಂದರೆ, ಮುಖ್ಯಮಂತ್ರಿ, ನಿತೀಶ್ ಕುಮಾರ್ ಹಾಗೂ ಅವರ ಆ ಆತ್ಮೀಯ ಬಳಗದ ಮೇಲೆ ಹಿರಿಯ ಅಧಿಕಾರಿಯ ಗಣನೀಯ ಪ್ರಭಾವ. ಹಾಗೇ ಅಲ್ಲಿ ಕೆಲವು ಗುಸುಗುಸುಗಳೂ ಎದ್ದಿವೆ, ಅದು ಏನೆಂದರೆ, ಅಧಿಕಾರಿಗಳು ಎಲ್ಲವನ್ನೂ ಅತ್ಯಂತ ಶಾಣ್ಯಾತನದಿಂದಲೇ ನಿಭಾಯಿಸುವ ಅಧಿಕಾರಿಗಳು, ನೆರಳಿನಂತೆಯೇ ಇದ್ದು, ನಂತರ ಅವರ ಪೂರ್ವಾಧಿಕಾರಿಗಳಿಗಿಂತಲೂ ಹೆಚ್ಚಿನ ಅಧಿಕಾರವನ್ನು ಅನುಭವಿಸುತ್ತಾರೆ. ಹಾಗೇ ಹಲವಾರು ಜೆಡಿಯು ನಾಯಕರು ಊಹೆ ಏನೆಂದರೆ, ಹಲವು ಅಧಿಕಾರಿಗಳು ಕೇಂದ್ರ, ಬಿಜೆಪಿ ನಾಯಕರ ಮುಂದೆ ಕುಣಿಯುತ್ತಾರಂತೆ. ಹಾಗೇ ನಿತೀಶ್ ಕುಮಾರ್ ಮಹಾಘಟಬಂಧನ್ ದಿಂದ ಎನ್‌ಡಿಎಗೆ ಸೇರುವಲ್ಲಿಯೂ ಅಧಿಕಾರಿ ವರ್ಗದವರ ಕರಾಮತ್ತು ಇದೆ ಎಂಬುದನ್ನೂ ಕೇಳಲಾಗುತ್ತಿದೆ. 'ಅವರ ಲಗಾಮನ್ನು ಬಿಜೆಪಿಯ ಹಿರಿ ಕೈಗಳಲ್ಲಿ ಇರಬಹುದೆಂದು, ನನಗೆ ಸಂಶಯವಾಗುತ್ತಿದೆ' ಎಂದು ಜೆಡಿಯು ನಾಯಕರು ಹೇಳಿದರಂತೆ. ಜೆಡಿಯುನ ಹೆಚ್ಚಿನ ಜನರ ಮಾತು ಏನೆಂದರೆ, ವಿಧಾನಸಭಾ ಚುನಾವಣೆಯಲ್ಲಿ ಒಳ್ಳೆಯ ಸಮರ್ಪಕವಾಗಿ ಗೆಲ್ಲಬೇಕೆಂದರೆ, ನಿತೀಶ್ ಅವರು ಅಧಿಕಾರಿ ವರ್ಗದವರ ಮೇಲಿನ ಅವಲಂಬನೆಯನ್ನು ಬಿಟ್ಟು ಅವರ ತಮ್ಮದೇಯಾದ ಸ್ವಂತ ನಿಲುವುಗಳನ್ನು ಪ್ರದರ್ಶಿಸ ಬೇಕು ಎನ್ನುವುದು. ಇಲ್ಲದಿದ್ದರೆ, ಪಟ್ನಾಯಕ್‌ಗೆ ಆದ ರೀತಯಲ್ಲೇ ಇವರಿಗೂ ಆಗುವುದು ಎಂದು ಮಾತನಾಡಿಕೊಳ್ಳುತ್ತಿದ್ದಾರೆ.

ಸದನದ ಸತ್ಯ!

ನಿನ್ನೆ ನಡೆದ ಸಂಸತ್ ಸದನದಲ್ಲಿ ಹಲವಾರು ವಿಚಾರಗಳು ಚರ್ಚೆಯಾದವು. ಎಷ್ಟೋ ದಿನಗಳಿಂದ, ಮಾತನಾಡುವಾಗ ಮೈಕ್ ಸ್ವಿಚ್ ಆಫ್ ಮಾಡುತ್ತಾರೆ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ಮೇಲೆ ವಿರೋಧ ಪಕ್ಷದವರು ಹರಿಹಾಯುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಹಾಗೇ ಚರ್ಚೆ ನಡೆಯುತ್ತಿದ್ದಾಗ, ಒಬ್ಬ ಸದಸ್ಯ ಮಾತನಾಡುತ್ತಾ, 'ಸಂಸತ್ ರೂಲ್ ಬುಕ್‌ನಲ್ಲಿ ಕೋರ್ಟ್‌ನಲ್ಲಿರುವ ವಿಚಾರಗಳ ಬಗ್ಗೆ ಚರ್ಚೆ ಮಾಡಬಾರದು ಎಂದಿದೆ' ಎಂದು ಹೇಳಿದಾಗ, ಓಂ ಬಿರ್ಲಾ ಅವರು 'ನೀಟ್ ವಿಷಾ ಸಹ ಕೋರ್ಟ್‌ನಲ್ಲಿದೆ. ಅದನ್ನೇಕೆ ಚರ್ಚೆ ಮಾಡುತ್ತಿದ್ದೀರಿ' ಎಂದು ಕೇಳಿದರು. ಹಾಗೇ ಅವರದ್ದೇ ಪಕ್ಷದಿಂದ ಚುನಾಯಿತರಾದ ಸ್ಪೀಕರ್ ಮೇಲೆ ಅಮಿತ್ ಶಾ 'ನೀವು ನಿಯಮ ಮೀರಿ ವಿರೋಧ ಪಕ್ಷದವರಿಗೆ ಸಹಾಯ ಮಾಡುತ್ತಿದ್ದೀರಿ. ಅದರೆ, ನಮಗೆ ಮಾತನಾಡುವುದಕ್ಕೆ ಸ್ವಲ್ಪ ಸಮಯವಾದರೂ ಕೊಡಿ' ಎಂದು ಕೇಳಿದರಂತೆ. ಹೀಗೆ ಕೆಲವೊಮ್ಮೆ ನಮ್ಮವರು ಯಾರು ಬೇರೆಯವರು ಯಾರು ಎಂಬುವುದು ಗೊತ್ತಾಗುವುದೇ ಇಲ್ಲ. ಇದು ಸದನದ ಸತ್ಯ!

ಬೀಡಿ ಸೇದುವುದು ಒಳ್ಳೆಯದೇ?

ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ನಾನು ಮೊದಲು ಸಿಗರೇಟ್ ಸೇದುತ್ತಿದ್ದೆ, ಅದನ್ನು ಬಿಟ್ಟರೂ ಹೃದಯದಲ್ಲಿ ಸಮಸ್ಯೆ ಕಂಡು ಅಂಜಿಯೋಪ್ಲಾಸ್ಟ್ ಮಾಡಿಸಿಕೊಳ್ಳಬೇಕಾಯಿತು. ಸಿಗರೇಟ್ ಸೇದುವುದನ್ನು ಬಿಟ್ಟಿದ್ದಕ್ಕೆ ನನ್ನ ಆಯಸ್ಸು ಹೆಚ್ಚಾಯಿತು' ಎಂದು ಹೇಳಿದ್ದನ್ನು ಕೇಳಿಸಿಕೊಂಡ ಹಣ್ಣಾಗಿರುವ ಮುದುಕನೊಬ್ಬ ಬಾಯಿಯಿಂದ ಬೀಡಿಯನ್ನು ತೆಗೆದು ಬೀಡಿ ಸೇದುವುದು ಒಳ್ಳೆಯದೇ ಎಂದು ಕೇಳಿದನಂತೆ.

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 190

ಸಮಾಚಾರ ಸಣ್ಣದಲ್ಲ

ಬಿಆರ್‌ಎಸ್ ನಾಯಕಿ ಕವಿತಾಗೆ ಜಾಮೀನಿಲ್ಲ

ದೆಹಲಿ: ದೆಹಲಿ ಮದ್ಯ ನೀತಿ ಹಗರಣದ ಆರೋಪದಲ್ಲಿ ಜೈಲು ಪಾಲಾಗಿರುವ ಬಿಆರ್‌ಎಸ್ ನಾಯಕಿ ಕೆ.ಕವಿತಾ ಜಾಮೀನು ಅರ್ಜಿಯನ್ನು ದೆಹಲಿ ಹೈಕೋರ್ಟ್ ಸೋಮವಾರ ವಜಾಗೊಳಿಸಿದೆ. ಕೇಂದ್ರ ತನಿಖಾ ದಳ(ಸಿಬಿಐ) ಹಾಗೂ ಜಾರಿ ನಿರ್ದೇಶನಾಲಯ(ಇ.ಡಿ) ದಾಖಲಿಸಿರುವ ಭ್ರಷ್ಟಾಚಾರ ಮತ್ತು ಅಕ್ರಮ ಹಣ ವರ್ಗಾವಣೆ ಪ್ರಕರಣಗಳಲ್ಲಿ ಜಾಮೀನು ಕೋರಿ ಕವಿತಾ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್ ನ್ಯಾ.ಸ್ವರಾನ ಕಾಂತಾ ಶರ್ಮಾ ಅವರ ಪೀಠ ಅರ್ಜಿ ವಜಾಗೊಳಿಸಿದೆ. ಈ ಮೊದಲು ಮೇ 6ರಂದು ವಿಚಾರಣಾ ನ್ಯಾಯಾಲಯದ ಲ್ಲಿಯೂ ಜಾಮೀನು ಅರ್ಜಿ ವಜಾಗೊಂಡಿತ್ತು. ಪ್ರಕರಣ ದೆಹಲಿಗಷ್ಟೇ ಅಲ್ಲ, 2 ರಾಜ್ಯಗಳಲ್ಲಿ ನಡೆದಿದೆ. ಆರೋಪಿ ಪ್ರಭಾವಿ, ಜಾಮೀನು ನೀಡಿದರೆ ಸಾಕ್ಷ್ಯ ನಾಶದ ಅಪಾಯವಿದೆ ಎಂದು ಸಿಬಿಐ ಮತ್ತು ಇ.ಡಿ ಜಾಮೀನು ಅರ್ಜಿಗೆ ವಿರೋಧ ವ್ಯಕ್ತಪಡಿಸಿದ್ದವು.

ಪಾಕ್ ಜೈಲುಗಳಲ್ಲಿ 254 ಭಾರತೀಯರು

ದೆಹಲಿ: ಭಾರತ ಮತ್ತು ಪಾಕಿಸ್ತಾನ ತಮ್ಮ ವಶದಲ್ಲಿರುವ ಎರಡೂ ದೇಶಗಳ ಪ್ರಜೆಗಳ ಕೈದಿ ಪಟ್ಟಿಯನ್ನು ರಾಜತಾಂತ್ರಿಕ ಮಾರ್ಗದ ಮೂಲಕ ಸೋಮವಾರ ವಿನಿಮಯ ಮಾಡಿಕೊಂಡಿವೆ. ಕೌನ್ಸುಲರ್ ಎಕ್ಸಿಸ್ 2008ರ ಒಪ್ಪಂದದ ನಿಬಂಧನೆಗಳಡಿ ಪ್ರತಿ ವರ್ಷದ ಜ.1 ಹಾಗೂ ಜು.1ರಂದು ಪಟ್ಟಿ ವಿನಿಮಯವಾಗುತ್ತದೆ. ಪಾಕ್ ಮೂಲದ 366 ನಾಗರಿಕರು ಹಾಗೂ 86 ಮೀನುಗಾರರು ಭಾರತದ ಸೆರೆಮನೆಗಳಲ್ಲಿದ್ದರೆ, ಭಾರತ ಮೂಲದ 43 ನಾಗರಿಕರು, 211 ಮೀನುಗಾರರು ಪಾಕ್ ಜೈಲುಗಳಲ್ಲಿರುವುದನ್ನು ಪಟ್ಟಿ ಮೂಲಕ ಖಾತರಿಪಡಿಸಲಾಗಿದೆ. ಶಿಕ್ಷೆ ಪೂರ್ಣಗೊಳಿಸಿದ ಭಾರತದ 185 ಮೀನುಗಾರರು ಹಾಗೂ ಕೈದಿಗಳನ್ನು ತ್ವರಿತವಾಗಿ ಬಿಡುಗಡೆ ಮಾಡುವಂತೆ ಪಾಕ್ ಆಡಳಿತವನ್ನು ಭಾರತ ಸರಕಾರ ಕೇಳಿಕೊಂಡಿದೆ.

ಎಸ್‌ಪಿ ಮುಖಂಡನ ಮನೆಗೆ ಗುಂಡಿನ ದಾಳಿ

ವಾರಾಣಸಿ: ಸಮಾಜವಾದಿ ಪಕ್ಷದ(ಎಸ್‌ಪಿ) ಮುಖಂಡ, ಮಾಜಿ ಕಾರ್ಪೊರೇಟರ್ ವಿಜಯ್ ಯಾದವ್ ಅವರ ದಶಾಶ್ವಮೇಧ ಪ್ರದೇಶದಲ್ಲಿನ ಮನೆಯಲ್ಲಿ ಗುಂಡಿನ ದಾಳಿ ನಡೆದಿದ್ದು, 6 ವರ್ಷದ ಬಾಲಕ ನಿರ್ಭಯ್ ಯಾದವ್ ಸೇರಿದಂತೆ ಆರು ಮಂದಿ ಗಾಯಗೊಂಡಿದ್ದಾರೆ. ದುಷ್ಕರ್ಮಿಗಳ ಗುಂಪು ಗುಂಡಿನ ದಾಳಿ ನಡೆಸಿ ಪರಾರಿಯಾಗಿದೆ. ಕುಟುಂಬ ಹತ್ಯೆ ಮಾಡುವ ಉದ್ದೇಶದಿಂದಲೇ ಈ ದಾಳಿ ನಡೆದಿದೆ ಎಂದು ವಿಜಯ್ ಯಾದವ್ ದೂರು ನೀಡಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ಅಂಕಿತ್ ಯಾದವ್, ಶೋಭಿತ್ ವರ್ಮಾ, ಗೋವಿಂದ್ ಯಾದವ್, ಸಾಹಿಲ್ ಯಾದವ್ ಎಂಬವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ದಶಾಶ್ವಮೇಧ ಠಾಣೆ ಪಿಎಸ್‌ಐ ರಾಕೇಶ್ ಪಾಲ್‌ರನ್ನು ಕರ್ತವ್ಯ ಲೋಪದಡಿ ಅಮಾನತು ಮಾಡಲಾಗಿದೆ.

ಮೊದಲ ಮಹಿಳಾ ಮುಖ್ಯ ಕಾರ್ಯದರ್ಶಿ ಸುಜಾತಾ

ಮುಂಬೈ: ಹಿರಿಯ ಐಎಎಸ್ ಅಧಿಕಾರಿ ಸುಜಾತಾ ಸೌನಿಕ್ ಮಹಾರಾಷ್ಟ್ರದ ಮೊದಲ ಮಹಿಳಾ ಮುಖ್ಯ ಕಾರ್ಯದರ್ಶಿ ಹುದ್ದೆಗೆ ಬಡ್ತಿ ಪಡೆದು ರಾಜ್ಯದ ಆಡಳಿತದಲ್ಲಿ ಇತಿಹಾಸ ನಿರ್ಮಿಸಿದ್ದಾರೆ. ವಿಶೇಷವೆಂದರೆ 1960ರಿಂದ ಪುರುಷರೇ ಮಹಾರಾಷ್ಟ್ರ ಮುಖ್ಯ ಕಾರ್ಯದರ್ಶಿ ಹುದ್ದೆ ನಿರ್ವಹಿಸಿದ್ದರು. ಇದೇ ಮೊದಲ ಬಾರಿಗೆ ಮಹಿಳೆಯೊಬ್ಬರು ನೇಮಕವಾಗಿದ್ದಾರೆ. ಸುಜಾತಾ ರಾಜ್ಯದ 45ನೇ ಮುಖ್ಯ ಕಾರ್ಯದರ್ಶಿಯಾಗಿದ್ದಾರೆ.

ದ.ಕೊರಿಯ ಹಾಡು ಕೇಳಿದ್ದಕ್ಕೇ ಶಿರಚ್ಛೇದ!

ಸಿಯೋಲ್: ದಕ್ಷಿಣ ಕೊರಿಯ ಮೂಲದ ಕೆ-ಪಾಪ್ ಹಾಡು ಕೇಳಿದ್ದಕ್ಕೇ ಉತ್ತರ ಕೊರಿಯಾದಲ್ಲಿ ಸಾರ್ವಜನಿಕವಾಗಿ 22 ವರ್ಷದ ಯುವಕನ ಶಿರಚ್ಛೇದ ಮಾಡಲಾಗಿದೆ. ದಕ್ಷಿಣ ಕೊರಿಯಾದ ಏಕೀಕರಣ ಸಚಿವಾಲಯ ಸೋಮವಾರ ಬಿಡುಗಡೆ ಮಾಡಿದ ಮಾನವ ಹಕ್ಕುಗಳ ವರದಿ ಈ ಬಗ್ಗೆ ಬೆಳಕು ಚೆಲ್ಲಿದೆ. ದಕ್ಷಿಣ ಹ್ವಾಂಗೇ ಪ್ರಾಂತದ ಯುವಕ ದಕ್ಷಿಣ ಕೊರಿಯದ 70 ಹಾಡು ಕೇಳಿದ್ದ, 3 ಸಿನಿಮಾ ನೋಡಿದ್ದ, ಹಂಚಿಕೊಂಡಿದ್ದ ಎಂದು ಆರೋಪಿಸಿ ಉತ್ತರ ಕೊರಿಯಾ ಆಡಳಿತ ಆತನ ಶಿರಚ್ಛೇದ ಮಾಡಿದೆ. 2020ರಲ್ಲಿ ಜಾರಿಗೆ ತಂದಿರುವ ಪ್ರತಿ ಗಾಮಿ ಸಿದ್ಧಾಂತ ಹಾಗೂ ಸಂಸ್ಕೃತಿ ಕಾನೂನನ್ನು ಯುವಕ ಉಲ್ಲಂಘಿಸಿದ್ದಾನೆ ಎಂದು ಶಿಕ್ಷೆ ನೀಡಲಾಗಿದೆ.

{ ಅಮಿತ್ ಶಾ } ಕೇಂದ್ರ ಗೃಹ ಸಚಿವ

ಮೂರೂ ಹೊಸ ಅಪರಾಧ ಕಾನೂನುಗಳು ಹಿಂದಿಯಲ್ಲಷ್ಟೇ ಪ್ರಕಟವಾಗಿವೆ. ಹಿಂದಿ ಹೇರಿಕೆ ಮಾಡಲಾಗುತ್ತಿದೆ ಎಂಬ ತಮಿಳುನಾಡು ಸಂಸದರ ಆರೋಪ ಸರಿಯಲ್ಲ. ತಮಿಳು ಸೇರಿದಂತೆ ದೇಶದ ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿಯೂ ಮೂರೂ ಹೊಸ ಅಪರಾಧ ಕಾನೂನುಗಳ ಪುಸ್ತಕಗಳು ಲಭ್ಯವಿರುತ್ತವೆ. ವಿಚಾರಣೆಗಳು ಕೂಡಾ ಪ್ರಾದೇಶಿಕ ಭಾಷೆಗಳಲ್ಲಿಯೇ ನಡೆಯುತ್ತವೆ.

ಸ್ವದೇಶಿ ಪರಿಕಲ್ಪನೆಯಲ್ಲಿ ಕಾನೂನು ರಚನೆ | ಆಧುನಿಕ ಕಾನೂನು ವ್ಯವಸ್ಥೆಗೆ ಅವಕಾಶ | 4 ವರ್ಷಗಳ ಶ್ರಮ-118 ಸಭೆಗಳಲ್ಲಿ ಚರ್ಚೆ

'ಶಿಕ್ಷೆ' ಅಲ್ಲ 'ನ್ಯಾಯ'ದಾನ ಮೇಲೆ ಗಮನವಿಡಿ: ಶಾ

ದೆಹಲಿ: ಬ್ರಿಟಿಷ್ ವಸಾಹತು ಕಾಲದ ಶತಮಾನ ಹಳೆಯ 3 ಅಪರಾಧ ಕಾನೂನುಗಳು ತೆರೆ ಮರೆಗೆ ಸರಿದು ಸ್ವತಂತ್ರ ಭಾರತದಲ್ಲಿ ಇದೇ ಮೊದಲ ಬಾರಿಗೆ ಹೊಸ ಅಪರಾಧ ಕಾನೂನು ವ್ಯವಸ್ಥೆ ಅಳವಡಿಕೆಯಾಗಿದೆ. 3 ನೂತನ ಕ್ರಿಮಿನಲ್ ಕಾನೂನುಗಳು ಜು.1ರಿಂದ ಜಾರಿಗೆ ಬಂದಿವೆ. ಈ ಕಾನೂನುಗಳನ್ನು ದೇಶೀಯ ಪರಿಸ್ಥಿತಿಗಳಿಗೆ ಒಗ್ಗುವಂತೆ, ದಂಡನೆಗೆ ಬದಲಾಗಿ ಸಾಮಾಜಿಕ ಮನಸ್ಥಿತಿ ಪರಿವರ್ತನೆಗೆ ಕಾರಣವಾಗುವಂತೆ ರಚಿಸಲಾಗಿದೆ ಎಂದೇ ವ್ಯಾಖ್ಯಾನಿಸಲಾಗಿದೆ.

'ಶಿಕ್ಷೆಗೆ ಅಲ್ಲ, ನ್ಯಾಯ ಒದಗಿಸುವುದರತ್ತ ಹೆಚ್ಚು ಗಮನ ಹರಿಸಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಪರಾಧ ಕಾನೂನು ಜಾರಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

3 ನೂತನ ಅಪರಾಧ ಕಾನೂನುಗಳನ್ನು ದೇಶಾದ್ಯಂತ ಜಾರಿಗೊಳಿಸಿದ ಬಗ್ಗೆ ದೆಹಲಿಯಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಸಚಿವರು, ಹೊಸ ಕಾಯಿದೆಗಳ ಬಗ್ಗೆ ಪ್ರತಿಪಕ್ಷಗಳ ಟೀಕೆಗೆ ಖಡಕ್ ಪ್ರತಿಕ್ರಿಯೆ ನೀಡಿದರು. ಭಾರತದ ನೆಲದ ಗುಣಗಳನ್ನು ಒಳಗೊಂಡಿರುವ ಈ ಹೊಸ ಅಪರಾಧ ಕಾನೂನುಗಳು ಸಂಪೂರ್ಣ ಸ್ವದೇಶಿಯಾಗಿವೆ ಎಂದು ವ್ಯಾಖ್ಯಾನಿಸಿದರು.

ಸ್ವಾತಂತ್ರ್ಯ ಬಂದ 77 ವರ್ಷಗಳ ಬಳಿಕ ದೇಶಕ್ಕೆ ಸ್ವದೇಶಿ ಕ್ರಿಮಿನಲ್ ಕಾನೂನುಗಳು ರಚನೆಯಾಗಿ ಜಾರಿಗೆ ಬಂದಿವೆ. ಈ ವಿಚಾರವಾಗಿ ಶ್ರಮಿಸಿದ, ನೆರವಾದ ಎಲ್ಲರಿಗೂ ಧನ್ಯವಾದ. ಈ ಕಾನೂನುಗಳು ಭಾರತೀಯ ನ್ಯಾಯ-ನೀತಿಯ ಮೇಲೆಯೇ ಕಾರ್ಯ ನಿರ್ವಹಿಸಲಿವೆ. ವಸಾಹತುಶಾಹಿ ಕಾನೂನುಗಳನ್ನು ಕಿತ್ತು ಹಾಕಲಾಗಿದೆ. ದೇಶದ ನ್ಯಾಯದಾನಕ್ಕೆ ತಕ್ಕಂತೆ ರಚಿಸಲಾದ ಕಾನೂನುಗಳು ಕಾಲಕ್ಕೆ ತಕ್ಕಂತೆ ಹೊಸ ಅಂಶಗಳನ್ನು ಒಳಗೊಂಡಿವೆ ಎಂದು ಗೃಹ ಸಚಿವ ಅಮಿತ್ ಶಾ ಹೇಳಿದರು.

ಶಾ ಹೇಳಿದ ಶಾಸನ...

- ಈ ಕ್ರಿಮಿನಲ್ ಕಾನೂನುಗಳು ಅನುಷ್ಠಾನ ಪೂರ್ಣಗೊಂಡ ನಂತರ, ಅತ್ಯಂತ ಆಧುನಿಕ ಕಾನೂನುಗಳಾಗಿ ನಿಲ್ಲುತ್ತವೆ.
- ಹೊಸ ಕ್ರಿಮಿನಲ್ ಕಾನೂನುಗಳು ಭಾರತದಲ್ಲಿ ಶತಮಾನ ಕಾಲದ ಬ್ರಿಟಿಷ್ ಕಾನೂನುಗಳ ಯುಗವನ್ನು ಕೊನೆಗೊಳಿಸಿವೆ.
- ಅಪರಾಧ ನ್ಯಾಯ ವ್ಯವಸ್ಥೆಯನ್ನು 'ಸಂಪೂರ್ಣವಾಗಿ ಸ್ವದೇಶಿ' ಆಗಿ ಪರಿವರ್ತಿಸಿದೆ, ಭಾರತೀಯ ನೀತಿ ಒಳಗೊಂಡಿದೆ.
- ಹೊಸ ಕಾನೂನುಗಳು ಅಪರಾಧ ನಡೆಯುವುದನ್ನು ತಗ್ಗಿಸುತ್ತವೆ, ಶೇ.90ರಷ್ಟು ಪ್ರಕರಣಗಳಲ್ಲಿ ಶಿಕ್ಷೆ ವಿಧಿಸುವುದು ಖಚಿತ
- ಅಪರಾಧ ಕೃತ್ಯ ನಡೆದು ಎಫ್‌ಐಆರ್ ದಾಖಲಾದ ಪ್ರಕರಣಗಳಿಗೆ ಗರಿಷ್ಠ 3 ವರ್ಷಗಳಲ್ಲಿ ಶಿಕ್ಷೆಯಾಗುವ ಸಾಧ್ಯತೆ ಇದೆ
- ಪೊಲೀಸ್ ಕಸ್ಟಡಿ ವಿಚಾರದಲ್ಲೂ ಸ್ಪಷ್ಟತೆ-60 ದಿನಗಳ ತನಿಖೆಯಲ್ಲಿ 15ಕ್ಕಿಂತ ಹೆಚ್ಚು ದಿನ ಆರೋಪಿ ಕಸ್ಟಡಿಗೆ ಅವಕಾಶವಿಲ್ಲ

118 ಸಭೆಗಳಲ್ಲಿ ಚರ್ಚೆ; ನಾಲ್ಕು ವರ್ಷಗಳ ಶ್ರಮ

ಹೊಸ ಕಾನೂನುಗಳ ವಿಚಾರದಲ್ಲಿ ಕಾಂಗ್ರೆಸ್ ನಾಯಕರ ಟೀಕೆ ಸರಿಯಲ್ಲ. ಸ್ವಾತಂತ್ರ್ಯ ನಂತರ ಇಷ್ಟೊಂದು ಚರ್ಚೆ ನಡೆಸಿ ರಚಿಸಿದ ಕಾನೂನು ಮತ್ತೊಂದಿಲ್ಲ. ಈ ಹೊಸ ಕಾನೂನುಗಳಿಗಾಗಿ 4 ವರ್ಷಗಳಿಂದ ಶ್ರಮಿಸಲಾಗಿದೆ. ತಜ್ಞರು 118 ಸಭೆ ನಡೆಸಿದ್ದಾರೆ. ಈ ಸಭೆಗಳಲ್ಲಿ ಸ್ವತಃ ಭಾಗಿಯಾಗಿರುವೆ. ಲೋಕಸಭೆಯಲ್ಲಿ ಒಂಭತ್ತೂವರೆ ಗಂಟೆಗಳ ಕಾಲ ಹಾಗೂ ರಾಜ್ಯಸಭೆಯಲ್ಲಿ ಆರೂ ಮುಕ್ಕಾಲು ಗಂಟೆಗಳ ಕಾಲ ಈ ಹೊಸ ಕಾಯಿದೆಗಳ ವಿಚಾರವಾಗಿಯೇ ಚರ್ಚೆಯಾಗಿದೆ. ಲೋಕಸಭೆಯ 34 ಸದಸ್ಯರು, ರಾಜ್ಯಸಭೆಯ 26 ಸದಸ್ಯರು ಸಂವಾದದಲ್ಲಿ ಭಾಗಿಯಾಗಿದ್ದರು. ಪ್ರತಿಪಕ್ಷಗಳಿಗೆ ಯಾವುದೇ ಪ್ರಶ್ನೆ ಇದ್ದರೆ, ತಕರಾರು ಇದ್ದರೆ ನಾನು ಚರ್ಚೆಗೆ ಸದಾ ಸಿದ್ಧ. ಯಾವುದೇ ಸಮಯದಲ್ಲಾದರೂ ಭೇಟಿಯಾಗಿ ಚರ್ಚೆ ನಡೆಸಬಹುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಆಧುನಿಕ ಕಾನೂನುಗಳು

ಕ್ರಿಮಿನಲ್ ಕಾನೂನು ಮೇಲಿನ ದೃಷ್ಟಿಕೋನವನ್ನು 'ದಂಡ'ದಿಂದ (ಶಿಕ್ಷೆ ನೀಡುವುದರಿಂದ) ಬದಲಿಸಿ 'ನ್ಯಾಯ ದಾನಕ್ಕೆ' ಒತ್ತುಕೊಡಲಾಗಿದೆ. ನ್ಯಾಯದಾನದಲ್ಲಾಗುತ್ತಿದ್ದ ವಿಳಂಬ ತಪ್ಪಿಸಿ, ತ್ವರಿತ ವಿಚಾರಣೆ, ತ್ವರಿತ ನ್ಯಾಯದಾನಕ್ಕೆ ವ್ಯವಸ್ಥೆಯಲ್ಲಿ ಬದಲಾವಣೆ ತರಲಾಗಿದೆ. ಈ ಮೊದಲು ಜಾರಿಯಲ್ಲಿದ್ದ ಅಪರಾಧ ಕಾನೂನುಗಳು ಪೊಲೀಸರ ಹಕ್ಕುಗಳನ್ನಷ್ಟೇ ರಕ್ಷಿಸುವಂತೆ ಇದ್ದವು. ಆದರೆ ಈಗ ಸಂತ್ರಸ್ತ ಹಾಗೂ ದೂರುದಾರರ ಹಕ್ಕುಗಳನ್ನು ರಕ್ಷಿಸುವುದರತ್ತಲೂ ಗಮನ ಹರಿಸಲಾಗಿದೆ. ಈ 3 ಅಪರಾಧ ಕಾನೂನುಗಳು ಅತ್ಯಂತ ಆಧುನಿಕ ಕಾನೂನುಗಳಾಗಿವೆ ಎಂದು ಸಚಿವ ಶಾ ವಿವರಿಸಿದ್ದಾರೆ.

ಭಾರತೀಯ ಸಂವಿಧಾನದ ಆಶಯಗಳಿಗೆ ಅನುಗುಣವಾಗಿಯೇ ಹೊಸ ಕಾನೂನುಗಳಲ್ಲಿ ವಿಭಾಗಗಳು ಮತ್ತು ಅಧ್ಯಾಯಗಳಿಗೆ ಆದ್ಯತೆ ನೀಡಲಾಗಿದೆ. ಮಹಿಳೆ ಮತ್ತು ಮಕ್ಕಳ ಮೇಲಿನ ಅಪರಾಧಗಳಿಗೆ ಮೊದಲು ಗಮನ ಹರಿಸಲು ಆದ್ಯತೆ ನೀಡಲಾಗಿದೆ. ಹೊಸ ಅಧ್ಯಾಯಗಳು, 35 ವಿಭಾಗಗಳು ಮತ್ತು 13 ನಿಬಂಧನೆಗಳನ್ನು ಸೇರಿಸಲಾಗಿದೆ ಎಂದು ಅಮಿತ್ ಶಾ ವಿವರಿಸಿದ್ದಾರೆ. ಕೆಲವು ಅಪರಾಧಗಳ ಬಗ್ಗೆ ದೂರು ನೀಡಲು ಪೊಲೀಸ್ ಠಾಣೆಗೆ ಬರುವುದಕ್ಕೆ ಮಹಿಳೆಯರಿಗೆ ಕಷ್ಟವಾಗುತ್ತದೆ. ಅವರನ್ನು ಈ ಮುಜುಗರದಿಂದ ತಪ್ಪಿಸಲು ಆನ್‌ಲೈನ್ ಎಫ್‌ಐಆರ್ ಸೌಲಭ್ಯ ಕಲ್ಪಿಸಲಾಗಿದೆ. ಮೊದಲ ಬಾರಿಗೆ ಗುಂಪು ಹತ್ಯೆಯನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿದೆ. ಗುಂಪುಗೂಡಿ ಮಾನವ ಹತ್ಯೆ ಮಾಡುವ ಅಪರಾಧಿಗಳಿಗೆ ಕನಿಷ್ಠ 7 ವರ್ಷದಿಂದ ಜೀವಾವಧಿವರೆಗೆ ಸೆರೆವಾಸ ಶಿಕ್ಷೆ ವಿಧಿಸಲು ಹೊಸ ಅಪರಾಧ ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿದೆ ಎಂದು ಸಚಿವ ಅಮಿತ್ ಶಾ ಹೇಳಿದರು. ತಂತ್ರಜ್ಞಾನ ಮತ್ತು ಆಧುನೀಕರಣ ಗಮನದಲ್ಲಿರಿಸಿಕೊಂಡು ಹೊಸ ಕಾನೂನುಗಳನ್ನು ರಚಿಸಲಾಗಿದೆ. ಶೇ.99.9 ರಷ್ಟು ಪೊಲೀಸ್ ಠಾಣೆಗಳು ಗಣಕೀಕೃತಗೊಂಡಿವೆ. ಹೊಸ ಕಾನೂನುಗಳ ಬಗ್ಗೆ 22.50 ಲಕ್ಷಕ್ಕೂ ಅಧಿಕ ಪೊಲೀಸ್ ಸಿಬ್ಬಂದಿಗೆ ತರಬೇತಿ ನೀಡಲು 12 ಸಾವಿರ ಮಾಸ್ಟರ್ ಟ್ರೈನರ್‌ಗಳನ್ನು ನಿಯೋಜಿಸಲಾಗಿದೆ ಎಂದು ವಿವರಿಸಿದರು.

ಹೊಸ ಕಾಯಿದೆ-ಪ್ರಥಮ ಪ್ರಕರಣ

ಹೊಸ ಕ್ರಿಮಿನಲ್ ಕಾನೂನುಗಳ ಅಡಿಯಲ್ಲಿ ಮೊದಲ ಪ್ರಕರಣವನ್ನು ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ದಾಖಲಿಸಲಾಗಿದೆ. ಅದು ಕಳವು ಪ್ರಕರಣವಾಗಿದೆ. ಆರೋಪಿ ಸೈಕಲ್ ಕಳವು ಮಾಡಿದ್ದ. ಹೊಸ ಕಾಯಿದೆಯಡಿ ದೇಶದ ಮೊದಲ ಅಪರಾಧ ಪ್ರಕರಣವನ್ನು ನಸುಕಿನ 12.10ಕ್ಕೆ ಗ್ವಾಲಿಯರ್ ಪೊಲೀಸರು ದಾಖಲಿಸಿದ್ದಾರೆ. ದೆಹಲಿ ಪೊಲೀಸರು, ಹೊಸ ಕಾಯಿದೆ ಬಳಸಿ ರಾಜಧಾನಿಯ ಕಮಲಾ ಮಾರುಕಟ್ಟೆ ಪ್ರದೇಶದಲ್ಲಿ ರಸ್ತೆ ಬದಿ ವ್ಯಾಪಾರಿ ವಿರುದ್ಧ 'ಪಾದಚಾರಿ ಮಾರ್ಗದಲ್ಲಿ ಅಡಚಣೆ' ಆರೋಪದಡಿ ನಸುಕಿನ 1.30ಕ್ಕೆ ಪ್ರಕರಣ ದಾಖಲಿಸಿದ್ದರು. ಆದರೆ, ಬಳಿಕ ಪ್ರಕರಣವನ್ನು ಕೈಬಿಡಲಾಗಿದೆ ಎಂದು ಗೃಹ ಸಚಿವ ಅಮಿತ್ ಶಾ ವಿವರಿಸಿದ್ದಾರೆ.

ಉಗ್ರರಿಗೆ ಹಣ ನೆರವು ಆರೋಪ: ಎನ್‌ಐಎಯಿಂದ ಬಂಧಿತ

ಸಂಸದ ರಶೀದ್ ಪ್ರಮಾಣ; ಇಂದು ತೀರ್ಪು

ಕಾಶ್ಮೀರ: ಭಯೋತ್ಪಾದಕ ಚಟುವಟಿಕೆಗಳಿಗೆ ಆರ್ಥಿಕ ನೆರವು ನೀಡಿದ ಆರೋಪದಡಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಯಿಂದ ಬಂಧನಕ್ಕೊಳಗಾಗಿರುವ, ಸದ್ಯ ಜೈಲಿನಲ್ಲಿದ್ದುಕೊಂಡೇ ಲೋಕಸಭಾ ಚುನಾವಣೆಯಲ್ಲಿ ಗೆದ್ದಿರುವ ಕಾಶ್ಮೀರದ ಇಂಜಿನಿಯರ್ ರಶೀದ್ ಅಲಿಯಾಸ್ ಶೇಕ್ ಅಬ್ದುಲ್ ರಶೀದ್ ಪ್ರಮಾಣ ವಚನ ಸ್ವೀಕಾರ ಸಂಬಂಧ ದೆಹಲಿಯ ಪಟಿಯಾಲಾ ನ್ಯಾಯಾಲಯ ಮಂಗಳವಾರ ಆದೇಶ ಪ್ರಕಟಿಸಲಿದೆ. ಈ ಮಧ್ಯೆ, ಉಗ್ರರಿಗೆ ಹಣಕಾಸು ನೆರವು ನೀಡಿದ ಆರೋಪಿ ಶೇಕ್ ಅಬ್ದುಲ್ ರಶೀದ್ ಸಂಸದರಾಗಿ ಪ್ರಮಾಣವಚನ ಸ್ವೀಕರಿಸುವುದಕ್ಕೆ ಆಕ್ಷೇಪವಿಲ್ಲ ಎಂದು ಎನ್‌ಐಎ ನ್ಯಾಯಾಲಯಕ್ಕೆ ಹೇಳಿಕೆ ಸಲ್ಲಿಸಿದೆ.

ಸಂಸದೀಯ ಕರ್ತವ್ಯ ನಿರ್ವಹಣೆಗೆ ಮಧ್ಯಂತರ ಜಾಮೀನು ಅಥವಾ ಕಸ್ಟಡಿ ಪೆರೋಲ್ ನೀಡುವಂತೆ ಕೋರ್ಟ್ ಮೊರೆ ಹೋಗಿದ್ದು, ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಕಿರಣ್ ಗುಪ್ತಾ ಜು.1ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಎನ್‌ಐಎಗೆ ಸೂಚಿಸಿದ್ದರು. ರಶೀದ್‌ಗೆ ಎನ್‌ಐಎ ಕೆಲ ಷರತ್ತು ವಿಧಿಸಿ ಪ್ರಮಾಣ ಸ್ವೀಕಾರಕ್ಕೆ ನಿರಾಕ್ಷೇಪಣಾಪತ್ರ ಸಲ್ಲಿಸಿತ್ತು.

ಎನ್‌ಐಎ ಷರತ್ತು: ಪ್ರಮಾಣ ವಚನಕ್ಕೂ ಮೊದಲು ಅಥವಾ ಬಳಿಕ ರಶೀದ್ ಮಾಧ್ಯಮಕ್ಕೆ ಯಾವುದೇ ಹೇಳಿಕೆ ನೀಡುವಂತಿಲ್ಲ, ಲೋಕಸಭೆಯಲ್ಲಿನ ಎಲ್ಲಾ ಕೆಲಸ ಒಂದೇ ದಿನದಲ್ಲಿ ಮುಗಿಸಬೇಕು ಎಂದು ಷರತ್ತು ವಿಧಿಸಲಾಗಿದೆ.

ಈವರೆಗೆ: ಇಂಜಿನಿಯರ್ ರಶೀದ್(57) ಉತ್ತರ ಕಾಶ್ಮೀರದ ಲಾಂಗಟೆ ಕ್ಷೇತ್ರದ 2 ಬಾರಿ ಶಾಸಕ. ಕಾಶ್ಮೀರಿ ಉಗ್ರರಿಗೆ ಹಣದ ನೆರವು ನೀಡಿದ ಆರೋಪದಡಿ ರಶೀದ್‌ರನ್ನು ಎನ್‌ಐಎ 2019ರಲ್ಲಿ ಬಂಧಿಸಿ ಕಾನೂನು ಬಾಹಿರ ಚಟುವಟಿಕೆ ನಿಯಂತ್ರಣ(ಯುಎಪಿಎ) ಕಾಯ್ದೆಯಡಿ ಪ್ರಕರಣ ದಾಖಲಿಸಿದೆ. ತಿಹಾರ ಜೈಲಿನಲ್ಲಿದ್ದೇ 18ನೇ ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಿದ ರಶೀದ್ ಪರ ಇಬ್ಬರು ಪುತ್ರರು ಪ್ರಚಾರ ನಡೆಸಿದ್ದರು. ಬಾರಾಮುಲ್ಲಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿದ್ದ ರಶೀದ್, ಮಾಜಿ ಸಿಎಂ ಓಮರ್ ಅಬ್ದುಲ್ಲಾ ವಿರುದ್ಧ 2,04,142 ಮತಗಳ ಭಾರೀ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ಜೂ.24ರಂದು ಲೋಕಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಲು ನಿಗದಿಯಾಗಿದ್ದರೂ ಸದ್ಯ ಜೈಲಿನಲ್ಲಿರುವ ಕಾರಣ ಸಾಧ್ಯವಾಗಿರಲಿಲ್ಲ.

ಜೂ.23ರಂದು ಮರು ಪರೀಕ್ಷೆ; 813 ಮಂದಿ ಫಲಿತಾಂಶ ಪ್ರಕಟ

ನೀಟ್ ಯುಜಿ: ಟಾಪರ್ಸ್ ರ‍್ಯಾಂಕ್ ಇಳಿಕೆ

ದೆಹಲಿ: ನೀಟ್ ಯುಜಿ-2024ರ ಪ್ರವೇಶ ಪರೀಕ್ಷೆಯ ಮೊದಲ ಫಲಿತಾಂಶ ವಿವಾದಕ್ಕೆ ಒಳಗಾಗಿದ್ದರಿಂದ 1563 ವಿದ್ಯಾರ್ಥಿಗಳ ಕೃಪಾಂಕ ರದ್ದುಗೊಳಿಸಿ ಮರು ಪರೀಕ್ಷೆ ನಡೆಸಿದ್ದು, 813 ವಿದ್ಯಾರ್ಥಿಗಳಷ್ಟೇ ಹಾಜರಾಗಿದ್ದರು. ಅದರ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು ಒಟ್ಟಾರೆ ನೀಟ್ ಯುಜಿ 2024ರ ಟಾಪ್ ರ‍್ಯಾಂಕಿಂಗ್ ಶ್ರೇಣಿಯಲ್ಲಿ ಬದಲಾವಣೆಯಾಗಿದೆ. ಟಾಪರ್‌ಗಳ ಸಂಖ್ಯೆ 67ರಿಂದ 61ಕ್ಕೆ ಇಳಿಕೆಯಾಗಿದೆ.

ಮೇ 5ರಂದು ನಡೆದ 'ನೀಟ್' ಪ್ರವೇಶ ಪರೀಕ್ಷೆಯಲ್ಲಿ ಕಾಲಾವಧಿ ವ್ಯತ್ಯಯ ಕಾರಣಕ್ಕೆ 1563 ಪರೀಕ್ಷಾರ್ಥಿಗಳಿಗೆ ಕೃಪಾಂಕ ನೀಡಲಾಗಿತ್ತು. ಇದು ವಿವಾದಕ್ಕೆ ಕಾರಣವಾಗಿದ್ದರಿಂದ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ (ಎನ್‌ಟಿಎ) ಕೃಪಾಂಕ ರದ್ದುಗೊಳಿಸಿ ಜೂ.23ರಂದು ಮರು ಪರೀಕ್ಷೆ ನಡೆಸಿತ್ತು. ಆದರೆ 813 ಅಭ್ಯರ್ಥಿಗಳಷ್ಟೇ ಮರು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ ಒಬ್ಬರೂ ಈ ಬಾರಿ ಟಾಪರ್ ಆಗಿ ಹೊರಹೊಮ್ಮಿಲ್ಲ. ಯಾರಿಗೂ 720 ಅಂಕಗಳ ಪರೀಕ್ಷೆಯಲ್ಲಿ

ಪೂರ್ಣ ಅಂಕ(720) ಪಡೆಯಲು ಸಾಧ್ಯವಾಗಿಲ್ಲ ಎಂಬುದು ಗಮನಾರ್ಹ. ಈಗಿನ ಫಲಿತಾಂಶದಿಂದಾಗಿ ಟಾಪರ್‌ಗಳ ಸಂಖ್ಯೆ 67ರಿಂದ 61ಕ್ಕೆ ಇಳಿಕೆಯಾಗಿದೆ.

ಕೃಪಾಂಕ ಪಡೆದಿದ್ದ 1563 ಮಂದಿಯಲ್ಲಿ ಈ ಮೊದಲು 6 ಅಭ್ಯರ್ಥಿಗಳು ಪೂರ್ಣ ಅಂಕ ಪಡೆದಿದ್ದರು. ಅವರಲ್ಲಿ ಐವರಷ್ಟೇ ಮರು ಪರೀಕ್ಷೆಗೆ ಹಾಜರಾಗಿದ್ದು 680 ಅಂಕ ಪಡೆಯಲಷ್ಟೇ ಸಾಧ್ಯವಾಗಿದೆ. ಕೃಪಾಂಕ ರದ್ದುಗೊಂಡ ಬಳಿಕ ಅಭ್ಯರ್ಥಿಗಳಿಗೆ ಮರು ಪರೀಕ್ಷೆ ತೆಗೆದುಕೊಳ್ಳುವ ಅಥವಾ ಕೃಪಾಂಕ ಹೊರತುಪಡಿಸಿ ಪಡೆದ ಅಂಕವನ್ನು ಉಳಿಸಿಕೊಳ್ಳುವ ಎರಡು ಆಯ್ಕೆಯನ್ನು ಎನ್‌ಟಿಎ ನೀಡಿತ್ತು. ಮರು ಪರೀಕ್ಷೆ ತೆಗೆದುಕೊಳ್ಳದವರಿಗೆ ಕೃಪಾಂಕ ಬಿಟ್ಟು ಅವರ ಪಡೆದ ಅಂಕಗಳಷ್ಟೇ ಸಿಗಲಿವೆ. ಮೆಡಿಕಲ್ ಕೌನ್ಸಿಲಿಂಗ್ ಕಮಿಟಿ ಸದ್ಯದಲ್ಲೇ ಈ 1563 ಮಂದಿಗೆ ವೈದ್ಯಕೀಯ ಶಿಕ್ಷಣ ಪ್ರವೇಶದ ಕೌನ್ಸೆಲಿಂಗ್ ಆರಂಭಿಸಲಿದೆ.

ಮರು ಪರೀಕ್ಷೆ

ಕೃಪಾಂಕ ರದ್ದಾದ 1563 ವಿದ್ಯಾರ್ಥಿಗಳಲ್ಲಿ ಚಂಡಿಗಢದ ಇಬ್ಬರು ಮರು ಪರೀಕ್ಷೆಗೆ ಹಾಜರಾಗಲಿಲ್ಲ. ಛತ್ತೀಸ್‌ಗಢದ 602 ವಿದ್ಯಾರ್ಥಿಗಳಲ್ಲಿ 291 ಮಂದಿ, ಹರಿಯಾಣದ 494 ಅಭ್ಯರ್ಥಿಗಳಲ್ಲಿ 287 ಮಂದಿ, ಮೇಘಾಲಯದ ಟುರಾ ಪರೀಕ್ಷಾ ಕೇಂದ್ರದಿಂದ 234 ಅಭ್ಯರ್ಥಿಗಳು ಹಾಗೂ ಗುಜರಾತ್‌ನ ಒಬ್ಬ ಮಾತ್ರ ಮರು ಪರೀಕ್ಷೆಗೆ ಹಾಜರಾಗಿದ್ದರು.

10 ಲಕ್ಷ ರು. ದಂಡ ವಿಧಿಸಿದ ದೆಹಲಿ ಕೋರ್ಟ್

ಮಾನಹಾನಿ ಪ್ರಕರಣ: ಮೇಧಾ ಪಾಟ್ಕರ್‌ಗೆ 5 ತಿಂಗಳು ಜೈಲು

ದೆಹಲಿ: ಮಾನಹಾನಿ ಪ್ರಕರಣದಲ್ಲಿ ಆರೋಪಿ ಯಾಗಿದ್ದ ನರ್ಮದಾ ಬಚಾವೋ ಆಂದೋಲನ ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರಿಗೆ 5 ತಿಂಗಳ ಜೈಲು ಶಿಕ್ಷೆ ಹಾಗೂ 10 ಲಕ್ಷ ರು. ದಂಡ ವಿಧಿಸಿ ದೆಹಲಿ ನ್ಯಾಯಾಲಯ ಸೋಮವಾರ ತೀರ್ಪು ನೀಡಿದೆ.

ನ್ಯಾಷನಲ್ ಕೌನ್ಸಿಲ್ ಆಫ್ ಸಿವಿಲ್ ಲಿಬರ್ಟಿಸ್(ಎನ್‌ಸಿಸಿಎಲ್) ಸಂಸ್ಥೆ ಮಾಜಿ ಅಧ್ಯಕ್ಷ, ಸದ್ಯ ದೆಹಲಿ ಲೆ.ಗರ್ವನರ್ ಆಗಿರುವ ವಿ.ಕೆ.ಸಕ್ಸೇನಾ ಅವರು 23 ವರ್ಷಗಳ ಹಿಂದೆ ಮೇಧಾ ಫಾಟ್ಕರ್ ವಿರುದ್ಧ ಮಾನಹಾನಿ ಪ್ರಕರಣ ದಾಖಲಿಸಿದ್ದರು. ಪ್ರಕರಣದಲ್ಲಿ ಮೇಧಾ ಪಾಟ್ಕರ್ ಅಪರಾಧಿ ಎಂದು ಘೋಷಿಸಿದ ದೆಹಲಿ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ರಾಘವ್ ಶರ್ಮಾ, ವಿ.ಕೆ. ಸಕ್ಸೇನಾ ಅವರಿಗೆ 10 ಲಕ್ಷ ಪರಿಹಾರ ನೀಡುವಂತೆ ಸೂಚಿಸಿದ್ದಾರೆ. ಜೈಲು ಶಿಕ್ಷೆಯನ್ನು ಸಿಆರ್‌ಪಿಸಿ ಸೆಕ್ಷನ್ 389(3)ರಡಿ ಆ.1ರವರೆಗೆ ತಡೆಹಿಡಿಯಲಾಗಿದ್ದು, ತೀರ್ಪಿನ ವಿರುದ್ಧ ಮೇಲ್ಮನವಿಗೆ ಅವಕಾಶ ನೀಡಲಾಗಿದೆ. 'ಆರೋಪ ಸಾಬೀತಾಗಿದ್ದು, ಸೆಕ್ಷನ್ 500ರಡಿ ಶಿಕ್ಷಾರ್ಹ ಅಪರಾಧವಾಗಿದೆ' ಎಂದು ಮೇ 24ರಂದೇ ನ್ಯಾಯಾಲಯ ಹೇಳಿತ್ತು.

'ದೇಶಾಭಿಮಾನಿಯ ನಿಜ ಬಣ್ಣ' ಹೆಸರಲ್ಲಿ ತಮ್ಮ ವಿರುದ್ಧ ಪಾಟ್ಕರ್ 2001ರಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿ ಮಾನಹಾನಿ ಮಾಡಿದ್ದಾರೆ ಎಂದು ಆರೋಪಿಸಿ ಸಕ್ಸೇನಾ ಪ್ರಕರಣ ದಾಖಲಿಸಿದ್ದರು. 'ಸತ್ಯವನ್ನು ಸೋಲಿಸಲಾಗದು. ಯಾರ ಮಾನಹಾನಿಗೂ ನಾನು ಯತ್ನಿಸಿಲ್ಲ. ನನ್ನ ಕೆಲಸವನ್ನಷ್ಟೇ ಮಾಡಿದ್ದೇನೆ. ಕೋರ್ಟ್ ತೀರ್ಪನ್ನು ಪ್ರಶ್ನಿಸುತ್ತೇನೆ' ಎಂದು ಮೇಧಾ ಪಾಟ್ಕರ್ ತೀರ್ಪಿಗೆ ಪ್ರತಿಕ್ರಿಯಿಸಿದ್ದಾರೆ.

ಅಲ್ಪಸಂಖ್ಯಾತರ ಪ್ರಸ್ತಾಪಿಸದ ರಾಷ್ಟ್ರಪತಿ ಭಾಷಣ: ಖರ್ಗೆ

ದೆಹಲಿ: ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿದ ರಾಷ್ಟ್ರಪತಿಗಳ ಭಾಷಣದಲ್ಲಿ ಯಾವುದೇ ದೂರದೃಷ್ಟಿ ಮತ್ತು ಸ್ಪಷ್ಟ ನಿರ್ದೇಶನವೇ ಇರಲಿಲ್ಲ. ಬಡವರು, ದಲಿತರು, ಅಲ್ಪಸಂಖ್ಯಾತರ ಪ್ರಸ್ತಾಪವೇ ಇರಲಿಲ್ಲ ಎಂದು ರಾಜ್ಯಸಭೆಯಲ್ಲಿನ ಪ್ರತಿಪಕ್ಷ ನಾಯಕ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ರಾಜ್ಯಸಭೆಯಲ್ಲಿ ಸೋಮವಾರ ರಾಷ್ಟ್ರಪತಿ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಉತ್ತರಿಸಿದ ಖರ್ಗೆ, ರಾಷ್ಟ್ರಪತಿಗಳು ತಮ್ಮ ಭಾಷಣದಲ್ಲಿ ಸರಕಾರದ ವೈಫಲ್ಯಗಳನ್ನು ಅಡಗಿಸಲು ಯತ್ನಿಸಿದ್ದಾರೆ. ಭಾಷಣ ನಿರಾಶಾದಾಯಕವಾಗಿತ್ತು ಎಂದು ಹೇಳಿದ್ದಾರೆ. ಆಡಳಿತ ಪಕ್ಷದ ಮೇಲೂ ವಾಗ್ದಾಳಿ ನಡೆಸಿದ ಖರ್ಗೆ, ಬಿಜೆಪಿ ನೇತೃತ್ವದ ಎನ್‌ಡಿಎ ದೇಶಕ್ಕೆ ಕೇವಲ ಘೋಷಣೆಗಳನ್ನು ಕೊಟ್ಟಿದೆಯೇ ಹೊರತು ಅಭಿವೃದ್ಧಿಯನ್ನಲ್ಲ ಎಂದು ಟೀಕಿಸಿದರು. ಪ್ರಧಾನಿ ನರೇಂದ್ರ ಮೋದಿ ಗುರಿಯಾಗಿಸಿ ಟೀಕಿಸಿದ ಖರ್ಗೆ, ಪ್ರತಿಪಕ್ಷಗಳವರು ಜನರ ಕಷ್ಟಗಳ ಬಗ್ಗೆ ಮಾತನಾಡುತ್ತಾರೆ. ಆದರೆ ಮೋದಿ ಮನ್ ಕಿ ಬಾತ್ ಮಾತ್ರ ನಡೆಸುತ್ತಾರೆ. ವರ್ಷದಿಂದ ಹೊತ್ತಿ ಉರಿಯುತ್ತಿರುವ ಮಣಿಪುರಕ್ಕೆ ಮೋದಿ ಒಮ್ಮೆಯೂ ಭೇಟಿ ನೀಡಿಲ್ಲ. ಘೋಷಣೆಗಳಿಗಷ್ಟೇ ಪ್ರಧಾನಿ ಸೀಮಿತ. ಮಾತಿನಲ್ಲೇ ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದಾರೆ ಎಂದು ಟೀಕಿಸಿದರು. ನೀಟ್ ಅಕ್ರಮದಿಂದ ವಿದ್ಯಾರ್ಥಿಗಳಿಗೆ ಘೋರ ಅನ್ಯಾಯವಾಗಿದೆ. 7 ವರ್ಷದಲ್ಲಿ 70 ಪ್ರಶ್ನೆಪತ್ರಿಕೆ ಸೋರಿಕೆಯಾಗಿವೆ. 2 ಕೋಟಿ ಭಾರತೀಯ ಯುವಕರ ಭವಿಷ್ಯ ಅಸ್ಥಿರಗೊಂಡಿದೆ ಎಂದು ಖರ್ಗೆ ವಾಗ್ದಾಳಿ ನಡೆಸಿದರು.

13 ಮಂದಿಗೆ ಗಾಯ, ಮನೆಗಳಿಗೂ ಹಾನಿ

ಮಥುರಾ: ನೀರಿನ ಬೃಹತ್ ಟ್ಯಾಂಕ್ ಕುಸಿದು 2 ಸಾವು

ಮಥುರಾ: ಉತ್ತರ ಪ್ರದೇಶದ ಮಥುರಾ ನಗರದ ಕೃಷ್ಣವಿಹಾರ ಕಾಲೋನಿಯಲ್ಲಿ 2021ರಲ್ಲಿ 6 ಕೋಟಿ ರು. ವೆಚ್ಚದಲ್ಲಿ ಗಂಗಾಜಲ ಕುಡಿಯುವ ನೀರಿನ ಯೋಜನೆಯಡಿ ರಾಜ್ಯ ಜಲನಿಗಮ ನಿರ್ಮಿಸಿದ್ದ ಬೃಹತ್ ಟ್ಯಾಂಕ್ ಭಾನುವಾರ ಕುಸಿದು ಬಿದ್ದಿದ್ದು, ಇಬ್ಬರು ಮಹಿಳೆಯರು ಸಾವನ್ನಪ್ಪಿದ್ದಾರೆ. 13 ಮಂದಿ ಗಾಯಗೊಂಡಿದ್ದಾರೆ.

ಮಾಹಿತಿ ತಿಳಿದ ಅಗ್ನಿಶಾಮಕ ದಳ, ಪೊಲೀಸ್ ಸಿಬ್ಬಂದಿ, ಪಾಲಿಕೆ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿದ್ದಾರೆ. ಗಾಯಾಳುಗಳನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದೆ. ಟ್ಯಾಂಕ್ ಅವಶೇಷಗಳಡಿಯಿಂದ ಮಹಿಳೆಯರಿಬ್ಬರ ಮೃತದೇಹ ಹೊರತೆಗೆಯಲಾಗಿದೆ. 2.5 ಲಕ್ಷ ಲೀ. ಸಾಮರ್ಥ್ಯದ ಬೃಹತ್ ಟ್ಯಾಂಕ್ ಕುಸಿದಿದ್ದರಿಂದ ಸುತ್ತಮುತ್ತಲ ಮನೆಗಳಿಗೂ ಹಾನಿಯಾಗಿದೆ.

ವಸತಿ ಪ್ರದೇಶದಲ್ಲಿದ್ದ ಬೃಹತ್ ನೀರಿನ ಟ್ಯಾಂಕ್ ಧಾರಾಕಾರ ಮಳೆಯ ಕಾರಣ ಕುಸಿದು ಬಿದ್ದಿದೆ. ಕಳಪೆ ಕಾಮಗಾರಿ ಆರೋಪವೂ ಕೇಳಿಬಂದಿದೆ. ಕಾಮಗಾರಿ ಗುಣಮಟ್ಟ ಬಗ್ಗೆ ತನಿಖೆ ಕೈಗೊಳ್ಳಲಾಗುವುದು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಯೋಗೇಂದ್ರ ಪಾಂಡೆ ಭರವಸೆ ನೀಡಿದ್ದಾರೆ.

ದೆಹಲಿ: 2 ದಿನದ ಭಾರತ ಎಐ ಜಾಗತಿಕ ಶೃಂಗಸಭೆ

ದೆಹಲಿ: ಕೃತಕ ಬುದ್ಧಿಮತ್ತೆಯ ಸವಾಲುಗಳು-ಪ್ರಯೋಜನಗಳ ಬಗ್ಗೆ ಚರ್ಚಿಸುವ ಸಲುವಾಗಿ 'ಭಾರತ ಜಾಗತಿಕ ಮಟ್ಟದ ಕೃತಕ ಬುದ್ಧಿಮತ್ತೆ ಶೃಂಗಸಭೆ'ಯನ್ನು ದೆಹಲಿಯಲ್ಲಿ ಆಯೋಜಿಸಿದ್ದು, ಜು.3ರಿಂದ 4ರವರೆಗೆ ನಡೆಯಲಿದೆ.

ಕೇಂದ್ರ ಸರಕಾರದ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ ಆಯೋಜಿಸಿರುವ 'ಗ್ಲೋಬಲ್ ಇಂಡಿಯ ಎಐ ಶೃಂಗಸಭೆ' ಕೃತಕ ಬುದ್ಧಿಮತ್ತೆ ಕ್ಷೇತ್ರದ ನಿಪುಣರ-ತಜ್ಞರ ಸಮಾಗಮಕ್ಕೆ ಹಾಗೂ ಜ್ಞಾನ ವಿನಿಮಯಕ್ಕೆ ವೇದಿಕೆಯಾಗಲಿದೆ. ಈ ಕಾರ್ಯಕ್ರಮ ನೈತಿಕ ಮತ್ತು ಅಂತರ್ಗತ ಕೃತಕ ಬುದ್ಧಿಮತ್ತೆ ಅಭಿವೃದ್ಧಿಯಲ್ಲಿ ಭಾರತದ ಬದ್ಧತೆಯನ್ನು ಎತ್ತಿ ಹಿಡಿಯಲಿದೆ. ವಿಜ್ಞಾನ ಕ್ಷೇತ್ರ, ಕೈಗಾರಿಕೆಗಳು, ಸರಕಾರ, ಅಂತಾರಾಷ್ಟ್ರೀಯ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಸೇರಿ ಹಲವು ವಲಯದ ತಜ್ಞರು ಮಾಹಿತಿ ಮತ್ತು ಎಐ ಸವಾಲಿನ ಬಗ್ಗೆ ಮಾಹಿತಿ ಹಂಚಿಕೊಳ್ಳಲಿದ್ದಾರೆ. ಆ ಮೂಲಕ ಸುರಕ್ಷಿತ ತಂತ್ರಜ್ಞಾನ ಅಳವಡಿಕೆಯಲ್ಲಿ ಮತ್ತು ಎಐ ಆವಿಷ್ಕಾರದಲ್ಲಿ ಜಾಗತಿಕ ನಾಯಕನಾಗಿ ಭಾರತ ತನ್ನ ಸ್ಥಾನ ಭದ್ರಪಡಿಸಿಕೊಳ್ಳಲಿದೆ. ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ರಾಜ್ಯ ಖಾತೆ ಸಚಿವ ಜಿತಿನ್ ಪ್ರಸಾದ್ ಭಾಗಿಯಾಗಲಿದ್ದಾರೆ.

ರಾಹುಲ್ ವಿರುದ್ಧ ಕ್ರಮಕ್ಕೆ ಸ್ಪೀಕರ್‌ಗೆ ಬಿಜೆಪಿ ಆಗ್ರಹ

ದೆಹಲಿ: ಪ್ರತಿಪಕ್ಷ ನಾಯಕ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ದೇಶದ ಇಡೀ ಹಿಂದೂ ಸಮುದಾಯದ ವಿರುದ್ಧ ಲೋಕಸಭೆಯಲ್ಲಿ ಅವಮಾನಕರ ರೀತಿಯಲ್ಲಿ ಮಾತನಾಡಿದ್ದು, ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿರುವ ಬಿಜೆಪಿ, ಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಸೋಮವಾರ ಲಿಖಿತ ದೂರು ನೀಡಿದೆ.

ರಾಹುಲ್ ಪ್ರತಿಪಕ್ಷ ನಾಯಕನ ಸ್ಥಾನಕ್ಕೆ ಕಳಂಕ ತಂದಿದ್ದಾರೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹಾಗೂ ಕಿರಣ್ ರಿಜಿಜು ಟೀಕಿಸಿದ್ದಾರೆ. ಹಿಂದೂಗಳನ್ನು ಹಿಂಸಾಚಾರ ನಡೆಸುವವರು, ದ್ವೇಷ ಹರಡುವವರು, ಹೆಚ್ಚು ಸುಳ್ಳು ಹೇಳುವವರು ಎಂದು ಹೇಳುವ ಹಿಂದೂ ಸಮಾಜಕ್ಕೆ ಅವಮಾನ ಮಾಡಿದ್ದಾರೆ. ಅಯೋಧ್ಯೆಯಲ್ಲಿನ ಅಭಿವೃದ್ಧಿ ಯೋಜನೆಗಳಿಗಾಗಿ ಭೂಮಿ ಕಳೆದುಕೊಂಡವರಿಗೆ ಪರಿಹಾರ ನೀಡುವ ವಿಚಾರ ಮತ್ತು ಅಗ್ನಿಪಥ್ ಯೋಜನೆ ವಿಷಯವಾಗಿ ರಾಹುಲ್ ಗಾಂಧಿ ಸುಳ್ಳು ಹೇಳಿದ್ದಾರೆ. ಅಯೋಧ್ಯೆ ವ್ಯಾಪಾರಿಗಳಿಗೆ 1,253 ಕೋಟಿ ರು. ಪರಿಹಾರ ನೀಡಿ, ಪುನರ್ವಸತಿಯನ್ನೂ ಕಲ್ಪಿಸಿಕೊಡಲಾಗಿದೆ ಎಂದು ಹೇಳಿದ ಸಚಿವ ಅಶ್ವಿನಿ ವೈಷ್ಣವ್, ರಾಹುಲ್ ಆರೋಪ ರುಜುವಾತು ಮಾಡಬೇಕು, ಇಲ್ಲವೇ ಕ್ಷಮೆ ಕೋರಬೇಕು ಎಂದು ಆಗ್ರಹಿಸಿದ್ದಾರೆ.

ಮೈಕ್ ಸ್ವಿಚ್ ಆಫ್: ಪ್ರತಿಪಕ್ಷ ಆರೋಪಕ್ಕೆ ಓಂ ಬಿರ್ಲಾ ಕಿಡಿ

ದೆಹಲಿ: ಲೋಕಸಭೆಯಲ್ಲಿ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಮಾತನಾಡುವಾಗ ಮೈಕ್ ಸ್ವಿಚ್ ಆಫ್ ಆಗಿದೆ ಎಂದು ಕಾಂಗ್ರೆಸ್ ಆರೋಪಿಸುತ್ತಿರುವುದಕ್ಕೆ ಖಾರವಾಗಿ ಪ್ರತಿಕ್ರಿಯಿಸಿರುವ ಸ್ಪೀಕರ್ ಓಂ ಬಿರ್ಲಾ, ಸದಸ್ಯರ ಮೈಕ್ ಸ್ಥಗಿತಗೊಳಿಸಲು ಸಭಾಧ್ಯಕ್ಷರ ಆಸನದ ಬಳಿ ಯಾವುದೇ ಸ್ವಿಚ್, ರಿಮೋಟ್ ಕಂಟ್ರೋಲ್ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸದನದಲ್ಲಿ ಸಮಸ್ಯೆಗಳನ್ನು ಪ್ರಸ್ತಾಪಿಸುವ ಪ್ರತಿಪಕ್ಷ ಸದಸ್ಯರ ಮೈಕ್‌ಗಳನ್ನು ಸ್ವಿಚ್ ಆಫ್ ಮಾಡಲಾಗುತ್ತದೆ ಎಂದು ಕಾಂಗ್ರೆಸ್ ಸಂಸದರಾದ ಗೌರವ್ ಗೊಗೊಯ್ ಮತ್ತು ದೀಪೇಂ ದರ್ ಹೂಡಾ ಆರೋಪಿಸಿದ್ದರು. ಇಂಥ ಆರೋಪ ಕಳವಳಕಾರಿ ಎಂದಿರುವ ಸ್ಪೀಕರ್ ಓಂ ಬಿರ್ಲಾ, ಈ ವಿಷಯವನ್ನು ಸದನದಲ್ಲಿ ಚರ್ಚಿಸಬೇಕಿದೆ ಎಂದು ಹೇಳಿದ್ದಾರೆ. ಸದನದಲ್ಲಿ ಯಾರ ಹೆಸರನ್ನು ಕರೆಯಲಾಗುತ್ತದೆಯೋ ಆ ಸದಸ್ಯರಿಗೆ ಮಾತನಾಡಲು ಅವಕಾಶ ಸಿಗುತ್ತದೆ. ಅಧ್ಯಕ್ಷರ ಸೂಚನೆಯಂತೆ ನಿಯಂತ್ರಣ ಕೊಠಡಿಯಿಂದ ಮೈಕ್ ನಿಯಂತ್ರಿಸಲಾಗುತ್ತದೆ. ಸಭಾಧ್ಯಕ್ಷರ ಪೀಠದ ಬಳಿಕ ಯಾವುದೇ ರಿಮೋಟ್ ಕಂಟ್ರೋಲ್ ಇಲ್ಲ ಎಂದು ಓಂ ಬಿರ್ಲಾ ಸ್ಪಷ್ಟಪಡಿಸಿದ್ದಾರೆ. ಸಭಾಧ್ಯಕ್ಷರ ವಿರುದ್ಧವೇ ಇಂಥ ಆರೋಪ ಮಾಡುವುದು ಸರಿಯಲ್ಲ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಕತಾರ್ ಪ್ರಧಾನಿ ಜತೆಗೆ ಸಚಿವ ಜೈಶಂಕರ್ ಚರ್ಚೆ

ದೋಹಾ: ಕತಾರ್ ಪ್ರಧಾನಿ ಮೊಹಮ್ಮದ್ ಬಿನ್ ಅಬ್ದುಲ್ ರಹ್ಮಾನ್ ಬಿನ್ ಜಸ್ಸಿಮ್ ಅಲ್ ಥಾನಿ ಅವರನ್ನು ದೋಹಾದಲ್ಲಿ ಸೋಮವಾರ ಭೇಟಿ ಮಾಡಿದ ವಿದೇಶಾಂಗ ಸಚಿವ ಎಸ್ ಜೈಶಂಕರ್, ದ್ವಿಪಕ್ಷೀಯ ಸಂಬಂಧ ವೃದ್ಧಿ ಕುರಿತು ಚರ್ಚಿಸಿದರು.

2022ರ ಆಗಸ್ಟ್‌ನಲ್ಲಿ ಮರಣದಂಡನೆಗೆ ಗುರಿಯಾಗಿದ್ದ ಭಾರತೀಯ ನೌಕಾಪಡೆಯ 8 ಮಾಜಿ ಸಿಬ್ಬಂದಿಗಳನ್ನು ಕತಾರ್ ಬಿಡುಗಡೆ ಮಾಡಿದ ನಾಲ್ಕೂವರೆ ತಿಂಗಳ ನಂತರ ಸಚಿವ ಜೈಶಂಕರ್ ಅವರು ಕತಾರ್‌ಗೆ ಭೇಟಿ ನೀಡಿರುವುದು ಉಲ್ಲೇಖಾರ್ಹ. ಭಾರತ-ಕತಾರ್ ನಡುವೆ ವ್ಯಾಪಾರ, ಹೂಡಿಕೆ, ಇಂಧನ, ತಂತ್ರಜ್ಞಾನ, ಸಂಸ್ಕೃತಿ ಮತ್ತು ಜನರ ನಡುವಿನ ಸಂಬಂಧಗಳ ಸುಧಾರಣೆ ಕುರಿತು ಇಬ್ಬರೂ ನಾಯಕರು ದೀರ್ಘ ಚರ್ಚೆ ನಡೆಸಿದರು. ಶೇಖ್ ಮೊಹಮ್ಮದ್ ಅವರೊಂದಿಗೆ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಬಗ್ಗೆ ಜೈಶಂಕರ್ ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಗಾಜಾ ಪರಿಸ್ಥಿತಿ ಕುರಿತಂತೆ ಚರ್ಚೆ ನಡೆಸಿದರು.

ಸಮಾಚಾರ ಸಣ್ಣದಲ್ಲ

ಕುಸ್ತಿ: ದಾಖಲೆ ಬರೆದ ಕರ್ನಾಟಕ

ಬೆಂಗಳೂರು: ದಕ್ಷಿಣ ಭಾರತದ ಅಂಡರ್-23 ಕುಸ್ತಿ ಚಾಂಪಿಯನ್‌ಶಿಪ್ ಮತ್ತು 1ನೇ ದಕ್ಷಿಣ ಭಾರತ ಸಂಪ್ರದಾಯಿಕ ಹಿರಿಯ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕ ಕುಸ್ತಿ ಪಟುಗಳು ಇತಿಹಾಸ ನಿರ್ಮಿಸಿದ್ದಾರೆ. ತಮಿಳುನಾನಲ್ಲಿ ನಡೆದ ಎರಡು ಪ್ರತಿಷ್ಠಿತ ಕಾರ್ಯಕ್ರಮಗಳಲ್ಲಿ ಕರ್ನಾಟಕದ ಕುಸ್ತಿ ಪಟುಗಳು ಭರ್ಜರಿ ಗೆಲುವು ಸಾಧಿಸಿದ್ದಾರೆ. ಒಟ್ಟು 29 ಮಂದಿ ಕರ್ನಾಟಕದ ಕುಸ್ತಿಪಟುಗಳು ಅಂಡರ್-23 ದಕ್ಷಿಣ ಭಾರತ ಕುಸ್ತಿ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಿದರು. ಅದರಲ್ಲಿ 18 ಚಿನ್ನದ ಪದಕಗಳು ಮತ್ತು 2 ಕಂಚಿನ ಪದಕಗಳನ್ನು ಗೆದ್ದಿದ್ದು, ದಾಖಲೆ ಬರೆದಿದೆ. ಈ ವಿಶೇಷ ಸಾಧನೆ ಕರ್ನಾಟಕಕ್ಕೆ ಮತ್ತು ಕುಸ್ತಿ ಸಮುದಾಯಕ್ಕೆ ಮಹಾ ಹೆಮ್ಮೆಯನ್ನು ತಂದಿದೆ. ಒಟ್ಟಾಗಿ, ಕರ್ನಾಟಕದ ಕುಸ್ತಿ ತಂಡವು ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಎರಡೂ ವಿಭಾಗಗಳಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದು ವಿಶೇಷವಾಗಿದೆ.

ಶ್ರೀಲಂಕಾ ಸರಣಿಗೆ ನೂತನ ಕೋಚ್

ಬಾರ್ಬೋಡಾಸ್: ತಿಂಗಳ ಕೊನೆಯಲ್ಲಿ ಶ್ರೀಲಂಕಾದಲ್ಲಿ ಪ್ರಾರಂಭವಾಗುವ ಸರಣಿಯಲ್ಲಿ ಭಾರತ ಕ್ರಿಕೆಟ್ ತಂಡಕ್ಕೆ ನೂತನ ಮುಖ್ಯ ಕೋಚ್ ನೇಮಕಗೊಳ್ಳಲಿದ್ದಾರೆ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದಾರೆ. ಮಾಜಿ ಆರಂಭಿಕ ಆಟಗಾರ ಗೌತಮ್ ಗಂಭೀರ್ ಅವರು ದ್ರಾವಿಡ್ ನಂತರ ಮುಖ್ಯ ಕೋಚ್ ಆಗುವ ನಿರೀಕ್ಷೆಯಿದ್ದು, ಕ್ರಿಕೆಟ್ ಸಲಹಾ ಸಮಿತಿಯು ಗಂಭೀರ್ ಅವರನ್ನುಸಂದರ್ಶನ ಮಾಡಿದೆ ಎಂದು ವರದಿಯಾಗಿವೆ. ಕೋಚ್ ಮತ್ತು ಆಯ್ಕೆದಾರ ಇಬ್ಬರನ್ನೂ ಶೀಘ್ರದಲ್ಲೇ ನೇಮಕ ಮಾಡಲಾಗುವುದು. ಸಿಎಸಿ ಇಬ್ಬರನ್ನು ಸಂದರ್ಶಿಸಿದೆ. ಮುಂಬೈ ತಲುಪಿದ ನಂತರ ಅವರು ಏನು ನಿರ್ಧರಿಸುತ್ತಾರೋ ಅದನ್ನು ಪಾಲಿಸುತ್ತೇವೆ. ವಿವಿಎಸ್ ಲಕ್ಷ್ಮಣ್ ಜಿಂಬಾಬ್ವೆಗೆ ತೆರಳುತ್ತಿದ್ದಾರೆ. ಆದರೆ, ಹೊಸ ಕೋಚ್ ಶ್ರೀಲಂಕಾ ಸರಣಿಯಿಂದ ಸೇರಲಿದ್ದಾರೆ' ಎಂದು ಶಾ ಮಾಧ್ಯಮಗಳಿಗೆ ತಿಳಿಸಿದರು. ಜುಲೈ 27ರಿಂದ ಆರಂಭವಾಗಲಿರುವ ಶ್ರೀಲಂಕಾ ಪ್ರವಾಸದಲ್ಲಿ ಭಾರತ ತಂಡ ಮೂರು ಟಿ20 ಹಾಗೂ ಮೂರು ಏಕದಿನ ಪಂದ್ಯಗಳನ್ನಾಡಲಿದೆ.

ಪ್ಯಾರಿಸ್‌ಗೆ ಭಾರತದ ಕ್ರೀಡಾಪಟುಗಳು

ದೆಹಲಿ: ಜುಲೈ 26 ರಿಂದ ಆರಂಭಗೊಳ್ಳಲಿರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ತೆರಳುವ ಕ್ರೀಡಾಪಟುಗಳಿಗೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿದ್ದು, ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಅವರು ಮುಂಬರುವ ಪಂದ್ಯಾವಳಿಯಲ್ಲಿ ಭಾರತ ತಂಡವು ಹೊಸ ಮಾನದಂಡವನ್ನು ಸ್ಥಾಪಿಸಲಿದೆ ಎಂದು ಭರವಸೆ ವ್ಯಕ್ತಪಡಿಸಿದ್ದಾರೆ. ಪ್ಯಾರಿಸ್‌ಗೆ ತೆರಳುವ ಅಥ್ಲೀಟ್‌ಗಳ ಔಪಚಾರಿಕ ಬೀಳ್ಕೊಡುಗೆ ಹಾಗೂ ಕಿಟ್ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಮಾಂಡವಿಯಾ, ಈ ತಂಡವು ಕ್ರೀಡೆಯಲ್ಲಿ ಭಾರತದ ಕೀರ್ತಿಯನ್ನು ಹೆಚ್ಚಿಸುತ್ತದೆ ಎಂಬ ವಿಶ್ವಾಸವಿದೆ. ಟೋಕಿಯೊದಲ್ಲಿ ನಾವು ಏಳು ಪದಕಗಳನ್ನು ಗೆದ್ದಿದ್ದೇವೆ, 2016 ರಿಯೊದಲ್ಲಿ ಎರಡು ಪದಕಗಳನ್ನು ಗೆದ್ದಿದ್ದೇವೆ. ನಮ್ಮ ಕ್ರೀಡಾಪಟುಗಳು ಈ ಬಾರಿ ಪದಕ ಪಟ್ಟಿಯಲ್ಲಿ ನಮ್ಮನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುತ್ತಾರೆ ಎಂದಿದ್ದಾರೆ. ಇದೇ ವೇಳೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ತೆರಳಲಿರುವ ತಂಡಕ್ಕೆ ಮೂರು ಕಿಟ್‌ಗಳನ್ನು (ಔಪಚಾರಿಕ ಉಡುಪು, ಕ್ರೀಡಾ ಉಡುಪು ಮತ್ತು ಪ್ರಯಾಣದ ಉಡುಪು) ಅನಾವರಣಗೊಳಿಸಲಾಯಿತು.

ದಿನೇಶ್ ಕಾರ್ತಿಕ್ ಆರ್‌ಸಿಬಿ ಮೆಂಟರ್

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮಾಜಿ ಫಿನಿಷರ್ ದಿನೇಶ್ ಕಾರ್ತಿಕ್, ಐಪಿಎಲ್‌ಗೆ ವಿದಾಯ ಹೇಳಿದ್ದು, 2025ರಲ್ಲಿ ಆರ್‌ಸಿಬಿ ತಂಡದ ಮೆಂಟರ್ ಹಾಗೂ ಬ್ಯಾಟಿಂಗ್ ಕೋಚ್ ಆಗಿ ನೇಮಕಗೊಂಡಿದ್ದಾರೆ ಎಂದು ವರದಿಯಾಗಿದೆ. 2024ರ ಐಪಿಎಲ್ ಟೂರ್ನಿಯಲ್ಲಿ ಆರ್‌ಸಿಬಿ ತಂಡವು ರೋಚಕ ಗೆಲುವು ಸಾಧಿಸಿ ಪ್ಲೇಆಫ್‌ಗೆ ಅರ್ಹತೆ ಪಡೆದಿತ್ತು. ಆದರೆ ಈ ಹಂತದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ ಸೋಲು ಕಂಡು ಫೈನಲ್ ತಪ್ಪಿಸಿಕೊಂಡ ನಂತರ ದಿನೇಶ್ ಕಾರ್ತಿಕ್ ಎಲ್ಲಾ ಮಾದರಿಯ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದರು.



ಸ್ವಾಗತಿಸಿದ ಆರ್‌ಸಿಬಿ: ಕಳೆದ ಆವೃತ್ತಿಯಲ್ಲಿ ಆಡಿದ 15 ಪಂದ್ಯಗಳಿಂದ ದಿನೇಶ್ ಕಾರ್ತಿಕ್ 187.35 ಸ್ಟ್ರೈಕ್‌ರೇಟ್‌ನಲ್ಲಿ 2 ಅರ್ಧಶತಕಗಳ ನೆರವಿನಿಂದ 326 ರನ್ ಗಳಿಸಿದ್ದು, 83 ರನ್ ಗರಿಷ್ಠ ಸ್ಕೋರ್ ಆಗಿತ್ತು. 'ನಮ್ಮ ನಲ್ಮೆಯ ವಿಕೆಟ್ ಕೀಪರ್ ಅನ್ನು ಮತ್ತೆ ತಂಡಕ್ಕೆ ಸ್ವಾಗತಿಸುತ್ತಿದ್ದೇವೆ. ಅವರು ತಂಡದ ಮೆಂಟರ್, ಬ್ಯಾಟಿಂಗ್ ಕೋಚ್ ಆಗಿ ಹೊಸ ಅವತಾರದಲ್ಲಿ ತಂಡಕ್ಕೆ ಸೇವೆ ನೀಡಲಿದ್ದಾರೆ. ಒಬ್ಬ ವ್ಯಕ್ತಿ ಕ್ರಿಕೆಟಿನಿಂದ ದೂರ ಆಗಬಹುದು, ಆದರೆ ಆತನಿಂದ ಕ್ರಿಕೆಟ್ ಎಂದಿಗೂ ದೂರವಾಗಲಾರದು ಎಂದು ಆರ್‌ಸಿಬಿ ತಮ್ಮ ಎಕ್ಸ್‌ನಲ್ಲಿ ಬರೆದುಕೊಂಡಿದೆ.

ಇತಿಹಾಸ ಬರೆದ ಸ್ನೇಹ್ ರಾಣಾ

10 ಭಾರತಕ್ಕೆ ದಾಖಲೆಯ 10 ವಿಕೆಟ್ ಗೆಲುವು

603 ಮಹಿಳಾ ಕ್ರಿಕೆಟ್‌ನಲ್ಲಿ ಗರಿಷ್ಠ ಸ್ಕೋರ್

ವನಿತೆಯರಿಗೆ ದಾಖಲೆಯ ಗೆಲುವು

ಏಕದಿನದ ಬಳಿಕ ಟೆಸ್ಟ್‌ನಲ್ಲೂ ಸೋತ ದಕ್ಷಿಣ ಆಫ್ರಿಕಾ | ದಾಖಲೆ ಬರೆದ ರಾಣಾ

ಸ್ನೇಹ್ ರಾಣಾ ದಾಖಲೆ

ಭಾರತ ಹಾಗೂ ದ.ಆಫ್ರಿಕಾ ನಡುವಣ ಏಕೈಕ ಟೆಸ್ಟ್ ಪಂದ್ಯದಲ್ಲಿ 10 ವಿಕೆಟ್ ಕಿತ್ತ ಭಾರತದ ಸ್ನೇಹ್ ರಾಣಾ ದಾಖಲೆ ಬರೆದಿದ್ದಾರೆ. ಮೊದಲ ಇನ್ನಿಂಗ್ಸ್‌ನಲ್ಲಿ 8 ಪಡೆದ ಅವರು ಎರಡನೇ ಇನ್ನಿಂಗ್ಸ್‌ನಲ್ಲಿ 2 ವಿಕೆಟ್ ಪಡೆದಿದ್ದಾರೆ. ಆ ಮೂಲಕ ಪಂದ್ಯವೊಂದರಲ್ಲಿ 10 ವಿಕೆಟ್ ಕಿತ್ತ ಎರಡನೇ ಭಾರತದ ಬೌಲರ್ ಆಗಿದ್ದಾರೆ. ಅಲ್ಲದೇ ಒಂದೇ ಇನ್ನಿಂಗ್ಸ್‌ನಲ್ಲಿ 8 ವಿಕೆಟ್ ಪಡೆದು ವಿಶ್ವದಾಖಲೆ ಬರೆದ ಅವರು, ನಿತು, ಹಾಗೂ ಗಾರ್ಡನರ್ ಅವರ ದಾಖಲೆ ಸರಿಗಟ್ಟಿದ್ದಾರೆ.

ಚೆನ್ನೈ: ಶೆಫಾಲಿ ವರ್ಮಾ, ಸ್ಮೃತಿ ಮಂದಾನ ಅವರ ಬ್ಯಾಟಿಂಗ್ ಹಾಗೂ ಸ್ನೇಹ್ ರಾಣಾ ಅವರ 10 ವಿಕೆಟ್ ದಾಖಲೆಯ ಸಾಧನೆಯಿಂದಾಗಿ ಪ್ರವಾಸಿ ದಕ್ಷಿಣ ಆಫ್ರಿಕಾ ವನಿತೆಯರ ವಿರುದ್ದದ ಏಕೈಕ ಟೆಸ್ಟ್ ಪಂದ್ಯವನ್ನು ಭಾರತದ ವನಿತೆಯರು ಸುಲಭವಾಗಿ ಗೆದ್ದಿದ್ದಾರೆ. ಹರಿಣಗಳು ನೀಡಿದ್ದ 37 ರನ್‌ಗಳ ಗುರಿಯನ್ನು ಹಿಮ್ಮೆಟ್ಟಿಸಿದ ಭಾರತದ ವನಿತೆಯರು 10 ವಿಕೆಟ್ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಚೆಪಾಕ್‌ನ ಎಂ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತವು ಮೊದಲ ಇನ್ನಿಂಗ್ಸ್‌ನಲ್ಲಿ 6 ವಿಕೆಟ್ ನಷ್ಟಕ್ಕೆ ವಿಶ್ವದಾಖಲೆಯ 603 ರನ್ ಗಳಿಸಿ ಡಿಕ್ಲೇರ್ ಮಾಡಿತ್ತು. ಅದನ್ನು ಹಿಮ್ಮೆಟ್ಟಿಸಿದ ದ.ಆಫ್ರಿಕಾ ತಂಡವು ಮೊದಲ ಇನ್ನಿಂಗ್ಸ್‌ನಲ್ಲಿ 266 ರನ್ ಗಳಿಸಿ ಸರ್ವಪತನ ಕಂಡಿತ್ತು. ಫಾಲೋ ಆನ್ ಪಡೆದಿದ್ದ ಹರಿಣಗಳು ಎರಡನೇ ಇನ್ನಿಂಗ್ಸ್‌ನಲ್ಲಿ 373 ರನ್ ಗಳಿಸಿತ್ತು. ಗೆಲುವಿಗೆ 37 ರನ್ ಗುರಿ ಪಡೆದ ಭಾರತ ವಿಕೆಟ್ ನಷ್ಟವಿಲ್ಲದೆ ಗಳಿಸಿ ಟೆಸ್ಟ್ ಕ್ರಿಕೆಟ್‌ನ ಎಂಟನೇ ಗೆಲುವು ಸಾಧಿಸಿತು.

ಮೊದಲ ಇನ್ನಿಂಗ್ಸ್‌ನಲ್ಲಿ ಭಾರತ 603/6 ಡಿ: ಟಾಸ್ ಗೆದ್ದು ಮೊದಲಿಗೆ ಬ್ಯಾಟಿಂಗ್ ಮಾಡಿದ ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ ಇತಿಹಾಸ ಬರೆಯಿತು. ತಂಡದ ಆರಂಭಿಕರಾದ ಸ್ಮೃತಿ ಮಂದಾನ ಹಾಗೂ ಶೆಫಾಲಿ ವರ್ಮಾ ಮೊದಲ ದಿನದ ಆಟದಲ್ಲಿ ದಾಖಲೆಯ ಜತೆಯಾಟವಾಡಿದರು. ಹರಿಣಗಳನ್ನು ಮನ ಬಂದಂತೆ ದಂಡಿಸಿದ ಈ ಇಬ್ಬರೂ, ಐತಿಹಾಸಿಕ ಜತೆಯಾಟವಾಡಿದ್ದರು. ಶೆಫಾಲಿ ವರ್ಮಾ ದಾಖಲೆಯ ದ್ವಿಶತಕ ಬಾರಿಸಿದರೆ, ಉಪನಾಯಕಿ ಸ್ಮೃತಿ ಮಂದಾನ 149 ರನ್ ಗಳಿಸಿದ್ದರು. ರಾಡ್ರಿಗಾಸ್ 55 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಾಯಕಿ ಕೌರ್ 69 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ರಿಚಾ ಘೋಶ್ 86 ರನ್ ಗಳಿಸಿ ಶತಕ ವಂಚಿತರಾದರು. ಈ ವೇಳೆ 6 ವಿಕೆಟ್ ಕಳೆದುಕೊಂಡಿದ್ದ ಭಾರತ ದಾಖಲೆಯ 603 ರನ್ ಗಳಿಸಿತ್ತು.

ಭಾರತಕ್ಕೆ ಸುಲಭದ ತುತ್ತು

ಭಾರತಕ್ಕೆ 37 ರನ್ ಗುರಿ ನೀಡಿತ್ತು. ಎರಡನೇ ಇನ್ನಿಂಗ್ಸ್ ಆರಂಭಿಸಿದ ಶೆಫಾಲಿ ವರ್ಮಾ ಮತ್ತು ಶುಭಾ ಸತೀಶ್ ವಿಕೆಟ್ ನಷ್ಟವಿಲ್ಲದೆ 37 ರನ್ ಗಳಿಸಿದರು. ಶಫಾಲಿ 24 ರನ್ ಮಾಡಿದರೆ, ಶುಭಾ 13 ರನ್ ಗಳಿಸಿದರು.

ಮೊದಲ ಇನ್ನಿಂಗ್ಸ್ ದ.ಆಫ್ರಿಕಾ: 266/10: ಪಂದ್ಯದ ಎರಡನೇ ದಿನ ಅದನ್ನು ಬೆನ್ನುಹತ್ತಿದ್ದ ದ.ಆಫ್ರಿಕಾಗೆ ಸ್ನೇಹ್ ರಾಣಾ ಆಘಾತ ನೀಡಿದರು. ಮೊದಲ ಇನ್ನಿಂಗ್ಸ್ ನಲ್ಲಿ ಆರಂಭಿಕೆ ವಾಲ್‌ವರ್ಡ್ತ್ 20 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬೋಷ್ 39 ರನ್ ಗಳಿಸಿ ವಿಕೆಟ್ ಒಪ್ಪಿಸಿದರೆ, ಸುನೆ ಹಾಗೂ ಕಾಪ್ ಕ್ರೀಸ್‌ನಲ್ಲಿ ನಿಂತರು. ಆದರೆ ಮತ್ತೆ ದಾಳಿಗಿಳಿದ ರಾಣಾ ಕಾಪ್ (74) ಅವರ ವಿಕೆಟ್ ಕಿತ್ತರು. ದೀಪ್ತಿ ಸುನೆ (65) ಅವರ ವಿಕೆಟ್ ಪಡೆದರು. ಟಕ್ಕರ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಕ್ಲೆರ್ಕ್ 39 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಯಾವ ಆಟಗಾರ್ತಿಯೂ ಎರಡಂಕಿ ದಾಟಲಿಲ್ಲ. ಭಾರತದ ಪರ ಸ್ನೇಹ್ ರಾಣಾ 77 ರನ್ ನೀಡಿ 8 ವಿಕೆಟ್ ಕಿತ್ತರು. ಪರಿಣಾಮ ದ.ಆಫ್ರಿಕಾ 266ಕ್ಕೆ ಸರ್ವಪತನ ಕಂಡಿತು. ಹೀಗಾಗಿ ನಯಮದ ಪ್ರಕಾರ ದ.ಆಫ್ರಿಕಾ ಫಾಲೋ ಆನ್ ಭೀತಿಗೆ ಬಿದ್ದಿತ್ತು.

ದ್ವಿತೀಯ ಇನ್ನಿಂಗ್ಸ್: 373/10: ಮೂರನೇ ದಿನ ಬ್ಯಾಟಿಂಗ್ ಆರಂಭಿಸಿದ ಹರಿಣರ ಬಳಗಕ್ಕೆ ಉತ್ತಮ ಆರಂಭ ಸಿಕ್ಕಿತು. ಭೋಷ್ 9 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆದರೆ ಈ ವೇಳೆ ನಾಯಕಿ ವಾಲ್‌ವರ್ಡ್ತ್ ಹಾಗೂ ಸುನೆ ಜಿಗುಟಿನ ಬ್ಯಾಟಿಂಗ್ ಆರಂಭಿಸಿದರು. ಭರ್ಜರಿ ಜತೆಯಾಟ ನಿರ್ಮಿಸಿದ ಈ ಇಬ್ಬರೂ ಶತಕ ಬಾರಿಸಿದರು. 109 ರನ್ ಗಳಿಸಿದ್ದ ಸುನೆ ಅವರಿಗೆ ನಾಯಕಿ ಕೌರ್ ಬ್ರೇಕ್ ಹಾಕಿದರು. ನಾಯಕಿ 122 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಕಾಪ್ 31 ರನ್ ಗಳಿಸಿ ವಿಕೆಟ್ ಒಪ್ಪಿಸದರು. ಟಕ್ಕರ್ ಮತ್ತೊಮ್ಮೆ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಕ್ಲೆರ್ಕ್ 61 ರನ್ ಗಳಿಸಿದರು. ಉಳಿದಂತೆ ಯಾವ ಆಟಗಾರ್ತಿಯೂ ಹೇಳಿಕೊಳ್ಳುವ ಆಟವಾಡಲಿಲ್ಲ. 337 ರನ್ ಹಿನ್ನಡೆಯೊಂದಿಗೆ ಫಾಲೋ ಆನ್ ಪಡೆದಿದ್ದ ದ.ಆಫ್ರಿಕಾ ತಂಡವು ಎರಡನೇ ಇನ್ನಿಂಗ್ಸ್ ನಲ್ಲಿ 373 ರನ್ ಗಳಿಸಿತು.

ಚಂಡಮಾರುತದಲ್ಲಿ ಟೀಂ ಇಂಡಿಯಾ ಬಂಧಿ

ಬಾರ್ಬೋಡಾಸ್‌ನಲ್ಲಿ ವಿಮಾನ ಹಾರಾಟ ರದ್ದು | ಹೋಟೆಲ್‌ನಲ್ಲಿ ವಿಶ್ವ ಚಾಂಪಿಯನ್

ಬಾರ್ಬೋಡಾಸ್: ವೆಸ್ಟ್‌ಇಂಡೀಸ್‌ನ ಕೆಲವು ಪ್ರದೇಶದಲ್ಲಿ ಚಂಡಮಾರುತ ಬಂದ ಕಾರಣ ವಿಮಾನ ಹಾರಾಟ ಸ್ಥಗಿತಗೊಂಡಿದ್ದು, ಟಿ20 ವಿಶ್ವ ಚಾಂಪಿಯನ್ ಟೀಂ ಇಂಡಿಯಾ ಬಾರ್ಬೋಡಾಸ್‌ನಲ್ಲಿ ಸಿಲುಕಿಕೊಂಡಿದೆ. ಎಲ್ಲಾ ವಿಮಾನಗಳು ರದ್ದಾದ ಕಾರಣ ಭಾರತ ತಂಡ ಮತ್ತು ಇತರರು ಅಲ್ಲಿ ಸಿಲುಕಿಕೊಂಡಿದ್ದಾರೆ.

ಬಾರ್ಬೋಡಾಸ್‌ನಲ್ಲಿ ಚಂಡಮಾರುತದ ಕಾರಣ, ಮುಂದಿನ ಆದೇಶದವರೆಗೆ ವಿಮಾನ ಹಾರಾಟವನ್ನು ಸ್ಥಗಿತಗೊಳಿಸಲಾಗಿದೆ. ಅದಲ್ಲದೆ ನಗರದಲ್ಲಿ ಗಂಟೆಯಿಂದ ಕರ್ಫ್ಯೂ ಹೇರಲಾಗಿದ್ದು, ಎಲ್ಲಾ ಅಂಗಡಿಗಳು ಸಹ ಬಂದ್ ಮಾಡಲಾಗಿದೆ ಬೆರಿಲ್ ಚಂಡಮಾರುತದಿಂದ ಉಂಟಾದ ಪರಿಸ್ಥಿತಿಯಿಂದಾಗಿ, ಭಾರತೀಯ ಕ್ರಿಕೆಟ್ ತಂಡದ ಆಟಗಾರರು ಮತ್ತು ಅವರ ಕುಟುಂಬಗಳು, ಬಿಸಿಸಿಐ ಅಧಿಕಾರಿಗಳು ಸ್ಥಳೀಯ ಹೋಟೆಲ್‌ನಲ್ಲಿ ಸಿಲುಕಿಕೊಂಡಿದ್ದಾರೆ. ವರದಿಗಳ ಪ್ರಕಾರ ಭಾರತೀಯ ತಂಡವು ಸೋಮವಾರ ಬಾರ್ಬೋಡಾಸ್‌ನಿಂದ ನ್ಯೂಯಾರ್ಕ್‌ಗೆ ಸ್ಥಳೀಯ ಕಾಲಮಾನ ಬೆಳಿಗ್ಗೆ 11 ಗಂಟೆಗೆ (ಭಾರತೀಯ ಕಾಲಮಾನ ರಾತ್ರಿ 8.30) ಹೊರಡಬೇಕಿತ್ತು, ಅಲ್ಲಿಂದ ಅವರು ದುಬೈಗೆ ಮತ್ತು ನಂತರ ಭಾರತಕ್ಕೆ ಸಂಪರ್ಕ ವಿಮಾನದ ಮೂಲಕ ಆಗಮಿಸಬೇಕಿತ್ತು.

ಚಂಡಮಾರುತ ಎಷ್ಟು ಅಪಾಯಕಾರಿ?: 2024 ರ ಅಟ್ಲಾಂಟಿಕ್ ಋತುವಿನ ಮೊದಲ ಚಂಡಮಾರುತವಾದ 'ಬೆರಿಲ್' ಭಾನುವಾರದಂದು ವಿಂಡ್ವರ್ಡ್ ಅಲ್ಲಿನ ದ್ವೀಪಗಳ ಕಡೆಗೆ ಸಾಗಿದ್ದು, ಗರಿಷ್ಠ ಗಾಳಿಯೊಂದಿಗೆ ಅತ್ಯಂತ ಅಪಾಯಕಾರಿ 'ವರ್ಗ-4' ಚಂಡಮಾರುತವಾಗಿ ತೀವ್ರಗೊಂಡಿದೆ. ವರದಿಗಳ ಪ್ರಕಾರ ಬಾರ್ಬೋಡಾಸ್, ಸೇಂಟ್ ಲೂಸಿಯಾ, ಗ್ರೆನಡಾ, ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್ ಮತ್ತು ಟೊಬಾಗೋದಲ್ಲಿ ಸೈಕ್ಲೋನ್ ಎಚ್ಚರಿಕೆ ಜಾರಿಗೊಳಿಸಲಾಗಿದೆ.

ಭಾರತಕ್ಕೆ ಅದ್ದೂರಿ ಸ್ವಾಗತ

17 ವರ್ಷಗಳ ಬಳಿಕ ಭಾರತ ಟಿ20 ವಿಶ್ವಚಾಂಪಿಯನ್ ಆಗಿದ್ದು, ಭಾರತ ತಂಡ ಪ್ರಸ್ತುತ ವಿಶ್ವಕಪ್ ಆತಿಥ್ಯ ವಹಿಸಿದ್ದ ವೆಸ್ಟ್ ಇಂಡೀಸ್‌ನಲ್ಲಿದೆ. ವಿಮಾನಗಳು ಸ್ಥಗಿತಗೊಂಡ ಕಾರಣ ಭಾರತ ಮರಳಿ ಬರುವುದು ಇನ್ನು ದಿನಾಂಕ ನಿಶ್ಚಯವಾಗಿಲ್ಲ. ಆದರೆ ಬಿಸಿಸಿಐ ಭಾರತ ಬಂದ ಮೇಲೆ ಅದ್ದೂರಿ ಸ್ವಾಗತ ಮಾಡಲು ಚಿಂತನೆ ನಡೆಸಿದೆ ಎಂದು ವರದಿಯಾಗಿವೆ. ರೋಹಿತ್ ನೇತೃತ್ವದ ತಂಡವು ಇಡೀ ಭಾರತದ ಆಸೆಯಂತೆ ವಿಶ್ವಕಪ್ ಗೆದ್ದಿದ್ದು, ಆ ನಿಟ್ಟಿನಲ್ಲಿ ಭಾರತ ತಂಡಕ್ಕೆ ಅದ್ದೂರಿ ಸ್ವಾಗತ ಮಾಡಲು ನಿರ್ಧರಿಸಿದೆ ಎನ್ನಲಾಗಿದೆ. ಪ್ರಮುಖವಾಗಿ ಮುಂಬಯಿನಲ್ಲಿ ಟ್ರೋಫಿಯೊಂದಿಗೆ ಮೆರವಣಿಗೆ ನಡೆಸಿ ಬಳಿಕ ಬಿಸಿಸಿಐ ಘೋಷಿಸಿರುವ 125 ಕೋಟಿ ಬಹುಮಾನವನ್ನು ವಿತರಿಸಲಾಗುವುದು ಎನ್ನಲಾಗಿದೆ.

ವಿಹಾರಿಗೆ ನ್ಯಾಯದ ಭರವಸೆ

ಅಮರಾವತಿ: ಆಂಧ್ರಪ್ರದೇಶ ಕ್ರಿಕೆಟ್ ಸಂಸ್ಥೆಯೊಂದಿಗೆ ಸಂಘರ್ಷಕ್ಕಿಳಿದಿದ್ದ ಅನುಭವಿ ಆಟಗಾರ ಹನುಮ ವಿಹಾರಿಗೆ ನ್ಯಾಯ ಒದಗಿಸುವುದಾಗಿ ಚಂದ್ರಬಾಬು ನಾಯ್ಡು ಸರಕಾರ ಸೋಮವಾರ ಭರವಸೆ ನೀಡಿದೆ.



ಸಿಎಂ ಹಾಗೂ ತೆಲುಗು ದೇಶಂ ವರಿಷ್ಠ ನಾಯ್ಡು ಪುತ್ರ, ಸಚಿವ ನಾರಾ ಲೋಕೇಶ್‌ರನ್ನು ಭೇಟಿಯಾದ ನಂತರ ಆಂಧ್ರ ಬಿಟ್ಟು ಬೇರೆ ರಾಜ್ಯಕ್ಕೆ ಹೋಗುವ ನಿರ್ಧಾರವನ್ನು ಹನುಮ ವಿಹಾರಿ ಕೈಬಿಟ್ಟಿದ್ದಾರೆ.

ಆಂಧ್ರ ರಣಜಿ ತಂಡದ ನಾಯಕರಾಗಿದ್ದ ಅವರು, ರಾಜ್ಯದ ಕ್ರಿಕೆಟ್ ಸಂಸ್ಥೆ ಜೊತೆ ವೈಮನಸ್ಯ ಹೊಂದಿದ್ದರು. ಹಿಂದಿನ ಜಗನ್ಮೋಹನ ರೆಡ್ಡಿ ಸರಕಾರದ ಕುಮ್ಮಕ್ಕಿನ ಮೇರೆಗೆ ಹನುಮ ವಿಹಾರಿಯನ್ನು ಏಕಾಏಕಿ ನಾಯಕತ್ವದಿಂದ ಕಿತ್ತುಹಾಕಿ ಕಿರುಕುಳ ನೀಡಲಾಗುತ್ತಿತ್ತು ಎಂದು ದೂರಲಾಗಿದೆ. ಇದರಿಂದ ಬೇಸತ್ತ ವಿಹಾರಿ ತಂಡಕ್ಕೆ ರಾಜೀನಾಮೆ ನೀಡಿ ಬೇರೆ ರಾಜ್ಯದ ಕ್ರಿಕೆಟ್ ತಂಡದಲ್ಲಿ ಆಡಲು ಮುಂದಾಗಿದ್ದರು. ರಾಷ್ಟ್ರೀಯ ತಂಡ ಹಾಗೂ ಐಪಿಎಲ್‌ನಲ್ಲೂ ಅವರು ಆಡಿದ್ದಾರೆ.

ಆದರೆ ಸೋಮವಾರ ಸಚಿವ ನಾರಾ ಲೋಕೇಶ್‌ರನ್ನು ಭೇಟಿಮಾಡಿದ ವೇಳೆ ಹನುಮ ವಿಹಾರಿ ತಾವು ಅನುಭವಿಸಿದ್ದ ಕಿರುಕುಳದ ಬಗ್ಗೆ ವಿವರಿಸಿದ್ದಾರೆ. ನ್ಯಾಯ ಒದಗಿಸಲು ತಮ್ಮ ಸರಕಾರ ಬದ್ಧವಾಗಿದ್ದು, ಯಾವುದೇ ಕಾರಣಕ್ಕೂ ರಾಜ್ಯ ಬಿಟ್ಟು ಹೋಗಬಾರದೆಂದು ಲೋಕೇಶ ಮನವೊಲಿಸಿದ್ದಾರೆ. ನಂತರ ಪ್ರತಿಕ್ರಿಯೆ ನೀಡಿದ ಹನುಮ ವಿಹಾರಿ, ಸಚಿವರ ಭೇಟಿಯಿಂದ ನನ್ನ ಮನಸ್ಸು ನಿರಾಳವಾಗಿದ್ದು, ನ್ಯಾಯ ಸಿಗುವ ಭರವಸೆ ಇದೆ ಎನ್ನುವ ಮೂಲಕ ತಾವು ಆಂಧ್ರಪ್ರದೇಶ ತಂಡಕ್ಕೆ ವಾಪಸಾಗುವ ಸುಳಿವನ್ನು ನೀಡಿದರು.

ಯಶಸ್ಸು ಅರಗಿಸಿಕೊಳ್ಳದೆ ತಗಾದೆ ತೆಗೆದ ಪಾಕಿಸ್ತಾನ

ಬಾರ್ಬೋಡಾಸ್: ವಿಶ್ವಕಪ್ ಗೆದ್ದ ನಂತರ ಇಡೀ ಭಾರತ ಸಂಭ್ರಮದಲ್ಲಿ ಸಾಗಿದ್ದು, ಪಾಕಿಸ್ತಾನದ ಕೆಲವರಿಗೆ ಈ ಗೆಲುವನ್ನು ಅರಗಿಸಿಕೊಳ್ಳಲಾಗುತ್ತಿಲ್ಲ. ವಿಶ್ವಕಪ್‌ನಲ್ಲಿ ಭಾರತದ ಯಶಸ್ಸನ್ನು ನೋಡಲಾಗದೆ ಅನೇಕ ತಗಾದೆ ತೆಗೆಯುತ್ತಿದ್ದ ಪಾಕ್ ಮಾಜಿ ಆಟಗಾರರು, ಪತ್ರಕರ್ತರು ಇದೀಗ ಗೆಲುವಿನ ರುವಾರಿ ಜಸ್‌ಪ್ರೀತ್ ಬುಮ್ರಾ ಅವರ ಬೌಲಿಂಗ್ ಶೈಲಿ ಬಗ್ಗೆ ತಗಾದೆ ತೆಗೆದಿದ್ದಾರೆ. ಬುಮ್ರಾ ಅವರ ಯಶಸ್ಸನ್ನು ನೋಡಲಾಗದೆ ಪಾಕಿಸ್ತಾನದ ಖ್ಯಾತ ಕ್ರೀಡಾ ಪತ್ರಕರ್ತ ಅರ್ಫಾ ಫಿರೋಜ್, ಬುಮ್ರಾ ಅವರ ಬೌಲಿಂಗ್ ಶೈಲಿ ಪರಿಶೀಲಿಸಬೇಕೆಂದು ಐಸಿಸಿಗೆ ಮನವಿ ಸಲ್ಲಿಸಿದ್ದಾರೆ.



ಈ ಬಗ್ಗೆ ಪತ್ರ ಬರೆದಿರುವ ಅವರು, ಐಸಿಸಿಯು ಪಾಕಿಸ್ತಾನದ ಬೌಲರ್‌ಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತದೆ. ಪಾಕಿಸ್ತಾನಿ ಬೌಲರ್ ವಿಶ್ವ ಕ್ರಿಕೆಟ್‌ನಲ್ಲಿ ಪ್ರಭಾವ ಬೀರಿದರೆ, ಅವರ ವಿರುದ್ಧ ತನಿಖೆಯನ್ನು ಪ್ರಾರಂಭಿಸಲಾಗುತ್ತದೆ. ಆದರೆ ಜಸ್‌ಪ್ರೀತ್ ಬುಮ್ರಾ ಅವರ ವಿಚಿತ್ರ ಬೌಲಿಂಗ್ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಐಸಿಸಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ. ಐಸಿಸಿ ನಿಯಮಗಳ ಪ್ರಕಾರ ಜಸ್‌ಪ್ರೀತ್ ಬುಮ್ರಾ ಅವರ ಬೌಲಿಂಗ್ ಶೈಲಿ ಸರಿಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕು. ಏಕೆಂದರೆ ಅವರ ಬೌಲಿಂಗ್ ಆಕ್ಷನ್‌ನಲ್ಲಿ ಅನುಮಾನಗಳಿದ್ದು, ಹೀಗಾಗಿಯೇ ಅವರು ಯಶಸ್ಸು ಸಾಧಿಸುತ್ತಿದ್ದಾರೆ ಎಂದು ಅರ್ಫಾ ಫಿರೋಜ್ ಅಭಿಪ್ರಾಯಪಟ್ಟಿದ್ದಾರೆ.

ಭಗವದ್ಗೀತೆ ಜಪಿಸಿದ ಶೋಯೆಬ್

ಬೆಂಗಳೂರು: ಪಾಕಿಸ್ತಾನ್ ತಂಡದ ಮಾಜಿ ಆಟಗಾರ ಶೋಯೆಬ್ ಅಖ್ತರ್ ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿರುವ ಒಂದು ಪೋಸ್ಟ್ ಭಗವದ್ಗೀತೆಗೆ ಸಂಬಂಧಿಸಿದ್ದು, ಭಾರೀ ವೈರಲ್ ಆಗಿದೆ. ತಮ್ಮ ಇನ್ ಸ್ಟಾಗ್ರಾಮ್ ಖಾತೆಯಲ್ಲಿ ಶೋಯೆಬ್ ಅಖ್ತರ್ ಭಗವದ್ಗೀತೆ ಶ್ಲೋಕವನ್ನು ಹಂಚಿಕೊಂಡಿದ್ದಾರೆ. ಭಗವಾನ್ ವಿಷ್ಣುವಿನ ಅವತಾರವಾದದ ಚಿತ್ರದೊಂದಿಗೆ, ಅನಿಯಂತ್ರಿತ ಮನಸ್ಸಿಗಿಂತ ದೊಡ್ಡ ಶತ್ರುವಿಲ್ಲ ಎನ್ನುವ ಶ್ಲೋಕದ ವಿಡಿಯೋವನ್ನು ಅಖ್ತರ್ ಶೇರ್ ಮಾಡಿದ್ದು, ಚರ್ಚೆಗೆ ಕಾರಣವಾಗಿದೆ. ಈ ಪೋಸ್ಟ್‌ಗೆ ಭಾರತೀಯ ಕ್ರಿಕೆಟ್ ಪ್ರೇಮಿಗಳು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರೆ, ಅತ್ತ ಪಾಕ್‌ನ ಕೆಲವರು ತಗಾದೆ ತೆಗೆದಿದ್ದಾರೆ. ಇದಾಗ್ಯೂ ಅಖ್ತರ್ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಿಂದ ಈ ಪೋಸ್ಟ್ ಅಳಿಸಿ ಹಾಕಿಲ್ಲ. ಸೋಷಿಯಲ್ ಮೀಡಿಯಾದಲ್ಲಿ ಸದಾ ಸಕ್ರಿಯರಾಗಿರುವ ಶೋಯೆಬ್ ಅಖ್ತರ್ ಕೆಲ ದಿನಗಳ ಹಿಂದೆ ಮುಕ್ತಾಯಗೊಂಡ ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡಕ್ಕೆ ಬೆಂಬಲ ಸೂಚಿಸಿದ್ದರು.

ಟ್ರೋಫಿಯೊಂದಿಗೆ ವಿಭಿನ್ನ ಪೋಸ್



ಬಾರ್ಬೋಡಾಸ್‌ನ ಬೀಚ್ ಒಂದರ ದಂಡೆಯಲ್ಲಿ ಟ್ರೋಫಿಯೊಂದಿಗೆ ಕಾಣಿಸಿಕೊಂಡ ರೋಹಿತ್ ಶರ್ಮ

ಬಾರ್ಬೋಡಾಸ್: 17ವರ್ಷಗಳ ಬಳಿಕ ಭಾರತವು ವಿಶ್ವಕಪ್ ಗೆದ್ದಿದ್ದು, ಸಂಭ್ರಮಾಚರಣೆಯಲ್ಲಿದೆ. ಕೊಹ್ಲಿ, ಜಡೇಜಾ ರೋಹಿತ್ ಬಿಟ್ಟರೇ ಉಳಿದ ಆಟಗಾರರಿಗೆ ಇದೇ ಮೊದಲ ವಿಶ್ವಕಪ್ ಆಗಿದೆ. ಅಲ್ಲದೆ ಭಾರತ ಈ ಹಿಂದಿನ ವಿಶ್ವಕಪ್‌ಗಳಲ್ಲಿ ಭರ್ಜರಿ ಪ್ರದರ್ಶನ ತೋರಿದ್ದರೂ ವಿಶ್ವಕಪ್ ಟೂರ್ನಿಗಳ ಫೈನಲ್ ಅಥವಾ ಸೆಮಿಸ್‌ನಲ್ಲಿ ಎಡವುತ್ತಿತ್ತು. ಆ ನಿಟ್ಟಿನಲ್ಲಿ ಭಾರತ ಈ ಗೆಲುವನ್ನು ವಿಭಿನ್ನ ರೀತಿಯಲ್ಲಿ ಆಚರಿಸುತ್ತಿದೆ. ಟೂರ್ನಿಯುದ್ದಕ್ಕೂ ಪಟ್ಟ ಶ್ರಮಕ್ಕೆ ಪ್ರತಿಫಲವಾಗಿ ಬಂದ ಟ್ರೋಫಿ ಜತೆ ಭಾರತೀಯ ಆಟಗಾರರು ವಿಭಿನ್ನ ಪೋಸ್‌ನಲ್ಲಿ ಕಾಣಿಸಿದ್ದಾರೆ.

ರೋಕೊ ಎಂದು ಕರೆಯಲ್ಪಡುವ ಭಾರತದ ಜೋಡೆತ್ತುಗಳು ಟ್ರೋಫಿಯೊಂದಿಗೆ.

ವಿಭಿನ್ನವಾಗಿ ಕಾಣಿಸಿಕೊಂಡ ಪಂತ್, ಕುಲ್‌ದೀಪ್, ಸಿರಾಜ್.

ಪಂದ್ಯ ನಡೆದ ರಾತ್ರಿ ಟ್ರೋಫಿಯನ್ನು ತಬ್ಬಿಕೊಂಡು ಮಲಗಿದ ಸೂರ್ಯ ದಂಪತಿ.

ತಮ್ಮ ವಿಭಿನ್ನ ಶೈಲಿಯಲ್ಲಿ ಡ್ರೆಸ್ಸಿಂಗ್ ಮಾಡಿಕೊಂಡ ಹಾರ್ದಿಕ್ ಪಾಂಡ್ಯ ಟ್ರೋಫಿಯೊಂದಿಗೆ ಕಂಡಿದ್ದು ಹೀಗೆ.

ಗೆದ್ದ ನಂತರದಲ್ಲಿ ಟ್ರೋಫಿಗೆ ಮುತ್ತಿಕ್ಕಿ ಖುಷಿಪಟ್ಟ ಕೊಹ್ಲಿ.

ಕೊನೆಯ ಟಿ20 ಐ ಪಂದ್ಯದಲ್ಲಿ ಟ್ರೋಫಿ ಗೆದ್ದ ಸಂಭ್ರಮದಲ್ಲಿ ಆಲ್‌ರೌಂಡರ್ ಜಡೇಜಾ.

ಟೂರ್ನಿ ಗೆಲುವಿಗೆ ರೂವಾರಿಯಾದ ಬುಮ್ರಾಗೆ ಟ್ರೋಫಿ ಗೆದ್ದ ಸಂಭ್ರಮ.

@vishwavaninews

ವಿಶ್ವವಾಣಿ

ಬೆಂಗಳೂರು

ಮಂಗಳವಾರ 02 | 07 | 2024

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಅನಾವಶ್ಯಕ ಸಂಪರ್ಕದ ಅನ್‌ಸಬ್‌ಸ್ಕ್ರೈಬಿಂಗ್!

ಮೊನ್ನೆ ಜಿಮೇಲ್ ತೆರೆದಾಕ್ಷಣ ಒಂದು ನೋಟಿಫಿಕೇಷನ್ ಕಣ್ಣಿಗೆ ಬಿತ್ತು. 'ನೀವು ಈಗಾಗಲೇ ಉಚಿತವಾಗಿ ಕೊಡುವ 80% ಮೆಮೊರಿಯ ಜಾಗವನ್ನು ಬಳಸಿದ್ದೀರಿ, ಇನ್ನೂ ಹೆಚ್ಚು ಜಾಗ ಬೇಕು ಎಂದು ಹಣಕೊಟ್ಟು ಪಡೆಯಬಹುದು' ಎಂಬುದು ಆ ನೋಟಿಫಿಕೇಷನ್. ಇಲ್ಲಿಯ ತನಕ ಇಮೇಲ್ ಉಚಿತ ಎಂದು ಹಗುರವಾಗಿ ಇದ್ದ ನಾನು ಒಮ್ಮೆಲೆ ಕಂಗಾಲಾದೆ. ಬ್ಯಾಂಕಿನ ಖಾತೆ, ಆಧಾರ್ ಕಾರ್ಡ್, ಡಿಮ್ಯಾಟ್ ಖಾತೆ, ಅದು, ಇದು ಎಲ್ಲದಕ್ಕೂ ಬಳಕೆಯಾಗುತ್ತಿರುವ ಇಮೇಲ್ ವಿಳಾಸವಾಗಿರುವುದರಿಂದ, 'ಆ ಕ್ಷಣ ಅದು ಇನ್ನು ಮುಂದೆ ಉಚಿತವಾಗಿ ಇರುವುದಿಲ್ಲ ಇದಕ್ಕೂ ಹಣ ಕೊಡಬೇಕಲ್ಲ' ಎನ್ನುವ ಮಾತು ಜೀರ್ಣವಾಗುವುದಕ್ಕೆ ತುಸು ಸಮಯ ತಗೆದುಕೊಂಡಿತು. ಮೊದಲು ಗೂಗಲ್ ಖಾತೆಯಲ್ಲಿ ಎಷ್ಟು ಮೆಮೊರಿ ಬಳಸಿದ್ದೇನೆ ಎನ್ನುವುದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ನನಗೆ ಕಂಡಿದ್ದು - ವಾಟ್ಸಾಪ್ ಬ್ಯಾಕ್‌ಅಪ್ ನಾಲ್ಕು ಜಿಬಿ ಇತ್ತು, 1.5 ಜಿಬಿಯು ಗೂಗಲ್ ಡ್ರೈವ್‌ಗೆ ಬಳಕೆಯಾಗಿತ್ತು, ನಂತರ ಇ-ಮೇಲ್‌ಗಳು 6 ಜಿಬಿಗಳಷ್ಟು ಡಾಟಾವನ್ನು ತಗೆದುಕೊಂಡಿತ್ತು. ಇನ್ನು ಉಳಿದಿದ್ದು ಕೇವಲ ಮೂರು ಜಿಬಿ ಮಾತ್ರ, ಅಂದರೆ ಕೇವಲ 20% ಜಾಗ.

ಇದರಲ್ಲಿ ನನಗೆ ಅಚ್ಚರಿಯನ್ನು ಮೂಡಿಸಿದ್ದು ಇಮೇಲ್ ತಗೆದುಕೊಂಡ ಜಾಗ - ಆರು ಜಿಬಿ. ಕೆಬಿ (ಕಿಲೋ ಬೈಟ್) ಗಳಲ್ಲಿರುವ ಇಮೇಲ್ ಗಳು ಯಾವಾಗ ಜಿಬಿ(ಗಿಗಾ ಬೈಟ್)ಗಳಷ್ಟು ಜಾಗವನ್ನು ಆಕ್ರಮಿಸಿದವು ಎಂಬುದೇ ಸೋಜಿಗ. ಹನಿ ಹನಿ ಸೇರಿ ಹಳ್ಳ ಎನ್ನುವ

ಜೋಷ್ ಮಾತು

• ವಿಕ್ರಮ್ ಜೋಶಿ

ಮಾತಿನಂತೆ ನನ್ನ ಇನ್ಬಾಕ್ಸ್‌ನಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಇಮೇಲ್‌ಗಳು ಹಾಗೆಯೇ ಬಿದ್ದಿದ್ದವು! ಅವುಗಳಲ್ಲಿ ನೂರರ ತೊಂಬತ್ತು ಭಾಗವು ಜಾಹೀರಾತಿಗೆ ಸಂಬಂಧಿಸಿದ ಇಮೇಲ್‌ಗಳಾಗಿದ್ದವು. ಹದಿನೈದು ವರ್ಷಗಳಿಂದ ಓದದೇ ಹಾಗೆಯೇ ಇದ್ದಿದ್ದೆಲ್ಲ ಇಮೇಲ್‌ಗಳನ್ನೂ ಡಿಲೀಟ್ ಮಾಡಿದ ನಂತರ ಕೋರಿಕೆಯಿಲ್ಲದೆಯೂ ಬರುತ್ತಿದ್ದ ನೂರಾರು ಕಂಪನಿಗಳ ಇಮೇಲ್‌ನ್ನು 'ಅನ್‌ಸಬ್‌ಸ್ಕ್ರೈಬ್' ಮಾಡಿದೆ. ಬದುಕಿನಲ್ಲಿ 'ಅನ್‌ಸಬ್‌ಸ್ಕ್ರೈಬ್' ಮಾಡುವುದರ ಮಹತ್ವ ತಿಳಿದಿದ್ದು ಇದೇ ಮೊದಲು!

ಭಾರವಾಗುವ ಜೋಳಿಗೆ!

ನೆಮ್ಮದಿಯ ಬದುಕಿಗೆ ಅನ್‌ಸಬ್‌ಸ್ಕ್ರೈಬ್ ಫೀಚರಿನ ಪಾಲು ಹೇಳಿ ಮಾಡಿಸಿದ್ದು. ನಾವು ಇದನ್ನು ಕಡೆಗಣಿಸಿ ಅಥವಾ ಗೊತ್ತಿಲ್ಲದೆಯೇ ಎಲ್ಲವನ್ನೂ ನಮ್ಮ ಜೋಳಿಗೆಯಲ್ಲಿ ತುಂಬಿಕೊಂಡು ಬಿಡುತ್ತೇವೆ. ನೋಡು, ನೋಡುತ್ತ ಹೆಗಲಿನ ಮೇಲೆ ಭಾರ ಹೆಚ್ಚಿದ್ದೂ ಗೊತ್ತೇ ಆಗುವುದಿಲ್ಲ. ನಂತರ ನಮ್ಮ ನೆರವಿಗೆ ಆ ಭಾರವನ್ನು ಹೊರಲು ಯಾರೂ ಸಿಗುವುದಿಲ್ಲ. ಬೇಡದ ಭಾರವನ್ನು ಹೊತ್ತು ನಾವು ಕತ್ತೆಗಳಾಗುತ್ತೇವೆ! ಬೇಡವಾದ ಸಾವಿರಾರು ಸಂಪರ್ಕಗಳಿಂದ ಏನೂ ಲಾಭವಿಲ್ಲ,

ಅವುಗಳನ್ನು ದೂರವಿಟ್ಟು ಬೇಕಾದ, ಹಿತವೆನಿಸುವ ಹತ್ತು ಸಂಬಂಧಗಳನ್ನು ಗಟ್ಟಿ ಮಾಡಿಕೊಳ್ಳುವುದೇ ಬುದ್ಧಿವಂತಿಕೆ. ಕೆಲವೊಮ್ಮೆ ನಾವು ನಮಗೆ ಕಂಡಿದ್ದಕ್ಕೆಲ್ಲಾ ಸ್ಪಂದಿಸುತ್ತೇವೆ. ಒಮ್ಮೆ ಸ್ಪಂದಿಸಿದರೆ ಅಲ್ಲಿ ನಾವು ಸಮಯವನ್ನು ಕೊಡಬೇಕಾಗುತ್ತದೆ. ಆಗ, ಆ ಹೊತ್ತಿಗೆ ನಮಗೆ ನಾವು ಕೊಡುವ ಸಮಯವು ಉಚಿತ ಎನಿಸುತ್ತದೆ ಆದರೆ ಕ್ಷಣ ಕ್ಷಣಗಳು ಕಳೆದು ಎಂದು ಆಯುಷ್ಯ ಮುಗಿಯುತೋ ಎಂಬುದು ಗೊತ್ತೇ ಆಗುವುದಿಲ್ಲ. ಮೆಮೊರಿ ಮುಗಿದರೆ ಗೂಗಲ್ ಕ್ಲೌಡ್‌ನಲ್ಲಿ ಹಣ ಕೊಟ್ಟು ಜಾಗವನ್ನು ಪಡೆಯಬಹುದು. ಆದರೆ ಎಷ್ಟೇ ಹಣವನ್ನು ಕೊಟ್ಟರೂ ಕಳೆದು ಹೋದ ಸಮಯವನ್ನು ಮತ್ತೆ ತಿರುಗಿ ತಂದು ಕೊಡಲಾಗದು!

ಹೀಗಾಗಿ ಇವತ್ತಿನ ಅತಿಯಾದ ವೇಗದಲ್ಲಿ ಓಡುತ್ತಿರುವ ಜಗತ್ತಿನಲ್ಲಿ ಅನ್‌ಸ್ಕ್ರೈಬ್ ಮಾಡಬೇಕಾದ ಕಲೆಯು ಬಹಳ ಮಹತ್ವವನ್ನು ಪಡೆದಿದೆ. ಕೆಲವು ವಿಷಪೂರಿತ ಸಂಬಂಧಗಳು ಬದುಕಿಗೆ ಅತ್ಯಂತ ಅಪಾಯಕಾರಿ. ಮೊದಲು ಅವುಗಳನ್ನು ನಿರ್ಲಕ್ಷ್ಯ ಮಾಡದೆ ಅರಿತು ಅವುಗಳಿಂದ ದೂರ ಸರಿಯಬೇಕು. ಇನ್ಬಾಕ್ಸ್‌ನಲ್ಲಿ ಬಂದಿರುವ ನೂರಾರು ಸ್ಪ್ಯಾಮ್ ಇಮೇಲ್‌ಗಳ ನಡುವೆ ಕೆಲವೊಮ್ಮೆ ಮುಖ್ಯವಾದ ಇಮೇಲ್ ಕಾಣದೇ ಅವಾಂತರವಾದಂತೆ ಈ ಹತ್ತಾರು ಬೇಡದ ಸಂಪರ್ಕಗಳಿಂದಾಗಿ, ಅವರು ಕೊಡುವ ತೊಂದರೆಗಳಿಂದಾಗಿ ನಾವು ಮುಖ್ಯವಾದ ವಿಷಯಗಳ ಕಡೆಗೆ ಗಮನವನ್ನೇ ಕೊಡುವುದಿಲ್ಲ. ಹೀಗಾಗಿ ಯಾವುದು ನಮಗೆ ಬೇಕಾದವರು, ಯಾರು ಸ್ಪ್ಯಾಮ್ ಎನ್ನುವುದನ್ನು ಗುರುತಿಸುವ ಅಗತ್ಯತೆ ಎಂದಿಗಿಂತ ಇಂದು ಹೆಚ್ಚಿದೆ.

ಶಕ್ತಿ-ಸಮಯ ಎರಡೂ ಪೋಲು

ವಾಟ್ಸಾಪ್‌ಗಳಲ್ಲಿ ನೂರಾರು ಗ್ರೂಪ್‌ಗಳು, ನಮಗೆ ಗೊತ್ತಿಲ್ಲದಂತೆಯೇ ಪ್ರವಾಹದಂತೆ ಹರಿದು ಬರುವ ಇಮೇಲ್‌ಗಳು, ಒಮ್ಮೆಯೂ ಸಂಪರ್ಕಿಸದ ಸಾವಿರಾರು ಸೋಷಿಯಲ್ ಮೀಡಿಯಾದ ವರ್ಚುವಲ್ ಸಂಪರ್ಕಗಳು, ಎಲ್ಲವೂ ಯಾಕೆ? ಇತ್ತೀಚಿಗೆ ಎಲ್ಲರೂ ತಮ್ಮ ಸೇವೆಗಳನ್ನು ಸಬ್‌ಸ್ಕ್ರೈಬ್ ಮಾಡಿ ಎನ್ನುವುದಕ್ಕೆ ಶುರುಮಾಡಿದ್ದಾರೆ. ಅವರ ಕೋರಿಕೆಗೆ ನಾವು ಮುಲಾಜಿಗೆ ಸಿಕ್ಕಿ ಎಷ್ಟೋ ಬಾರಿ ಅವರ ಚ್ಯಾನಲ್, ಪ್ರಾಡಕ್ಟ್, ಆನ್‌ಲೈನ್ ಪತ್ರಿಕೆ, ಮೊದಲಾದವುಗಳನ್ನು ಸಬ್‌ಸ್ಕ್ರೈಬ್ ಮಾಡಿರುತ್ತೇವೆ, ನಂತರ ನಮಗದು ಮರೆತೇ ಹೋಗಿರುತ್ತದೆ. ಬೇಕಾದವುಗಳನ್ನು ಮಾತ್ರವೇ ಇಟ್ಟುಕೊಂಡು ಉಳಿದಿದ್ದನ್ನು ಧೈರ್ಯವಾಗಿ ಅನ್‌ಸಬ್‌ಸ್ಕ್ರೈಬ್ ಮಾಡಿಬಿಡಬೇಕು. ಇಲ್ಲವಾದರೆ ಮೊಬೈಲ್ ಹಾಗೂ ಕ್ಲೌಡ್ ಎರಡರ ಮೆಮೊರಿಯೂ ಅನಾವಶ್ಯಕವಾಗಿ ತುಂಬಿ ಹೋಗಿ ಹೇಗೆ ಹೆಚ್ಚುವರಿ ಹಣವನ್ನು ತೆರಬೇಕಾಗುತ್ತದೆಯೋ ಹಾಗೆಯೇ, ಬದುಕಿನಲ್ಲಿ ಕೂಡ ಅದು, ಇದು, ಅವರು, ಇವರು ಎಂದು ನೂರಾರು ಕಡೆ ನಮ್ಮನ್ನು ನಾವು ತೊಡಗಿಸಿಕೊಂಡಾಗ ಅನಗತ್ಯವಾಗಿ ನಾವು ನಮ್ಮ ಶಕ್ತಿಯನ್ನು ಹಾಗೂ ಸಮಯವನ್ನು ಪೋಲು ಮಾಡುವ ಪ್ರಸಂಗ ಬರುತ್ತದೆ.

ಬಿ ಪಾಸಿಟಿವ್

ಸಂತಸವೆಂಬ ಸಂಪತ್ತು

ಯಾವಾಗಲೂ ಸಂತೋಷವಾಗಿರುವುದು ಕೂಡ ಅಷ್ಟು ಸುಲಭದ ಮಾತಲ್ಲ. ಸಣ್ಣ ಸಣ್ಣ ಗೆಲುವಿಗೂ ಸಂಭ್ರಮಿಸುವುದು ಕೂಡ ಸಾಧನೆಯೇ. ಮಕ್ಕಳಿಗೆ ತನ್ನಿಷ್ಟದ ಆಟಿಕೆ ನೀಡಿದಾಗ ಪಡುವ ಸಂಭ್ರಮ, ಚಿಟ್ಟೆಯೊಂದು ಹಿಡಿದಾಗ ಕುಣಿದು ಕುಪ್ಪಳಿಸುವ ರೀತಿ ಕಂಡಾಗ, ಮತ್ತೆ ಮಗುವಾಗಬೇಕು ಅನ್ನಿಸುವುದು. ಎಲ್ಲವನ್ನು ಮರೆತು ಬೇಸರವನ್ನು ಭೂವಿಯಲ್ಲಿ ಅದುಮಿ ಕುಣಿಯಬೇಕಿದೆ. ಒತ್ತಡದ ಜೀವನಶೈಲಿಯಲ್ಲಿ ಸಂತೋಷದ ಹುಡುಕಾಟ. ದೊಡ್ಡ ಗೆಲುವಿಗಾಗಿ ನಿರಂತರ ಹೋರಾಟ. ಸಣ್ಣ ಗೆಲುವಿಗೆ ನಿರ್ಲಕ್ಷ, ಸಂಭ್ರಮಕ್ಕೂ ಮುಂದೂಡುವಿಕೆ. ನಮ್ಮ ಮಹತ್ವಾಕಾಂಕ್ಷೆಗಳ ಬೆನ್ನು ಹತ್ತಿ ನಾವು ನಮಗೆ ಅರಿವಿಲ್ಲದೆಯೇ ನಕಾರಾತ್ಮಕ ಮನೋಭಾವವನ್ನು ಸಹಜಗುಣವನ್ನಾಗಿ ಮಾಡಿಕೊಂಡಿರುತ್ತೇವೆ. ಇದರ ಪರಿಣಾಮ ಬೇರೆ ಬೇರೆ ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ನಿರಂತರ ಅತೃಪ್ತಿಯಲ್ಲಿ ಬದುಕು ಮುಂದುವರಿಯುತ್ತದೆ. ಸಹಜವಾಗಿಯೇ ಇದು ಒತ್ತಡಕ್ಕೆ ಕಾರಣವಾಗುತ್ತದೆ. ಈ ಒತ್ತಡ ಮತ್ತಷ್ಟು ಸಂತೋಷಗಳನ್ನು ಕಿತ್ತುಕೊಳ್ಳಲು

ತೊಡಗುತ್ತದೆ. ನಮ್ಮೊಳಗೆ ನಮಗೆ ಕಂಡುಕೊಳ್ಳಲಾಗದ ಸಂತೋಷವನ್ನು ಮತ್ತೆ ತಂದು ಕೊಡಲು ಸಾಧ್ಯವಿಲ್ಲ. ಮಾನಸಿಕ ಶಾಂತಿಯ ವಿಚಾರವೂ ಅಷ್ಟೇ. ಇವೆಲ್ಲವನ್ನೂ ನಾವೇ ಶೋಧಿಸಿಕೊಳ್ಳಬೇಕು. ಇದಕ್ಕೆ ಬೇಕಾಗಿರುವುದು ನಮ್ಮದೇ ಮಾರ್ಗ. ಅನೇಕ ಸಲ ನಾವು ನಮ್ಮ ಅಸ್ಥಿರತೆ ಅಭದ್ರತೆಯ ಕಾರಣಕ್ಕಾಗಿ ಪ್ರತಿಯೊಂದನ್ನು ಬೇರೆಯವರಿಗೆ ವಿವರಿಸಿ ಹೇಳಲು ಪ್ರಯತ್ನಿಸುತ್ತೇವೆ. ನಾನು ಯಾಕೆ ಹೀಗೆ ಮಾಡಿದೆ? ಯಾಕೆ ಹೀಗೆ ಯೋಚಿಸಿ ಯಾಕೆ ಹೀಗೆ ನಡೆದುಕೊಂಡೆ? ಯಾಕೆ ಈ ನಿರ್ಧಾರ ತೆಗೆದುಕೊಂಡೆ ಎಂಬುವುದರ ಸಂಪೂರ್ಣ ವಿವರಣೆ ನೀಡುವ ಅಗತ್ಯವಂತೂ ಇಲ್ಲ. ನಾನು ಯಾಕೆ ಹೀಗೆ ನಡೆದುಕೊಂಡೆ ಎಂದು ನಮ್ಮ ಮನಸ್ಸಿಗೆ ತಿಳಿದಿದ್ದರೆ ಸಾಕಲ್ಲವೇ. ನಮ್ಮ ತಪ್ಪಿದ್ದರೆ ಕ್ಷಮೆ ಕೇಳಬೇಕು. ನಮ್ಮ ಪ್ರತಿಕ್ರಿಯೆಯ ಪ್ರತಿ ನಡುವಳಿಕೆಯ ವಿವರಣೆ ಇನ್ನೊಬ್ಬರಿಗೆ ನೀಡುವ ಅಗತ್ಯವಂತೂ ಇಲ್ಲ.

• ಅಂಜಲಿ ಶ್ರೀನಿವಾಸ

ಲವ್ ಎವೆರಿ ಬಾಡಿ

ಮಾನವರಿಗೆ ದೈಹಿಕ ಕೆಲಸ, ದೇಹದ ಉಷ್ಣತೆ ನಿರ್ವಹಣೆ, ಚಯಾಪಾಪಚಯ ಚಟುವಟಿಕೆ ಮತ್ತು ಬೆಳವಣಿಗೆಯ ನೆರವಿಗಾಗಿ ಸೂಕ್ತ ಪ್ರಮಾಣದ ಶಕ್ತಿ ಬೇಕಾಗುತ್ತದೆ. ಸಮೀಕ್ಷೆಯೊಂದರ ಪ್ರಕಾರ ಭಾರತದಲ್ಲಿ ಶೇ. 50 ಪುರುಷರು ಮತ್ತು ಮಹಿಳೆಯರು ಶಕ್ತಿಯ ಕೊರತೆಯಿಂದ ಬಳಲುತ್ತಿದ್ದಾರೆ. ಒಬ್ಬ ವ್ಯಕ್ತಿಗೆ ಒಂದು ದಿನಕ್ಕೆ ಬೇಕಾಗುವ ಶಕ್ತಿಯ ಪ್ರಮಾಣ, ಆತನ ಶಕ್ತಿಯ ಬಳಕೆಯ ಮೇಲೆ ಅವಲಂಬಿತವಾಗಿದೆ. ಅಲ್ಲದೆ ವಯಸ್ಸು, ದೇಹದ ತೂಕ, ದೈಹಿಕ ಚಟುವಟಿಕೆಯ ಮಟ್ಟ, ಬೆಳವಣಿಗೆ ಮತ್ತು ದೈಹಿಕ ಸ್ಥಿತಿಗತಿಯನ್ನೂ ಅವಲಂಬಿಸಿದೆ. ಭಾರತದಲ್ಲಿ, 70%-80% ಆಹಾರದ ಕ್ಯಾಲರಿಗಳು ಆಹಾರ ಪದಾರ್ಥಗಳಾದಂತಹ ದವಸಗಳು, ದ್ವಿದಳಧಾನ್ಯಗಳು, ಕಾಳುಗಳು ಮತ್ತು ಕಂದಮೂಲಗಳಿಂದ ಸಿಗುತ್ತದೆ. ಪ್ರೌಢಾವಸ್ಥೆಯಲ್ಲಿರುವವರು ಸೇರಿದಂತೆ ಮಕ್ಕಳು ತಮಗೆ ಬೇಕಾಗುವ ದಿನನಿತ್ಯದ ಕ್ಯಾಲರಿಗಳಲ್ಲಿ 55%-60% ರಷ್ಟು ಕಾರ್ಬೋಹೈಡ್ರೇಟ್ಸ್‌ನಿಂದ ಪಡೆಯುತ್ತಾರೆ.

• ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

ಇ-ಮೇಲ್: vishwavanimagazine@gmail.com

ನಾದ ನಿನಾದ

• ವಿಜಯಕುಮಾರ್ ಕಟ್ಟೆ

ಪ್ರತಿಯೊಂದು ವೃತ್ತಿಯಲ್ಲೂ ಅದು ಯಾವುದೇ ಉದ್ಯೋಗವಾಗಿರಲಿ, ಕ್ಷೇತ್ರವಾಗಿರಲಿ ಅದಕ್ಕೆ ಅದರದ್ದೇ ಆದ ಏರುಪೇರುಗಳಿರುತ್ತವೆ. ನೋಡುವವರಿಗೆ ಅವರ ಖ್ಯಾತಿ, ಸಂಪಾದನೆ ಇತ್ಯಾದಿ ಕಾಣಿಸುವುದೇ ಹೊರತು ಅದರ ಹಿಂದೆ ಅವರು ಈ ಸ್ಥಾನಕ್ಕೆ ಬರಲು ಪಟ್ಟ ಕಷ್ಟ ಏನಿದೆ ಅನ್ನುವುದನ್ನು ಅರಿಯದೆ ಕೇವಲವಾಗಿ ಮಾತಾಡುವವರು ಬಹಳ ಮಂದಿ. 'ಅವರೇನ್ರಿ, ಸಾಫ್ಟ್‌ವೇರ್ ಇಂಜಿನೀಯರ್ ಸಿಕ್ಕಾಪಟ್ಟೆ ಸಂಬಳ ಬರುತ್ತೆ, ಅವರೇನ್ರಿ,

ಡಾಕ್ಟರ್ ಒಳ್ಳೆ ಸಂಪಾದನೆ, ಅವರೇನ್ರಿ, ಬಿಸಿನೆಸ್ ಮಾಡ್ತಾರೆ, ಅವರೇನ್ರಿ ಆಕ್ಟರ್, ಅವರೇನ್ರಿ ಮಾಡೆಲ್, ಅವರೇನ್ರಿ ಸಿಂಗರ್..' ಹೀಗೆ ಎಲ್ಲರಿಗು ಸಲೀಸಾಗಿ ದುಡ್ಡಿನ ಸುರಿಮಳೆ ಆಗುತ್ತೆ' ಅನ್ನುವ ಭಾವನೆ ತುಂಬಿ ಬಹಳ ಹಗುರವಾಗಿ ಬಹಳಷ್ಟು ಮಾತುಗಳು ಕೇಳಿಬರುತ್ತವೆ. ಸಾಧಕರ ಪರಿಶ್ರಮ, ಗುರಿ ತಲುಪಲು ಅವರುಗಳು ಪಟ್ಟಿರುವ ಕಷ್ಟ-ನಷ್ಟಗಳನ್ನು ತಿಳಿಯದೆ ಆಡುವ ಕುಹಕದ ಮಾತುಗಳಿವು.

ಅದರಲ್ಲೂ ಸಂಗೀತ ಕ್ಷೇತ್ರದಲ್ಲಿ ಒಂದು ಹಂತಕ್ಕೆ ಬರಲು ಅವರು ಸಾಗಿ ಬಂದ ಮಾರ್ಗ, ಎದುರಿಸಿದ ಸವಾಲುಗಳು, ಪ್ರೋತ್ಸಾಹ ನೀಡದ ಮನೆಯವರು, ಸಂಬಂಧಿಕರು, ಎರಡು ಹೊತ್ತು ಊಟಕ್ಕಾಗಿ ಕೂಡ ಒದ್ದಾಡಿದ ದಿನಗಳು, ಎಷ್ಟು ಹೇಳಿದರು ಕೆಲಸಕ್ಕೆ ಸೇರದೆ, ತಮ್ಮ ಮಾತನ್ನು ಕೇಳದೆ ಸಂಗೀತ, ಸಂಗೀತ ಎಂದು ಜೀವನ ಹಾಳುಮಾಡಿಕೊಂಡ ಎಂಬ ಮನೆಯವರ, ಸುತ್ತಮುತ್ತಲಿನವರ ಚುಚ್ಚು ಮಾತುಗಳು. ಹೀಗೆ ದುರ್ಗಮ ದಾರಿಯಲ್ಲಿ ನಡೆದು ಬಂದ ಇವರುಗಳಿಗೆ ಸಾಧನೆ ಮಾಡಬೇಕೆಂಬ ಒಂದೇ ಒಂದು ಗುರಿ ಅವರನ್ನು ಉನ್ನತ ಹಂತಕ್ಕೆ ತಂದು ನಿಲ್ಲಿಸಿರುತ್ತದೆ.

ಬಹಳಷ್ಟು ಮಂದಿ ಚಿಕ್ಕಂದಿನಿಂದಲೇ ಮನೆಯವರ ವಿರೋಧವನ್ನು ಎದುರಿಸಿ ಇತ್ತ ಕಡೆ ಓದಲು ಮನಸ್ಸಿಲ್ಲದೆ ತಮ್ಮ ಜೀವನದಲ್ಲಿ ಧೈರ್ಯವಾದ ದೊಡ್ಡ ಹೆಜ್ಜೆ ಇಡಬೇಕಾಗುತ್ತದೆ. ಅದರಲ್ಲಿ ಯಶಸ್ಸು ಸಿಗುತ್ತದೆ ಎನ್ನುವ ಗ್ಯಾರಂಟಿ ಕೂಡ ಇರುವುದಿಲ್ಲ. ಆದರೂ ತಮ್ಮ ಗುರಿಯ ಕಡೆ ನಡೆಯಲು ಬೆಳಗ್ಗೆ ಬೇಗ ಎದ್ದು ಸಂಗೀತಾಭ್ಯಾಸ, ಇರುವ ದುಡ್ಡಿನಲ್ಲೇ ಊಟ ತಿಂಡಿ, ಕೆಲವೊಮ್ಮೆ ಉಪವಾಸ, ಜತೆಗೆ ಯಾವ ಗಾಡ್ ಫಾದರ್ ಇಲ್ಲದಿರುವುದು, ಇನ್ನು ಅನೇಕ ತೊಡರುಗಳನ್ನು ಸಾಗಿ ಮುಂದೆ ಬಂದಿರುತ್ತಾರೆ. ಇದಿಷ್ಟು ಎದುರಿಸಬೇಕಾದ ವೈಯುಕ್ತಿಕ ತೊಂದರೆಗಳಾದರೆ, ವೃತ್ತಿಯಲ್ಲಿ ಸ್ವಲ್ಪವೇ ಸ್ವಲ್ಪ ಅವಕಾಶಗಳು ಅವರಿಗಿರುತ್ತವೆ. ಅದರಲ್ಲಿ ವಿಪರೀತವಾದ ಸ್ಪರ್ಧೆ, ಮಧ್ಯೆ ಎಲ್ಲರ ಜತೆ ಗುದ್ದಾಡುತ್ತಾ, ಅವಕಾಶಕ್ಕಾಗಿ ಅಲೆದು, ಗಂಟೆಗಟ್ಟಲೇ ಕಾದು ತಮಗೊಂದು ವೈಯಕ್ತಿಕ ಜೀವನದೆ ಎಂಬುದನ್ನೂ ಮರೆತು ಜೀವನ ಸಾಗಿಸುವ ಅನಿವಾರ್ಯತೆ ಅವರದ್ದು. ಆಶಾ ಭಾವನೆ ಮತ್ತು ಗುರಿ ಮುಟ್ಟಬೇಕೆಂಬ ಛಲ ಕೊನೆಗೂ ಅವರಿಗೆ ಒಂದು ಉತ್ತಮವಾದ ವೇದಿಕೆ ಕಲ್ಪಿಸಿ ಅವರ ಇಷ್ಟು ದಿನದ ಪರಿಶ್ರಮಕ್ಕೆ ಫಲ ನೀಡುವ ಕಾಲ ಬರುವಂತೆ ಮಾಡುವುದು.

ಪ್ರಪಂಚದಲ್ಲಿ ಸುತ್ತಮುತ್ತಲಿನ ಎಲ್ಲರಿಗು ಉತ್ತರಕೊಡುವುದು, ಸಮಜಾಯಿಸಿ ಕೊಡುತ್ತ ಜೀವನ ಮಾಡುವುದು ಕಷ್ಟ. ಹೀಗೆ ಹಿಂದೆ ಆಡಿಕೊಳ್ಳುವ, ಹಂಗಿಸುವ, ನಿಂದಿಸುವರ ಮಧ್ಯೆ ಎಲ್ಲವನ್ನು ಸಹಿಸಿಕೊಂಡು, ತಮ್ಮ ಸಾಧನೆ ಮಾಡುವುದು ಅಂದುಕೊಂಡಷ್ಟು ಸುಲಭವಂತೂ ಖಂಡಿತ ಅಲ್ಲ. ಯಾವುದೇ ಹಿನ್ನೆಲೆ ಇಲ್ಲದೆ ನಿರಂತರ ಸಾಧನೆ ಮಾಡಿ ಕೀರ್ತಿ, ಜನರ ಪ್ರೀತಿ ಗಳಿಸಿರುವ ಇಂತಹ ಸಾಧಕರನ್ನು ಮೆಚ್ಚಿ ಒಳ್ಳೆಯ ಮಾತಾಡುವುದನ್ನು ಬಿಟ್ಟು, ಒಳ್ಳೆಯ ಮಾತನಾಡದಿದ್ದರು ಕಹಿಯಾದ ನುಡಿಗಳನ್ನೂ ಆಡುವುದು ಬಿಟ್ಟರೆ ಎಷ್ಟು ಚೆನ್ನ ಅಲ್ಲವೇ.

ಎನ್ನ ಕಿವುಡನ ಮಾಡದಿರಯ್ಯ!

ಕಿವಿ ನಮ್ಮ ಪಂಚೇಂದ್ರಿಯಗಳ ಒಂದು ಮುಖ್ಯ ಅಂಗವಾಗಿದ್ದು, ಅದನ್ನು ಬುದ್ದೀಂದ್ರಿಯ, ಜ್ಞಾನೇಂದ್ರಿಯದ ಭಾಗವೆಂದು ಪರಿಗಣಿಸಿದ್ದಾರೆ. ಕಿವಿ ಎಲ್ಲವನ್ನು ಕೇಳುತ್ತವೆ . ಒಳ್ಳೆಯದು ಇರಬಹುದು, ಕೆಟ್ಟದ್ದೂ ಇರಬಹುದು, ಹೊಗಳಿಕೆಯೂ ಇರಬಹುದು, ತೆಗಳಿಕೆಯೂ ಇರಬಹುದು. 'ಕಿವಿಯೇ ಕರ್ಮಕೆ ದ್ವಾರ, ಕಿವಿಯಿಂದಲೇ ಕೇಳೊ ಮೋಕ್ಷದ ಸಾರ' ಎಂದಿದ್ದಾರೆ ಕನಕದಾಸರು. ಇಂಥ ಕಿವಿಯೂ ಕೆಲವೊಂದು ಅನಾರೋಗ್ಯ, ಅಪಘಾತದಿಂದಾಗಿ ತನ್ನ ಕಾರ್ಯವನ್ನು ಸ್ಥಗಿತಗೊಳಿಸುವ ಸಾಧ್ಯತೆಯೂ ಇದೆ.

ವೈದ್ಯರು ಕಿವುಡುತನವನ್ನು ವಿಶಾಲವಾಗಿ ಎರಡು ಗುಂಪುಗಳಲ್ಲಿ ವಿಂಗಡಿಸುತ್ತಾರೆ.

1. ಕೇಂದ್ರೀಯ ಕಿವುಡತನ 2. ಪರೀಧೀಯ ಕಿವುಡುತನ

ಮೊದಲನೆಯದು ತೀರಾ ಅಪರೂಪವಾದದ್ದು. ಮೆದುಳಿನ ಶ್ರವಣ ಕ್ಷೇತ್ರಕ್ಕೆ ಹಾನಿಯಾದಾಗ ಇಂತಹ ಕಿವುಡುತನ ಕಂಡುಬರಬಹುದು. ಪರೀಧೀಯ ಕಿವುಡುತನ ಸರ್ವೇಸಾಮಾನ್ಯವಾದದ್ದು. ಇದು ಮಿದುಳಿನಿಂದ ಹೊರಗಿರುವ ಶ್ರವನಾಂಗಗಳಲ್ಲಿ ಕಂಡು ಬರುವ ದೋಷಗಳಿಂದ ತಲೆದೋರುತ್ತದೆ.

ವಯಸ್ಸಾದಂತೆ ಕಿವುಡು ಸದ್ದಿಲ್ಲದೇ ಮೆಲ್ಲ ಮೆಲ್ಲಗೆ ಹೆಜ್ಜೆ ಹಾಕುತ್ತಾ ಬರುವುದು. ವೃದ್ಧರು ತಮಗೆ ಕಿವಿ ಸರಿಯಾಗಿ ಕೇಳದಿದ್ದಾಗ ಬೇರೆಯವರೊಡನೆ ಬೆರೆಯಲು ಹಿಂಜರಿಯುತ್ತಾರೆ. ಇಂತಹ ನಿರ್ಭಂಧವು ಮುಂದೆ ದೈಹಿಕ ಹಾಗೂ ಮಾನಸಿಕ ತೊಂದರೆಗಳಿಗೆ ದಾರಿ ಮಾಡಿಕೊಡುವುದು ನಿಶ್ಚಿತ. ಕಿವುಡುತನ ವ್ಯಕ್ತಿಯಲ್ಲಿ ಮತ್ತು ಇತರರಲ್ಲಿ ಅಸಹನೆ, ಸಿಡುಕುತನವನ್ನುಂಟು ಮಾಡುತ್ತದೆ. ಆದ್ದರಿಂದ ಕಿವಿಯ ಕೇಳುವಿಕೆಯ ಬಗ್ಗೆ ನಿಗಾವಹಿಸಿ ಅದನ್ನು ರಕ್ಷಿಸಿಕೊಳ್ಳಬೇಕಾದದ್ದು ಮತ್ತು ತೊಂದರೆಗಳನ್ನು ಸರಿಪಡಿಸಿಕೊಳ್ಳಬೇಕಾದದ್ದು ಅನಿವಾರ್ಯವೂ ಹೌದು.

ಯೋಗ ಕ್ಷೇಮ

• ಡಾ.ಕರವೀರಪ್ರಭು ಕ್ಯಾಲಕೊಂಡ

ವಯಸ್ಸಾದಂತೆ ಕಿವಿಯ ನರಗಳು ಚುರುಕುತನವನ್ನು ಕಳೆದುಕೊಳ್ಳುವುದನ್ನೇ 'ಪ್ರೆಸ್ ಬಿ ಅಕ್ಯೂಸಿಸ್ 'ಎಂದು ಹೆಸರು. ಇದು ತೀರಾ ಸಾಧಾರಣವಾಗಿ ವೃದ್ಧರಲ್ಲಿ ಕಂಡು ಬರುವ ಅರೆಗಿವುಡು. ಕೆಲವು ಅಂಶಗಳು ಕಿವಿಯ ಕೇಳುವಿಕೆಯನ್ನು ಹಾಳುಗೆಡವುತ್ತವೆ.

• ಕಿವಿಯಲ್ಲಿ ಗುಗ್ಗೆ ಶೇಖರಗೊಳ್ಳುವುದು. • ಕಿವಿಯ ನಾಳದಲ್ಲಿ ಪರಕೀಯ ವಸ್ತು ಸೇರುವುದು. • ಅನುವಂಶಿಕ ಕಿವಿ ಕಾಯಿಲೆಗಳು. • ಕಿವಿಯ ಕಾಯಿಲೆಗಳು: ಮೇನಿಯರ್ಸ್ ಕಾಯಿಲೆ, ಓಟೋಸ್ಕ್ಲೀರೋಸಿಸ್ (ಕಿವಿಮೂಳೆಗಳ ಬಿಗಿಯಾಗುವಿಕೆ) ಸೋಂಕುಗಳು.

• ಔಷಧಗಳಿಂದಾಗುವ ಕೇಳುವಿಕೆಯ ಊನ: ಸ್ಟ್ರೆಪ್ಟೋ ಮೈಸಿನ್, ಜೆಂಟಾ ಮೈಸಿನ್ , ಆಸ್ಪಿರಿನ್ ಇತ್ಯಾದಿ.

• ಅಪಘಾತಗಳು.

ಫೋಲಿಕ್ ಆಸಿಡ್ ಪ್ರಮಾಣದಲ್ಲಿ ಶೇ.35 ಭಾಗದಷ್ಟು ಕೊರತೆ ಉಂಟಾದರೆ ಭಾರೀ ದೊಡ್ಡ ಪ್ರಮಾಣದ ಶಬ್ದಗಳು ಸಹ ಕೇಳಿಸದಷ್ಟು ಕಿವುಡುತನ ಉಂಟಾಗುತ್ತದೆ. ಹಾಗೆಯೇ ಫೋಲಿಕ್ ಆಸಿಡ್ ಜತೆಗೆ ಬಿ12 ವಿಟಾಮಿನ್ ಕೊರತೆಯೂ ಸಹ ಇದಕ್ಕೆ ಕಾರಣವಾಗುತ್ತದೆ.

ಸಂಶೋಧನೆ ಏನು ಹೇಳಿದೆ?

ಕಿವಿಯ ರಕ್ತನಾಳಗಳಲ್ಲಿ ಆಗುವ ಬದಲಾವಣೆಗಳು, ಜೋರಾದ



ಶಬ್ದಕ್ಕೆ ದೀರ್ಘ ಕಾಲ ತೆರೆದುಕೊಂಡಿರುವ ಕಿವಿಗಳು, ನ್ಯೂನ ಪೋಷಣೆಗೆ ಸಂಬಂಧಿಸಿದ ಕಿವುಡು, ವಂಶಪಾರಂಪರ್ಯ, ಪರಿಜ್ಞಾನದ ಕೊರತೆ, ಮೂಗು ಮತ್ತು ಕಿವಿಯಲ್ಲಿ ಸೋಂಕು ಉಂಟಾಗುವುದು, ಇವೆಲ್ಲಾ ವೃದ್ಧಾಪ್ಯದ ಕಿವುಡನ್ನು ಹುಟ್ಟುಹಾಕುತ್ತವೆ. ವೃದ್ಧಾಪ್ಯದಲ್ಲಿ ಶ್ರವಣಶಕ್ತಿ ಕಡಿಮೆಯಾಗಿ ಕಿವುಡುತನ ಉಂಟಾಗುವುದಕ್ಕೆ ಫೋಲೆಟ್ , ಬಿ12 ವಿಟಮಿನ್ ಗಳ ಕೊರತೆಯೂ ಸಹ ಕಾರಣವಾಗುತ್ತದೆ ಎಂದು ಅಧ್ಯಯನಗಳು ತಿಳಿಸಿವೆ.

ಕಿವಿಗಳಲ್ಲಿರುವ ಅತ್ಯಂತ ಸೂಕ್ಷ್ಮವಾದ ಶ್ರವಣಾಂಗಗಳಲ್ಲಿ ಶಕ್ತಿಹೀನತೆಯ ಜತೆಗೆ ಇತರ ಕೆಲವು ಅಂಶಗಳು ಸೇರುವುದರಿಂದ ಶ್ರವಣಶಕ್ತಿ ಕುಗ್ಗುತ್ತದೆ ಎಂದು ಸಂಶೋಧನೆಗಳಿಂದ ತಿಳಿದು ಬಂದಿದೆ. ಒಂದೇ ವಯಸ್ಸಿನ ವೃದ್ಧರಲ್ಲಿ ಸಾಮಾನ್ಯ ಶ್ರವಣಶಕ್ತಿ ಹೊಂದಿರುವವರಿಗೆ ಹೋಲಿಸಿದರೆ, ಶ್ರವಣಶಕ್ತಿ ಕಡಿಮೆ ಇರುವವರ ರಕ್ತದಲ್ಲಿ ಫೋಲೆಟ್ ಪ್ರಮಾಣ ಕಡಿಮೆ ಇರುತ್ತದೆ ಎಂದು ನೈಜೀರಿಯಾದಲ್ಲಿನ ಇಬದಾನ್ ವಿಶ್ವವಿದ್ಯಾಲಯದ ಸಂಶೋಧಕರು ಕಂಡು ಹಿಡಿದಿದ್ದಾರೆ.

ಔಷಧದ ನೆರವಿನಿಂದ ಸಮಸ್ಯೆ ನಿವಾರಣೆ

ಈ ಕೊರತೆಯನ್ನು ಬಹಳ ಸುಲಭವಾಗಿ ಔಷಧಗಳು ಮತ್ತು ಮಾತ್ರೆಗಳ ನೆರವಿನಿಂದ ಗುಪಡಿಸಬಹುದೆಂದು ತಜ್ಞರು ಕಂಡು ಹಿಡಿದಿರುವುದು ಒಂದು ವಿಶೇಷ. ಫೋಲಿಕ್ ಆಸಿಡ್ ಮತ್ತು ಬಿ12 ವಿಟಾಮಿನ್ ಗಳನ್ನು ಕೊಡುವುದರಿಂದ ಶ್ರವಣ ಶಕ್ತಿ ಹೆಚ್ಚುವುದಷ್ಟೇ ಅಲ್ಲ ಜ್ಞಾಪಕ ಶಕ್ತಿಯೂ ಬೆಳೆಯುತ್ತದೆ. ಕೈಕಾಲುಗಳಲ್ಲಿಯ ನಾಡಿಕ್ರಿಯೆಯ ಶಕ್ತಿ ವೃದ್ಧಿಯಾಗುತ್ತದೆ. ಅದರ ಜತೆಗೆ ನರಮಂಡಲದ ಕೇಂದ್ರ ವ್ಯವಸ್ಥೆ ಸಹ ಸಾಮರ್ಥ್ಯ ಬೆಳೆಸಿಕೊಳ್ಳುತ್ತದೆ ಎಂದು ಕಂಡುಕೊಂಡಿದ್ದಾರೆ .

ಪ್ರಪಂಚದಾದ್ಯಂತ ವೃದ್ದರ ಸಂಖ್ಯೆ ಹೆಚ್ಚುತ್ತಿರುವ ಇಂತಹ ಸಂದರ್ಭದಲ್ಲಿ ಈ ಸಂಶೋಧನೆಗೆ ಬಹಳ ಮಹತ್ವ ದೊರೆತಿದೆ. ವೃದ್ಧಾಪ್ಯದಲ್ಲಿ ಕಿವುಡುತನದ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಹಳೆಯ ನಂಬಿಕೆಯನ್ನು ತೊಲಗಿಸುತ್ತದೆಯೆಂದೂ, ಆ ಸಮಸ್ಯೆಯನ್ನು ಮೀರುವ ಶಕ್ತಿಯನ್ನು ಕೆಲವರಿಗಾದರೂ ದೊರಕಿಸಿಕೊಡಬಹುದಾದ ಸಾಧ್ಯತೆಯಿದೆ ಎಂಬುದನ್ನು ವಿವರಿಸಿದ್ದಾರೆ.

ದಿನ ದರ್ಶಿಕೆ

ಜೇಷ್ಠ ಮಾಸ, ನಕ್ಷತ್ರ ಭರಣಿ, ಏಕಾದಶಿ, ಯೋಗ ಧೃತಿ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ಜೀರ್ಣಕ್ರಿಯೆ ನಿಧಾನವಾಗಿದ್ದರೆ, ಗ್ಯಾಸ್ಟ್ರಿಕ್ ಇದ್ದಲ್ಲಿ ಬೀಟ್ರೂಟ್, ಆಮ್ಲಾ ಮತ್ತು ಕ್ಯಾರೆಟ್‌ನ್ನು ಕುಕ್ಕರ್‌ಗೆ ಹಾಕಿ ಒಂದು ವಿಶಲ್ ಬರುವವರೆಗೆ ಬೇಯಿಸಿ. ನಂತರ ಅದೇ ನೀರಿನೊಂದಿಗೆ ರುಬ್ಬಿಕೊಂಡು ರಸವನ್ನು ತಯಾರಿಸಿ. ಇದನ್ನು ಬಳಸುವುದರಿಂದ ಜೀರ್ಣಶಕ್ತಿ ವೃದ್ಧಿಸುತ್ತದೆ. ಹೊಟ್ಟೆ ಉಬ್ಬರ ಕಡಿಮೆಯಾಗುವುದು.

ಸೌಂದರ್ಯ ಸೂತ್ರ

ಒಂದು ಚಮಚ ಜ್ಯೇಷ್ಠಮಧುವಿನ ಪುಡಿ, 1/2 ಚಮಚ ಶ್ರೀಗಂಧದ ಪುಡಿ, 2 ಚಮಚ ಹಸಿ ಹಾಲನ್ನು ಮಿಕ್ಸ್ ಮಾಡಿ ಮುಖ ಕುತ್ತಿಗೆ ಭಾಗಕ್ಕೆ ಹಚ್ಚಿ 15-20 ನಿಮಿಷ ಬಿಟ್ಟು ಮುಖ ತೊಳೆಯಿರಿ. ಈ ರೀತಿ ಮಾಡುತ್ತಿದ್ದರೆ ಮುಖದಲ್ಲಿರುವ ಕಪ್ಪು ಕಲೆ ದೂರಾಗುವುದು. ವಾರದಲ್ಲಿ 2-3 ಬಾರಿ ಬಳಸಿದರೂ ಉತ್ತಮ ಫಲಿತಾಂಶ ಸಿಗುವುದು.

ದಿನ ಭವಿಷ್ಯ

ಮೇಷ ವ್ಯಾಪಾರ ಉತ್ತಮ ಆರಂಭ ಕಾಣಲಿವೆ. ಇದರಿಂದ ಮನಸ್ಸಿಗೆ ಸಂತೋಷ. ಕಾನೂನು ನ್ಯಾಯಾಲಯದ ವಿಷಯದಲ್ಲಿ, ಸಲಹೆ ತೆಗೆದುಕೊಳ್ಳಿ.

ವೃಷಭ ಕೆಲವು ಸ್ಥಗಿತಗೊಂಡ ಕೆಲಸಗಳಿಂದ ಸಮಸ್ಯೆ ಎದುರಿಸಬೇ ಕಾಗಬಹುದು. ಮದುವೆಯ ಪ್ರಸ್ತಾಪ ಬರಬಹುದು.

ಮಿಥುನ ಇಂದು ಪ್ರಗತಿಯ ದಿನವಾಗಿರುತ್ತದೆ. ಪಾರ್ಟ್‌ಟೈಮ್ ಕೆಲಸವನ್ನೂ ಮಾಡುವ ಯೋಚನೆಯಲ್ಲಿದ್ದರೆ ಈಡೇರುತ್ತದೆ.

ಕಟಕ ವ್ಯವಹಾರದಲ್ಲಿ ಏರಿಳಿತದ ನಂತರ, ನೀವು ಉತ್ತಮ ಹಣವನ್ನು ಗಳಿಸಲು ಸಾಧ್ಯವಾಗುತ್ತದೆ.

ಸಿಂಹ ಸದ್ಯಕ್ಕೆ ಕೋಪ ಮಾಡಿಕೊಳ್ಳುವುದನ್ನು ತಪ್ಪಿಸಬೇಕು. ಕ್ಷೀಣಿಸಿರುವ ಕುಟುಂಬದ ಸದಸ್ಯರ ಆರೋಗ್ಯ ಇಂದು ಸುಧಾರಿಸುತ್ತದೆ.

ಕನ್ಯಾ ಆಹಾರ ಪದ್ಧತಿಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ಸಂಗಾತಿಯೊಂದಿಗೆ ಲಾಂಗ್ ಡ್ರೈವ್‌ಗೆ ಹೋಗಬಹುದು.

ತುಲಾ ಕೆಲಸದ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲವು ವಿಶೇಷ ಮಾಹಿತಿಯನ್ನು ಪಡೆಯುವಿರಿ. ನಿಮ್ಮಿಷ್ಟದ ವಸ್ತು ಖರೀದಿಸಲಿರುವಿರಿ.

ವೃಶ್ಚಿಕ ಇಂದು ನಿಮ್ಮ ತಾಯಿಯ ಆರೋಗ್ಯವನ್ನು ನೋಡಿಕೊಳ್ಳಿ, ಇಲ್ಲದಿದ್ದರೆ ಮುಂದೆ ಸಮಸ್ಯೆಯಾಗಬಹುದು. ಅತಿಯಾಗಿ ನಂಬಬೇಡಿ.

ಧನು ಇಂದು ಬೌದ್ಧಿಕ ಮತ್ತು ಮಾನಸಿಕ ಹೊರೆಯನ್ನು ತೊಡೆದುಹಾಕುವ ದಿನವಾಗಿದೆ. ನಿಮ್ಮೊಳಗೆ ಅಡಗಿರುವ ಪ್ರತಿಭೆಯ ಹೊರಬರಲಿದೆ.

ಮಕರ ವ್ಯಾಪಾರಸ್ಥರು ಕಹಿಯನ್ನು ಸಿಹಿಯಾಗಿ ಪರಿವರ್ತಿಸುವ ಕಲೆಯನ್ನು ಕಲಿಯುವ ಮೂಲಕ ಉತ್ತಮ ಹೆಸರನ್ನು ಗಳಿಸುತ್ತಾರೆ.

ಕುಂಭ ಹಳೆಯ ವಹಿವಾಟುಗಳನ್ನು ಇತ್ಯರ್ಥಪಡಿಸಿ. ಜವಾಬ್ದಾರಿಯುತವಾಗಿ ಕೆಲಸ ಮಾಡುವುದು ಸೂಕ್ತವಾಗಿರುತ್ತದೆ.

ಮೀನ ನೀವು ಕೆಲಸದ ಸ್ಥಳದಲ್ಲಿ ಕೆಲವು ಜವಾಬ್ದಾರಿಗಳನ್ನು ತೆಗೆದುಕೊಂಡಿದ್ದರೆ, ಅವುಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಿ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1978 - ಕನ್ನಡದ ನಟ ಗಣೇಶ್ ಜನನ
- 1940 - ಕಲ್ಕತ್ತಾದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಸುಭಾಸ್ ಚಂದ್ರ ಬೋಸ್‌ರ ಬಂಧನ
- 1916 - ಭಾರತದ ಭೂವೈಜ್ಞಾನಿಕ ಸಮೀಕ್ಷೆಯನ್ನು ಸ್ಥಾಪಿಸಲಾಯಿತು.
- ವಿಶ್ವ ಕ್ರೀಡಾ ಪತ್ರಕರ್ತರ ದಿನ

ಚಿತ್ರಸ್ಫೂರ್ತಿ



ಸಂಜೆಯ ರಾಗಕೆ ಬಣ್ಣದೋಕುಳಿಯಲ್ಲಿ ಮೀಯುತ್ತಿರುವ ಪ್ರೇಮಸೌಧ

ಚಿತ್ರಕೃಪೆ; ಆಶಿಕ್

ದೇವರು ಎಲ್ಲಿದ್ದಾನೆ ? ಎಂಬುದಕ್ಕೆ ಉತ್ತರ..

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

1949 ರಲ್ಲಿ ಮೈಸೂರಿನ ಸುಬ್ರಾಯ ರಾಜ ಅರಸರ ಮನೆಯ ಪಕ್ಕದ ಮನೆಯಲ್ಲಿ ಶ್ರೀ ಶ್ರೀಧರಸ್ವಾಮಿಗಳ ವಾಸ್ತವ್ಯವಿತ್ತು . ಆ ಸಂದರ್ಭದಲ್ಲಿ ನಾಸ್ತಿಕರಾಗಿದ್ದ ವಕೀಲರು ದೇವರು ಎಲ್ಲಿದ್ದಾನೆ, ನಮಗೆಲ್ಲರಿಗೂ ಏಕೆ ಕಾಣುವುದಿಲ್ಲ ? ಎಂಬ ಪ್ರಶ್ನೆಗೆ ಗುರುಗಳು ನೀಡಿದ ಪ್ರವಚನ.

ಜಗತ್ತಿನ ಸ್ವಭಾವವನ್ನು ಸ್ವಲ್ಪ ವಿಚಾರ ಮಾಡಿ ನೋಡಿರಿ. ಒಂದು ದೇಶದ ಭಾಗದಲ್ಲಿ ಬೆಳೆಯುವಂತಹ ಬೆಳೆಗಳು ಇನೊಂದು ದೇಶಭಾಗದಲ್ಲಿ ಬೆಳೆಯುವುದಿಲ್ಲ . ಭೂಮಿಯೆಂಬುದು ಒಂದೇ ಆದರೂ ಒಂದು ಮಣ್ಣಿನಲ್ಲಿ ಬೆಳೆಯುವ ವಸ್ತು ಇನ್ನೊಂದು ಮಣ್ಣಿನಲ್ಲಿ ಆಗುವುದಿಲ್ಲ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಇದರಿಂದ ದೇಶವೂ ಒಂದು ನಿಯಮದಲ್ಲಿ ಒಳವಟ್ಟಿರುವಂತೆ ಕಾಣುವುದಿಲ್ಲವೇ ? ಆಯಾಯ ಗಿಡ, ಮರ, ಬಳ್ಳಿಗಳಲ್ಲಿ ಹೂವು ಹಣ್ಣುಗಳಾಗುವುದು ನಿಯಮಿತ ಕಾಲದಲ್ಲಿಯೆ ಸರಿ . ವಸಂತಾದಿ ಋತುಗಳು ಒಂದರ ಹಿಂದೊಂದು ಬಂದ ಕೂಡಲೇ ಜಗತ್ತಿನ ಪ್ರಕೃತಿಯಲ್ಲಿ ಅಗುವ ಬದಲಾವಣೆಗಳು ನಮಗೆ ಕಾಣುತ್ತವೆಯಲ್ಲವೇ ?. ಅಂತೆಯೇ ಹಗಲಿರುಳು ಸಹ ನಿಯಮಕ್ಕೊಳಪಟ್ಟಂತೆಯೇ ಸಾಗುತ್ತಿರುವುದು. ಬೆಂಕಿಯು ಬಿಸಿಯಾಗಿರುವುದು, ನೀರು ತಣ್ಣಗಿರುವುದು ಮತ್ತು ಕಲ್ಲುಗಳು ಘನವಾಗಿರುವುದು ಒಂದು ನಿಯಮಕ್ಕೊಳಪಟ್ಟಿರುವುದು ಸ್ಪಷ್ಟವಾಗುವುದು. ಹೀಗೆ ಜಗತ್ತಿನಲ್ಲಿ ಎಲ್ಲಿ ನೋಡಿದರು ಎಡೆಬಿಡದೆ ಒಂದು ನಿಯಮವು ಇದ್ದೇ ಇರುವಂತೆ ಕಾಣುವುದರಿಂದ ಇವಲ್ಲಕ್ಕೂ ಒಬ್ಬ ನಿಯಾಮಕನಿರಬೇಕೆಂದು ಒಪ್ಪಿಕೊಳ್ಳದಿದ್ದರೆ ಗತ್ಯಂತರವೇ ಇಲ್ಲ. ಈ ನಿಯಾಮಕನಾದವನಿಗೆ ದೇವರೆಂದು ಹೆಸರು. ಸೂರ್ಯ ಚಂದ್ರ, ನಕ್ಷತ್ರಾದಿಗಳಲ್ಲಿ ಪ್ರಕಾಶವನ್ನು ತುಂಬಿದವರಾರು? ಕಣ್ಣಿನಲ್ಲಿ ಬೆಳಕನ್ನಿಟ್ಟವರಾರು? ಅವುಗಳಿಗೆ ನೋಡುವ ಶಕ್ತಿಯು ಯಾರಿಂದ ಬಂದಿರುವುದು? ಬಣ್ಣ ಬಣ್ಣದ ಹೂವು ಗಿಡಗಳು, ಪಕ್ಷಿಗಳು, ಪ್ರಾಣಿಗಳೂ ಇವುಗಳಿಗೆ ಬಣ್ಣ ಬರೆದವರಾರು? ಪಕ್ಷಿಗಳಿಗೆ ಆಕಾಶದಲ್ಲಿ ಹಾರುವ ಶಕ್ತಿ ಕೊಟ್ಟವರಾರು? ಇವನ್ನೆಲ್ಲಾ ನೋಡಿದರೆ ಇವಕ್ಕೆಲ್ಲಾ ಅಧಿಪತಿಯಾದ ಒಬ್ಬ ಕಾರಣ ಪುರುಷನಿರಬೇಕೆಂದು ಮನದಟ್ಟಾಗುವುದಿಲ್ಲವೇ? ಈ ಆಶ್ಚರ್ಯಕರವಾದ ಕಾರ್ಯಗಳು ಯಾರ ಸಹಜ ಲೀಲೆಯಾಗಿರುವುದೊ ಅವನೇ ದೇವರು. ದೇವರು, ಪರಮಾತ್ಮನು ಎಲ್ಲಿದ್ದಾನೆ ಎಂದರೆ ಆತನು ಅಲ್ಲಿ ಇಲ್ಲಿ ಎಂದಿಲ್ಲ . ಸರ್ವವ್ಯಾಪಿಯಾಗಿದ್ದಾನೆ. ಆ ಪರಮಾತ್ಮನು ಎಲ್ಲಾ ಜಾಗದಲ್ಲಿಯೂ ಕಾಲು ಕೈಗಳುಳ್ಳವನು, ಎಲ್ಲಾ ಜಾಗದಲ್ಲಿ ತಲೆ ಮತ್ತು ಮುಖಗಳುಳ್ಳವನು, ಬ್ರಹ್ಮಾಂಡವನ್ನೂ ಅವನು ಆವರಿಸಿರುವನು. ಅವನಿಲ್ಲದ ಸ್ಥಳವೇ ಇಲ್ಲ.

ಉದಾಹರಣೆಗೆ, ಬೆಣ್ಣೆ ಎಲ್ಲಿಂದ ಸಿಗುವುದು ಎಂದು ಕೇಳಿದರೆ ಹಾಲಿನಿಂದ ಎಂಬುದು ಎಲ್ಲರಿಗೂ ತಿಳಿದಿರುವುದು. ಅಂದರೆ ಹಾಲಿನಲ್ಲಿ ಬೆಣ್ಣೆಯಿದೆ ಎಂಬುದು ಸ್ಪಷ್ಟವಾಗಿ ತಿಳಿದ ಸಂಗತಿ. ಹಾಲಿನಲ್ಲಿ ಬೆಣ್ಣೆ ಎಲ್ಲಿದೆ? ಹೇಗಿದೆ? ಎಂದು ಕೇಳಿದರೆ ಹಾಲಿನಲ್ಲಿ ಅದು ಇಲ್ಲ ಎಂಬುದಿಲ್ಲ. ಹಾಲಿನಲೆಲ್ಲಾ ಬೆಣ್ಣೆಯು ವ್ಯಾಪಿಸಿಕೊಂಡಿದೆ ಅಲ್ಲವೆ? ಹಾಲಿನಲ್ಲಿ ಬೆಣ್ಣೆಯು ಕಣ್ಣಿಗೆ ಕಾಣುವುದಿಲ್ಲವೆಂದು, ಹಾಲಿನಲ್ಲಿ ಬೆಣ್ಣೆಯಿಲ್ಲವೆಂದು ಹೇಳಿದರೆ ಸರಿಯಾಗುವುದೆ? ಹಾಗಾದರೆ ಬೆಣ್ಣೆ ಕಾಣಬೇಕಾದರೆ ಏನು ಮಾಡಬೇಕು? ಹಾಲನ್ನು ಕಾಯಿಸಿ ತಣಿಸಿ,ಹೆಪ್ಪು ಹಾಕಿ ಮೊಸರಾದಾಗ ಆದನ್ನು ಕಡೆಯಬೇಕು. ಆವಾಗ ಬೆಣ್ಣೆಯ ದರ್ಶನವಾಗುವುದು ಅಲ್ಲವೆ? ಹಾಗೆಯೇ ದೇವರು ಸರ್ವವ್ಯಾಪಿಯಾಗಿದ್ದರೂ ಕಣ್ಣಿಗೆ ಕಾಣಿಸುವುದಿಲ್ಲ. ಶಾಸ್ತ್ರೋಕ್ತ ಕಾಮ್ಯಕರ್ಮವನ್ನು ಮಾಡಿ ಆನಂತರ ಕಾಮನೆಯ ತ್ಯಾಗ ಅಂದರೆ ನಿಷ್ಕಾಮ ಕರ್ಮವನ್ನು ಮಾಡಿ, ಭಕ್ತಿ - ಉಪಾಸನೆಯೆಂಬ ಹೆಪ್ಪು ಹಾಕಿ ಆಮೇಲೆ ಜ್ಞಾನವೆಂಬ ಕಡಗೋಲಿನಿಂದ ಮಥಿಸಲು ಆ ಪರಮಾತ್ಮನ ಸಾಕ್ಷಾತ್ಕಾರವಾಗುವುದು ಎಂದ ಶ್ರೀಗಳವರ ಅಮೃತ ನುಡಿಗಳಿಂದ ವಕೀಲರು ಮತ್ತು ಅಲ್ಲಿದ್ದ ಎಲ್ಲರೂ ಸಮಾಧಾನ ಹೊಂದಿದರು.

ಇಂತಹ ಜಿಜ್ಞಾಸೆಗಳು ಪ್ರಶ್ನೆಗಳು ನಮ್ಮಲ್ಲೂ ಮೂಡಬಹುದು ಅದಕ್ಕೆ ಶ್ರೀ ಶ್ರೀಧರ ಸ್ವಾಮಿಗಳ ಈ ಮಾತುಗಳು ಎಷ್ಟು ಸಮಂಜಸ ಅಲ್ಲವೇ? ನಮ್ಮ ಜೀವನದಲ್ಲೂ ನಡೆಯುವ ಅನೇಕ ಚಿಕ್ಕಪುಟ್ಟ ಪವಾಡದಂತಹ ಸನ್ನಿವೇಶಗಳಲ್ಲಿ ನಮಗೆ ದೇವರ ಇರುವಿಕೆ ಅನುಭವಕ್ಕೆ ಬರುತ್ತದೆ. ನಾವು ಊಹಿಸಲೂ ಸಾಧ್ಯವಿರದ ಅನೇಕ ಘಳಿಗೆಗಳಲ್ಲಿ ದೇವರಂತೆ ನಮ್ಮ ಸಮಯಕ್ಕೊದಗುವ ಮನುಷ್ಯರ ರೂಪದಲ್ಲೂ ದೇವರು ನಮಗೆ ನೆರವಾಗುತ್ತಾನೆ. ಭಕ್ತಿ ನಂಬಿಕೆ ಇದ್ದರೆ ದೇವರು ನಮ್ಮ ಅನುಭವಕ್ಕೆ ನಿಲುಕುವ ಶಕ್ತಿ .

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ಪ್ರ. ಯಾವ ಗ್ರಹದಲ್ಲಿ ಫಾಸ್ಫೈನ್ ಇರುವಿಕೆಯನ್ನು ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ?

- ಎ. ಗುರು.
- ಬಿ. ಶನಿ.
- ಸಿ. ಶುಕ್ರ.
- ಡಿ. ನೆಪ್ಚೂನ್.

ಉತ್ತರ: ಸಿ. ಶುಕ್ರ.

ಮಾಹಿತಿ

ಭೂಮಿಯ ಮೇಲಿನ ಸಡಿಲವಾದ ಹೈಡ್ರೋಜನ್ ಕೊರತೆಯು ಫಾಸ್ಫೈನ್ ರಚನೆಗೆ ಕಾರಣವಾಗುತ್ತದೆ. ಈ ಅಂಶವು ಇತರ ಗ್ರಹಗಳಲ್ಲಿ ಅದರ ಅಸ್ತಿತ್ವವು ಜೀವಾಂಕುರದ ಸಂಭಾವ್ಯ ಸೂಚಕವಾಗಿರಬಹುದು ಎಂದು ಸೂಚಿಸುತ್ತದೆ. ವೇಲ್ಸ್ ಕಾರ್ಡಿಫ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳ ತಂಡವು ಶುಕ್ರಗ್ರಹದಲ್ಲಿ ಜೀವಿಗಳಿರುವ ಬಗ್ಗೆ ಹುಡುಕಾಟನಡೆಸುತ್ತಿದ್ದಾಗ ಆದ ಹೊಸ ಬೆಳವಣಿಗೆಯನ್ನು ಘೋಷಿಸಿತು. ಅವರು ಈಗ ತಮ್ಮ ಹಿಂದಿನ ಸಂಶೋಧನೆಗಳಿಗಿಂತ ಆಳವಾದ ಮಟ್ಟದಲ್ಲಿ ಗ್ರಹದ ವಾತಾವರಣದಲ್ಲಿ ಫಾಸ್ಫೈನ್ ಅನ್ನು ಪತ್ತೆಹಚ್ಚಿದ್ದಾರೆ. ಈ ಕುರಿತು ಮಾಹಿತಿಯು ಸೆಪ್ಟೆಂಬರ್ 2020 ರಲ್ಲಿ ವರದಿಯಾಗಿದೆ. ಇದು ಜೀವಾಂಕುರದ ಸಂಭಾವ್ಯ ಉಪಸ್ಥಿತಿಯನ್ನು ಸೂಚಿಸುತ್ತದೆ.

ಕೃತಕ ಸುಗಂಧ ಇರಲಿ ಎಚ್ಚರ !

ವಿಜ್ಞಾನ ವಿಸ್ಮಯ

ಕೆ. ನಟರಾಜ್

ಇಂದು ಮಾನವನ ಜೀವನ ಕೃತಕ ಸುಗಂಧ ದ್ರವ್ಯಗಳಿಂದ ದಾಳಿಗೆ ಒಳಗಾಗಿದೆ ಎಂದರೆ ತಪ್ಪಲ್ಲ. ಕೇವಲ ಸುಗಂಧ ದ್ರವ್ಯಗಳೇ ಅಲ್ಲ, ನಾವು ಬಳಸುವ ಪ್ರತಿಯೊಂದು ವಸ್ತುವೂ ಪ್ರತಿಯೊಂದು ವಾತಾವರಣವೂ ಸುಗಂಧಪೂರಿತ ಆಗಿರಬೇಕೆಂದು ಬಯಸುತ್ತಿದ್ದೇವೆ. ಇಂದು ವ್ಯಾಪಾರಿ ಕ್ಷೇತ್ರ ಹೆಚ್ಚು ಹೆಚ್ಚು ಲಾಭಕ್ಕೆ ಈ ಸುಗಂಧ ದ್ರವ್ಯಗಳನ್ನು ಅಸ್ತ್ರಗಳನ್ನಾಗಿ ಬಳಸುತ್ತಿದೆ. ಈ ಸುಗಂಧ ದ್ರವ್ಯಗಳ ತಯಾರಿಕೆಗಾಗಿ ಅಪಾಯಕಾರಿ ರಾಸಾಯನಿಕಗಳನ್ನು ಬಳಸಲಾಗುತ್ತಿದೆ ಎಂಬುದು ಗೊತ್ತಿರಲಿ.

ನಮ್ಮ ಜೀವನದ ಪ್ರತಿ ಕ್ಷಣವೂ ಉಸಿರಾಟಕ್ಕೆ ಸಾಕ್ಷಿಯಾಗಿದೆ. ಉಸಿರಾಟದಿಂದಲೇ ನಮಗೆ ವಾಸನೆಯನ್ನು ಗ್ರಹಿಸುವ ಶಕ್ತಿ ಬಂದಿದೆ. ಈ ವಾಸನೆ ನಮ್ಮ ಜೀವನದಲ್ಲಿ ಅತ್ಯಂತ ಅತ್ಯಂತ ಮಹತ್ತರ ಪಾತ್ರ ವಹಿಸಿದೆ. ನಮ್ಮ ದೇಹವೂ ತನ್ನದೇ ಆದ ವಾಸನೆಯನ್ನು ಹೊಂದಿದೆ. ನಾವು ಕೂಡ ದಿನನಿತ್ಯ ಅಡುಗೆ ಮನೆಯಿಂದ ಬರುವ ವಾಸನೆ, ಮೊದಲ ಮಳೆಗೆ ಭೂಮಿಯಿಂದ ಬರುವ ವಾಸನೆ, ದುರ್ಗಂಧ ಇತ್ಯಾದಿಗಳ ವಾಸನೆಗಳನ್ನು ಗ್ರಹಿಸುತ್ತಲೇ ಇರುತ್ತೇವೆ.

ನಾವೇಕೆ ಸುಗಂಧ ದ್ರವ್ಯ ಬಳಸುತ್ತೇವೆ ?

ಈ ವಾಸನೆಗಳು ನೇರವಾಗಿ ನಮ್ಮ ಮೆದುಳು ಹಾಗೂ ಗ್ರಹಣ ಶಕ್ತಿಯ ಮೇಲೆ ಪ್ರಭಾವ ಬೀರುತ್ತವೆ. ಅದರಲ್ಲೂ ಈ ಸುವಾಸನಾ ದ್ರವ್ಯಗಳು ಬಹುಬೇಗ ನಮ್ಮ ಮೇಲೆ ಪ್ರಭಾವ ಬೀರಿ ನಮ್ಮನ್ನು ಉಲ್ಲಸಿತವಾಗಿಸುತ್ತವೆ. ಇವು ಸ್ವಾಭಾವಿಕ ವಸ್ತುಗಳಿಂದ ಬಂದರೆ ಭಯಪಡಬೇಕಾಗಿಲ್ಲ. ಆದರೆ ಕೃತಕ ರಾಸಾಯನಿಕಗಳಿಂದ ಬಂದರೆ ಖಂಡಿತ ಆರೋಗ್ಯಕ್ಕೆ ಮಾರಕ. ಇಂದು ಏರ್ ಕಂಡೀಷನರ್‌ಗಳಿಂದ ಹಿಡಿದು ಬಟ್ಟೆಗಳವರೆಗೆ ಪ್ರತಿಯೊಂದಕ್ಕೂ ಕೃತಕ ಸುಗಂಧ ದ್ರವ್ಯಗಳು ಬಳಕೆಯಾಗುತ್ತಿವೆ. ವಸ್ತುಗಳ ಪ್ಯಾಕೇಜ್‌ಗಳಲ್ಲಿ ಕೂಡ ಈ ಕೃತಕ ಸುಗಂಧಗಳು ಬಳಕೆಯಾಗುತ್ತಿವೆ.

ಸುಗಂಧ ದ್ರವ್ಯಗಳು ಮತ್ತು ಆರೋಗ್ಯ ವಸ್ತುಗಳಲ್ಲಿರುವ ಸುವಾಸನೆ ಆ ವಸ್ತುವಿನ ಮಾರಾಟದೊಂದಿಗೇ ಮುಕ್ತಾಯಗೊಳ್ಳುವುದಿಲ್ಲ. ಇದು ಗ್ರಾಹಕನ ಮನೆಯನ್ನೋ ದೇಹವನ್ನೋ ಸೇರಿ ಅಲ್ಲಿ ಪರಿಣಾಮ ಬೀರುತ್ತದೆ. ಈ ಸುವಾಸನೆಗಳನ್ನು ನಿರಂತರವಾಗಿ ಬಳಸಿದಾಗ ನಮ್ಮ ದೇಹದಲ್ಲಿ ಆ ರಾಸಾಯನಿಕ ಹೆಚ್ಚು ಹೆಚ್ಚು ಸಂಗ್ರಹಗೊಂಡು ದುಷ್ಪರಿಣಾಮಗಳು ಉಂಟು ಮಾಡುತ್ತವೆ. ನಿಮಗೆ ನೆನಪಿರಲಿ, ಇಂದು ಕೃತಕ ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಸುಮಾರು 3,000 ರಾಸಾಯನಿಕ ವಿಷಗಳು ಬಳಕೆಯಾಗುತ್ತಿವೆ. ತಜ್ಞರ ಪ್ರಕಾರ, ಕಳೆದ 20 ವರ್ಷಗಳಲ್ಲಿ ಈ ಕೃತಕ ಸುವಾಸನೆಗಳ ಉತ್ಪಾದನೆ ಹಾಗೂ ಬಳಕೆ ಗಾಬರಿಗೊಳಿಸುವಷ್ಟು ಏರಿದೆ.

ಬಳಕೆಯಾಗುವ ರಾಸಾಯನಿಕಗಳು

ಈ ಕೃತಕ ಸುಗಂಧ ದ್ರವ್ಯಗಳಲ್ಲಿರುವ ರಾಸಾಯನಿಕಗಳಲ್ಲಿ ಹೆಚ್ಚಿನವು ಅಲರ್ಜಿ ತರುತ್ತವೆ. ಈ ರಾಸಾಯನಿಕಗಳು ಮೂಗನ್ನು ಪ್ರವೇಶಿಸುತ್ತಿದ್ದಂತೆಯೇ ಮೂಗು, ಗಂಟಲು ಹಾಗೂ ಕಣ್ಣುಗಳಲ್ಲಿ ಕಿರಿಕಿರಿ ಶುರುವಾಗುತ್ತದೆ. ಇವುಗಳ ತಯಾರಿಕೆಯಲ್ಲಿ ಪ್ರಮುಖವಾಗಿ ಬಳಕೆಯಾಗುವುದು ಪೆಟ್ರೋ ರಾಸಾಯನಿಕಗಳು ಅಂದರೆ ಪೆಟ್ರೋಲಿಯಂ ಉತ್ಪನ್ನಗಳು. ಈ ಪೆಟ್ರೋ ರಾಸಾಯನಿಕಗಳಿಂದ ಏರ್ ರಿಫ್ರೆಶರ್‌ಗಳು, ಸೋಪುಗಳು, ಡಿಟರ್ಜೆಂಟ್‌ಗಳು, ಕ್ಲೀನರ್‌ಗಳು, ಡಿಯೋಡರೆಂಟ್‌ಗಳು, ಲೋಷನ್, ಪರ್ಫ್ಯೂಮ್‌ಗಳು ಮತ್ತು ಇತರೆ ಸುಗಂಧ ದ್ರವ್ಯಗಳನ್ನು ತಯಾರಿಸುತ್ತಾರೆ. ಇವುಗಳಲ್ಲಿ ಬಳಕೆಯಾಗುವ ರಾಸಾಯನಿಕಗಳೆಂದರೆ ಬೆಂಝೀನ್, ಟಾಲೀನ್, ಕ್ಸಲೀನ್ ಮತ್ತು ಮೆಥನಾಲ್‌ಗಳಂತಹ ಸುವಾಸನೆಯನ್ನು ಬೀರುವ ಪೆಟ್ರೋ-ರಾಸಾಯನಿಕಗಳು.

ಸಂಭವನೀಯ ರೋಗಗಳು

ಈ ಕೃತಕ ಸುಗಂಧ ದ್ರವ್ಯಗಳನ್ನು ಟ್ರೇಡ್‌ಮಾರ್ಕ್ ಸೆಂಟ್‌ಗಳೆಂದೇ ಕರೆಯುತ್ತಾರೆ. ಇದು ಇಂದಿಗೂ ವ್ಯಾಪಾರಿ ಗುಟ್ಟಾಗಿಯೇ ಉಳಿದಿದೆ. ಇವುಗಳ ಬಳಕೆಯ ಮೇಲೆ ಯಾವುದೇ ನಿರ್ಬಂಧವಿಲ್ಲ. ಅಲ್ಲದೆ ಉತ್ಪನ್ನದ ಪೊಟ್ಟಣಗಳ ಮೇಲೆ ನಮೂದಿಸಬೇಕೆಂಬ ಕಡ್ಡಾಯವೇನೂ ಇಲ್ಲ. ಈ ಬೆಂಝೀನ್ ಉತ್ಪನ್ನಗಳು ವಿಷಕಾರಿಯಾಗಿದ್ದು ಕ್ಯಾನ್ಸರ್, ಹುಟ್ಟಿನ ದೋಷಗಳು, ಕೇಂದ್ರ ನರಮಂಡಲದ ನ್ಯೂನತೆಗಳು, ಅಲರ್ಜಿ, ಚರ್ಮ ರೋಗಗಳು ಹಾಗೂ ಶ್ವಾಸಕೋಶದ ಕಾಯಿಲೆಗಳನ್ನು ತರುವುದರಲ್ಲಿ ಯಾವುದೇ ಸಂಶಯಗಳಿಲ್ಲ. ಈ ಸುಗಂಧಗಳಲ್ಲಿರುವ ರಾಸಾಯನಿಕಗಳು ಉಸಿರಾಟ ಮತ್ತು ಚರ್ಮದ ಮೂಲಕ ನಮ್ಮ ದೇಹವನ್ನು ಸೇರುತ್ತವೆ. ಅಲ್ಲಿಂದ ನಮ್ಮ ರಕ್ತ ಪರಿಚಲನೆಗೆ ಸೇರಿ ನಮ್ಮ ಶ್ವಾಸಕೋಶದ ಮೂಲಕ ದೇಹಕ್ಕೆ ಸೇರುತ್ತವೆ. ಈ ಮಾರಕ ರಾಸಾಯನಿಕಗಳು ಬಳಸುವವರನ್ನು ಮಾತ್ರ ಬಾಧಿಸದೆ ಮುಂದಿನ ಪೀಳಿಗೆಗೂ ರವಾನೆಯಾಗಿ

ಪದಬಂಧ



ಎಡದಿಂದ ಬಲಕ್ಕೆ:

1. ಕಿಲಾಡಿತನ ತೋರಿದ ಬೇಡ (3)
4. ದೇಹ ದಂಡಿಸಲು ಹೋಗುವ ವ್ಯಾಯಾಮ ಶಾಲೆ (3)
5. ಸಮುದ್ರದಲ್ಲಿ ಸಾಗುವ ದೊಡ್ಡ ನಾವೆ (3)
6. ಗಡಿಯಲ್ಲಿ ಸಿಕ್ಕಿದ ಜೊತೆಗಾರ (4)
8. ಜನಸಾಮಾನ್ಯರಿಗೆ ಸಂಬಂಧಿಸಿದ (4)
10. ಹಾಕಲೇ ಬೇಕಾದ ಅಂಕೆ (3)
11. ಆತನ ಕುಲ (4)
13. ಲಟ್ಟಿಸುವುದಲ್ಲ, ಸೇರಿಸು (4)
16. ಕೆಲಸಕ್ಕೆ ನೀಡಿದ ಬಿಡುವು (3)
17. ಗಣೇಶನಿಗೆ ಪ್ರಿಯವಾದ ದೂರ್ವೆ (3)
18. ಇಪ್ಪತ್ತನಾಲ್ಕು ಘಂಟೆಗಳ ಅವಧಿ (3)

ಮೇಲಿನಿಂದ ಕೆಳಕ್ಕೆ:

1. ಬಲು ತುಂಟ ಇವನು (4)
2. ತಂಪಾದ ಜಲ (3)
3. ವಿಡಂಬನೆಯಿಂದ ಕೂಡಿದ ಹಾಸ್ಯ ನಾಟಕ (4)
6. ನದಿಗಳು ಸೇರುವ ಸ್ಥಳ (3)
7. ದಟ್ಟವಾದ ಅಥವಾ ಸುಲಭವಲ್ಲದ್ದು (3)
8. ಸಮಸ್ಯೆ ತುಂಬಾ ಕ್ಲಿಷ್ಟವಾದದ್ದು (3)
9. ಸುಡು ಎಂದರ್ಥ (3)
12. ಮನದೊಳಗೆ ಆದ ಸಂಕಟ (4)
14. ಮರ ಕತ್ತರಿಸುವ ಸಾಧನ (4)
15. ಅಪ್ಪಣ್ಣ ನುಡಿಸಿದ ಶಹನಾಯಿ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ಬಾನುಲಿ 4. ಪ್ರತಿ 5. ದಳವಾಯಿ 6. ಪಿಸುಣ 7. ವನ 10. ತುಗರ 12. ನುಡಿಸು 13. ಬಗ್ಗಡ 14. ಹಂಬಲ 16. ಪಾತಿ 19. ಕಚಪಾ 20. ಗೃಹಕೃತ್ಯ 21. ಕಡ 22. ದನಹ

ಮೇಲಿನಿಂದ ಕೆಳಕ್ಕೆ: 1. ಅಳತೆ 2. ಬಾಯಿಮಾತು 3. ಲಿಪಿಕಾರ 4. ಪ್ರಣವ 8. ನಟ್ಟಡವಿ 9. ಅನುಮತಿ 11. ಗರೀಬ 14. ಹಂಸಪಾದ 15. ಲತಾಗೃಹ 17. ಪಾಕಡ 18. ಆಕೃತಿ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಕನ್ನಡಿ ಅರಮನೆ

ರಾಜಸ್ಥಾನದಲ್ಲಿರುವ ಅಮೇರ್ ಅರಮನೆಯು, ರಜಪೂತ ವಾಸ್ತುಶಿಲ್ಪ ಶೈಲಿಯ ಅದ್ಭುತ ರಚನೆಯಿಂದಾಗಿ ಕನ್ನಡಿ ಅರಮನೆ ಎಂದೇ ಹೆಸರಾಗಿದೆ. ಮೊಘಲ್ ವಾಸ್ತುಶಿಲ್ಪದ ಕೆಲವು ಅಂಶಗಳು ಅರಮನೆಯೊಳಗಿನ ಕೆಲವು ರಚನೆಗಳು ಮತ್ತು ವಿನ್ಯಾಸಗಳ ಮೇಲೆ ಪ್ರಭಾವ ಬೀರಿವೆ. ಕೆಂಪು ಮರಳುಗಲ್ಲು ಮತ್ತು ಅಮೃತಶಿಲೆಯಿಂದ ನಿರ್ಮಿಸಲಾದ ಈ ಅರಮನೆಯು ನಾಲ್ಕು ಹಂತಗಳಲ್ಲಿ ವ್ಯಾಪಿಸಿರುವ ಅದ್ದೂರಿ ಮತ್ತು ಆಕರ್ಷಕ ಕಟ್ಟಡವಾಗಿದೆ. ಅದರ ವಿವಿಧ ಭಾಗಗಳಲ್ಲಿ ದಿವಾನ್-ಎ-ಆಮ್- ಸಾರ್ವಜನಿಕ ಪ್ರೇಕ್ಷಕರ ಸಭಾಂಗಣ, ದಿವಾನ್-ಎ-ಖಾಸ್ ಅಂದರೆ ಖಾಸಗಿ ಪ್ರೇಕ್ಷಕರ ಸಭಾಂಗಣ, ಶೀಶ್ ಮಹಲ್ ಇದೆ. ಈ ಅರಮನೆಯನ್ನು, ಜೈ ಮಂದಿರ, ಮತ್ತು ಸುಖ್ ನಿವಾಸ ಎಂದೂ ಕರೆಯಲಾಗುತ್ತದೆ.

ಪುಸ್ತಕ ಲೋಕ

ವಿಳಾಸ ಬದಲಾಗುತ್ತಿದೆ



ಲೇಖಕಿ ವಸುಮತಿ ಉಡುಪ ಅವರು, ತಮ್ಮ ಕಾದಂಬರಿ 'ವಿಳಾಸ ಬದಲಾಗುತ್ತಿದೆ'ಯಲ್ಲಿ ಯಾವುದನ್ನೂ ವೈಭವೀಕರಿಸದೆ, ನಿರ್ಭಾವುಕವಾಗಿ ಇಡೀ ಬದುಕನ್ನು ಕಂಡದ್ದು ಕಂಡ ಹಾಗೆ ಚಿತ್ರಿಸಿದ್ದಾರೆ. ಇಲ್ಲಿನ ಕಥಾಹಂದರದಲ್ಲಿ ತೆರೆದುಕೊಳ್ಳುವ ಮಹಿಳಾ ಪಾತ್ರಗಳು ಬದುಕಿನೊಂದಿಗೆ ಮುಖಾಮುಖಿಯಾಗುವ ಕ್ರಮ ಆಧುನಿಕ ಸೂಕ್ಷ್ಮತೆ ಗಳನ್ನು ಗಟ್ಟಿತನವನ್ನು ಹೊಂದಿರುವಂತದ್ದು. ಎಷ್ಟು ಸರಾಗವಾದ ಬರವಣಿಗೆ ಎಂದರೆ, ಆ ಪರಿಸರದಲ್ಲಿ ನಾವೇ ಒಂದು ಪಾತ್ರವಾಗಿ ಕಣ್ಣೆದುರು ಈ ಎಲ್ಲ ಮಾತುಕತೆ, ಘಟನೆಗಳು ನಡೆಯುತ್ತಿರುವಂಥ ಅನುಭವಕ್ಕೆ ಈಡಾಗುತ್ತೇವೆ. ಎಲ್ಲೂ ಅಬ್ಬರ, ಆರ್ಭಟವಿಲ್ಲ. ಸಹಜವಾಗಿ ಹರಿದುಹೋಗುವ ಪುಟ್ಟ ತೊರೆಯ ಜುಳುಜುಳು ನಿನಾದದಂತೆ ಮುಂದೆ ಸಾಗುವ ಕಥೆ ಅಪ್ಯಾಯವಾಗುತ್ತದೆ.

ಟ್ವೀಟ್‌ಮೆಂಟ್

ಅಂಕುರ್ ವಾರಿಕೋ: ನಿಮ್ಮ ಸಂಬಂಧ ನಿಮ್ಮದಲ್ಲದ ವ್ಯಕ್ತಿತ್ವವನ್ನು ಹೊಂದುವಂತೆ ಒತ್ತಾಯ ಮಾಡಿದರೆ, ನಿಮ್ಮನ್ನು ನೀವು ಬಿಟ್ಟು ಬಿಡಬೇಡಿ. ಆ ಸಂಬಂಧವನ್ನೇ ಬಿಟ್ಟು ಬಿಡಿ!

ಶುಭಂ ಅಗರ್ವಾಲ್: ಏನ್ ಸಾರ್, ಮನೇಲಿ ಹೆಂಡ್ತಿ ಜತೆ ಜಗಳಗಿಗಳ ಮಾಡ್ಕೊಂಡಿದ್ದೀರಾ.. ಹೇಗೆ?

ಜೀವ ಸಂಜೀವಿನಿ ಕೊತ್ತಂಬರಿ

• ವಾಣಿ ಮೈಸೂರು

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೇ! ಇಷ್ಟು ಚಿಕ್ಕ ಎಲೆಗಳು ರೋಗ ನಿವಾರಣೆಗೆ ಉಪಯೋಗವಾಗುತ್ತದೆ ಅಂದರೆ ತಿಳಿದುಕೊಳ್ಳಲು ಗಮನ ಹರಿಸಲೇಬೇಕು. ದಿನನಿತ್ಯ ಮಾಡುವ ಅಡುಗೆ ತಿಂಡಿಗಳಲ್ಲಿ ಕೊತ್ತಂಬರಿ ಸೊಪ್ಪನ್ನು ಉಪಯೋಗಿಸುತ್ತೇವೆ ಮತ್ತು ತಿಂಡಿಗಳಿಗೆ ಅಲಂಕಾರಿಕವಾಗಿಯು ಕಾಣಲು ಹಾಗೂ ಸುವಾಸನೆಗೆ ಕೊತ್ತಂಬರಿ ಸೊಪ್ಪನ್ನು ಬಳಸಲಾಗುತ್ತದೆ. 5000 ವರ್ಷದಷ್ಟು ಹಿಂದೆ ಪರಿಚಿತವಾದ ಹಳೆಯ ಗಿಡಮೂಲಿಕೆಯಾಗಿದ್ದು ಇಟಲಿಯಲ್ಲಿ ಹುಟ್ಟಿಕೊಂಡಿದೆ.

ಆರೋಗ್ಯಕ್ಕೆ ಕೊತ್ತಂಬರಿ ಉಪಯೋಗಗಳು

ಕೊತ್ತಂಬರಿ ಸೊಪ್ಪಿನಲ್ಲಿ ವಿಟಮಿನ್ ಸಿ, ವಿಟಮಿನ್ ಇ ಮತ್ತು ವಿಟಮಿನ್ ಎ ಅಂಶಗಳು ಒಳಗೊಂಡಿದ್ದು ಪ್ರತಿರಕ್ಷಣಾ ವ್ಯವಸ್ಥೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಜತೆಗೆ ಕಬ್ಬಿಣ ಹೀರಿಕೊಳ್ಳಲು ಉಪಯೋಗಕಾರಿಯಾಗಿದೆ.

- ಕಿಣ್ವದ ಚಟುವಟಿಕೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ ಇನ್ಸುಲಿನ್ ಸ್ರವಿಸುವಿಕೆಯನ್ನು ಉತ್ತೇಜಿಸುತ್ತದೆ.
- ಕೊತ್ತಂಬರಿಯಲ್ಲಿ ವಿಟಮಿನ್ ಸಿ ಇರುವುದರಿಂದ ಬಿಳಿ ರಕ್ತಕಣಗಳು ಕಾರ್ಯನಿರ್ವಹಿಸಲು ಸಹಾಯ ಮಾಡುತ್ತದೆ.
- ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಕಡಿಮೆ ಮಾಡುತ್ತದೆ.
- ಅಧಿಕ ರಕ್ತದ ಸಕ್ಕರೆ ಖಾಯಿಲೆಯಿಂದ ಬಳಲುತ್ತಿರುವವರು ಕೊತ್ತಂಬರಿ ಸೊಪ್ಪಿನ ನೀರನ್ನು ಕುಡಿಯುವುದರಿಂದ ಅಧಿಕ ರಕ್ತದ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಪ್ರಯೋಜನಕಾರಿಯಾಗಿದೆ.
- ಕೊಲೆಸ್ಟ್ರಾಲ್‌ನ್ನು ಕಡಿಮೆ ಮಾಡಲು ಮತ್ತು ಕೊಲೆಸ್ಟ್ರಾಲ್‌ನ್ನು ಸುಧಾರಿಸಲು ಉಪಯೋಗಕಾರಿಯಾಗಿದೆ.
- ಕೊತ್ತಂಬರಿಯ ಸೇವನೆಯಿಂದ ಫೈಬರ್, ಕಬ್ಬಿಣ, ಮ್ಯಾಂಗನೀಸ್, ಕ್ಯಾಲ್ಸಿಯಂ ವಿಟಮಿನ್ ಕೆ ಹಾಗೂ ರಂಜಕ ಮುಂತಾದ ಪೋಷಕಾಂಶಗಳು ಸಿಗುತ್ತದೆ.
- ವಿಟಮಿನ್ ಎ, ವಿಟಮಿನ್ ಸಿ, ವಿಟಮಿನ್ ಇ ಮತ್ತು ಕ್ಯಾರೊಟಿನಾಯ್ಡ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಉತ್ತಮ ದೃಷ್ಟಿಯನ್ನು ಉತ್ತೇಜಿಸಲು ಸಹಕಾರಿಯಾಗಿದೆ.

- ಕೊತ್ತಂಬರಿ ಸೊಪ್ಪಿನಲ್ಲಿ ನಾರಿನಾಂಶ ಪ್ರಮಾಣವಿದ್ದು ಇದು ಉತ್ತಮ ಜೀರ್ಣಕ್ರಿಯೆಗೆ ಸಹಕಾರಿಯಾಗುತ್ತದೆ ಮತ್ತು ಜೀರ್ಣಕ್ರಿಯ ಸಮಸ್ಯೆಗಳಿಗೆ ಪರಿಹಾರವಾಗಿದೆ.
- ಅಧ್ಯಯನಗಳ ಪ್ರಕಾರ ಕೊತ್ತಂಬರಿ ಸಾರವು ಮೆದುಳಿನಲ್ಲಿರುವ ಜೀವಕೋಶಗಳ ಹಾನಿಯಿಂದ ಕಾಪಾಡುತ್ತದೆ
- ಕೊತ್ತಂಬರಿ ರೋಗ ನಿವಾರಕ ಗುಣಲಕ್ಷಣಗಳನ್ನು ಹೊಂದಿದೆ. ಇದು ಸಸ್ಯ ಸಂಯುಕ್ತಗಳ ಆಹಾರದಿಂದ ಹರಡುವ ಸಮಸ್ಯೆಗಳು ಮತ್ತು ಸೋಂಕುಗಳ ವಿರುದ್ಧ ಪ್ರಯೋಜನಕಾರಿಯಾಗಿದೆ.
- ಕೊತ್ತಂಬರಿಯ ದೈನಂದಿನ ಸೇವನೆಯು ವಯಸ್ಸಿಗೆ ಸಂಬಂಧಿಸಿದ ಮ್ಯಾಕ್ಯುಲರ್ ಡಿ ಜನರೇಶನ್‌ನ್ನು ವಿಳಂಬಗೊಳಿಸುತ್ತದೆ.
- ಸಂಧಿವಾತಕ್ಕೆ ಸಂಬಂಧಿಸಿದ ನೋವಿನ ನಿವಾರಣೆಗೂ ಕೊತ್ತಂಬರಿ ಸಹಾಯಕಾರಿಯಾಗಿದೆ
- ಸೋಡಿಯಂ ಸೇವನೆಯನ್ನು ಕಡಿಮೆ ಮಾಡಲು ಉಪಯುಕ್ತವಾಗಿದೆ.
- ಆತಂಕ ವಿರೋಧಿ ಮತ್ತು ನಿದ್ರೆ ಪ್ರಚೋದಿಸುವ ಅಂಶಗಳು ಕೊತ್ತಂಬರಿ ಸೊಪ್ಪಿನಲ್ಲಿರುವ ಸಂಯುಕ್ತಗಳಲ್ಲಿ ಇದೆ.
- ಕೊತ್ತಂಬರಿ ಬೀಜಗಳು ಸಹ ಮೂತ್ರದ ಸೋಂಕಿನ ವಿರುದ್ಧ ಹೋರಾಡುತ್ತದೆ ಮತ್ತು ರಕ್ಷಣೆಯನ್ನು ಒದಗಿಸುತ್ತದೆ.

@vishwavaninews
ವಿಶ್ವವಾಣಿ
ಬೆಂಗಳೂರು
ಮಂಗಳವಾರ 02 | 07 | 2024

ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಬಿ ಪಾಸಿಟಿವ್

ಸಂತಸವೆಂಬ ಸಂಪತ್ತು

ಯಾವಾಗಲೂ ಸಂತೋಷವಾಗಿರುವುದು ಕೂಡ ಅಷ್ಟು ಸುಲಭದ ಮಾತಲ್ಲ. ಸಣ್ಣ ಸಣ್ಣ ಗೆಲುವಿಗೂ ಸಂಭ್ರಮಿಸುವುದು ಕೂಡ ಸಾಧನೆಯೇ. ಮಕ್ಕಳಿಗೆ ತನ್ನಿಷ್ಟದ ಆಟಿಕೆ ನೀಡಿದಾಗ ಪಡುವ ಸಂಭ್ರಮ, ಚಿಟ್ಟೆಯೊಂದು ಹಿಡಿದಾಗ ಕುಣಿದು ಕುಪ್ಪಳಿಸುವ ರೀತಿ ಕಂಡಾಗ, ಮತ್ತೆ ಮಗುವಾಗಬೇಕು ಅನ್ನಿಸುವುದು. ಎಲ್ಲವನ್ನು ಮರೆತು ಬೇಸರವನ್ನು ಭೂವಿಯಲ್ಲಿ ಅದುಮಿ ಕುಣಿಯಬೇಕಿದೆ. ಒತ್ತಡದ ಜೀವನಶೈಲಿಯಲ್ಲಿ ಸಂತೋಷದ ಹುಡುಕಾಟ. ದೊಡ್ಡ ಗೆಲುವಿಗಾಗಿ ನಿರಂತರ ಹೋರಾಟ. ಸಣ್ಣ ಗೆಲುವಿಗೆ ನಿರ್ಲಕ್ಷ್ಯ, ಸಂಭ್ರಮಕ್ಕೂ ಮುಂದೂಡುವಿಕೆ. ನಮ್ಮ ಮಹತ್ವಾಕಾಂಕ್ಷೆಗಳ ಬೆನ್ನು ಹತ್ತಿ ನಾವು ನಮಗೆ ಅರಿವಿಲ್ಲದೆಯೇ ನಕಾರಾತ್ಮಕ ಮನೋಭಾವವನ್ನು ಸಹಜಗುಣವನ್ನಾಗಿ ಮಾಡಿಕೊಂಡಿರುತ್ತೇವೆ. ಇದರ ಪರಿಣಾಮ ಬೇರೆ ಬೇರೆ ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ನಿರಂತರ ಅತೃಪ್ತಿಯಲ್ಲಿ ಬದುಕು ಮುಂದುವರಿಯುತ್ತದೆ. ಸಹಜವಾಗಿಯೇ ಇದು ಒತ್ತಡಕ್ಕೆ ಕಾರಣವಾಗುತ್ತದೆ. ಈ ಒತ್ತಡ ಮತ್ತಷ್ಟು ಸಂತೋಷಗಳನ್ನು ಕಿತ್ತುಕೊಳ್ಳಲು

ತೊಡಗುತ್ತದೆ. ನಮ್ಮೊಳಗೆ ನಮಗೆ ಕಂಡುಕೊಳ್ಳಲಾಗದ ಸಂತೋಷವನ್ನು ಮತ್ತೆ ತಂದು ಕೊಡಲು ಸಾಧ್ಯವಿಲ್ಲ. ಮಾನಸಿಕ ಶಾಂತಿಯ ವಿಚಾರವೂ ಅಷ್ಟೇ. ಇವೆಲ್ಲವನ್ನೂ ನಾವೇ ಶೋಧಿಸಿಕೊಳ್ಳಬೇಕು. ಇದಕ್ಕೆ ಬೇಕಾಗಿರುವುದು ನಮ್ಮದೇ ಮಾರ್ಗ. ಅನೇಕ ಸಲ ನಾವು ನಮ್ಮ ಅಸ್ಥಿರತೆ ಅಭದ್ರತೆಯ ಕಾರಣಕ್ಕಾಗಿ ಪ್ರತಿಯೊಂದನ್ನು ಬೇರೆಯವರಿಗೆ ವಿವರಿಸಿ ಹೇಳಲು ಪ್ರಯತ್ನಿಸುತ್ತೇವೆ. ನಾನು ಯಾಕೆ ಹೀಗೆ ಮಾಡಿದೆ? ಯಾಕೆ ಹೀಗೆ ಯೋಚಿಸಿ ಯಾಕೆ ಹೀಗೆ ನಡೆದುಕೊಂಡೆ? ಯಾಕೆ ಈ ನಿರ್ಧಾರ ತೆಗೆದುಕೊಂಡೆ ಎಂಬುವುದರ ಸಂಪೂರ್ಣ ವಿವರಣೆ ನೀಡುವ ಅಗತ್ಯವಂತೂ ಇಲ್ಲ. ನಾನು ಯಾಕೆ ಹೀಗೆ ನಡೆದುಕೊಂಡೆ ಎಂದು ನಮ್ಮ ಮನಸ್ಸಿಗೆ ತಿಳಿದಿದ್ದರೆ ಸಾಕಲ್ಲವೇ. ನಮ್ಮ ತಪ್ಪಿದ್ದರೆ ಕ್ಷಮೆ ಕೇಳಬೇಕು. ನಮ್ಮ ಪ್ರತಿಕ್ರಿಯೆಯ ಪ್ರತಿ ನಡುವಳಿಕೆಯ ವಿವರಣೆ ಇನ್ನೊಬ್ಬರಿಗೆ ನೀಡುವ ಅಗತ್ಯವಂತೂ ಇಲ್ಲ.

• ಅಂಜಲಿ ಶ್ರೀನಿವಾಸ

ಲವ್‌ಎವೆರಿ ಬಾಡಿ

ಮಾನವರಿಗೆ ದೈಹಿಕ ಕೆಲಸ, ದೇಹದ ಉಷ್ಣತೆ ನಿರ್ವಹಣೆ, ಚಯಾಪಾಪಚಯ ಚಟುವಟಿಕೆ ಮತ್ತು ಬೆಳವಣಿಗೆಯ ನೆರವಿಗಾಗಿ ಸೂಕ್ತ ಪ್ರಮಾಣದ ಶಕ್ತಿ ಬೇಕಾಗುತ್ತದೆ. ಸಮೀಕ್ಷೆಯೊಂದರ ಪ್ರಕಾರ ಭಾರತದಲ್ಲಿ ಶೇ. 50 ಪುರುಷರು ಮತ್ತು ಮಹಿಳೆಯರು ಶಕ್ತಿಯ ಕೊರತೆಯಿಂದ ಬಳಲುತ್ತಿದ್ದಾರೆ. ಒಬ್ಬ ವ್ಯಕ್ತಿಗೆ ಒಂದು ದಿನಕ್ಕೆ ಬೇಕಾಗುವ ಶಕ್ತಿಯ ಪ್ರಮಾಣ, ಆತನ ಶಕ್ತಿಯ ಬಳಕೆಯ ಮೇಲೆ ಅವಲಂಬಿತವಾಗಿದೆ. ಅಲ್ಲದೆ ವಯಸ್ಸು, ದೇಹದ ತೂಕ, ದೈಹಿಕ ಚಟುವಟಿಕೆಯ ಮಟ್ಟ, ಬೆಳವಣಿಗೆ ಮತ್ತು ದೈಹಿಕ ಸ್ಥಿತಿಗತಿಯನ್ನೂ ಅವಲಂಬಿಸಿದೆ. ಭಾರತದಲ್ಲಿ, 70%-80% ಆಹಾರದ ಕ್ಯಾಲರಿಗಳು ಆಹಾರ ಪದಾರ್ಥಗಳಾದಂತಹ ದವಸಗಳು, ದ್ವಿದಳಧಾನ್ಯಗಳು, ಕಾಳುಗಳು ಮತ್ತು ಕಂದಮೂಲಗಳಿಂದ ಸಿಗುತ್ತದೆ. ಪ್ರೌಢಾವಸ್ಥೆಯಲ್ಲಿರುವವರು ಸೇರಿದಂತೆ ಮಕ್ಕಳು ತಮಗೆ ಬೇಕಾಗುವ ದಿನನಿತ್ಯದ ಕ್ಯಾಲರಿಗಳಲ್ಲಿ 55%-60% ರಷ್ಟು ಕಾರ್ಬೋಹೈಡ್ರೇಟ್‌ನಿಂದ ಪಡೆಯುತ್ತಾರೆ.

• ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಇವತ್ತಿನ ಅತಿಯಾದ ವೇಗದಲ್ಲಿ ಓಡುತ್ತಿರುವ ಜಗತ್ತಿನಲ್ಲಿ ಅನ್‌ಸಬ್‌ಸ್ಕ್ರೈಬ್ ಮಾಡಬೇಕಾದ ಕಲೆಯು ಬಹಳ ಮಹತ್ವವನ್ನು ಪಡೆದಿದೆ. ಕೆಲವು ವಿಷಪೂರಿತ ಸಂಬಂಧಗಳು ಬದುಕಿಗೆ ಅತ್ಯಂತ ಅಪಾಯಕಾರಿ. ಮೊದಲು ಅವುಗಳನ್ನು ನಿರ್ಲಕ್ಷ್ಯ ಮಾಡದೆ ಅರಿತು ಅವುಗಳಿಂದ ದೂರ ಸರಿಯಬೇಕು.

ಅನಾವಶ್ಯಕ ಸಂಪರ್ಕದ ಅನ್‌ಸಬ್‌ಸ್ಕ್ರೈಬಿಂಗ್!

ಜೋಷ್ ಮಾತು
• ವಿಕ್ರಮ್ ಜೋಶಿ

ಮೊನ್ನೆ ಜಿಮೇಲ್ ತೆರೆದಾಕ್ಷಣ ಒಂದು ನೋಟಿಫಿಕೇಷನ್ ಕಣ್ಣಿಗೆ ಬಿತ್ತು. 'ನೀವು ಈಗಾಗಲೇ ಉಚಿತವಾಗಿ ಕೊಡುವ 80% ಮೆಮೊರಿಯ ಜಾಗವನ್ನು ಬಳಸಿದ್ದೀರಿ, ಇನ್ನೂ ಹೆಚ್ಚು ಜಾಗ ಬೇಕು ಎಂದು ಹಣಕೊಟ್ಟು ಪಡೆಯಬಹುದು' ಎಂಬುದು ಆ ನೋಟಿಫಿಕೇಷನ್. ಇಲ್ಲಿಯ ತನಕ ಇಮೇಲ್ ಉಚಿತ ಎಂದು ಹಗುರವಾಗಿ ಇದ್ದ ನಾನು ಒಮ್ಮೆಲೆ ಕಂಗಾಲಾದೆ. ಬ್ಯಾಂಕಿನ ಖಾತೆ, ಆಧಾರ್ ಕಾರ್ಡ್, ಡಿಮ್ಯಾಟ್ ಖಾತೆ, ಅದು, ಇದು ಎಲ್ಲದಕ್ಕೂ ಬಳಕೆಯಾಗುತ್ತಿರುವ ಇಮೇಲ್ ವಿಳಾಸವಾಗಿರುವುದರಿಂದ, 'ಆ ಕ್ಷಣ ಅದು ಇನ್ನು ಮುಂದೆ ಉಚಿತವಾಗಿ ಇರುವುದಿಲ್ಲ ಇದಕ್ಕೂ ಹಣ ಕೊಡಬೇಕಲ್ಲ' ಎನ್ನುವ ಮಾತು ಜೀರ್ಣವಾಗುವುದಕ್ಕೆ ತುಸು ಸಮಯ ತಗೆದುಕೊಂಡಿತು. ಮೊದಲು ಗೂಗಲ್ ಖಾತೆಯಲ್ಲಿ ಎಷ್ಟು ಮೆಮೊರಿ ಬಳಸಿದ್ದೇನೆ ಎನ್ನುವುದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ನನಗೆ ಕಂಡಿದ್ದು – ವಾಟ್ಸಾಪ್ ಬ್ಯಾಕ್‌ಅಪ್ ನಾಲ್ಕು ಜಿಬಿ ಇತ್ತು, 1.5 ಜಿಬಿಯು ಗೂಗಲ್ ಡ್ರೈವ್‌ಗೆ ಬಳಕೆಯಾಗಿತ್ತು, ನಂತರ ಇ-ಮೇಲ್‌ಗಳು 6 ಜಿಬಿಗಳಷ್ಟು ಡಾಟಾವನ್ನು ತಗೆದುಕೊಂಡಿತ್ತು. ಇನ್ನು ಉಳಿದಿದ್ದು ಕೇವಲ ಮೂರು ಜಿಬಿ ಮಾತ್ರ, ಅಂದರೆ ಕೇವಲ 20% ಜಾಗ.

ಇದರಲ್ಲಿ ನನಗೆ ಅಚ್ಚರಿಯನ್ನು ಮೂಡಿಸಿದ್ದು ಇಮೇಲ್ ತಗೆದುಕೊಂಡ ಜಾಗ – ಆರು ಜಿಬಿ. ಕೆಬಿ (ಕಿಲೋ ಬೈಟ್) ಗಳಲ್ಲಿರುವ ಇಮೇಲ್ ಗಳು ಯಾವಾಗ ಜಿಬಿ(ಗಿಗಾ ಬೈಟ್)ಗಳಷ್ಟು ಜಾಗವನ್ನು ಆಕ್ರಮಿಸಿದವು ಎಂಬುದೇ ಸೋಜಿಗ. ಹನಿ ಹನಿ ಸೇರಿ ಹಳ್ಳ ಎನ್ನುವ

ಮಾತಿನಂತೆ ನನ್ನ ಇನ್ಬಾಕ್ಸ್‌ನಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಇಮೇಲ್‌ಗಳು ಹಾಗೆಯೇ ಬಿದ್ದಿದ್ದವು! ಅವುಗಳಲ್ಲಿ ನೂರರ ತೊಂಬತ್ತು ಭಾಗವು ಜಾಹೀರಾತಿಗೆ ಸಂಬಂಧಿಸಿದ ಇಮೇಲ್‌ಗಳಾಗಿದ್ದವು. ಹದಿನೈದು ವರ್ಷಗಳಿಂದ ಓದದೇ ಹಾಗೆಯೇ ಇದ್ದಿದ್ದೆಲ್ಲ ಇಮೇಲ್‌ಗಳನ್ನೂ ಡಿಲೀಟ್ ಮಾಡಿದ ನಂತರ ಕೋರಿಕೆಯಿಲ್ಲದೆಯೂ ಬರುತ್ತಿದ್ದ ನೂರಾರು ಕಂಪನಿಗಳ ಇಮೇಲ್‌ನ್ನು 'ಅನ್‌ಸಬ್‌ಸ್ಕ್ರೈಬ್' ಮಾಡಿದೆ. ಬದುಕಿನಲ್ಲಿ 'ಅನ್‌ಸಬ್‌ಸ್ಕ್ರೈಬ್' ಮಾಡುವುದರ ಮಹತ್ವ ತಿಳಿದಿದ್ದು ಇದೇ ಮೊದಲು!

ಭಾರವಾಗುವ ಜೋಳಿಗೆ!

ನೆಮ್ಮದಿಯ ಬದುಕಿಗೆ ಅನ್‌ಸಬ್‌ಸ್ಕ್ರೈಬ್ ಫೀಚರಿನ ಪಾಲು ಹೇಳಿ ಮಾಡಿಸಿದ್ದು. ನಾವು ಇದನ್ನು ಕಡೆಗಣಿಸಿ ಅಥವಾ ಗೊತ್ತಿಲ್ಲದೆಯೇ ಎಲ್ಲವನ್ನೂ ನಮ್ಮ ಜೋಳಿಗೆಯಲ್ಲಿ ತುಂಬಿಕೊಂಡು ಬಿಡುತ್ತೇವೆ. ನೋಡು, ನೋಡುತ್ತ ಹೆಗಲಿನ ಮೇಲೆ ಭಾರ ಹೆಚ್ಚಿದ್ದೂ ಗೊತ್ತೇ ಆಗುವುದಿಲ್ಲ. ನಂತರ ನಮ್ಮ ನೆರವಿಗೆ ಆ ಭಾರವನ್ನು ಹೊರಲು ಯಾರೂ ಸಿಗುವುದಿಲ್ಲ. ಬೇಡದ ಭಾರವನ್ನು ಹೊತ್ತು ನಾವು ಕತ್ತೆಗಳಾಗುತ್ತೇವೆ! ಬೇಡವಾದ ಸಾವಿರಾರು ಸಂಪರ್ಕಗಳಿಂದ ಏನೂ ಲಾಭವಿಲ್ಲ,

ಅವುಗಳನ್ನು ದೂರವಿಟ್ಟು ಬೇಕಾದ, ಹಿತವೆನಿಸುವ ಹತ್ತು ಸಂಬಂಧಗಳನ್ನು ಗಟ್ಟಿ ಮಾಡಿಕೊಳ್ಳುವುದೇ ಬುದ್ಧಿವಂತಿಕೆ. ಕೆಲವೊಮ್ಮೆ ನಾವು ನಮಗೆ ಕಂಡಿದ್ದಕ್ಕೆಲ್ಲಾ ಸ್ಪಂದಿಸುತ್ತೇವೆ. ಒಮ್ಮೆ ಸ್ಪಂದಿಸಿದರೆ ಅಲ್ಲಿ ನಾವು ಸಮಯವನ್ನು ಕೊಡಬೇಕಾಗುತ್ತದೆ. ಆಗ, ಆ ಹೊತ್ತಿಗೆ ನಮಗೆ ನಾವು ಕೊಡುವ ಸಮಯವು ಉಚಿತ ಎನಿಸುತ್ತದೆ ಆದರೆ ಕ್ಷಣ ಕ್ಷಣಗಳು ಕಳೆದು ಎಂದು ಆಯುಷ್ಯ ಮುಗಿಯುತೋ ಎಂಬುದು ಗೊತ್ತೇ ಆಗುವುದಿಲ್ಲ. ಮೆಮೊರಿ ಮುಗಿದರೆ ಗೂಗಲ್ ಕ್ಲೌಡ್‌ನಲ್ಲಿ ಹಣ ಕೊಟ್ಟು ಜಾಗವನ್ನು ಪಡೆಯಬಹುದು. ಆದರೆ ಎಷ್ಟೇ ಹಣವನ್ನು ಕೊಟ್ಟರೂ ಕಳೆದು ಹೋದ ಸಮಯವನ್ನು ಮತ್ತೆ ತಿರುಗಿ ತಂದು ಕೊಡಲಾಗದು!

ಹೀಗಾಗಿ ಇವತ್ತಿನ ಅತಿಯಾದ ವೇಗದಲ್ಲಿ ಓಡುತ್ತಿರುವ ಜಗತ್ತಿನಲ್ಲಿ ಅನ್‌ಸ್ಕ್ರೈಬ್ ಮಾಡಬೇಕಾದ ಕಲೆಯು ಬಹಳ ಮಹತ್ವವನ್ನು ಪಡೆದಿದೆ. ಕೆಲವು ವಿಷಪೂರಿತ ಸಂಬಂಧಗಳು ಬದುಕಿಗೆ ಅತ್ಯಂತ ಅಪಾಯಕಾರಿ. ಮೊದಲು ಅವುಗಳನ್ನು ನಿರ್ಲಕ್ಷ್ಯ ಮಾಡದೆ ಅರಿತು ಅವುಗಳಿಂದ ದೂರ ಸರಿಯಬೇಕು. ಇನ್ಬಾಕ್ಸ್‌ನಲ್ಲಿ ಬಂದಿರುವ ನೂರಾರು ಸ್ಪ್ಯಾಮ್ ಇಮೇಲ್‌ಗಳ ನಡುವೆ ಕೆಲವೊಮ್ಮೆ ಮುಖ್ಯವಾದ ಇಮೇಲ್ ಕಾಣದೇ ಅವಾಂತರವಾದಂತೆ ಈ ಹತ್ತಾರು ಬೇಡದ ಸಂಪರ್ಕಗಳಿಂದಾಗಿ, ಅವರು ಕೊಡುವ ತೊಂದರೆಗಳಿಂದಾಗಿ ನಾವು ಮುಖ್ಯವಾದ ವಿಷಯಗಳ ಕಡೆಗೆ ಗಮನವನ್ನೇ ಕೊಡುವುದಿಲ್ಲ. ಹೀಗಾಗಿ ಯಾವುದು ನಮಗೆ ಬೇಕಾದವರು, ಯಾರು ಸ್ಪ್ಯಾಮ್ ಎನ್ನುವುದನ್ನು ಗುರುತಿಸುವ ಅಗತ್ಯತೆ ಎಂದಿಗಿಂತ ಇಂದು ಹೆಚ್ಚಿದೆ.

ಶಕ್ತಿ-ಸಮಯ ಎರಡೂ ಪೋಲು

ವಾಟ್ಸಾಪ್‌ಗಳಲ್ಲಿ ನೂರಾರು ಗ್ರೂಪ್‌ಗಳು, ನಮಗೆ ಗೊತ್ತಿಲ್ಲದಂತೆಯೇ ಪ್ರವಾಹದಂತೆ ಹರಿದು ಬರುವ ಇಮೇಲ್‌ಗಳು, ಒಮ್ಮೆಯೂ ಸಂಪರ್ಕಿಸದ ಸಾವಿರಾರು ಸೋಷಿಯಲ್ ಮೀಡಿಯಾದ ವರ್ಚುವಲ್ ಸಂಪರ್ಕಗಳು, ಎಲ್ಲವೂ ಯಾಕೆ? ಇತ್ತೀಚಿಗೆ ಎಲ್ಲರೂ ತಮ್ಮ ಸೇವೆಗಳನ್ನು ಸಬ್‌ಸ್ಕ್ರೈಬ್ ಮಾಡಿ ಎನ್ನುವುದಕ್ಕೆ ಶುರುಮಾಡಿದ್ದಾರೆ. ಅವರ ಕೋರಿಕೆಗೆ ನಾವು ಮುಲಾಜಿಗೆ ಸಿಕ್ಕಿ ಎಷ್ಟೋ ಬಾರಿ ಅವರ ಚ್ಯಾನಲ್, ಪ್ರಾಡಕ್ಟ್, ಆನ್‌ಲೈನ್ ಪತ್ರಿಕೆ, ಮೊದಲಾದವುಗಳನ್ನು ಸಬ್‌ಸ್ಕ್ರೈಬ್ ಮಾಡಿರುತ್ತೇವೆ, ನಂತರ ನಮಗದು ಮರೆತೇ ಹೋಗಿರುತ್ತದೆ. ಬೇಕಾದವುಗಳನ್ನು ಮಾತ್ರವೇ ಇಟ್ಟುಕೊಂಡು ಉಳಿದಿದ್ದನ್ನು ಧೈರ್ಯವಾಗಿ ಅನ್‌ಸಬ್‌ಸ್ಕ್ರೈಬ್ ಮಾಡಿಬಿಡಬೇಕು. ಇಲ್ಲವಾದರೆ ಮೊಬೈಲ್ ಹಾಗೂ ಕ್ಲೌಡ್ ಎರಡರ ಮೆಮೊರಿಯೂ ಅನಾವಶ್ಯಕವಾಗಿ ತುಂಬಿ ಹೋಗಿ ಹೇಗೆ ಹೆಚ್ಚುವರಿ ಹಣವನ್ನು ತೆರಬೇಕಾಗುತ್ತದೆಯೋ ಹಾಗೆಯೇ, ಬದುಕಿನಲ್ಲಿ ಕೂಡ ಅದು, ಇದು, ಅವರು, ಇವರು ಎಂದು ನೂರಾರು ಕಡೆ ನಮ್ಮನ್ನು ನಾವು ತೊಡಗಿಸಿಕೊಂಡಾಗ ಅನಗತ್ಯವಾಗಿ ನಾವು ನಮ್ಮ ಶಕ್ತಿಯನ್ನು ಹಾಗೂ ಸಮಯವನ್ನು ಪೋಲು ಮಾಡುವ ಪ್ರಸಂಗ ಬರುತ್ತದೆ.

ನಾದ ನಿನಾದ
• ವಿಜಯಕುಮಾರ್ ಕಟ್ಟೆ

ಸಂಗೀತ ಲೋಕದ ರಾಗ-ಆಲಾಪ

ಪ್ರತಿಯೊಂದು ವೃತ್ತಿಯಲ್ಲೂ ಅದು ಯಾವುದೇ ಉದ್ಯೋಗವಾಗಿರಲಿ, ಕ್ಷೇತ್ರವಾಗಿರಲಿ ಅದಕ್ಕೆ ಅದರದ್ದೇ ಆದ ಏರುಪೇರುಗಳಿರುತ್ತವೆ. ನೋಡುವವರಿಗೆ ಅವರ ಖ್ಯಾತಿ, ಸಂಪಾದನೆ ಇತ್ಯಾದಿ ಕಾಣಿಸುವುದೇ ಹೊರತು ಅದರ ಹಿಂದೆ ಅವರು ಈ ಸ್ಥಾನಕ್ಕೆ ಬರಲು ಪಟ್ಟ ಕಷ್ಟ ಏನಿದೆ ಅನ್ನುವುದನ್ನು ಅರಿಯದೆ ಕೇವಲವಾಗಿ ಮಾತಾಡುವವರು ಬಹಳ ಮಂದಿ. 'ಅವರೇನ್ರಿ, ಸಾಫ್ಟ್‌ವೇರ್ ಇಂಜಿನೀಯರ್ ಸಿಕ್ಕಾಪಟ್ಟೆ ಸಂಬಳ ಬರುತ್ತೆ, ಅವರೇನ್ರಿ,

ಡಾಕ್ಟರ್ ಒಳ್ಳೆ ಸಂಪಾದನೆ, ಅವರೇನ್ರಿ, ಬಿಸಿನೆಸ್ ಮಾಡ್ತಾರೆ, ಅವರೇನ್ರಿ ಆಕ್ಟರ್, ಅವರೇನ್ರಿ ಮಾಡೆಲ್, ಅವರೇನ್ರಿ ಸಿಂಗರ್..' ಹೀಗೆ ಎಲ್ಲರಿಗು ಸಲೀಸಾಗಿ ದುಡ್ಡಿನ ಸುರಿಮಳೆ ಆಗುತ್ತೆ' ಅನ್ನುವ ಭಾವನೆ ತುಂಬಿ ಬಹಳ ಹಗುರವಾಗಿ ಬಹಳಷ್ಟು ಮಾತುಗಳು ಕೇಳಿಬರುತ್ತವೆ. ಸಾಧಕರ ಪರಿಶ್ರಮ, ಗುರಿ ತಲುಪಲು ಅವರುಗಳು ಪಟ್ಟಿರುವ ಕಷ್ಟ-ನಷ್ಟಗಳನ್ನು ತಿಳಿಯದೆ ಆಡುವ ಕುಹಕದ ಮಾತುಗಳಿವು.

ಅದರಲ್ಲೂ ಸಂಗೀತ ಕ್ಷೇತ್ರದಲ್ಲಿ ಒಂದು ಹಂತಕ್ಕೆ ಬರಲು ಅವರು ಸಾಗಿ ಬಂದ ಮಾರ್ಗ, ಎದುರಿಸಿದ ಸವಾಲುಗಳು, ಪ್ರೋತ್ಸಾಹ

ನೀಡದ ಮನೆಯವರು, ಸಂಬಂಧಿಕರು, ಎರಡು ಹೊತ್ತು ಊಟಕ್ಕಾಗಿ ಕೂಡ ಒದ್ದಾಡಿದ ದಿನಗಳು, ಎಷ್ಟು ಹೇಳಿದರು ಕೆಲಸಕ್ಕೆ ಸೇರದೆ, ತಮ್ಮ ಮಾತನ್ನು ಕೇಳದೆ ಸಂಗೀತ, ಸಂಗೀತ ಎಂದು ಜೀವನ ಹಾಳುಮಾಡಿಕೊಂಡ ಎಂಬ ಮನೆಯವರ, ಸುತ್ತಮುತ್ತಲಿನವರ ಚುಚ್ಚು ಮಾತುಗಳು. ಹೀಗೆ ದುರ್ಗಮ ದಾರಿಯಲ್ಲಿ ನಡೆದು ಬಂದ ಇವರುಗಳಿಗೆ ಸಾಧನೆ ಮಾಡಬೇಕೆಂಬ ಒಂದೇ ಒಂದು ಗುರಿ ಅವರನ್ನು ಉನ್ನತ ಹಂತಕ್ಕೆ ತಂದು ನಿಲ್ಲಿಸಿರುತ್ತದೆ.

ಬಹಳಷ್ಟು ಮಂದಿ ಚಿಕ್ಕಂದಿನಿಂದಲೇ ಮನೆಯವರ ವಿರೋಧವನ್ನು ಎದುರಿಸಿ ಇತ್ತ ಕಡೆ ಓದಲು ಮನಸ್ಸಿಲ್ಲದೆ ತಮ್ಮ ಜೀವನದಲ್ಲಿ ಧೈರ್ಯವಾದ ದೊಡ್ಡ ಹೆಜ್ಜೆ ಇಡಬೇಕಾಗುತ್ತದೆ. ಅದರಲ್ಲಿ ಯಶಸ್ಸು ಸಿಗುತ್ತದೆ ಎನ್ನುವ ಗ್ಯಾರಂಟಿ ಕೂಡ ಇರುವುದಿಲ್ಲ. ಆದರೂ ತಮ್ಮ ಗುರಿಯ ಕಡೆ ನಡೆಯಲು ಬೆಳಗ್ಗೆ ಬೇಗ ಎದ್ದು ಸಂಗೀತಾಭ್ಯಾಸ, ಇರುವ ದುಡ್ಡಿನಲ್ಲೇ ಊಟ ತಿಂಡಿ, ಕೆಲವೊಮ್ಮೆ ಉಪವಾಸ, ಜತೆಗೆ ಯಾವ ಗಾಡ್ ಫಾದರ್ ಇಲ್ಲದಿರುವುದು, ಇನ್ನು ಅನೇಕ ತೊಡರುಗಳನ್ನು ಸಾಗಿ ಮುಂದೆ ಬಂದಿರುತ್ತಾರೆ. ಇದಿಷ್ಟು ಎದುರಿಸಬೇಕಾದ ವೈಯುಕ್ತಿಕ ತೊಂದರೆಗಳಾದರೆ, ವೃತ್ತಿಯಲ್ಲಿ ಸ್ವಲ್ಪವೇ ಸ್ವಲ್ಪ ಅವಕಾಶಗಳು ಅವರಿಗಿರುತ್ತವೆ. ಅದರಲ್ಲಿ ವಿಪರೀತವಾದ ಸ್ಪರ್ಧೆ, ಮಧ್ಯೆ ಎಲ್ಲರ ಜತೆ ಗುದ್ದಾಡುತ್ತಾ, ಅವಕಾಶಕ್ಕಾಗಿ ಅಲೆದು, ಗಂಟೆಗಟ್ಟಲೇ ಕಾದು ತಮಗೊಂದು ವೈಯಕ್ತಿಕ ಜೀವನದೆ ಎಂಬುದನ್ನೂ ಮರೆತು ಜೀವನ ಸಾಗಿಸುವ ಅನಿವಾರ್ಯತೆ ಅವರದ್ದು. ಆಶಾ ಭಾವನೆ ಮತ್ತು ಗುರಿ ಮುಟ್ಟಬೇಕೆಂಬ ಛಲ ಕೊನೆಗೂ ಅವರಿಗೆ ಒಂದು ಉತ್ತಮವಾದ ವೇದಿಕೆ ಕಲ್ಪಿಸಿ ಅವರ ಇಷ್ಟು ದಿನದ ಪರಿಶ್ರಮಕ್ಕೆ ಫಲ ನೀಡುವ ಕಾಲ ಬರುವಂತೆ ಮಾಡುವುದು.

ಪ್ರಪಂಚದಲ್ಲಿ ಸುತ್ತಮುತ್ತಲಿನ ಎಲ್ಲರಿಗು ಉತ್ತರಕೊಡುವುದು, ಸಮಜಾಯಿಸಿ ಕೊಡುತ್ತ ಜೀವನ ಮಾಡುವುದು ಕಷ್ಟ. ಹೀಗೆ ಹಿಂದೆ ಆಡಿಕೊಳ್ಳುವ, ಹಂಗಿಸುವ, ನಿಂದಿಸುವರ ಮಧ್ಯೆ ಎಲ್ಲವನ್ನು ಸಹಿಸಿಕೊಂಡು, ತಮ್ಮ ಸಾಧನೆ ಮಾಡುವುದು ಅಂದುಕೊಂಡಷ್ಟು ಸುಲಭವಂತೂ ಖಂಡಿತ ಅಲ್ಲ. ಯಾವುದೇ ಹಿನ್ನೆಲೆ ಇಲ್ಲದೆ ನಿರಂತರ ಸಾಧನೆ ಮಾಡಿ ಕೀರ್ತಿ, ಜನರ ಪ್ರೀತಿ ಗಳಿಸಿರುವ ಇಂತಹ ಸಾಧಕರನ್ನು ಮೆಚ್ಚಿ ಒಳ್ಳೆಯ ಮಾತಾಡುವುದನ್ನು ಬಿಟ್ಟು, ಒಳ್ಳೆಯ ಮಾತನಾಡದಿದ್ದರು ಕಹಿಯಾದ ನುಡಿಗಳನ್ನೂ ಆಡುವುದು ಬಿಟ್ಟರೆ ಎಷ್ಟು ಚೆನ್ನ ಅಲ್ಲವೇ.

ಎನ್ನ ಕಿವುಡನ ಮಾಡದಿರಯ್ಯ!



ಕಿವಿ ನಮ್ಮ ಪಂಚೇಂದ್ರಿಯಗಳ ಒಂದು ಮುಖ್ಯ ಅಂಗವಾಗಿದ್ದು, ಅದನ್ನು ಬುದ್ಧೀಂದ್ರಿಯ, ಜ್ಞಾನೇಂದ್ರಿಯದ ಭಾಗವೆಂದು ಪರಿಗಣಿಸಿದ್ದಾರೆ. ಕಿವಿ ಎಲ್ಲವನ್ನು ಕೇಳುತ್ತವೆ . ಒಳ್ಳೆಯದು ಇರಬಹುದು, ಕೆಟ್ಟದ್ದೂ ಇರಬಹುದು, ಹೊಗಳಿಕೆಯೂ ಇರಬಹುದು, ತೆಗಳಿಕೆಯೂ ಇರಬಹುದು. 'ಕಿವಿಯೇ ಕರ್ಮಕೆ ದ್ವಾರ, ಕಿವಿಯಿಂದಲೇ ಕೇಳೊ ಮೋಕ್ಷದ ಸಾರ' ಎಂದಿದ್ದಾರೆ ಕನಕದಾಸರು. ಇಂಥ ಕಿವಿಯೂ ಕೆಲವೊಂದು ಅನಾರೋಗ್ಯ, ಅಪಘಾತದಿಂದಾಗಿ ತನ್ನ ಕಾರ್ಯವನ್ನು ಸ್ಥಗಿತಗೊಳಿಸುವ ಸಾಧ್ಯತೆಯೂ ಇದೆ.

ವೈದ್ಯರು ಕಿವುಡುತನವನ್ನು ವಿಶಾಲವಾಗಿ ಎರಡು ಗುಂಪುಗಳಲ್ಲಿ ವಿಂಗಡಿಸುತ್ತಾರೆ.

1. ಕೇಂದ್ರೀಯ ಕಿವುಡತನ 2. ಪರೀಧೀಯ ಕಿವುಡುತನ

ಮೊದಲನೆಯದು ತೀರಾ ಅಪರೂಪವಾದದ್ದು. ಮೆದುಳಿನ ಶ್ರವಣ ಕ್ಷೇತ್ರಕ್ಕೆ ಹಾನಿಯಾದಾಗ ಇಂತಹ ಕಿವುಡುತನ ಕಂಡುಬರಬಹುದು. ಪರೀಧೀಯ ಕಿವುಡುತನ ಸರ್ವೇಸಾಮಾನ್ಯವಾದದ್ದು. ಇದು ಮಿದುಳಿನಿಂದ ಹೊರಗಿರುವ ಶ್ರವನಾಂಗಗಳಲ್ಲಿ ಕಂಡು ಬರುವ ದೋಷಗಳಿಂದ ತಲೆದೋರುತ್ತದೆ.

ವಯಸ್ಸಾದಂತೆ ಕಿವುಡು ಸದ್ದಿಲ್ಲದೇ ಮೆಲ್ಲ ಮೆಲ್ಲಗೆ ಹೆಜ್ಜೆ ಹಾಕುತ್ತಾ ಬರುವುದು. ವೃದ್ಧರು ತಮಗೆ ಕಿವಿ ಸರಿಯಾಗಿ ಕೇಳದಿದ್ದಾಗ ಬೇರೆಯವರೊಡನೆ ಬೆರೆಯಲು ಹಿಂಜರಿಯುತ್ತಾರೆ. ಇಂತಹ ನಿರ್ಭಂಧವು ಮುಂದೆ ದೈಹಿಕ ಹಾಗೂ ಮಾನಸಿಕ ತೊಂದರೆಗಳಿಗೆ ದಾರಿ ಮಾಡಿಕೊಡುವುದು ನಿಶ್ಚಿತ. ಕಿವುಡುತನ ವ್ಯಕ್ತಿಯಲ್ಲಿ ಮತ್ತು ಇತರರಲ್ಲಿ ಅಸಹನೆ, ಸಿಡುಕುತನವನ್ನುಂಟು ಮಾಡುತ್ತದೆ. ಆದ್ದರಿಂದ ಕಿವಿಯ ಕೇಳುವಿಕೆಯ ಬಗ್ಗೆ ನಿಗಾವಹಿಸಿ ಅದನ್ನು ರಕ್ಷಿಸಿಕೊಳ್ಳಬೇಕಾದದ್ದು ಮತ್ತು ತೊಂದರೆಗಳನ್ನು ಸರಿಪಡಿಸಿಕೊಳ್ಳಬೇಕಾದದ್ದು ಅನಿವಾರ್ಯವೂ ಹೌದು.

ಯೋಗ ಕ್ಷೇಮ
• ಡಾ.ಕರವೀರಪ್ರಭು ಕ್ಯಾಲಕೊಂಡ

ವಯಸ್ಸಾದಂತೆ ಕಿವಿಯ ನರಗಳು ಚುರುಕುತನವನ್ನು ಕಳೆದುಕೊಳ್ಳುವುದನ್ನೇ 'ಪ್ರೆಸ್ ಬಿ ಅಕ್ಯೂಸಿಸ್ 'ಎಂದು ಹೆಸರು. ಇದು ತೀರಾ ಸಾಧಾರಣವಾಗಿ ವೃದ್ಧರಲ್ಲಿ ಕಂಡು ಬರುವ ಅರೆಗಿವುಡು. ಕೆಲವು ಅಂಶಗಳು ಕಿವಿಯ ಕೇಳುವಿಕೆಯನ್ನು ಹಾಳುಗೆಡವುತ್ತವೆ.

• ಕಿವಿಯಲ್ಲಿ ಗುಗ್ಗೆ ಶೇಖರಗೊಳ್ಳುವುದು. • ಕಿವಿಯ ನಾಳದಲ್ಲಿ ಪರಕೀಯ ವಸ್ತು ಸೇರುವುದು. • ಅನುವಂಶಿಕ ಕಿವಿ ಕಾಯಿಲೆಗಳು. • ಕಿವಿಯ ಕಾಯಿಲೆಗಳು: ಮೇನಿಯರ್ಸ್ ಕಾಯಿಲೆ, ಓಟೋಸ್ಕ್ಲೀರೋಸಿಸ್ (ಕಿವಿಮೂಳೆಗಳ ಬಿಗಿಯಾಗುವಿಕೆ) ಸೋಂಕುಗಳು.

• ಔಷಧಗಳಿಂದಾಗುವ ಕೇಳುವಿಕೆಯ ಊನ: ಸ್ಟ್ರೆಪ್ಟೋ ಮೈಸಿನ್, ಜೆಂಟಾ ಮೈಸಿನ್ , ಆಸ್ಪಿರಿನ್ ಇತ್ಯಾದಿ.

• ಅಪಘಾತಗಳು.

ಫೋಲಿಕ್ ಆಸಿಡ್ ಪ್ರಮಾಣದಲ್ಲಿ ಶೇ.35 ಭಾಗದಷ್ಟು ಕೊರತೆ ಉಂಟಾದರೆ ಭಾರೀ ದೊಡ್ಡ ಪ್ರಮಾಣದ ಶಬ್ದಗಳು ಸಹ ಕೇಳಿಸದಷ್ಟು ಕಿವುಡುತನ ಉಂಟಾಗುತ್ತದೆ. ಹಾಗೆಯೇ ಫೋಲಿಕ್ ಆಸಿಡ್ ಜತೆಗೆ ಬಿ12 ವಿಟಾಮಿನ್ ಕೊರತೆಯೂ ಸಹ ಇದಕ್ಕೆ ಕಾರಣವಾಗುತ್ತದೆ.

ಸಂಶೋಧನೆ ಏನು ಹೇಳಿದೆ?

ಕಿವಿಯ ರಕ್ತನಾಳಗಳಲ್ಲಿ ಆಗುವ ಬದಲಾವಣೆಗಳು, ಜೋರಾದ ಶಬ್ದಕ್ಕೆ ದೀರ್ಘ ಕಾಲ ತೆರೆದುಕೊಂಡಿರುವ ಕಿವಿಗಳು, ನ್ಯೂನ ಪೋಷಣೆಗೆ ಸಂಬಂಧಿಸಿದ ಕಿವುಡು, ವಂಶಪಾರಂಪರ್ಯ, ಪರಿಜ್ಞಾನದ ಕೊರತೆ, ಮೂಗು ಮತ್ತು ಕಿವಿಯಲ್ಲಿ ಸೋಂಕು ಉಂಟಾಗುವುದು, ಇವೆಲ್ಲಾ ವೃದ್ಧಾಪ್ಯದ ಕಿವುಡನ್ನು ಹುಟ್ಟುಹಾಕುತ್ತವೆ. ವೃದ್ಧಾಪ್ಯದಲ್ಲಿ ಶ್ರವಣಶಕ್ತಿ ಕಡಿಮೆಯಾಗಿ ಕಿವುಡುತನ ಉಂಟಾಗುವುದಕ್ಕೆ ಫೋಲೇಟ್ , ಬಿ12 ವಿಟಮಿನ್ ಗಳ ಕೊರತೆಯೂ ಸಹ ಕಾರಣವಾಗುತ್ತದೆ ಎಂದು ಅಧ್ಯಯನಗಳು ತಿಳಿಸಿವೆ.

ಕಿವಿಗಳಲ್ಲಿರುವ ಅತ್ಯಂತ ಸೂಕ್ಷ್ಮವಾದ ಶ್ರವಣಾಂಗಗಳಲ್ಲಿ ಶಕ್ತಿಹೀನತೆಯ ಜತೆಗೆ ಇತರ ಕೆಲವು ಅಂಶಗಳು ಸೇರುವುದರಿಂದ ಶ್ರವಣಶಕ್ತಿ ಕುಗ್ಗುತ್ತದೆ ಎಂದು ಸಂಶೋಧನೆಗಳಿಂದ ತಿಳಿದು ಬಂದಿದೆ. ಒಂದೇ ವಯಸ್ಸಿನ ವೃದ್ಧರಲ್ಲಿ ಸಾಮಾನ್ಯ ಶ್ರವಣಶಕ್ತಿ ಹೊಂದಿರುವವರಿಗೆ ಹೋಲಿಸಿದರೆ, ಶ್ರವಣಶಕ್ತಿ ಕಡಿಮೆ ಇರುವವರ ರಕ್ತದಲ್ಲಿ ಫೋಲೇಟ್ ಪ್ರಮಾಣ ಕಡಿಮೆ ಇರುತ್ತದೆ ಎಂದು ನೈಜೀರಿಯಾದಲ್ಲಿನ ಇಬದಾನ್ ವಿಶ್ವವಿದ್ಯಾಲಯದ ಸಂಶೋಧಕರು ಕಂಡು ಹಿಡಿದಿದ್ದಾರೆ.

ಔಷಧದ ನೆರವಿನಿಂದ ಸಮಸ್ಯೆ ನಿವಾರಣೆ

ಈ ಕೊರತೆಯನ್ನು ಬಹಳ ಸುಲಭವಾಗಿ ಔಷಧಗಳು ಮತ್ತು ಮಾತ್ರೆಗಳ ನೆರವಿನಿಂದ ಗುಪಡಿಸಬಹುದೆಂದು ತಜ್ಞರು ಕಂಡು ಹಿಡಿದಿರುವುದು ಒಂದು ವಿಶೇಷ. ಫೋಲಿಕ್ ಆಸಿಡ್ ಮತ್ತು ಬಿ12 ವಿಟಾಮಿನ್ ಗಳನ್ನು ಕೊಡುವುದರಿಂದ ಶ್ರವಣ ಶಕ್ತಿ ಹೆಚ್ಚುವುದಷ್ಟೇ ಅಲ್ಲ ಜ್ಞಾಪಕ ಶಕ್ತಿಯೂ ಬೆಳೆಯುತ್ತದೆ. ಕೈಕಾಲುಗಳಲ್ಲಿಯ ನಾಡಿಕ್ರಿಯೆಯ ಶಕ್ತಿ ವೃದ್ಧಿಯಾಗುತ್ತದೆ. ಅದರ ಜತೆಗೆ ನರಮಂಡಲದ ಕೇಂದ್ರ ವ್ಯವಸ್ಥೆ ಸಹ ಸಾಮರ್ಥ್ಯ ಬೆಳೆಸಿಕೊಳ್ಳುತ್ತದೆ ಎಂದು ಕಂಡುಕೊಂಡಿದ್ದಾರೆ .

ಪ್ರಪಂಚದಾದ್ಯಂತ ವೃದ್ದರ ಸಂಖ್ಯೆ ಹೆಚ್ಚುತ್ತಿರುವ ಇಂತಹ ಸಂದರ್ಭದಲ್ಲಿ ಈ ಸಂಶೋಧನೆಗೆ ಬಹಳ ಮಹತ್ವ ದೊರೆತಿದೆ. ವೃದ್ಧಾಪ್ಯದಲ್ಲಿ ಕಿವುಡುತನದ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಹಳೆಯ ನಂಬಿಕೆಯನ್ನು ತೊಲಗಿಸುತ್ತದೆಯೆಂದೂ, ಆ ಸಮಸ್ಯೆಯನ್ನು ಮೀರುವ ಶಕ್ತಿಯನ್ನು ಕೆಲವರಿಗಾದರೂ ದೊರಕಿಸಿಕೊಡಬಹುದಾದ ಸಾಧ್ಯತೆಯಿದೆ ಎಂಬುದನ್ನು ವಿವರಿಸಿದ್ದಾರೆ.